ಬುಧವಾರ, ಡಿಸೆಂಬರ್ 21, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 351 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಸ್ಕೌಟ್ಸ್-ಗೈಡ್ಸ್ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ

ಚರ್ಚೆಯ ಬಳಿಕ ಎನ್‌ಪಿಎಸ್ ತೀರ್ಮಾನ 6

ಬೆಸ್ಕಾಂ: ಎಸ್‌ಐ ಸೇರಿ 8 ಮಂದಿ ಬಂಧನ 5

ಇಂದು ತಂತ್ರಜ್ಞಾನ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,702	18,385	₹55,860 (ಬೆಂಗಳೂರು)	₹68,400 (ಬೆಂಗಳೂರು)	82.70

ಇಂದು ಒಕ್ಕೊರಲ ನಿರ್ಣಯ • ವಿಧಾನಸಭೆಯಲ್ಲಿ ಬೊಮ್ಮಾಯಿ ಪ್ರಕಟ

ಮಹಾಜನ್ ವರದಿ ಅಂತಿಮ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಮಹಾಜನ್ ವರದಿಯೇ ಅಂತಿಮ ಮತ್ತು ಗಡಿ ವಿವಾದ ಮುಗಿದ ಅಧ್ಯಾಯ. ರಾಜ್ಯದ ಒಂದು ಇಂಚು ಜಾಗವನ್ನೂ ಬಿಟ್ಟುಕೊಡುವ ಪ್ರಶ್ನೆಯೇ ಇಲ್ಲ ಎಂದು ಬುಧವಾರ ನಿರ್ಣಯ ಮಂಡಿಸಿ, ಸರ್ವಾನುಮತದಿಂದ ಅಂಗೀಕರಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ವಿಧಾನಸಭೆಯಲ್ಲಿ ಮಂಗಳವಾರ ನಿಯಮ 69ರ ಅಡಿ ಚರ್ಚೆಯ ವೇಳೆಯಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಅವರು, 'ರಾಜ್ಯದ ನಿಲುವು ಅಚಲವಾಗಿದೆ. ಮತ್ತೊಮ್ಮೆ ನಿರ್ಣಯ ಕೈಗೊಳ್ಳುವ ಮೂಲಕ ಒಗ್ಗಟ್ಟು ಪ್ರದರ್ಶಿಸಬೇಕು. ಈ ಸಂಬಂಧ ನಿರ್ಣಯ ಮಾಡಿ ಕಳಿಸೋಣ' ಎಂದು ಹೇಳಿದರು.

'ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಇತರ ಶಾಸಕರೂ ಸರ್ವಾನುಮತದ ನಿರ್ಣಯವನ್ನು ತೆಗೆದುಕೊಳ್ಳಲೇಬೇಕು' ಎಂದು ಒತ್ತಾಯಿಸಿದರು.

6ನೇ ಪುಟ ನೋಡಿ

ಸಿಎಸ್‌ಗೆ ಬರೆದ ಪತ್ರ ಮಹತ್ವದ ದಾಖಲೆ

ಮಹಾರಾಷ್ಟ್ರದ ಸಚಿವರು ಮತ್ತು ಸಂಸದರು ಗಡಿ ವಿಚಾರಕ್ಕಾಗಿ ಬೆಳಗಾವಿಗೆ ಬರುವುದು ಸರಿಯಲ್ಲ. ಅವರನ್ನು ತಡೆಯಬೇಕು ಎಂದು ಅಲ್ಲಿನ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಬರೆದ ಪತ್ರ ಮಹತ್ವದ ದಾಖಲೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಪಾದಿಸಿದರು.

'ಈ ದಾಖಲೆ ಮುಂದಿನ ದಿನಗಳಲ್ಲಿ ಮಹತ್ವ ದಾಖಲೆಯಾಗಲಿದೆ. ಈ ಪತ್ರದಕಾರಣದಿಂದಾಗಿ ಅಲ್ಲಿನ ಸಚಿವರು ಬರಲಿಲ್ಲ. ನಾವು ಎಚ್ಚರಿಕೆಯನ್ನೂ ಕೊಟ್ಟಿದ್ದೇವೆ. ಅದೇ ರೀತಿ ಯಾರೂ ಇಲ್ಲಿಗೆ ಕಾಲಿಡಲು ಅವಕಾಶ ನೀಡಲಿಲ್ಲ. ಆದರೆ, ಹಿಂದೆ ಶರದ್ ಪವಾರ್ ಅವರು ಬೆಳಗಾವಿಗೆ ಬಂದು ಭಾಷಣ ಮಾಡಿ ಹೋಗಿದ್ದರು, ಅವರನ್ನು ತಡೆದಿರಲಿಲ್ಲ. ಆಗ ಅವರು ಯಾರ ಮನೆಯಲ್ಲಿ ಉಳಿದುಕೊಂಡಿದ್ದರು ಎಂಬುದು ಗೊತ್ತಿದೆ' ಎಂದರು.

'ನಾವು ಮಹಾಮೇಳಾವ ನಡೆಸಲು ಅವಕಾಶ ನೀಡಲಿಲ್ಲ. ಬರುತ್ತಿದ್ದವರನ್ನು ಬಂಧಿಸಿ ಕಳಿಸಿದ್ದೇವೆ' ಎಂದು ಬೊಮ್ಮಾಯಿ ಹೇಳಿದರು.



ನಮ್ಮ ನಿಲುವು ಸ್ಪಷ್ಟವಾಗಿದೆ, ಇದರಲ್ಲಿ ಯಾವುದೇ ರಾಜಿ ಇಲ್ಲ. ನಮ್ಮ ನೆಲದಿಂದ ಒಂದು ಇಂಚು ಹಿಂದಕ್ಕೆ ಸರಿಯುವ ಪ್ರಶ್ನೆಯೇ ಇಲ್ಲ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಮಹಾರಾಷ್ಟ್ರದ ಪುಂಡಾಟಿಕೆ ನಿಂತಿಲ್ಲ. ದೇ ಆರ್ ನಾಟ್ ಗುಡ್ ಪೀಪಲ್, ಅಖಂಡ ಭಾರತ ಮುಖ್ಯ, ಒಕ್ಕೂಟ ಮುಖ್ಯ, ಅದನ್ನು ಅವರು ಮರೆತಿದ್ದಾರೆ
ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

ಕರ್ನಾಟಕದ ವಿರುದ್ಧ 'ಮಹಾ' ಅಧಿವೇಶನದಲ್ಲಿ ಟೀಕೆ

ನಾಗ್ಪುರ(ಪಿಟಿಐ): ಕರ್ನಾಟಕದಲ್ಲಿ ಮರಾಠಿ ಭಾಷಿಕರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ ಎಂದು ಮಹಾರಾಷ್ಟ್ರದ ವಿಧಾನ ಸಭಾ ಅಧಿವೇಶನದಲ್ಲಿ ಮಂಗಳವಾರ ದೂರಿದ ಪ್ರತಿಪಕ್ಷಗಳು ಕರ್ನಾಟಕ ಸರ್ಕಾರದ ವಿರುದ್ಧ ಟೀಕೆ ವ್ಯಕ್ತಪಡಿಸಿದವು.

ಈ ವಿಷಯವನ್ನು ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿದ ಎನ್‌ಸಿಪಿ ಶಾಸಕ ಜಯಂತ್ ಪಾಟೀಲ್ ಅವರು, ಮರಾಠಿ ಭಾಷಿಕರನ್ನು ಭೇಟಿ ಮಾಡಲು ಸೋಮವಾರ ಬೆಳಗಾವಿಗೆ ತೆರಳಿದ್ದ ನಮ್ಮ ಪಕ್ಷದ ಶಾಸಕ ಹಸನ್ ಮುಶ್ರಿಫ್ ಅವರ ಮೇಲೆ ಲಾಠಿ ಪ್ರಹಾರ ನಡೆಸಲಾಗಿದೆ ಎಂದು ದೂರಿದರು.

ವಿರೋಧ ಪಕ್ಷದ ನಾಯಕ ಅಜಿತ್ ಪವಾರ್ ಮಾತನಾಡಿ, ಈ ವಿಷಯವು ಎಲ್ಲರಿಗೂ ತುಂಬಾ ಸೂಕ್ಷ್ಮವಾದುದಾಗಿದೆ ಎಂದರು.

6ನೇ ಪುಟ ನೋಡಿ

ಚೀನಾದಲ್ಲಿ ಕೋವಿಡ್ ಹೆಚ್ಚಳ: ಇಂದು ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಚೀನಾ ಸೇರಿದಂತೆ ಕೆಲ ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಬುಧವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

'ಬೆಳಿಗ್ಗೆ 11.30ಕ್ಕೆ ಸಭೆ ನಿಗದಿಯಾಗಿದ್ದು, ದೇಶದಲ್ಲಿನ ಕೋವಿಡ್ ಪರಿಸ್ಥಿತಿ ಕುರಿತು ಸಭೆಯಲ್ಲಿ ಚರ್ಚಿಸಲಾಗುತ್ತದೆ' ಎಂದು ಮೂಲಗಳು ಹೇಳಿವೆ.

'ಕೋವಿಡ್ ಸೋಂಕಿತರಿಂದ ಸಂಗ್ರಹಿಸಲಾಗುವ ಮಾದರಿಗಳನ್ನು ಪ್ರತಿದಿನವೂ ಕೇಂದ್ರ ಸರ್ಕಾರದ ವೈರಾಣು ಸಂರಚನೆ ವಿಶ್ಲೇಷಣೆ ಸಂಸ್ಥೆ ಐಎನ್‌ಎಸ್‌ಎಸಿ-ಒಜಿಯ ಪ್ರಯೋಗಾಲಯಗಳಿಗೆ ಕಳುಹಿಸಿ' ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಎಲ್ಲಾ ರಾಜ್ಯಗಳಿಗೂ ಸೂಚಿಸಿದೆ. ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಈ ಸಂಬಂಧ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿದ್ದಾರೆ.

'ಚೀನಾ, ಜಪಾನ್, ಅಮೆರಿಕ, ದಕ್ಷಿಣ ಕೊರಿಯಾ ಹಾಗೂ ಬ್ರೆಜಿಲ್‌ನಲ್ಲಿ ಕೋವಿಡ್ ಪ್ರಕರಣಗಳು ದಿಢೀರನೆ ಏರಿವೆ.

ಗುರುತಿನ ಚೀಟಿಗೆ ಒತ್ತಾಯಿಸುವಂತಿಲ್ಲ: ಹೈಕೋರ್ಟ್

'ಸರ್ಕಾರಿ ಆಸ್ಪತ್ರೆ: ಹೊರಗಿನವರಿಗೆ ಚಿಕಿತ್ಸೆ ನಿರಾಕರಿಸುವಂತಿಲ್ಲ'

ನವದೆಹಲಿ (ಪಿಟಿಐ): 'ಹೊರ ರಾಜ್ಯದವರು ಎಂಬ ಕಾರಣಕ್ಕೆ ರೋಗಿಗಳಿಗೆ ವೈದ್ಯಕೀಯ ಚಿಕಿತ್ಸೆ ನಿರಾಕರಿಸುವಂತಿಲ್ಲ. ರಾಷ್ಟ್ರ ರಾಜಧಾನಿಯ-ಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಚಿಕಿತ್ಸೆ ಒದಗಿಸಬೇಕು' ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ನಗರದಲ್ಲಿರುವ ಲೋಕ ನಾಯಕ ಆಸ್ಪತ್ರೆಯಲ್ಲಿ ದೆಹಲಿ ನಿವಾಸಿಗಳಿಗಷ್ಟೇ ಉಚಿತ ಎಂಆರ್‌ಐ ಪರೀಕ್ಷಾ ಸೌಕರ್ಯ ಕಲ್ಪಿಸಲಾಗುತ್ತಿದೆ ಎಂದು ಆರೋಪಿಸಿ ಬಿಹಾರದ ವ್ಯಕ್ತಿಯೊಬ್ಬರು ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿ ಪ್ರತಿಭಾ ಎಂ.ಸಿಂಗ್ ಅವರಿದ್ದ ಏಕ ಸದಸ್ಯ ನ್ಯಾಯಪೀಠವು ಮಂಗಳವಾರ ಇದರ ವಿಚಾರಣೆ ನಡೆಸಿತು.

'ಆಸ್ಪತ್ರೆಯವರು ಮತದಾರರ ಗುರುತಿನ ಚೀಟಿ ಒದಗಿಸುವಂತೆ ರೋಗಿಗಳನ್ನು ಒತ್ತಾಯಿಸುವಂ-ತಿಲ್ಲ. ಏಮ್ಸ್ ಅಥವಾ ದೆಹಲಿಯ ಇತರೆ ಯಾವುದೇ ಆಸ್ಪತ್ರೆಯವರೂ ಹೊರ ರಾಜ್ಯಗಳಿಂದ ಬಂದಿರುವ ನಾಗರಿಕರಿಗೆ ವೈದ್ಯಕೀಯ ಚಿಕಿತ್ಸೆ ನಿರಾಕರಿಸುವಂತಿಲ್ಲ. ರೋಗಿಯ ವಾಸಸ್ಥಾನ ಪರಿಗಣಿಸದೆಯೇ ಪ್ರತಿ-ಯೊಬ್ಬರಿಗೂ ಚಿಕಿತ್ಸೆ ಕಲ್ಪಿಸಬೇಕು' ಎಂದು ನ್ಯಾಯಪೀಠ ತಿಳಿಸಿದೆ.

'ಲೋಕ ನಾಯಕ ಆಸ್ಪತ್ರೆಯು ಹೊರ ರಾಜ್ಯಗಳ ರೋಗಿಗಳ ವಿಚಾರದಲ್ಲಿ ತಾರತಮ್ಯ ನೀತಿ ಅನುಸರಿಸುತ್ತಿದೆ. ಅರ್ಜಿದಾರರು ಮೊಣಕಾಲಿನ ಎಂಆರ್‌ಐ ಪರೀಕ್ಷೆ ಮಾಡಿಸಿಕೊಳ್ಳಲು ಹೋಗಿದ್ದರು. ಬಿಹಾರದವರು ಎಂಬ ಕಾರಣಕ್ಕೆ ಮುಂದಿನ ವರ್ಷದ ಜುಲೈನಲ್ಲಿ ಬರುವಂತೆ ಅವರಿಗೆ ಸೂಚಿಸಲಾಗಿದೆ' ಎಂದು ಅರ್ಜಿದಾರರ ಪರ ವಕೀಲ ಅಶೋಕ್ ಅಗರವಾಲ್ ಅವರು ನ್ಯಾಯಪೀಠಕ್ಕೆ ಹೇಳಿದರು.

'ಆಸ್ಪತ್ರೆಯವರು ಅರ್ಜಿದಾರರ ಬಳಿ ಮತದಾರರ ಗುರುತಿನ ಚೀಟಿ ಕೇಳಿದ್ದಾರೆ ಎಂಬುದನ್ನು ನಿರೂಪಿಸು-ವುದಕ್ಕೆ ಯಾವುದೇ ದಾಖಲೆಗಳಿಲ್ಲ. ಪರೀಕ್ಷಾ ಸೌಲಭ್ಯದ ಲಭ್ಯತೆಯನ್ನು ಆಧರಿಸಿ ಆಸ್ಪತ್ರೆಯವರು ರೋಗಿಯ ಎಂಆರ್‌ಐ ಪರೀಕ್ಷೆಗೆ ದಿನಾಂಕ ನಿಗದಿಪಡಿಸಿದ್ದರು' ಎಂದು ದೆಹಲಿ ಸರ್ಕಾರದ ಪರ ವಕೀಲ ಸತ್ಯಕಾಮ್ ತಿಳಿಸಿದರು.

ಉಭಯ ಬಣದವರ ವಾದ ಆಲಿಸಿದ ನ್ಯಾಯಪೀಠವು 'ಇದೇ 26ರಂದು ಬೆಳಿಗ್ಗೆ 11 ಗಂಟೆಗೆ ಅರ್ಜಿದಾರರ ಮೊಣಕಾಲಿನ ಎಂಆರ್‌ಐ ಪರೀಕ್ಷೆ ನಡೆಸಬೇಕು' ಎಂದು ದೆಹಲಿ ಸರ್ಕಾರಕ್ಕೆ ಆದೇಶಿಸಿತು.

'ಮಠಾಧೀಶರ ರಕ್ಷಣೆಗೆ ಕಾಯ್ದೆ ರೂಪಿಸಿ'

ಚಿತ್ರದುರ್ಗ: ಮಠಾಧೀಶರ ಹಕ್ಕಿಗೆ ಚ್ಯುತಿ ಉಂಟು ಮಾಡುವ ಪಿತೂರಿಗಳು ನಡೆಯುತ್ತಿವೆ. ಪೋಕ್ಸೊ ಸೇರಿ ಹಲವು ಕಾನೂನುಗಳನ್ನು ದುರ್ಬಳಕೆ ಮಾಡಿಕೊಂಡು ಕಿರುಕುಳ ನೀಡಲಾಗುತ್ತಿದೆ. ಮಠಾಧೀಶರ ರಕ್ಷಣೆಗೆ ಸರ್ಕಾರ ಕಾಯ್ದೆ ರೂಪಿಸುವ ಅಗತ್ಯವಿದೆ ಎಂದು ಮುರುಘಾ ಮಠದ ಉಸ್ತುವಾರಿಯಾಗಿದ್ದ ಬಸವಪ್ರಭು ಸ್ವಾಮೀಜಿ ಒತ್ತಾಯಿಸಿದರು. 5

ಸಾಹಿತ್ಯ ಸಮ್ಮೇಳನ: ಪ್ರತಿನಿಧಿ ನೋಂದಣಿ ನೀರಸ ಪ್ರತಿಕ್ರಿಯೆ

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ನಗರದಲ್ಲಿ ಜನವರಿ 6,7 ಮತ್ತು 8ರಂದು ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇದುವರೆಗೆ 4 ಸಾವಿರ 'ಸಮ್ಮೇಳನ ಪ್ರತಿನಿಧಿ'ಗಳು ಮಾತ್ರ ನೋಂದಣಿ ಮಾಡಿಕೊಂಡಿದ್ದು, ಆನ್‌ಲೈನ್ ನೋಂದಣಿಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ ಪ್ರಥಮ ಬಾರಿಗೆ ಸಮ್ಮೇಳನಕ್ಕಾಗಿಯೇ ಪ್ರತ್ಯೇಕ ಆ್ಯಪ್ ರಚಿಸಿ, ಡಿ.1ರಿಂದ ಡಿ.18ರವರೆಗೆ ಆನ್‌ಲೈನ್ ಮೂಲಕ ನೋಂದಣಿಗೆ ಅವಕಾಶ ಕಲ್ಪಿಸಿತ್ತು. 20 ಸಾವಿರ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಿ, ₹500 ಪ್ರತಿನಿಧಿ ಶುಲ್ಕವನ್ನು ನಿಗದಿಪಡಿಸಿತ್ತು. ನಿರೀಕ್ಷಿತ ಮಟ್ಟದಲ್ಲಿ ನೋಂದಣಿಯಾಗದ ಕಾರಣ, ಡಿ.25ರ-ವರೆಗೆ ನೋಂದಣಿ ದಿನಾಂಕವನ್ನು ವಿಸ್ತರಿಸಲಾಗಿದೆ.

5ನೇ ಪುಟ ನೋಡಿ

ಸೇಂದಿ ವನದಲ್ಲಿ ಸಾಗುವಳಿ ಮಾಡಿದವರಿಗೆ ಭೂಮಿ: ಅಶೋಕ

ಬೆಳಗಾವಿ: ರಾಜ್ಯದ ಸೇಂದಿ ವನಗಳಲ್ಲಿ ಹಲವು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ರೈತರಿಗೆ ಆ ಭೂಮಿಯನ್ನು ನೀಡಲು ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ ಅವರು ತಿಳಿಸಿದರು. 6

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮೂತ್ರಪಿಂಡ ದಾನ

ಬೆಂಗಳೂರು: ಸುಡಾನ್‌ನ 63 ವರ್ಷದ ಮಹಿಳೆಗೆ, ಆಕೆಯ 28 ವರ್ಷದ ಪುತ್ರ ಮೂತ್ರಪಿಂಡ ದಾನ ಮಾಡಿದ್ದು, ಆಸ್ಟರ್ ಸಿಎಂಐ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಸಲಾಗಿದೆ. ಮಹಿಳೆ ಎರಡು ವರ್ಷದಿಂದ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಮಾವಿನಕೆರೆ ರಂಗನಾಥನ್ ರಾಜೀನಾಮೆ



ಬೆಂಗಳೂರು: ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ಅಧ್ಯಕ್ಷ ಸ್ಥಾನಕ್ಕೆ ಮಾವಿನಕೆರೆ ರಂಗನಾಥನ್ ರಾಜೀನಾಮೆ ನೀಡಿದ್ದಾರೆ. 'ವಯೋಸಹಜ ಕಾರಣದಿಂದ ರಾಜೀನಾಮೆ ಸಲ್ಲಿಸುತ್ತಿದ್ದೇನೆ' ಎಂದೂ ತಿಳಿಸಿದ್ದಾರೆ.

ಮಾಸ್ತಿ ಅವರ ಶಿಷ್ಯರಾಗಿದ್ದ ಅವರು, 'ಮಾಸ್ತಿ ಭವನ' ನಿರ್ಮಿಸುವಂತೆ ಸರ್ಕಾರಕ್ಕೆ ಆಗ್ರಹಿಸುತ್ತಾ ಬಂದಿದ್ದರು. ಅವರ ಪ್ರಯತ್ನದಿಂದಾಗಿ ಇಲ್ಲಿನ ಜ್ಞಾನ ಭಾರತಿ ಬಡಾವಣೆಯಲ್ಲಿ ಮಾಸ್ತಿ ಭವನದ ಶಿಲಾನ್ಯಾಸ ಕಳೆದ ಏಪ್ರಿಲ್ ತಿಂಗಳಲ್ಲಿ ನಡೆದಿತ್ತು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 17/2022 ದಿನಾಂಕ : 14-12-2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂನ ಸರಬರಾಜಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಸಂಕ್ಷಿಪ್ತ ವಿವರಣೆ : ಆರ್‌ಡಿಎಸ್‌ಒ ನಿರ್ದಿಷ್ಟತೆ ಸಂ. ಇಟಿಐ/ಒಹೆಚ್‌ಇ/50[6/97] ಅನುಸಾರವಾಗಿ ಎ&ಸಿ ಸ್ಲಿಪ್ ಸಂ.1 ರಿಂದ 6 ಅಥವಾ ಇತ್ತೀಚಿನದೊಂದಿಗೆ ಅನ್-ಇನ್ಸುಲೇಟೆಡ್ ಕ್ಯಾಡ್ಮಿಯಂ ಕಾಪರ್ ಕೆಟನರಿ ವೈರ್ 65 ಸ್ಕ್ವೇರ್.ಎಂಎಂ [19/2.10ಎಂಎಂ] (ಪ್ರಮಾಣ : 5000 ಮೀಟರ್‌ಗಳು) (ಟೆಂಡರ್ ಸಂ.ಎಲ್8225534ಎ)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 16-01-2023 ರಂದು 14:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು, ಬೆಂಗಳೂರು
ಪಿಯುಬಿ/547/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ-562 101 ದೂರವಾಣಿ ಸಂಖ್ಯೆ: ಕಛೇರಿ: 08156-295427
ಫ್ಯಾಕ್ಸ್: 08156-295427 ಇಮೇಲ್ - eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ:ಕಾಸಬ/ತಾಂಶಾ/ತಾಂಸ/ ಟೆಂಡರ್ ಪ್ರಕಟಣೆ ಸಂಖ್ಯೆ: 12/2022-23 ದಿನಾಂಕ : 19-12-2022

2702 ನೀರು ಕೆರೆಗಳ ದುರಸ್ತಿ ಮತ್ತು ನಿರ್ವಹಣೆ (ನಿರ್ವಹಣೆ) ಅಡಿಯಲ್ಲಿ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಚಿಕ್ಕಬಳ್ಳಾಪುರ ಮತ್ತು ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2702 ನೀರು ಕೆರೆಗಳ ದುರಸ್ತಿ ಮತ್ತು ನಿರ್ವಹಣೆ (ನಿರ್ವಹಣೆ) ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲ್ಯೂ 1 & 2 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1, 2 ಮತ್ತು 3 ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 30/12/2022 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 02/01/2023 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ - 08156-270427 ಮತ್ತು ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080-25501216 ಮತ್ತು 080-25501227 ರಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ನಗರಸಭಾ ಕಾರ್ಯಾಲಯ, ರಾಮನಗರ
ರಾಮನಗರ ಜಿಲ್ಲೆ- 562159

web: www.ramanagaracity.mrc.gov.in Ph: No. 080-27271286
Email ID: itstaff_ulb_ramanagaram@yahoo.com Helpline No. 080-27276070

ನಸರಾ/ಆ.ಶಾ/ಸ.ಕಾ.ಅ(ಪರಿಸರ)/ಸಿಆರ್/20/2022-23 ದಿನಾಂಕ: 20.12.2022

ಟೆಂಡರ್ ಪ್ರಕಟಣೆ

2022-23ನೇ ಸಾಲಿನ ನಗರಸಭಾ ನಿಧಿ ಅನುದಾನದಲ್ಲಿ ಟೆಂಡರ್ ದಾಸ್ತಾವೇಜು ನೀಡುವ ಮುಖಾಂತರ ಈ ಕೆಳಗಿನ ಟೆಂಡರ್ ಕರೆಯಲಾಗಿರುತ್ತದೆ. ತಾಂತ್ರಿಕವಾಗಿ ಅರ್ಹತೆ ಹೊಂದಿರುವ ದುರಸ್ಥಿದಾರರು ದಿನಾಂಕ: 04.01.2023 ಸಂಜೆ 4.00 ರೊಳಗೆ ಭಾಗವಹಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಆರೋಗ್ಯ ವಿಭಾಗವನ್ನು ಸಂಪರ್ಕಿಸುವುದು.

ಕ್ರ. ಸಂ.	ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ (ರೂ.ಗಳಲ್ಲಿ)	ಟೆಂಡರ್ ದಾಸ್ತಾವೇಜು ಶುಲ್ಕ (ರೂ.ಗಳಲ್ಲಿ)
01.	ನಗರಸಭೆಯ ಒಳಚರಂಡಿ ನಿರ್ವಹಣೆ ಸಕ್ಕಿಂಗ್ ಅಂಡ್ ಜೆಟ್ಟಿಂಗ್ ವಾಹನ ಸಂಖ್ಯೆ ಕೆಎ.42 ಜಿ.608ರ ಜಟ್ಟಿಂಗ್ ಪಂಪ್ ಹಾಗೂ ಪಂಪ್‌ಗೆ ಸಂಬಂಧಿಸಿದ ದುರಸ್ಥಿ	4.98	12,450.00	1,180.00

ಸಹಿ/- ಅಧ್ಯಕ್ಷರರು ನಗರಸಭೆ, ರಾಮನಗರ
ಸಹಿ/- ಪೌರಾಯುಕ್ತರು ನಗರಸಭೆ, ರಾಮನಗರ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ರಾಮಕೃಷ್ಣಾಶ್ರಮ ರಸ್ತೆ ಅಮರಜ್ಯೋತಿ ನಗರ, ತುಮಕೂರು-572105 0816 - 2200209

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿ ಹಸರು: ಹೆಚ್.ಎ.ಎಲ್ ನವರ ಠೇವಣಿ ಕೊಡುಗೆ ಕಾಮಗಾರಿಯ, ಕಡಬ ಕೆರೆಯಲ್ಲಿರುವ ಹೌಸಿಂಗ್ ಛೇಂಬರ್ ನಿಂದ ಹೆಚ್.ಎ.ಎಲ್ ಟೌನ್‌ಶಿಪ್ ನಲ್ಲಿರುವ ಜಲ ಶುದ್ಧೀಕರಣ ಘಟಕದ ವರೆಗೆ ಸಗಟು ನೀರು ಸರಬರಾಜು ವ್ಯವಸ್ಥೆಯನ್ನು ಹಾಗೂ ಮೇಲ್ಮಟ್ಟದ ಜಲ ಸಂಗ್ರಹಾಗಾರವನ್ನು 1 (ಒಂದು) ವರ್ಷದ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡುವ ಕಾಮಗಾರಿ.
ಟೆಂಡರ್ ಸಂಖ್ಯೆ: Tender Indent No. KUWSDB/2022-23/WS/WORK_INDENT3249
ಟೆಂಡರ್ ಮೊತ್ತ: ರೂ.40.40 ಲಕ್ಷಗಳು (Excluding GST).
ಟೆಂಡರ್ ವಿವರ: 1) ಬಿಡ್ ದಾಖಲೆಗಳನ್ನು ವಿತರಿಸುವ ದಿನಾಂಕ: **17.12.2022** ರಿಂದ **26.12.2022** ಸಂಜೆ 5.00 ಗಂಟೆಯವರೆಗೆ 2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **26.12.2022** ರಂದು ಸಂಜೆ.05.30 ಗಂಟೆಯುವರೆಗೆ. ಹೆಚ್ಚಿನ ವಿವರಗಳನ್ನು www.eproc.karnataka.gov.in website ನಲ್ಲಿ ಪಡೆಯುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ ವಿಭಾಗ, ತುಮಕೂರು.
DIPR/TUM/788/MCA/2022-23

ಭಾರತ ಸರ್ಕಾರ
ಬಾಹ್ಯಕಾಶ ಇಲಾಖೆ
ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ
ನಿರ್ಮಾಣ & ನಿರ್ವಹಣ ಸಮೂಹ
ಇಸ್ರೋ ಟೆಲಿಮೆಟ್ರಿ ಟ್ರ್ಯಾಕಿಂಗ್ & ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ)
ಫ್ಲಾಟ್ ನಂ. 12 & 13, 3ನೇ ಮುಖ್ಯ ರಸ್ತೆ, 2ನೇ ಫೇಸ್, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-58,
ದೂ: 080-28094184, 4196, 4541, 4542 ಫ್ಯಾಕ್ಸ್: 080-28094180

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ : ತಿದ್ದುಪಡಿ-1 ದಿ: 20.12.2022

ಕೆಳಕಂಡ ಕಾಮಗಾರಿಗಳಿಗೆ ಭಾರತದ ರಾಷ್ಟ್ರಪತಿಯವರ ಪರವಾಗಿ ಅರ್ಹ ದರ್ಜೆಯ ಗುತ್ತಿಗೆದಾರರುಗಳಿಂದ ಐಟಂ ದರದ ಇ-ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಎನ್‌ಐಟಿ ಸಂ.	ಐಎಸ್‌ಟಿಆರ್‌ಎಸಿ/ಸಿಎಂಜಿ/ಸಿಒಎನ್/ಸಿ/ಇಟಿಎನ್ 59/2022-23 ದಿನಾಂಕ: 25.11.2022
ಕೆಲಸದ ಹೆಸರು	ಐಡಿಎಸ್‌ಎನ್ ಕ್ಯಾಂಪಸ್, ಬ್ಯಾಲಾಳು ಗ್ರಾಮ, ಐಎಸ್‌ಟಿಆರ್‌ಎಸಿ, ಬೆಂಗಳೂರು ಇಲ್ಲಿ ಜಿಸ್ಯಾಟ್-19, ಗೇಟ್‌ವೇಗೆ ಕಟ್ಟಡದ ನಿರ್ಮಾಣ (ಸಿವಿಲ್ ಮತ್ತು ಪಿಹೆಚ್ ಕಾಮಗಾರಿಗಳು)
ಟೆಂಡರ್‌ಗೆ ಇಟ್ಟಿರುವ ಅಂದಾಜು ಮೊತ್ತ	ರೂ.35.00 ಲಕ್ಷಗಳು
ಟೆಂಡರ್ ದಸ್ತಾವೇಜು ವಿವರಗಳು	ಇ-ಟೆಂಡರ್
ಪೂರ್ಣಗೊಳಿಸುವ ಕಾಲಾವಧಿ	3 ತಿಂಗಳು
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ಅವಧಿ	28.11.2022 ರಿಂದ 12.12.2022 ರ ವರೆಗೆ ಇದ್ದುದನ್ನು 02.01.2023ರ ವರೆಗೆ ವಿಸ್ತರಣೆ ಮಾಡಿದೆ.
ಬಿಡ್ ಸ್ಪಷ್ಟನೆಗಳು	28.11.2022 ರಿಂದ 13.12.2022ರ ವರೆಗೆ ಇದ್ದುದನ್ನು 03.01.2023ರ ವರೆಗೆ ವಿಸ್ತರಿಸಲಾಗಿದೆ.
ಬಿಡ್ ಸ್ಪಷ್ಟನೆಗಳಿಗೆ ಉತ್ತರ ನೀಡುವ ಕಡೆಯ ದಿನಾಂಕ	14.12.2022 ರಂದು 16.30 ಗಂಟೆವರೆಗೆ ಇದ್ದುದನ್ನು 04.01.2023 ರವರೆಗೆ ವಿಸ್ತರಿಸಲಾಗಿದೆ.
ಟೆಂಡರ್‌ಗಳನ್ನು ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ	15.12.2022, 14:30 ಗಂಟೆಯುವರೆಗೆ ಇದ್ದುದನ್ನು 05.01.2023ರ ವರೆಗೆ ವಿಸ್ತರಿಸಲಾಗಿದೆ.
ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	16.12.2022, 11:30 ಗಂಟೆ ನಂತರ ಎಂದು ಇದ್ದುದನ್ನು 06.01.2023ರ ವರೆಗೆ ವಿಸ್ತರಣೆ ಮಾಡಿದೆ.
ಇಎಂಡಿ	ರೂ.70,000/-

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗಾಗಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆ (NIT)ಯನ್ನು ವೆಬ್‌ಸೈಟ್: www.isro.gov.inಯಲ್ಲಿ ನೋಡಬಹುದು ಮತ್ತು ಟೆಂಡರ್ ದಸ್ತಾವೇಜುಗಳನ್ನು www.tenderwizard.com/ISRO ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಸಮೂಹ ಮುಖ್ಯಸ್ಥರು-ಸಿಎಂಜಿ,

ಆ್ಯಪ್ ಬಂದ್ ದೂರು ತಿರಸ್ಕರಿಸಿದ್ದ ಕೇಂದ್ರ ಸೈಬರ್ ಅಪರಾಧ ವಿಭಾಗ

ಟ್ಯಾಕ್ಸಿ ಆ್ಯಪ್ ಸ್ಥಗಿತಕ್ಕೆ ಕಾನೂನಿಲ್ಲ!

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಆ್ಯಪ್ ಆಧಾರಿತ ಟ್ಯಾಕ್ಸಿ ಕಂಪನಿಗಳು ಅನಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿದ್ದರೂ, ಆ್ಯಪ್‌ಗಳನ್ನು ಬಂದ್ ಮಾಡಲು ಕಾನೂನಿನಲ್ಲಿ ಅವಕಾಶವೇ ಇಲ್ಲ.

ಅನಧಿಕೃತವಾಗಿ ಕಾರ್ಯಾಚರಣೆ ಮಾಡುತ್ತಿರುವ ಆ್ಯಪ್ ಗಳನ್ನು ಬಂದ್ ಮಾಡಬೇಕು ಎಂಬ ರಾಜ್ಯ ಸರ್ಕಾರದ ಕೋರಿಕೆಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದೆ.

ಅಗ್ರಿಗೇಟರ್ ಸೇವೆ ಒದಗಿಸುತ್ತಿರುವ ಕಂಪನಿಗಳ ಆ್ಯಪ್‌ಗಳನ್ನು ಬಂದ್ ಮಾಡಲು ಮಾಹಿತಿ ತಂತ್ರಜ್ಞಾನ ಕಾಯ್ದೆಯಲ್ಲಿ ಅವಕಾಶವಿಲ್ಲ ಎಂಬ ಉತ್ತರ ನೀಡಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಓಲಾ, ಉಬರ್, ರ್‍ಯಾಪಿಡೊ ಸೇರಿ ಆ್ಯಪ್ ಆಧಾರಿತ ಕಂಪನಿಗಳು ನಗರದಲ್ಲಿ ಆಟೊ ಮತ್ತು ಬೈಕ್ ಸೇವೆ ಒದಗಿಸುತ್ತಿವೆ. ಈ ಸೇವೆ ನಿಯಮಬಾಹಿರವಾಗಿದೆ ಎಂದು ಸಾರಿಗೆ ಇಲಾಖೆಯೇ ಹೇಳಿತ್ತು. ಅಷ್ಟು ಮಾತ್ರವಲ್ಲದೇ, ಆ ಕಂಪನಿಗಳ ವಿರುದ್ಧ ಸೈಬರ್ ಅಪರಾಧ ಠಾಣೆಯಲ್ಲಿ ದೂರು ಸಲ್ಲಿಸುವುದಾಗಿಯೂ ಸಾರಿಗೆ ಆಯುಕ್ತರೇ ಇತ್ತೀಚೆಗೆ ಹೇಳಿದ್ದರು.

ಈ ಎಲ್ಲ ಬೆಳವಣಿಗೆಗಳಿಗೂ ಮುನ್ನವೇ ಸಾರಿಗೆ ಇಲಾಖೆಯು ಕೇಂದ್ರ ಸೈಬರ್ ಭದ್ರತಾ ವಿಭಾಗಕ್ಕೆ ದೂರು ಸಲ್ಲಿಸಿತ್ತು. ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ಎ ಅಡಿಯಲ್ಲಿ ರ್‍ಯಾಪಿಡೊ ಕಂಪನಿಯ ಆ್ಯಪ್ ಸ್ಥಗಿತಗೊಳಿಸುವಂತೆ ಮನವಿ ಮಾಡಿತ್ತು.

'ಈ ಸೆಕ್ಷನ್ ಅಡಿ ಆ್ಯಪ್ ಸ್ಥಗಿತಗೊಳಿಸಲು ಅವಕಾಶವಿಲ್ಲ. ಸ್ಥಳೀಯವಾಗಿ ಎಫ್‌ಐಆರ್ ದಾಖಲಿಸಿ ಕೋರ್ಟ್ ಆದೇಶ ಪಡೆದುಕೊಳ್ಳಬಹುದು ಎಂದು ಸೂಚಿಸಿತ್ತು. ಕೇಂದ್ರದ ಉತ್ತರದಿಂದ ಅಧಿಕಾರಿಗಳು ಕೈ ಚೆಲ್ಲಿದರು. ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಕ್ರಮಕ್ಕೆ ಪರ್ಯಾಯ ಮಾರ್ಗಗಳನ್ನು ಹುಡುಕುವ ಪ್ರಯತ್ನವನ್ನೇ ಮಾಡಲಿಲ್ಲ. ಸ್ಥಳೀಯವಾಗಿ ಎಫ್‌ಐಆರ್ ಕೂಡ ದಾಖಲಿಸಲಿಲ್ಲ. ಇದರಿಂದಾಗಿ ಅನಧಿಕೃತ ಸೇವೆ ರಾಜಾರೋಷವಾಗಿ ವಿಸ್ತಾರಗೊಂಡಿತು' ಎಂದು ಸಾರಿಗೆ ತಜ್ಞರು ಹೇಳುತ್ತಾರೆ.

'ಮಾಹಿತಿ ತಂತ್ರಜ್ಞಾನ ಕಾಯ್ದೆಗೆ ಸಂಬಂಧಿಸಿದ ನಿಯಮಗಳನ್ನು ಹಲವು ಬಾರಿ ಹುಡುಕಿದ್ದೇವೆ. ಅಗ್ರಿಗೇಟರ್‌ಗಳ ವಿರುದ್ಧ ಕ್ರಮ ಕೈಗೊಳ್ಳಲು ಕಾಯ್ದೆಯಲ್ಲಿ ಅವಕಾಶವೇ ಇಲ್ಲ. ಹೀಗಾಗಿ, ಸೈಬರ್‌ಅಪರಾಧ ಠಾಣೆಗೆ ದೂರು ನೀಡಿದರೂ ಪ್ರಯೋಜನವಾಗಲಿಲ್ಲ. ಕಾಯ್ದೆಗೆ ತಿದ್ದುಪಡಿ ತಂದು ಪ್ರಬಲಗೊಳಿಸುವ ಅಗತ್ಯವಿದೆ' ಎಂದು ಸಾರಿಗೆ ಇಲಾಖೆ ಹಿರಿಯ ಅಧಿಕಾರಿಯೊಬ್ಬರು ಹೇಳುತ್ತಾರೆ.

'ಬೇಡಿಕೆ ಆಧರಿತ ಸಾರಿಗೆ ತಂತ್ರಜ್ಞಾನ ನಿಯಮ-2016ರಲ್ಲಿ ಅಸ್ತಿತ್ವಕ್ಕೆ ಬಂದಿತು. ಅದಕ್ಕೂ ಮುನ್ನವೇ ಕಾರ್ಯಾಚರಣೆಯಲ್ಲಿದ್ದರೂ, ನಿಯಮ ಜಾರಿ ಬಳಿಕವೇ ಓಲಾ ಮತ್ತು ಉಬರ್ ಕಂಪನಿಗಳಿಗೆ ಪರವಾನಗಿ ನೀಡಲಾಯಿತು. ಪರವಾನಗಿ ಇಲ್ಲದೆ ಕಾರ್ಯಾಚರಣೆಯಲ್ಲಿರುವ ಆ್ಯಪ್‌ಗಳ ವಿರುದ್ಧ ಕ್ರಮಕ್ಕೆ ದೂರು ನೀಡುತ್ತಲೇ ಇದ್ದೇವೆ. ಬಂದ್ ಮಾತ್ರ ಆಗಲಿಲ್ಲ' ಎಂದು ಅಧಿಕಾರಿಗಳು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಆಟೊ ಚಾಲಕರ ಸಂಘಟನೆಗಳ ಪ್ರತಿಭಟನೆ 29ಕ್ಕೆ

ಬೆಂಗಳೂರು: 'ಬೈಕ್ ಟ್ಯಾಕ್ಸಿಗಳಿಗೆ ಅನುಮತಿ ನೀಡಬಾರದು' ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಗರದ ಆಟೊ ಚಾಲಕರ ಸಂಘಟನೆಗಳು ಡಿ. 29ರಂದು ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದು, ಅಂದು ಆಟೊ ಸೇವೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ.

'ಬೇಡಿಕೆ ಈಡೇರಿಕೆಗಾಗಿ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಸ್ಪಂದನೆ ವ್ಯಕ್ತವಾಗಿಲ್ಲ. ಹೀಗಾಗಿ, ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದೇವೆ. ಅಂದು ಆಟೊ ಸೇವೆಯನ್ನು ಸ್ಥಗಿತಗೊಳಿಸಿ ಬೃಹತ್ ಮೆರವಣಿಗೆ ನಡೆಸಲು ಚಿಂತನೆ ನಡೆಸುತ್ತಿದ್ದೇವೆ' ಎಂದು ತಿಳಿಸಿದ್ದಾರೆ.

ಶೀಘ್ರ ಇ-ಬೈಕ್ ಟ್ಯಾಕ್ಸಿ: ಪ್ರತಿಭಟನೆಗೆ ನಿರ್ಧಾರ

ನಗರದಲ್ಲಿ ಸದ್ಯದಲ್ಲೆ ಇ-ಬೈಕ್‌ಗಳ ಟ್ಯಾಕ್ಸಿ ಸೇವೆಯೂ ಅಧಿಕೃತವಾಗಿ ಆರಂಭವಾಗಲಿದ್ದು, ಎಲೆಕ್ಟ್ರಿಕ್ ಬೈಕ್‌ಗಳು ರಸ್ತೆಗಿಳಿಯಲಿವೆ. 'ಎಲೆಕ್ಟ್ರಿಕ್ ಬೈಕ್ ಸೇವೆ ಮಾತ್ರ ಒದಗಿಸಬೇಕು ಎಂಬ ಷರತ್ತು ವಿಧಿಸಿ ವಿಕೆಡ್‌ರೈಡ್ ಕಂಪನಿಗಷ್ಟೇ ಪರವಾನಗಿ ನೀಡಲಾಗಿದೆ' ಎಂದು ಸಾರಿಗೆ ಇಲಾಖೆ ಹೆಚ್ಚುವರಿ ಆಯುಕ್ತ ಹೇಮಂತಕುಮಾರ್ ತಿಳಿಸಿದರು. '5 ಕಿಲೋ ಮೀಟರ್‌ಗೆ ₹25 ನಿಗದಿ ಮಾಡಿ ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಿದರೆ, ಆಟೊರಿಕ್ಷಾಗಳನ್ನು ಹತ್ತುವವರು ಯಾರು' ಎಂದು ಆಟೊ ಚಾಲಕರ ಒಕ್ಕೂಟದ ಸಂಚಾಲಕ ಎಂ.ಮಂಜುನಾಥ್ ಪ್ರಶ್ನಿಸಿದರು. ಇದನ್ನು ವಿರೋಧಿಸಿ ಡಿ.29ರಂದು ಪ್ರತಿಭಟನೆ ನಡೆಸಲು ನಿರ್ಧರಿಸಿದ್ದೇವೆ. ಸರ್ಕಾರ ಕೂಡಲೇ ತನ್ನ ನಿರ್ಧಾರ ಬದಲಿಸಬೇಕು' ಎಂದು ಒತ್ತಾಯಿಸಿದರು.

ಸುದ್ದಿ 2 ನಿಮಿಷ

ಮಲ್ಲಿಕಾರ್ಜುನ ಖರ್ಗೆಗೆ ಪ್ರೆಸ್ ಕ್ಲಬ್ 'ವರ್ಷದ ವ್ಯಕ್ತಿ' ಪ್ರಶಸ್ತಿ

ಬೆಂಗಳೂರು: ಅಖಿಲ ಭಾರತ ಕಾಂಗ್ರೆಸ್ ಘಟಕದ (ಎಐಸಿಸಿ) ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬೆಂಗಳೂರು ಪ್ರೆಸ್ ಕ್ಲಬ್‌ನ 2022ನೇ ಸಾಲಿನ 'ವರ್ಷದ ವ್ಯಕ್ತಿ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳ ಸಚಿವ ಮುರುಗೇಶ್ ನಿರಾಣಿ ಮತ್ತು ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ಅವರಿಗೆ ಪ್ರೆಸ್‌ಕ್ಲಬ್‌ನ 'ವಿಶೇಷ ಪ್ರಶಸ್ತಿ' ನೀಡಲಾಗುತ್ತಿದೆ.

2022ನೇ ಸಾಲಿನ 'ಪ್ರೆಸ್ ಕ್ಲಬ್ ವಾರ್ಷಿಕ ಪ್ರಶಸ್ತಿ'ಗೆ 'ಸುಧಾ' ವಾರಪತ್ರಿಕೆಯ ಹಿರಿಯ ಉಪಸಂಪಾದಕ ರಾಘವೇಂದ್ರ ಕೆ. ತೊಗರ್ಸಿ ಸೇರಿ 33 ಮಂದಿಯನ್ನು ಆಯ್ಕೆ ಮಾಡಲಾಗಿದೆ.

ಎಚ್.ಎಸ್. ಬಲರಾಂ, ಅಗ್ರಹಾರ ಕೃಷ್ಣಮೂರ್ತಿ, ಗಂಗಾಧರ ಮೊದಲಿಯಾರ್, ಚೆನ್ನ ನಾಗರಾಜ್ ಎಂ., ಶ್ರೀಧರ್ ಬಿ.ಎನ್., ಗೌತಮ್ ಮಾಚಯ್ಯ ಎಂ., ರಾಜಶೇಖರ್ ಎಸ್., ಎಚ್. ಮೂರ್ತಿ, ಸಂಗಮ್ ದೇವ್ ಐ.ಎಚ್., ಮುನೀರ್ ಅಹಮದ್ ಆಜಾದ್, ಕೆ.ವಿ. ಪರಮೇಶ್, ಸಿ.ಎಸ್. ಬೋಪಯ್ಯ, ಶ್ಯಾಂ ಬೋಜಕ್, ಭಾಗ್ಯಪ್ರಕಾಶ್ ಕೆ., ಅನಿಲ್ ವಿ. ಗೆಜ್ಜೆ, ಗಾಯಿತ್ರಿ ನಿವಾಸ್, ಬಸವರಾಜು, ಹನುಮೇಶ್ ಯಾವಗಲ್, ಶಿವಣ್ಣ, ಶೋಭಾ ಎಂ.ಸಿ., ದಿವಾಕರ್ ಸಿ., ನಾಗಭೂಷಣ್ ವೈ.ಎಂ., ವಿಲಾಸ್ ನಂದೂಡಕರ್, ಇ. ನಾಗರಾಜು, ಪಿ. ರಾಜೇಂದ್ರ, ಶಿವಾನಂದ ತಗಡೂರು ಟಿ.ವಿ., ಶಿವಪ್ರಕಾಶ್ ಎಸ್., ಓಂಕಾರ ಕಾಕಡೆ, ಜಯಪ್ರಕಾಶ್ ಆರ್., ನರಸಿಂಹ ರಾವ್ ಮತ್ತು ಗಿರಿಪ್ರಕಾಶ್ ಕೆ. ಆಯ್ಕೆಯಾಗಿದ್ದಾರೆ.

ಡಿ. 31ರಂದು ಕಬ್ಬನ್ ಉದ್ಯಾನದಲ್ಲಿರುವ ಪ್ರೆಸ್‌ಕ್ಲಬ್ ಆವರಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಕನ್ನಡ ಮಸೂದೆ ಅಂಗೀಕರಿಸಿ'

ಬೆಂಗಳೂರು: 'ಬೆಳಗಾವಿಯ ಅಧಿವೇಶನದಲ್ಲಿಯೇ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ 2022 ಅಂಗೀಕರಿಸಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಆಗ್ರಹಿಸಿದ್ದಾರೆ.

'86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೂ ಮೊದಲು ಮಸೂದೆ ಕಾನೂನಾದರೆ, ಕನ್ನಡದ ಅಕ್ಷರ ಜಾತ್ರೆಗೆ ಅರ್ಥ ಬರಲಿದೆ. ಅದೇ ರೀತಿ, ನಾಡಿನಲ್ಲಿ ಕನ್ನಡ ಭಾಷೆ ಕಡೆಗಣಿಸುವವರ ವಿರುದ್ಧ ಸೂಕ್ತ ಕಾನೂನು ಕುಣಿಕೆ ಹಾಕಲು ಸಾಧ್ಯವಾಗುತ್ತದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಬೆಳಗಾವಿಯ ಅಧಿವೇಶನದ ಮೇಲೆ ಸಮಸ್ತ ಕನ್ನಡಿಗರ ದೃಷ್ಟಿ ನೆಟ್ಟಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜಕಾಲುವೆ ಒತ್ತುವರಿ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಾಜಕಾಲುವೆಗಳ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮತ್ತೆ ಸೂಚನೆ ನೀಡಿದ್ದಾರೆ.

ಮಳೆಗಾಲದಲ್ಲಿ ಪೂರ್ವ ಬೆಂಗಳೂರು ಮುಳುಗಡೆಯಾಗಿದ್ದು, ಆಗ ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ನಡೆದಿತ್ತು. ಮಳೆ ನಿಂತಮೇಲೆ ತೆರವು ಕಾರ್ಯಾಚರಣೆ ನಿಂತಿತ್ತು. ಎರಡು ತಿಂಗಳ ನಂತರ ಬೃಹತ್ ನೀರುಗಾಲುವೆಗಳ ಒತ್ತುವರಿ ತೆರವು ಕಾರ್ಯಾಚರಣೆ ಪರಿಶೀಲನೆ ಸಭೆ ಮಂಗಳವಾರ ನಡೆಯಿತು. ಪಾಲಿಕೆ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆಯ ತಹಶೀಲ್ದಾರರು ಹಾಗೂ ಭೂಮಾಪಕರು ಸಮನ್ವಯ ಮಾಡಿಕೊಂಡು ಒತ್ತುವರಿ ತೆರವು ಕಾರ್ಯಾಚರಣೆ ನಡೆಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೃಹತ್ ನೀರುಗಾಲುವೆಯ ಒತ್ತುವರಿದಾರರಿಗೆ ನೋಟಿಸ್ ಜಾರಿ ಮಾಡಿ ಅಹವಾಲು ಆಲಿಸಿ ಅಗತ್ಯ ಆದೇಶ ಹೊರಡಿಸುವಂತೆ ಸಂಬಂಧಪಟ್ಟ ತಹಶೀಲ್ದಾರರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಯಿತು. ನ್ಯಾಯಾಲಯದಲ್ಲಿ ತಡೆ ತಂದಿರುವ ಪ್ರಕರಣಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥಪಡಿಸಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ರಾಜಕಾಲುವೆ ವಿಭಾಗದ ಎಂಜಿನಿಯರ್‌ಗಳಿಗೆ ಆದೇಶಿಸಿದರು.

ಒತ್ತುವರಿ ವಿವರ: ಬಿಬಿಎಂಪಿ ವ್ಯಾಪ್ತಿಯಲ್ಲಿ 2015-16ರಿಂದ ಇದುವರೆಗೆ ರಾಜಕಾಲುವೆ ಒತ್ತುವರಿಯ 2,671 ಪ್ರಕರಣಗಳನ್ನು ಗುರುತಿಸಲಾಗಿದೆ. ಈ ಪೈಕಿ 2,073 ಒತ್ತುವರಿ ತೆರವುಗೊಳಿಸಲಾಗಿದೆ. 67 ಪ್ರಕರಣಗಳು ನ್ಯಾಯಾಲಯಕ್ಕೆ ಸಂಬಂಧಿಸಿದ್ದಾಗಿವೆ. ಇನ್ನು 470 ಒತ್ತುವರಿಗಳ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಸಮೀಕ್ಷೆ ಕಾರ್ಯವನ್ನು ನಡೆಯುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ವಲಯ ಆಯುಕ್ತರಾದ ಡಾ.ತ್ರಿಲೋಕ್ ಚಂದ್ರ, ಡಾ. ಹರೀಶ್ ಕುಮಾರ್, ಬೆಂಗಳೂರು ನಗರ ಜಿಲ್ಲಾಧಿಕಾರಿ ದಯಾನಂದ, ವಲಯ ಜಂಟಿ ಆಯುಕ್ತರಾದ ವೆಂಕಟಾ ಚಲಪತಿ, ಕೃಷ್ಣಮೂರ್ತಿ, ಮುಖ್ಯ ಎಂಜಿನಿಯರ್‌ಗಳು ಇದ್ದರು.

'ಗುಂಡಿಮುಕ್ತ ರಸ್ತೆ ಅಸಾಧ್ಯ'

ಬೆಂಗಳೂರು: 'ನಗರದಲ್ಲಿ ಯಾವಾಗಲೂ ರಸ್ತೆ ಗುಂಡಿ ಬೀಳುತ್ತದೆ. ರಸ್ತೆಗಳು ಗುಂಡಿಮುಕ್ತ ಆಗಲು ಸಾಧ್ಯವಿಲ್ಲ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಕಳೆದ ಬಾರಿ ಸುರಿದ ಮಳೆಯಿಂದ ಮತ್ತಷ್ಟು ಗುಂಡಿಗಳಾಗಿವೆ. ಇವುಗಳ ದುರಸ್ತಿ ಕಾರ್ಯ ನಡೆಯುತ್ತಿದೆ ಎಂದರು.

'ಪ್ರಮುಖ ರಸ್ತೆಗಳನ್ನು ಡಿ.31ರೊಳಗೆ ಗುಂಡಿಮುಕ್ತ ಮಾಡಲು ಎಂಜಿನಿಯರ್‌ಗಳಿಗೆ ಸೂಚಿಸಲಾಗಿದೆ. ವಲಯ ಮಟ್ಟದಲ್ಲೂ ಗುಂಡಿ ಮುಚ್ಚಲು ಸೂಚಿಸಲಾಗಿದೆ. ಜ.1ರಿಂದ 'ಫಿಕ್ಸ್ ಮೈ ಸ್ಟ್ರೀಟ್' (ಎಫ್‌ಎಂಎಸ್) ನಾಗರಿಕರಿಗೆ ಮುಕ್ತ ಮಾಡಲಾಗುತ್ತದೆ. ಅವರು ಎಲ್ಲಿ ಗುಂಡಿಗಳಿವೆ ಎಂಬುದನ್ನು ಅಪ್‌ಲೋಡ್ ಮಾಡಬಹುದು' ಎಂದರು.

ರಸ್ತೆ ಕೆಟ್ಟದ್ದಾಗಿದ್ದರೆ ಅದನ್ನು ಗುಂಡಿ ಎಂದು ಪರಿಗಣಿಸಲು ಸಾಧ್ಯವಿಲ್ಲ. ಅದನ್ನು ಹೊಸದಾಗಿಯೇ ಮಾಡಬೇಕು ಎಂದರು.

'ರ್‍ಯಾಪಿಡ್ ರಸ್ತೆ ಬಗ್ಗೆ ಮೌಲ್ಯಮಾಪನ ಆಗಬೇಕಿದೆ. ಭಾರತೀಯ ವಿಜ್ಞಾನ ಸಂಸ್ಥೆಗೆ ಕಾರ್ಯಾದೇಶ ನೀಡಬೇಕು. ಅವರಿಗೆ ಎಷ್ಟು ಹಣ ನೀಡಬೇಕು ಎಂಬುದನ್ನು ಅಂತಿಮಗೊಳಿಸಬೇಕು. ಅವರು ಎಷ್ಟು ಸಮಯ ತೆಗೆದುಕೊಳ್ಳುತ್ತಾರೆ ಗೊತ್ತಿಲ್ಲ. ಅವರು ವರದಿ ಕೊಟ್ಟಮೇಲೆ ಮುಂದಿನ ಕ್ರಮ' ಎಂದರು.

'ತ್ಯಾಜ್ಯ ಭೂಭರ್ತಿಗೆ ಎಲ್ಲೆಲ್ಲಿ ಸ್ಥಳ ಪಡೆದಿದ್ದೇವೆಯೋ ಅಲ್ಲಲ್ಲಿ ಕಸ ತುಂಬಲಾಗುತ್ತದೆ. ಅದನ್ನು ನಿಲ್ಲಿಸಿದರೆ ಬಿಬಿಎಂಪಿ ವ್ಯಾಪ್ತಿಯಲ್ಲೇ ಕಸ ಹಾಕಬೇಕಾಗುತ್ತದೆ. ಅದೂ ಅಸಾಧ್ಯ' ಎಂದು ಅವರು ಹೇಳಿದರು.

ಬಿಡಿಎ ಹುದ್ದೆ: ಅನ್ಯ ನಿಯೋಜನೆಗೆ ಆಕ್ಷೇಪ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ (ಬಿಡಿಎ) ಕೆಎಎಸ್ ವೃಂದಕ್ಕೆ ಮೀಸಲಾದ ಹುದ್ದೆಗಳಿಗೆ ಅನ್ಯ ಇಲಾಖೆ ಅಧಿಕಾರಿಗಳನ್ನು ನಿಯೋಜನೆ ಮಾಡಬಾರದು. ಮಾಡಿದ ನಿಯೋಜನೆ ಗಳನ್ನು ತಕ್ಷಣ ರದ್ದು ಮಾಡಬೇಕು ಎಂದು ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘ ಒತ್ತಾಯಿಸಿದೆ.

ಕೆಎಎಸ್ ಅಧಿಕಾರಿಗಳಿಗೆ ಮೀಸಲಾಗಿರುವ ಉಪ ಕಾರ್ಯದರ್ಶಿ-1 ಹುದ್ದೆಗೆ ಸಚಿವಾಲಯದ ಉಪ ಕಾರ್ಯದರ್ಶಿ ಬಿ.ಆರ್.ಮಂಜುನಾಥ್ ಅವರನ್ನು, ಉಪ ಕಾರ್ಯದರ್ಶಿ-4 ಹುದ್ದೆಗೆ ಖಜಾನೆ ಇಲಾಖೆ ಸಹಾಯಕ ನಿರ್ದೇಶಕ ಟಿ.ಎಸ್.ಶಿವರಾಮ್ ಅವರನ್ನು ಸರ್ಕಾರ ನೇಮಿಸಿದೆ.

'ಈ ಹುದ್ದೆಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವೃಂದ ಹಾಗೂ ಕೆಎಎಸ್ ವೃಂದದ ಅಧಿಕಾರಿಗಳಿಗೆ ಮೀಸಲಾಗಿವೆ. ಮುಂದೆಯೂ ಇಂತಹ ನಿಯೋಜನೆ ಮಾಡಬಾರದು' ಎಂದು ಸಂಘದ ಅಧ್ಯಕ್ಷ ಡಾ.ರವಿ ಎಂ. ತಿರ್ಲಾಪುರ, ಡಾ.ಬಿ.ಆರ್.ಹರೀಶ್ ನಾಯ್ಕ ಸರ್ಕಾರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ.

ಮಿದುಳು ನಿಷ್ಕ್ರಿಯ: ನಾಲ್ಕು ಮಂದಿಗೆ ಅಂಗಾಂಗ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಅಪಘಾತದಲ್ಲಿ ಗಾಯಗೊಂಡು, ಮಿದುಳು ನಿಷ್ಕ್ರಿಯಗೊಂಡಿದ್ದ 36 ವರ್ಷದ ವ್ಯಕ್ತಿಯೊಬ್ಬರು ಅಂಗಾಂಗ ದಾನದ ಮೂಲಕ ನಾಲ್ವರಿಗೆ ನೆರವಾಗಿದ್ದಾರೆ.

ಚಿಕ್ಕಬಳ್ಳಾಪುರದ ಗೌರಿಬಿದನೂರಿನ ನಿವಾಸಿಯಾದ ಅವರು, ಡಿ.16ರಂದು ಅಪಘಾತಕ್ಕೆ ಒಳಗಾಗಿದ್ದರು. ಅವರ ತಲೆಗೆ ಗಂಭೀರ ಪೆಟ್ಟು ಬಿದ್ದಿತ್ತು. ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಿ, ಅದೇ ದಿನ ಸಂಜೆ ಯಶವಂತಪುರದ ಸ್ಪರ್ಶ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಎರಡು ದಿನ ಜೀವರಕ್ಷಕ ಸಾಧನದ ನೆರವಿನಿಂದ ಬದುಕಿದ್ದರು. ಡಿ.19ರಂದು ಅವರ ಮಿದುಳು ನಿಷ್ಕ್ರಿಯಗೊಂಡಿದೆ ಎಂದು ಘೋಷಿಸಲಾಯಿತು.

ಕುಟುಂಬದ ಸದಸ್ಯರು ಅಂಗಾಂಗಗಳ ದಾನ ಮಾಡಲು ನಿರ್ಧರಿಸಿದರು. ಯಕೃತ್ತನ್ನು ಸ್ಪರ್ಶ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವ್ಯಕ್ತಿಗೆ, ಎಡಭಾಗದ ಮೂತ್ರಪಿಂಡವನ್ನು ಸಾಗರ್ ಆಸ್ಪತ್ರೆಗೆ, ಬಲಭಾಗದ ಮೂತ್ರಪಿಂಡವನ್ನು ಅಪೋಲೊ ಆಸ್ಪತ್ರೆಗೆ ನೀಡಲಾಗಿದೆ. ಕಣ್ಣುಗಳನ್ನು ನಾರಾಯಣ ನೇತ್ರಾಲಯದ ರಾಜ್‌ಕುಮಾರ್ ಐ ಬ್ಯಾಂಕ್‌ಗೆ ರವಾನಿಸಲಾಗಿದೆ.

ಮೀನಿನ ಹೊಟ್ಟೆ ಆಕಾರದಲ್ಲಿ ಮೇಲ್ಸೇತುವೆ

ಬೆಂಗಳೂರು: ಮಿನರ್ವ ವೃತ್ತದಿಂದ ಕಸ್ತೂರಬಾ ರಸ್ತೆವರೆಗಿನ ಜೆ.ಸಿ. ರಸ್ತೆ ಮೇಲ್ಸೇತುವೆಗೆ ತಾಂತ್ರಿಕ ಸಲಹಾ ಸಮಿತಿ (ಟಿಎಸಿ) ಸಮ್ಮತಿ ನೀಡಿದೆ. ಇದು, ಮೀನಿನ ಹೊಟ್ಟೆಯಾಕಾರದಲ್ಲಿ ನಿರ್ಮಾಣವಾಗಲಿದೆ.

ಸಿರ್ಸಿ ಮೇಲ್ಸೇತುವೆ ಹಾಗೂ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂತಹ ಆಕಾರದ ಮೇಲ್ಸೇತುವೆ ಇದೆ. ಹಲವು ಬದಲಾವಣೆಗಳನ್ನು ಟಿಎಸಿ ಸೂಚಿಸಿ ಜೆ.ಸಿ. ರಸ್ತೆ ಮೇಲ್ಸೇತುವೆಗೆ ಒಪ್ಪಿಗೆ ನೀಡಿದೆ. ಈ ಯೋಜನೆ ವೆಚ್ಚ ₹270 ಕೋಟಿಯಿಂದ ₹300 ಕೋಟಿಯಾಗುವ ಅಂದಾಜಿದೆ.

ಸಂಕ್ಷಿಪ್ತ ಸುದ್ದಿ

ಡಿ. 25ಕ್ಕೆ ಸ್ವರ್ಣ ಜಯಂತಿ ಸಮಾರೋಪ

ಬೆಂಗಳೂರು: ಜನಸೇವಾ ವಿಶ್ವಸ್ತ ಮಂಡಳಿ ಸ್ವರ್ಣ ಜಯಂತಿಯ ಸಮಾರೋಪ ಸಮಾರಂಭ ಡಿ. 25ರಂದು ಮಾಗಡಿ ರಸ್ತೆಯ ಚನ್ನೇನಹಳ್ಳಿಯಲ್ಲಿ ನಡೆಯಲಿದೆ.

ಕಾರ್ಯಕ್ರಮದಲ್ಲಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಿರಸಿಯ ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಮುಕುಂದ ಸಿ.ಆರ್., ಎನ್. ಮಂಜುನಾಥ್ ಪ್ರಸಾದ್, ತ್ರಿಷ್ಠಾ ರಾಮಮೂರ್ತಿ, ಅಮರ್ ಮೈಸೂರು ಭಾಗವಹಿಸುವರು ಎಂದು ಮಂಡಳಿಯ ನ. ತಿಪ್ಪೇಸ್ವಾಮಿ ತಿಳಿಸಿದರು.

ತೃತೀಯ ಲಿಂಗಿಗಳ ನೋಂದಣಿಗೆ ಸೂಚನೆ

ಬೆಂಗಳೂರು: ತೃತೀಯ ಲಿಂಗಿಗಳು ಹಾಗೂ ಅಂಗವಿಕಲರನ್ನು ಗುರುತಿಸಿ ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಬೆಂಗಳೂರಿನಲ್ಲಿ 9,182 ಲಿಂಗತ್ವ ಅಲ್ಪಸಂಖ್ಯಾತರಿದ್ದು, 9,085 ಮಂದಿ ಮತದಾರರ ಚೀಟಿ ಹೊಂದಿದ್ದಾರೆ. 15 ಮಂದಿ ಅರ್ಜಿ ಸಲ್ಲಿಸಿದ್ದು, 82 ಮಂದಿ ಇನ್ನೂ ಸಂಪರ್ಕಕ್ಕೆ ಸಿಕ್ಕಿರುವುದಿಲ್ಲ. ಲಿಂಗತ್ವ ಅಲ್ಪ ಸಂಖ್ಯಾತ ಸಂಘಟನೆಯ ಸಹಕಾರ ಪಡೆದು ನೋಂದಣಿಗೆ ಕ್ರಮವಹಿಸಲು ಹೇಳಿದರು.

ಚುನಾವಣಾ ವಿಭಾಗದ ವಿಶೇಷ ಆಯುಕ್ತ ಉಜ್ವಲ್ ಕುಮಾರ್ ಘೋಷ್ ಮಾತನಾಡಿ, ತೃತೀಯ ಲಿಂಗಿಗಳು ಹಾಗೂ ಅಂಗವಿಕಲರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಬೇಕು. ಅವರಿಗೆ ಜಾಗೃತಿ ಮೂಡಿಸಲು ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ತಿಳಿಸಿದರು.

'ಕನ್ನಡ ಮಸೂದೆ ಅಂಗೀಕರಿಸಿ'

ಬೆಂಗಳೂರು: 'ಬೆಳಗಾವಿಯ ಅಧಿವೇಶನದಲ್ಲಿಯೇ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ 2022 ಅಂಗೀಕರಿಸಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಆಗ್ರಹಿಸಿದ್ದಾರೆ.

'86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೂ ಮೊದಲು ಮಸೂದೆ ಕಾನೂನಾದರೆ, ಕನ್ನಡದ ಅಕ್ಷರ ಜಾತ್ರೆಗೆ ಅರ್ಥ ಬರಲಿದೆ. ಅದೇ ರೀತಿ, ನಾಡಿನಲ್ಲಿ ಕನ್ನಡ ಭಾಷೆ ಕಡೆಗಣಿಸುವವರ ವಿರುದ್ಧ ಸೂಕ್ತ ಕಾನೂನು ಕುಣಿಕೆ ಹಾಕಲು ಸಾಧ್ಯವಾಗುತ್ತದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವಿವಿಧ ಉಪವಿಭಾಗಗಳಲ್ಲಿ ಡಿ.22ರಂದು (ಗುರುವಾರ) ನೀರಿನ ಅದಾಲತ್ ಹಮ್ಮಿಕೊಂಡಿದೆ.

ಬೆಳಿಗ್ಗೆ 9.30ರಿಂದ 11 ಗಂಟೆಯವರೆಗೆ ಅದಾಲತ್ ನಡೆಯಲಿದೆ. ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಗೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 8762228888ಗೆ ಸಂದೇಶ ಕಳುಹಿಸುವ ಮೂಲಕವು ದೂರು ದಾಖಲಿಸಬಹುದು ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.

ಸಂ: ಬೆಂಅಪ್ರಾ/ನಯೋಸ/ಸಿಎಲ್‌ಯು-184/2286/2022-23 ದಿ: 20.12.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಹುಲಿಮಂಗಲ ಗ್ರಾಮದ ಸರ್ವೆ ನಂ.305ರಲ್ಲಿನ 2ಎ-17ಗುಂ (0-03 ಗುಂಟೆ ಖರಾಬು ಹೊರತುಪಡಿಸಿ) ವಿಸ್ತೀರ್ಣದ ಜಮೀನಿನ ಪೈಕಿ ಹಾಲಿ ಕಟ್ಟಡವಿರುವ 1ಎ-07ಗುಂ ವಿಸ್ತೀರ್ಣವನ್ನು ಹೊರತುಪಡಿಸಿ ಖಾಲಿ ಇರುವ 1ಎ-10ಗುಂಟೆ ಜಮೀನನ್ನು ವ್ಯವಸಾಯ ವಲಯದಿಂದ ಸಾರ್ವಜನಿಕ/ಅರೆ ಸಾರ್ವಜನಿಕ (ಶೈಕ್ಷಣಿಕ ಹಾಸ್ಟೆಲ್ ಕಟ್ಟಡ) ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ.ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ॥ ಕ್ಯೂಬ್ ಎಜು ಇನ್ಫ್ರಾ ಬೆಂಗಳೂರು ಪ್ರೈ.ಲಿ., ಸೆಂಟರ್ ಫಾರ್ ಡೆವಲಪ್‌ಮೆಂಟ್ ಎಜುಕೇಷನ್, ಇದರ ಅಧಿಕೃತ ಸೆಕ್ರೆಟರಿ ಆದ ಕಲ್ಪನಾ ಪಡೋಡೆ	ಆನೇಕಲ್	ಜಿಗಣಿ	ಹುಲಿಮಂಗಲ	305	2-17ರ ಪೈಕಿ 1-10	ವ್ಯವಸಾಯ	ಸಾರ್ವಜನಿಕ/ ಅರೆ ಸಾರ್ವಜನಿಕ (ಶೈಕ್ಷಣಿಕ ಹಾಸ್ಟೆಲ್ ಕಟ್ಟಡ)

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ವಲಯದಿಂದ ಸಾರ್ವಜನಿಕ (ಶೈಕ್ಷಣಿಕ ಹಾಸ್ಟೆಲ್ ಕಟ್ಟಡ) ಉಪಯೋಗಕ್ಕೆ ಬದಲಾವಣೆ ಪಡೆದು, ಶೈಕ್ಷಣಿಕ ಉದ್ದೇಶಕ್ಕೆ ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಸ್ಥಳೀಯರಿಗೆ ಉದ್ಯೋಗ ಸೃಷ್ಟಿಯಾಗುತ್ತದೆ. ಇದರಿಂದ ಬಡ, ಮಧ್ಯಮ ವರ್ಗದವರಿಗೆ ಅನುಕೂಲವಾಗುತ್ತದೆ ಹಾಗೂ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ಸಾರ್ವಜನಿಕ/ಅರೆ ಸಾರ್ವಜನಿಕ (ಶೈಕ್ಷಣಿಕ ಹಾಸ್ಟೆಲ್ ಕಟ್ಟಡ) ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/211/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ನಗರದಲ್ಲಿ ಇಂದು

ವಾರ್ಷಿಕೋತ್ಸವ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ: ಅತಿಥಿಗಳು: ರಾಸಾ ಆರ್. ಈಶ್ವರ, ಜ್ಯೋತಿ ಮರೂರು, ರಚನಾ ಮಲ್ನಾಡ್, ಬಲರಾಮ್ ಪಂಚಾಲ್, ಉಗ್ರಂ ರೆಡ್ಡಿ, ಉಪಸ್ಥಿತಿ: ಕೆ.ಎಸ್. ಮೋಹನಕುಮಾರ್, ಎಂ.ಎಸ್. ತ್ಯಾಗರಾಜ್, ಆಯೋಜನೆ: ರಾಸಾ ಕನ್ನಡ ಮತ್ತು ಕಲಾ ಸಂಸ್ಕೃತಿ ಚಾರಿಟೇಬಲ್ ಟ್ರಸ್ಟ್, ಸ್ಥಳ: ಸ್ಥಳ: ಶಾರದಾ ಮಂದಿರ, ಮುರುಳೀಧರ ಸಂಗೀತ ನೃತ್ಯ ವಿದ್ಯಾಲಯ, 6ನೇ ಬ್ಲಾಕ್, ಉಲ್ಲಾಳ ಉಪನಗರ, ಬೆಳಿಗ್ಗೆ 10.30

ವಿದ್ಯಾರ್ಥಿಗಳ ಕಾರ್ಯಚಟುವಟಿಕೆಗಳ ಉದ್ಘಾಟನೆ: ವೇದವ್ಯಾಸಾಚಾರ್ ಶ್ರೀಶಾನಂದ, ಅತಿಥಿಗಳು: ಎನ್.ನಿ.ಭಟ್, ಆಯೋಜನೆ: ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್, ಸ್ಥಳ: ವಿಜಯ ಕಾಲೇಜಿನ ಆವರಣ, ಆರ್.ವಿ. ರಸ್ತೆ, ಬೆಳಿಗ್ಗೆ 10.30

ರಾಜ್ಯಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆ: ಅಧ್ಯಕ್ಷತೆ: ಟಿ.ಕೆ.ಅಲೆಕ್ಸ್, ಅತಿಥಿಗಳು: ನಾ.ಸೋಮೇಶ್ವರ, ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಟಿ.ಚೌಡಯ್ಯ ರಸ್ತೆ, ಬೆಳಿಗ್ಗೆ 11

ಎಂ.ಎಚ್.ಜಯಪ್ರಕಾಶ್ ನಾರಾಯಣ್ ಜನ್ಮದಿನ, ಸಂಸ್ಥಾಪಕರ ದಿನಾಚರಣೆ: ಅತಿಥಿಗಳು: ವೈ.ಎಸ್.ವಿ. ದತ್ತ, ಎ.ಆರ್.ಕೃಷ್ಣಮೂರ್ತಿ, ಬಿ.ಎನ್.ಉಮೇಶ್, ಅಧ್ಯಕ್ಷತೆ: ಎಸ್.ಮರಿಸ್ವಾಮಿ, ಆಯೋಜನೆ: ಪಾಂಚಜನ್ಯ ವಿದ್ಯಾಪೀಠ ಕಲ್ಯಾಣ ದತ್ತಿ, ಸ್ಥಳ: ಜೆ.ಪಿ.ಎನ್ ಸಭಾಂಗಣ, ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯ, ಮಲ್ಲತ್ತಹಳ್ಳಿ, ಬೆಳಿಗ್ಗೆ 11

ಶೇಷ ಮಹಾಗಣಪತಿ ಮಹಿಳಾ ಸಂಘದ ವಾರ್ಷಿಕೋತ್ಸವ: ಉದ್ಘಾಟನೆ: ಎಚ್.ಎಲ್ ಪುಷ್ಪ, ಅಧ್ಯಕ್ಷತೆ: ಯು.ಬಿ.ವೆಂಕಟೇಶ್, ಅತಿಥಿಗಳು: ವೈಜಯಂತಿ ಕಾಶಿ, ರಾಧಾ ಶ್ರೀಧರ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಮಧ್ಯಾಹ್ನ 3

'ಗಾಂಧಿ ಕಥನ' ಕೃತಿಯ 25ನೇ ಆವೃತ್ತಿ ಬಿಡುಗಡೆ: ರಾಮಚಂದ್ರ ಗುಹಾ, ಅಧ್ಯಕ್ಷತೆ: ಎಚ್.ಕೆ.ಪಾಟೀಲ್, ಗಾಂಧಿ ಕಥನದ ಆಡಿಯೊ ಬಿಡುಗಡೆ: ಸವಿತಾ ನಾಗಭೂಷಣ, 'ಬೆಳ್ಳಿಗೊಂದು ಬಳ್ಳಿ' ಕೃತಿ ಬಿಡುಗಡೆ: ವೂಡೇ ಪಿ.ಕೃಷ್ಣ, ಅತಿಥಿಗಳು: ರಾಜೇಂದ್ರ ಚೆನ್ನಿ, ಓ.ಎಲ್ ನಾಗಭೂಷಣ ಸ್ವಾಮಿ, ಉಪಸ್ಥಿತಿ: ಎ.ಜೆ ಸದಾಶಿವ, ಎಂ.ಸರೋಜ, ಚಂದ್ರಶೇಖರ್, ವಾಣಿ ಪೆರಿಯೋಡಿ, ಆಯೋಜನೆ: ಎಮ್. ಚಂದ್ರಶೇಖರ್ ಪ್ರತಿಷ್ಠಾನ, ಸ್ಥಳ: ಟೌನ್ ಹಾಲ್, ಸಂಜೆ 4

ನೆನಪಿನಂಗಳದಲ್ಲಿ ಜಿ.ಎಸ್.ಎಸ್: ಅತಿಥಿಗಳು: ಕೆ.ಮರುಳಸಿದ್ಧಪ್ಪ, ಎಚ್. ದಂಡಪ್ಪ, ರೋಹಿಣಿ ಮೋಹನ್, ಎಸ್.ಬಿ.ಹಿರೇಮಠ, ಆಯೋಜನೆ: ಸಂಗೀತಧಾಮ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಜೆ.ಸಿ.ರಸ್ತೆ, ಸಂಜೆ 5

'ಮುಚ್ಚಿಕೊಂಡಿದ್ದೇವೆ ಕಣ್ಣು' ಏಳು ಶೈಲಿಗಳ ಸಂಗೀತ ಚಿತ್ರ ವೀಕ್ಷಣೆ: ನಿರ್ಮಾಣ, ಕೃತಿ ಮತ್ತು ರಚನೆ: ರಾಧಾಕೃಷ್ಣ, ಆಯೋಜನೆ: ಜಿ.ಎಂ. ರಿಜಾಯ್ಸ್, ಮಲ್ಲೇಶ್ವರ, ಸಂಜೆ 5.30

'ಕಿಡಿಗಳು' ಚಲನಚಿತ್ರ ಪ್ರದರ್ಶನ: ನಿರ್ದೇಶಕರು: ಕೆ.ಎಸ್.ರಮೇಶ್, ಆಯೋಜಕರು: ಮ್ಯಾಗಿಕ್ರಾಫ್ಟ್ ಪ್ರೊಡಕ್ಷನ್ಸ್, ಸ್ಥಳ: ಸುಚಿತ್ರಾ ಫಿಲ್ಮ್ ಸೊಸೈಟಿ, ಬನಶಂಕರಿ 2ನೇ ಹಂತ, ಸಂಜೆ: 6:45

₹ 2.95 ಲಕ್ಷ ವಂಚನೆ ಜಲಮಂಡಳಿಯ ನೌಕರರ ಬಂಧನ

ಬೆಂಗಳೂರು: ಗ್ರಾಹಕರು ಪಾವತಿಸಿದ್ದ ₹ 2.95 ಲಕ್ಷ ನೀರಿನ ಬಿಲ್ ಮೊತ್ತವನ್ನು ಜಲಮಂಡಳಿ ನೌಕರರಿಬ್ಬರು ಬಳಸಿಕೊಂಡು ವಂಚಿಸಿದ್ದು, ಬಸವನಗುಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಈ ಬಗ್ಗೆ ಜಲಮಂಡಳಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಸಚಿನ್ ಪಾಟೀಲ ಅವರು ದೂರು ನೀಡಿದ್ದಾರೆ. ಜಲಮಂಡಳಿ ನೌಕರ ಕಿರಣ್ ಕುಮಾರ್ ಹಾಗೂ ಡಾಟಾ ಎಂಟ್ರಿ ಆಪರೇಟರ್ ರಾಜೇಶ್ವರಿ ವಿರುದ್ಧ ಎಫ್ಐಆರ್ ದಾಖಲಿಸಿಕೊಳ್ಳಲಾಗಿದೆ. ಪ್ರಕರಣದಲ್ಲಿ ಮತ್ತಷ್ಟು ನೌಕರರು ಶಾಮೀಲಾಗಿರುವ ಮಾಹಿತಿಯೂ ಇದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಹಾಲಕ್ಷ್ಮಿ ಲೇಔಟ್: ತಾಯಿ, ಮಗ, ಮಗಳು ಆತ್ಮಹತ್ಯೆ ಶಂಕೆ – ತನಿಖೆ

ಮೂವರ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಒಂದೇ ಕುಟುಂಬದ ಮೂವರ ಮೃತದೇಹ ಸೋಮವಾರ ರಾತ್ರಿ ಪತ್ತೆಯಾಗಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

'ಯಶೋದಾ (70), ಅವರ ಮಗಳು ಸುಮನಾ (41), ಮಗ ನರೇಶ್ (36) ಅವರ ಮೃತದೇಹಗಳು ಪತ್ತೆಯಾಗಿವೆ. ಮೂವರು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಆದರೆ, ಸಾವಿನಲ್ಲಿ ಅನುಮಾನ ಇರುವುದಾಗಿ ಮಗಳು ದೂರು ನೀಡಿದ್ದಾರೆ. ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಉತ್ತರ ವಿಭಾಗದ ಡಿಸಿಪಿ ವಿನಾಯಕ್ ಪಾಟೀಲ ತಿಳಿಸಿದರು.

'ಯಶೋದಾ ಅವರ ಪತಿ ವೈದ್ಯರಾಗಿದ್ದರು. ಎರಡು ವರ್ಷದ ಹಿಂದೆ ತೀರಿಕೊಂಡಿದ್ದರು. ದಂಪತಿಗೆ ಮೂವರು ಮಕ್ಕಳಿದ್ದಾರೆ. ಒಬ್ಬ ಮಗಳು ರಾಜಾಜಿನಗರದಲ್ಲಿ ಪತಿ ಜೊತೆ ವಾಸವಿದ್ದಾರೆ. ಸುಮನಾ ಹಾಗೂ ನರೇಶ್ ಜೊತೆ ಯಶೋದಾ ವಾಸವಿದ್ದರು. ನರೇಶ್, ಗುತ್ತಿಗೆದಾರರಾಗಿದ್ದರು' ಎಂದು ಹೇಳಿದರು.

ಮನೆ ಎದುರೇ ಗಲಾಟೆ: 'ಬೇರೆಡೆ ವಾಸವಿದ್ದ ಯಶೋದಾ ಹಾಗೂ ಮಕ್ಕಳು, ನಾಲ್ಕು ತಿಂಗಳ ಹಿಂದೆಯಷ್ಟೇ ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯ ಸಮುಚ್ಚಯವೊಂದರ ಮನೆಗೆ ಸ್ಥಳಾಂತರಗೊಂಡಿದ್ದರು. ಆಗ ಕೆಲ ವಸ್ತುಗಳನ್ನು ಅನಾಥಾಶ್ರಮಕ್ಕೆ ನೀಡಿದ್ದರು' ಎಂದು ಹೇಳಿವೆ.

'ಯಶೋದಾ ಕುಟುಂಬದವರು ಕೆಲವರ ಬಳಿ ಸಾಲ ಮಾಡಿದ್ದು, ತೀರಿಸಲಾಗದೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಮಾಹಿತಿ ಇದೆ. ಭಾನುವಾರ ಮನೆ ಬಳಿ ಬಂದಿದ್ದ ಕೆಲವರು, ಗಲಾಟೆ ಮಾಡಿ ಹೋಗಿದ್ದರು. ಇದರಿಂದ ನೊಂದು ಮೂವರು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿರುವ ಅನುಮಾನವಿದೆ. ಮನೆಯಲ್ಲಿ ಮರಣಪತ್ರ ಸಿಕ್ಕಿದ್ದು, ಪರಿಶೀಲಿಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

'ರಾಜಾಜಿನಗರದಲ್ಲಿರುವ ಮಗಳು, ಸೋಮವಾರ ತಾಯಿ ಕರೆ ಸ್ವೀಕರಿಸದಿದ್ದಾಗ ಗಾಬರಿಗೊಂಡು ಮನೆ ಬಳಿ ಹೋಗಿ ನೋಡಿದಾಗಲೇ ಘಟನೆ ಗೊತ್ತಾಗಿದೆ. ಅವರೇ ಠಾಣೆಗೆ ಮಾಹಿತಿ ನೀಡಿದ್ದರು. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಮುಖ್ಯಾಂಶಗಳು

- ಆರ್ಥಿಕ ಸಂಕಷ್ಟ: ಸಾಲ ನೀಡಿದ್ದವರಿಂದ ಮನೆ ಬಳಿ ಗಲಾಟೆ
- ಪೊಲೀಸರಿಂದ ಮರಣಪತ್ರದ ಪರಿಶೀಲನೆ

ಮಗಳ ಕೊಂದು ಆತ್ಮಹತ್ಯೆ ಯತ್ನ

ಮೂಳೆ ಸಂಬಂಧಿತ ಸಮಸ್ಯೆಯಿಂದ ಬಳಲುತ್ತಿದ್ದ ಬಾಲಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಳೆಗೆ ಸಂಬಂಧಿಸಿದ ಸಮಸ್ಯೆಯಿಂದ ಬಳಲುತ್ತಿದ್ದ 10 ವರ್ಷದ ಮಗಳನ್ನು ಕೊಂದು ತಾಯಿಯೊಬ್ಬರು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಬ್ಯಾಡರಹಳ್ಳಿಯಲ್ಲಿ ನಡೆದಿದೆ.

ಪ್ರಿಯಾಂಕಾ (10) ಕೊಲೆಯಾದ ಬಾಲಕಿ. ಆತ್ಮಹತ್ಯೆಗೆ ಯತ್ನಿಸಿರುವ ತಾಯಿ ಸುಮಾ (28) ಅವರನ್ನು ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ.

'ಸುಂಕದಕಟ್ಟೆ ಪ್ರಸನ್ನ ಬಡಾವಣೆಯ ಸುಮಾ, ನಂಜಪ್ಪ ಅವರನ್ನು ಮದುವೆಯಾಗಿದ್ದರು. ದಂಪತಿಗೆ ಪ್ರಿಯಾಂಕಾ ಸೇರಿ ಇಬ್ಬರು ಮಕ್ಕಳಿದ್ದರು. ಎರಡು ವರ್ಷದ ಹಿಂದೆ ಮಗ ತೀರಿಕೊಂಡಿದ್ದ. ನಂತರ, ಪತಿ ಸಹ ಅಸುನೀಗಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಗಳು ಪ್ರಿಯಾಂಕಾ ಜೊತೆ ತಾಯಿ ಸುಮಾ

'ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಸುಮಾ, ಅದರಿಂದ ಬಂದ ವೇತನದಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದರು. ಮಗಳು ಪ್ರಿಯಾಂಕಾ, ಎರಡು ಬಾರಿ ಆಟವಾಡುವಾಗ ಬಿದ್ದು ಮೂಳೆಗೆ ಪೆಟ್ಟು ಮಾಡಿಕೊಂಡಿದ್ದಳು. ತಾಯಿ ಚಿಕಿತ್ಸೆ ಕೊಡಿಸಿದ್ದರು.'

'ನಾಲ್ಕು ದಿನಗಳ ಹಿಂದೆಯಷ್ಟೇ ಪ್ರಿಯಾಂಕಾ, ಪುನಃ ಮೂಳೆಗೆ ಪೆಟ್ಟು ಮಾಡಿಕೊಂಡಿದ್ದಳು. ಅವಳನ್ನು ವೈದ್ಯರ ಬಳಿ ಕರೆದೊಯ್ದಿದ್ದ ತಾಯಿ, ಪರೀಕ್ಷೆ ಮಾಡಿಸಿದ್ದರು. ಮೂಳೆಗೆ ತೀವ್ರ ಪೆಟ್ಟುಬಿದ್ದಿದೆ. ಇದೊಂದು ಗಂಭೀರ ಆರೋಗ್ಯ ಸಮಸ್ಯೆಯೆಂದು ವೈದ್ಯರು ಹೇಳಿದ್ದರು. ಶಸ್ತ್ರಚಿಕಿತ್ಸೆ ಅಗತ್ಯವಿರುವುದಾಗಿ ತಿಳಿಸಿದ್ದರು. ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿದ್ದ ತಾಯಿಗೆ ಶಸ್ತ್ರಚಿಕಿತ್ಸೆ ಹಾಗೂ ಚಿಕಿತ್ಸೆಗೆ ಹಣ ಹೊಂದಿಸಲು ಸಾಧ್ಯವಾಗಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಂಬಂಧಿಕರು ಹಾಗೂ ಸ್ಥಳೀಯರ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸುಮಾ ಅವರು ಸದ್ಯ ಹೇಳಿಕೆ ನೀಡುವ ಸ್ಥಿತಿಯಲ್ಲಿಲ್ಲ. ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ವೈದ್ಯರ ಸಲಹೆ ಪಡೆದು ಹೇಳಿಕೆ ಪಡೆಯಲಾಗುವುದು' ಎಂದು ತಿಳಿಸಿವೆ.

₹ 2.70 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ಡ್ರಗ್ಸ್ ಸಾಗಣೆ, ಮಾರಾಟದ ವಿರುದ್ಧ ಕಾರ್ಯಾಚರಣೆ ನಡೆಸಿರುವ ದೇವರ ಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ಪೊಲೀಸರು, ಪ್ರತ್ಯೇಕ ಪ್ರಕರಣಗಳಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಮೊಹಮ್ಮದ್ ಸೂಫಿಯಾನ್ ಹುಸೇನ್ ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ. ಇವರೆಲ್ಲರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಂಧಿತರಿಂದ ₹ 2.10 ಕೋಟಿ ಮೌಲ್ಯದ 6 ಕೆ.ಜಿ ಚರಸ್ ಹಾಗೂ ₹ 60 ಲಕ್ಷ ಮೌಲ್ಯದ 11 ಕೆ.ಜಿ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದರು.

'ಹೊರ ರಾಜ್ಯದವರು ಹಾಗೂ ವಿದೇಶಿ ಪೆಡ್ಲರ್‌ಗಳಿಂದ ಡ್ರಗ್ಸ್ ಖರೀದಿಸಿ ನಗರಕ್ಕೆ ತರಿಸುತ್ತಿದ್ದರು. ನಂತರ, ಚಿಕ್ಕ ಪೊಟ್ಟಣಗಳಲ್ಲಿ ತುಂಬಿ ಮಾರುತ್ತಿದ್ದರು. ದಂಧೆ ಹಣದಿಂದ ಐಷಾರಾಮಿ ಜೀವನ ನಡೆಸುತ್ತಿದ್ದರು. ಮತ್ತಷ್ಟು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದರು.

ಉದ್ಯಮಿಯೊಬ್ಬರ ಮನೆಯಲ್ಲಿ ಕೃತ್ಯ: ಕಾರು ಚಾಲಕನೇ ಪ್ರಮುಖ ಆರೋಪಿ

ಜೋಡಿ ಕೊಲೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಉದ್ಯಮಿಯೊಬ್ಬರ ಮನೆಗೆ ನುಗ್ಗಿ ಕೆಲಸಗಾರ ಕರಿಯಪ್ಪ (45) ಹಾಗೂ ಭದ್ರತಾ ಸಿಬ್ಬಂದಿ ಬಹದ್ದೂರ್ (28) ಎಂಬುವವರನ್ನು ಕೊಂದು ದರೋಡೆ ಮಾಡಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಜಗದೀಶ್ (23), ಅಭಿಷೇಕ್ (21), ಕಿರಣ್ (19) ಬಂಧಿತರು. ಡಿ.18 ರಂದು ಉದ್ಯಮಿ ಮನೆಗೆ ನಸುಕಿನಲ್ಲಿ ನುಗ್ಗಿದ್ದ ಆರೋಪಿಗಳು ಕೃತ್ಯ ಎಸಗಿದ್ದರು. ತನಿಖೆಗೆ ವಿಶೇಷ ತಂಡ ರಚಿಸಲಾಗಿತ್ತು' ಎಂದು ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಆರೋಪಿ ಜಗದೀಶ್, ಉದ್ಯಮಿ ಗೋಪಾಲ್ ರೆಡ್ಡಿ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ. ಮಾಲೀಕರ ಕಾರನ್ನು ವೈಯಕ್ತಿಕ ಕೆಲಸಕ್ಕೆ ಬಳಸಿಕೊಂಡಿದ್ದರಿಂದ ಎರಡು ತಿಂಗಳ ಹಿಂದೆ ಕೆಲಸದಿಂದ ತೆಗೆಯಲಾಗಿತ್ತು. ಈ ವಿಚಾರ ಪೊಲೀಸ್ ಠಾಣೆ ಮೆಟ್ಟಿಲೇರಿತ್ತು. ಪೊಲೀಸರು ಜಗದೀಶ್‌ನಿಗೆ ಎಚ್ಚರಿಕೆ ನೀಡಿ ಕಳುಹಿಸಿದ್ದರು. ಮನೆಯಲ್ಲಿ ಚಿನ್ನಾಭರಣ, ನಗದು ಇರುವ ಮಾಹಿತಿ ತಿಳಿದಿದ್ದ ಜಗದೀಶ್, ಸ್ನೇಹಿತರಾದ ಅಭಿಷೇಕ್ ಹಾಗೂ ಕಿರಣ್ ಜೊತೆ ಸೇರಿ ದರೋಡೆಗೆ ಸಂಚು ರೂಪಿಸಿದ್ದ' ಎಂದು ಅವರು ಹೇಳಿದರು.

ಜಗದೀಶ್

ಕಿರಣ್

ಅಭಿಷೇಕ್

ಕೆಲಸಗಾರನ ಜೊತೆ ಒಡನಾಟ: 'ಆರೋಪಿ ಜಗದೀಶ್, ಕೆಲಸಗಾರ ಕರಿಯಪ್ಪ ಅವರಿಗೆ ಆಗಾಗ ಕರೆ ಮಾಡುತ್ತಿದ್ದ. ಡಿ.17ರಂದು ಕರೆ ಮಾಡಿದ್ದ ಜಗದೀಶ್, ಉದ್ಯಮಿ ಬಗ್ಗೆ ಕೇಳಿದ್ದ' ಎಂದು ತಿಳಿಸಿದರು.

'ಉದ್ಯಮಿ ಮನೆಯಲ್ಲಿಲ್ಲ ಎಂದು ಸ್ನೇಹಿತರಿಗೆ ತಿಳಿಸಿ ದರೋಡೆಗೆ ಸಜ್ಜಾಗಿದ್ದ. ಮೊದಲು ಮನೆಯ ಹಿಂಬದಿಯಿಂದ ಕಾಂಪೌಂಡ್ ಜಿಗಿದು ಒಳಗೆ ನುಗ್ಗಿದ್ದು, ಸಿ.ಸಿ.ಟಿ.ವಿ. ಕ್ಯಾಮೆರಾ ತಂತಿ ಕತ್ತರಿಸಿದ್ದ. ನಂತರ, ಸ್ನೇಹಿತರಿಬ್ಬರನ್ನು ಮನೆಯೊಳಗೆ ಕರೆಸಿಕೊಂಡಿದ್ದ' ಎಂದು ತಿಳಿಸಿದರು.

ಕಾವಲುಗಾರ, ಕೆಲಸಗಾರನನ್ನು ಕೊಲೆ ಮಾಡಿ, ₹ 5 ಲಕ್ಷ ನಗದು ಹಾಗೂ 100 ಗ್ರಾಂ ಚಿನ್ನಾಭರಣ ದೋಚಿ ಪರಾರಿಯಾಗಿದ್ದರು' ಎಂದರು.

'ಯಡಿಯೂರಿನಲ್ಲಿ ಸೆರೆಸಿಕ್ಕರು'

'ಕೃತ್ಯದ ಬಳಿಕ ಆರೋಪಿಗಳು, ಆಟೊದಲ್ಲಿ ಮೆಜೆಸ್ಟಿಕ್ ನಿಲ್ದಾಣಕ್ಕೆ ಹೋಗಿದ್ದರು. ಅಲ್ಲಿಂದ ಕುಣಿಗಲ್ ಹಾಗೂ ಇತರೆಡೆ ಸುತ್ತಾಡಿ ಯಡಿಯೂರಿನಲ್ಲಿ ಉಳಿದಿದ್ದರು. ಅಲ್ಲಿಯೇ ಬಂಧಿಸಿ ನಗರಕ್ಕೆ ಕರೆತಂದಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೂವರು ಆರೋಪಿಗಳು ಬಾಲ್ಯದಿಂದಲೂ ಸ್ನೇಹಿತರಾಗಿದ್ದರು. ಬಂಧಿತರಿಂದ 100 ಗ್ರಾಂ ಚಿನ್ನಾಭರಣ, ವಿದೇಶಿ ಕರೆನ್ಸಿಗಳನ್ನು ಜಪ್ತಿ ಮಾಡಲಾಗಿದೆ. ₹ 5 ಲಕ್ಷ ಪೈಕಿ ಸ್ವಲ್ಪ ಹಣವನ್ನು ಖರ್ಚು ಮಾಡಿದ್ದಾರೆ' ಎಂದು ತಿಳಿಸಿವೆ.

15 ವರ್ಷಗಳ ಬಳಿಕ ಸಿಕ್ಕಿಬಿದ್ದ ಕೈದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಪೆರೋಲ್ ಮೇಲೆ ತೆರಳಿ ತಲೆಮರೆಸಿಕೊಂಡಿದ್ದ ಕೈದಿ ಸುಹೇಲ್ ಅಲಿಯಾಸ್ ಮೊಹಮ್ಮದ್ ಅಯಾಜ್ (45) ಎಂಬಾತನನ್ನು 15 ವರ್ಷಗಳ ಬಳಿಕ ಮಡಿವಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಂಗಮ್ಮನಪಾಳ್ಯ ಮದೀನಾ ನಗರದ ನಿವಾಸಿ ಸುಹೇಲ್, 2007ರಲ್ಲಿ ಪೆರೋಲ್ ಪಡೆದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಗೆ ಹೋಗಿದ್ದ. ಅಲ್ಲಿ ಹೆಸರು ಬದಲಿಸಿಕೊಂಡಿದ್ದ. ಸಾಗರ ಎಂಟರ್‌ಪ್ರೈಸಸ್ ಹೆಸರಿನಲ್ಲಿ ಆಯುರ್ವೇದಿಕ್ ಔಷಧಗಳ ಮಾರಾಟ ನಡೆಸುತ್ತಿದ್ದ' ಎಂದು ಪೊಲೀಸರು ಹೇಳಿದರು.

ಸುಹೇಲ್

'ಈತನ ಬಗ್ಗೆ ಇತ್ತೀಚೆಗೆ ಸುಳಿವು ಸಿಕ್ಕಿತ್ತು. ಬೆಳ್ತಂಗಡಿಗೆ ಹೋದ ವಿಶೇಷ ತಂಡ ಬಂಧಿಸಿ ನಗರಕ್ಕೆ ಕರೆತಂದಿದೆ. ಕೋರ್ಟ್‌ಗೆ ಹಾಜರುಪಡಿಸಿದ್ದು, ಸದ್ಯ ಜೈಲಿನಲ್ಲಿದ್ದಾನೆ' ಎಂದು ತಿಳಿಸಿದರು.

ದರೋಡೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ: 'ಸುಹೇಲ್, 2000ರಲ್ಲಿ ದರೋಡೆ ಪ್ರಕರಣದಲ್ಲಿ ಭಾಗಿಯಾಗಿದ್ದ. ಈತನನ್ನು ಬಂಧಿಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. 2004ರಲ್ಲಿ ಜೀವಾವಧಿ ಶಿಕ್ಷೆಯೂ ಆಗಿತ್ತು' ಎಂದು ಪೊಲೀಸರು ಹೇಳಿದರು.

'ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಸುಹೇಲ್, 30 ದಿನಗಳ ಪೆರೋಲ್ ಪಡೆದು ಜೈಲಿನಿಂದ ಹೊರಗೆ ಬಂದಿದ್ದ. ನಿಗದಿತ ದಿನದಂದು ಈತ ವಾಪಸು ಜೈಲಿಗೆ ಬಂದಿರಲಿಲ್ಲ. ಈ ಬಗ್ಗೆ 2014ರಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದ್ದು, ಅಂದಿನಿಂದ ಹುಡುಕಾಟ ನಡೆದಿತ್ತು' ಎಂದು ತಿಳಿಸಿದರು.

₹ 1 ಲಕ್ಷ ಬಹುಮಾನ: 'ಸುಹೇಲ್ ಬಂಧನಕ್ಕೆ ಆರಂಭದಲ್ಲಿ ಸುಳಿವು ಸಿಕ್ಕಿರಲಿಲ್ಲ. ಹೀಗಾಗಿ, ಆತನ ಸುಳಿವು ಕೊಟ್ಟವರಿಗೆ ₹ 1 ಲಕ್ಷ ಬಹುಮಾನ ಘೋಷಿಸಲಾಗಿತ್ತು. ಇದರ ನಡುವೆಯೇ ವಿಶೇಷ ತಂಡವೇ ಅಪರಾಧಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ' ಎಂದು ಪೊಲೀಸರು ಹೇಳಿದರು.

ಸಂಕ್ಷಿಪ್ತ ಸುದ್ದಿ

7ನೇ ಮಹಡಿಯಿಂದ ಬಿದ್ದು ಕಾರ್ಮಿಕ ಸಾವು

ಬೆಂಗಳೂರು: ಹೊಸೂರು ರಸ್ತೆಯಲ್ಲಿರುವ ಪಿಇಎಸ್ ಕಾಲೇಜು ಆವರಣದಲ್ಲಿ ನಿರ್ಮಾಣ ಹಂತದ ಕಟ್ಟಡದ 7ನೇ ಮಹಡಿಯಿಂದ ಬಿದ್ದು ಕಾರ್ಮಿಕ ಎಸ್.ಕೆ. ಜಿಯಾರುಲ್ (24) ಎಂಬುವವರು ಡಿ.17ರಂದು ಮೃತಪಟ್ಟಿದ್ದಾರೆ.

'ಪಶ್ಚಿಮ ಬಂಗಾಳದ ಅವರು ಕೆಲಸ ಹುಡುಕಿಕೊಂಡು ಆರು ತಿಂಗಳ ಹಿಂದೆ ಪತ್ನಿ ಜೊತೆ ಬಂದಿದ್ದರು. ಪಿಇಎಸ್ ಕಾಲೇಜು ಆವರಣದಲ್ಲಿ ನಿರ್ಮಾಣ ಹಂತದ ಕಟ್ಟಡದಲ್ಲಿ ಕಾರ್ಮಿಕರಾಗಿ ಕೆಲಸ ಆರಂಭಿಸಿದ್ದರು' ಎಂದು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ತಿಳಿಸಿದರು.

'ಜಿಯಾರುಲ್ ಸಾವಿನ ಸಂಬಂಧ ತಾಯಿ ದೂರು ನೀಡಿದ್ದಾರೆ. ಕಟ್ಟಡ ನಿರ್ಮಾಣದ ಗುತ್ತಿಗೆ ಪಡೆದಿದ್ದ ಎವಿಎಸ್ ಕಂಪನಿಯ ಜವಾಹರ್, ಎಂಜಿನಿಯರ್ ನಂಬಿರಾಜನ್, ಉಸ್ತುವಾರಿ ಕುಮಾರ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ವಿಚಾರಣೆ ನಡೆಸಬೇಕಿದೆ' ಎಂದರು.

ಶಾಸಕನ ಬೆಂಬಲಿಗರಿಂದ ದೌರ್ಜನ್ಯ: ಆರೋಪ

ಬೆಂಗಳೂರು: 'ಶಾಸಕ ರಿಜ್ವಾನ್ ಅರ್ಷದ್ ಅವರ ಬೆಂಬಲಿಗರು ಮನೆಗೆ ನುಗ್ಗಿ ಗಲಾಟೆ ಮಾಡಿದ್ದು, ನಮ್ಮನ್ನು ಮನೆಯಿಂದ ಹೊರಗೆ ಹಾಕಿದ್ದಾರೆ' ಎಂದು ಸೋನಂ ಮಿಶ್ರಾ ಎಂಬುವವರು ಆರೋಪಿಸಿದ್ದಾರೆ.

ಮಂಗಳವಾರ ರಾತ್ರಿ ನಡೆದಿದೆ. ದೂರು ನೀಡಲು ಪುಲಿಕೇಶಿನಗರ ಠಾಣೆಗೆ ಬಂದಿದ್ದ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಸೋನಂ, 'ಪೊಲೀಸರು ದೂರು ದಾಖಲಿಸಿಕೊಳ್ಳುತ್ತಿಲ್ಲ' ದೂರಿದರು.

'ರಿಚರ್ಡ್ಸ್ ಪಾರ್ಕ್ ಬಳಿಯ ಹರ್ಮನ್ ರಿಗಾಲಿಯಾ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದೆವು. ಶಾಸಕರ ಬೆಂಬಲಿಗರು ಮನೆ ಖಾಲಿ ಮಾಡಿಸಲು ಹಲವು ದಿನಗಳಿಂದ ಯತ್ನಿಸುತ್ತಿದ್ದರು. ಈಗ ಗಲಾಟೆ ಮಾಡಿದ್ದಾರೆ. ನಮ್ಮ ಕುಟುಂಬಕ್ಕೆ ರಕ್ಷಣೆ ನೀಡಬೇಕು' ಎಂದೂ ಸೋನಂ ಆಗ್ರಹಿಸಿದರು.

ಸುಲಿಗೆ: ಕಾನ್‌ಸ್ಟೆಬಲ್ ಆನಂದ್ ಬಂಧನ

ಬೆಂಗಳೂರು: ಉದ್ಯಮಿಯ ಸಹಾಯಕರೊಬ್ಬರನ್ನು ಅಡ್ಡಗಟ್ಟಿ ಪ್ರಕರಣ ದಾಖಲಿಸುವ ಬೆದರಿಕೆಯೊಡ್ಡಿ ₹ 2 ಲಕ್ಷ ಸುಲಿಗೆ ಮಾಡಿದ್ದ ಆರೋಪದಡಿ ಕಾನ್‌ಸ್ಟೆಬಲ್ ಆನಂದ್ ಎಂಬುವರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಂಧಿತ ಆನಂದ್, ಗೋವಿಂದ ರಾಜನಗರ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ. ಡಿ. 7ರಂದು ದೂರುದಾರ ರಾಜುರಾಮ್ ಎಂಬುವರನ್ನು ಬೆದರಿಸಿ ₹ 2 ಲಕ್ಷ ಸುಲಿಗೆ ಮಾಡಿದ್ದ' ಎಂದು ಪೊಲೀಸರು ತಿಳಿಸಿದರು.

'ಪ್ರಕರಣ ದಾಖಲಾದ ಕೂಡಲೇ ಕಾನ್‌ಸ್ಟೆಬಲ್ ಆನಂದ್‌ನನ್ನು ಬಂಧಿಸಲಾಗಿದೆ. ಇಂಥ ಪೊಲೀಸರ ಅಕ್ರಮ ಕೃತ್ಯ ಗಮನಕ್ಕೆ ಬಂದ ಕೂಡಲೇ ಕ್ರಮ ಕೈಗೊಳ್ಳಲಾಗುವುದು' ಎಂದು ಕಮಿಷನರ್ ಪ್ರತಾಪ್ ರೆಡ್ಡಿ ಹೇಳಿದರು.

ಗುಂಡಿನ ದಾಳಿ ಇಬ್ಬರ ಬಂಧನ

ಬೆಂಗಳೂರು: ರೌಡಿ ಶಿವಶಂಕರ್ ರೆಡ್ಡಿ ಹಾಗೂ ಕಾರು ಚಾಲಕ ಅಶೋಕ ರೆಡ್ಡಿ ಮೇಲೆ ನಡೆದಿದ್ದ ಗುಂಡಿನ ದಾಳಿ ಪ್ರಕರಣದಲ್ಲಿ ಮತ್ತಿಬ್ಬರು ಆರೋಪಿಗಳನ್ನು ಕೆ.ಆರ್.ಪುರ ಪೊಲೀಸರು ಬಂಧಿಸಿದ್ದಾರೆ.

'ರೌಡಿ ಪೋಲಾರಿ ಶಂಕರ್ ಹಾಗೂ ಭವಾನಿ ಶಂಕರ್ ಬಂಧಿತರು. ಇವರಿಗೆ ರೌಡಿ ಶಿವಶಂಕರ್ ವಿರುದ್ಧ ವೈಷಮ್ಯವಿತ್ತು. ಗುಂಡು ಹೊಡೆದು ಕೊಲೆಗೈಯಲು ಸಂಚು ರೂಪಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮದನಪಲ್ಲಿ ಠಾಣೆ ರೌಡಿ ಪಟ್ಟಿಯಲ್ಲಿ ಹೆಸರಿದ್ದ ಶಿವಶಂಕರ್ ರೆಡ್ಡಿ, ಕೆ.ಆರ್.ಪುರ ಸೀಗೇಹಳ್ಳಿ ಹ್ಯಾಪಿ ಗಾರ್ಡನ್‌ನಲ್ಲಿ ಕಟ್ಟಡ ನಿರ್ಮಿಸುತ್ತಿದ್ದ. ಡಿ. 8ರಂದು ಮಧ್ಯಾಹ್ನ ಕಟ್ಟಡ ನಿರ್ಮಾಣ ಸ್ಥಳಕ್ಕೆ ಕಾರು ಚಾಲಕ ಅಶೋಕ ಜೊತೆ ಬಂದಿದ್ದ. ಇದೇ ವೇಳೆ ಆರೋಪಿಗಳು ಗುಂಡಿನ ದಾಳಿ ನಡೆಸಿದ್ದರು. ಗುಂಡು ತಗುಲಿದ್ದ ಇಬ್ಬರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಥಳ ಗುರುತಿಸದಿದ್ದರೂ 'ಕಸ ವರ್ಗಾವಣೆ ಕೇಂದ್ರ' ಸ್ಥಾಪನೆಗೆ ಕೋಟ್ಯಂತರ ಹಣ ಬಿಡುಗಡೆ

ಕಸ ಸಾಗಣೆಗೆ ದುಪ್ಪಟ್ಟಿಗೂ ಹೆಚ್ಚು ವೆಚ್ಚ

• ಆರ್. ಮಂಜುನಾಥ್

ಕಸ 'ಸಣ್ಣ ವರ್ಗಾವಣೆ ಕೇಂದ್ರ'ದ ಬಳಿಯ ದೃಶ್ಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಕಸದ ವಿಲೇವಾರಿ, ಸಂಸ್ಕರಣೆಯಲ್ಲಿ ನಿರೀಕ್ಷಿತ ಮಟ್ಟ ತಲುಪದ ಬಿಬಿಎಂಪಿ, ಇದೀಗ ತ್ಯಾಜ್ಯ ಸಾಗಾಟಕ್ಕೇ ಎರಡೂವರೆ ಪಟ್ಟಿಗೂ ಹೆಚ್ಚು ವೆಚ್ಚ ಮಾಡಲು ಹೊರಟಿದೆ. ಇದಕ್ಕಾಗಿ ₹267 ಕೋಟಿಯಷ್ಟು ಹೆಚ್ಚುವರಿ ವೆಚ್ಚಕ್ಕೆ ಮುಂದಾಗಿದೆ.

ತ್ಯಾಜ್ಯ ಸಂಗ್ರಹಣೆಗೆ ಮೂರು ಕಾಂಪ್ಯಾಕ್ಟರ್ ನಿಲ್ಲುವ 50 'ಸಣ್ಣ ವರ್ಗಾವಣೆ ಕೇಂದ್ರ'ಗಳನ್ನು ಮೂರು ವರ್ಷಗಳಿಂದ ಬಿಬಿಎಂಪಿ ಸ್ಥಾಪಿಸಲು ಸಾಧ್ಯವಾಗಿಲ್ಲ. ಹೀಗಿದ್ದರೂ, ಆರು ಕಾಂಪ್ಯಾಕ್ಟರ್, 45 ಕಂಟೈನರ್, 21 ಟ್ರಕ್, 21 ಹೂಕ್ ಲೋಡರ್‌ಗಳು ಕಾರ್ಯನಿರ್ವಹಿಸಿ, ಪ್ರತಿದಿನ ತಲಾ 150 ಮೆಟ್ರಿಕ್ ಟನ್ ತ್ಯಾಜ್ಯ ಸಂಗ್ರಹಿಸುವ ಮೂರು ಕೇಂದ್ರಗಳನ್ನು ಸ್ಥಾಪಿಸಲು ಮುಂದಾಗಿದೆ. 2022ರ ಜೂ.29ರಂದು ರಾಜ್ಯ ಸರ್ಕಾರ ಶೇ 4ರಷ್ಟು ಅಧಿಕ ಟೆಂಡರ್ ಮೊತ್ತಕ್ಕೆ (₹267 ಕೋಟಿ) ಏಳು ವರ್ಷಗಳ ನಿರ್ವಹಣೆಗಾಗಿ ಅನುಮತಿ ನೀಡಿದೆ. ಮೂರು ಕೇಂದ್ರಗಳಿಗೆ ಜಾಗ ಗುರುತಿಸದಿದ್ದರೂ ಕಾರ್ಯಾದೇಶ ನೀಡಿ, ಕೋಟ್ಯಂತರ ರೂಪಾಯಿ ಹಣವನ್ನೂ ಬಿಡುಗಡೆ ಮಾಡಲಾಗಿದೆ.

30 ಮೀಟರ್ x 24 ಮೀಟರ್ ವಿಸ್ತೀರ್ಣದ ಕೇಂದ್ರ ಇದಾಗಿದ್ದು, ಸುಮಾರು 25 ವಾರ್ಡ್‌ಗಳಿಂದ ಕಸ ಸಂಗ್ರಹಿಸುವ ಆಟೊಗಳು ಇಲ್ಲಿಗೆ ಬಂದು ಕಸ ಸುರಿಯಬೇಕು. ಅದನ್ನು ಕಾಂಪ್ಯಾಕ್ಟರ್‌ಗಳಿಗೆ ತುಂಬಿಸಿ, ದ್ರವ ತ್ಯಾಜ್ಯ ಹರಿಯದಂತೆ ಸಾಗಣೆ ಮಾಡುವುದು ಉದ್ದೇಶ. ಆದರೆ, ನಗರ ವ್ಯಾಪ್ತಿಯಲ್ಲಿ ಇಷ್ಟು ವಾಹನಗಳು ಒಂದು ಕೇಂದ್ರದಲ್ಲಿ ಕಾರ್ಯನಿರ್ವಹಿಸಲು ಸಾಧ್ಯವೇ ಎಂಬುದು ಪ್ರಶ್ನೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ನಿತ್ಯ 4,200 ಮೆಟ್ರಿಕ್ ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಇದರಲ್ಲಿ ಶೇ 35ರಷ್ಟು ಮಾತ್ರ ಹಸಿ ಮತ್ತು ಒಣ ಕಸವಾಗಿ ವಿಂಗಡಿಸಲಾಗುತ್ತಿದೆ. ಮೂರು ಸಾವಿರ ಮೆಟ್ರಿಕ್ ಟನ್ ಮಿಶ್ರತ್ಯಾಜ್ಯವನ್ನು ಭೂಭರ್ತಿ ಘಟಕಗಳಿಗೆ ವಿಲೇವಾರಿ ಮಾಡಲಾಗುತ್ತಿದೆ. ಕಸ ಸಾಗಣೆಗೆ ಪ್ರತಿ ಮೆಟ್ರಿಕ್ ಟನ್‌ಗೆ ಇದೀಗ ₹600 ವೆಚ್ಚ ಮಾಡಲಾಗುತ್ತಿದೆ. ಆದರೆ, ಮೂರು ವರ್ಗಾವಣೆ ಕೇಂದ್ರಗಳ ಸ್ಥಾಪನೆಯಿಂದ ಈ ವೆಚ್ಚ ಪ್ರತಿ ಮೆಟ್ರಿಕ್ ಟನ್‌ಗೆ ₹1,600ಕ್ಕೆ ತಲುಪುತ್ತದೆ. ಇದಕ್ಕೆ ಆಕ್ಷೇಪಣೆ ವ್ಯಕ್ತವಾಗಿ, ಲೋಕಾಯುಕ್ತದಲ್ಲಿಯೂ ದೂರು ದಾಖಲಾಗಿದೆ. ಇಷ್ಟಾದರೂ 'ಶುಭ್ರ ಬೆಂಗಳೂರು' ಅನುದಾನದಡಿ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಕಂಪನಿ (ಬಿಎಸ್‌ಡಬ್ಲ್ಯುಎಂಎಲ್) ಹಣ ಬಿಡುಗಡೆ ಮಾಡುತ್ತಿದೆ.

ಸ್ಥಳವಿಲ್ಲ: ನಗರದ ಮಾರುಕಟ್ಟೆ ಪ್ರದೇಶ ಹಾಗೂ ವಾರ್ಡ್‌ಗಳಲ್ಲಿ ಲಭ್ಯವಿರುವ ಜಾಗದಲ್ಲಿ ವೈಜ್ಞಾನಿಕ ರೀತಿ ದ್ವಿತೀಯ ಹಂತದ ತ್ಯಾಜ್ಯ ಸಂಗ್ರಹಣೆಗೆ 50 'ಸಣ್ಣ ವರ್ಗಾವಣೆ ಕೇಂದ್ರ'ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಏಳು ವರ್ಷ ನಿರ್ವಹಣೆ ಮಾಡಲು 2019ರ ಮಾರ್ಚ್‌ನಲ್ಲಿ ₹246 ಕೋಟಿ ವೆಚ್ಚಕ್ಕೆ ಕಾರ್ಯಾದೇಶ ನೀಡಲಾಗಿದೆ. ಆದರೆ, ಇದರಲ್ಲಿ ಈವರೆಗೆ ಸ್ಥಾಪನೆಯಾಗಿರುವುದು ಆರೇಳು ಮಾತ್ರ. ಪ್ರತಿ ಘಟಕದಲ್ಲಿ ಎರಡರಿಂದ ಮೂರು ಕಾಂಪ್ಯಾಕ್ಟರ್, ಒಂದು ಹೂಕ್ ಲೋಡರ್ ಯಂತ್ರ ಇರಬೇಕು ಎಂಬ ಷರತ್ತಿದೆ. ಇಂತಹ ಘಟಕಗಳ ಸ್ಥಾಪನೆಗೇ ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ಥಳವೇ ದೊರೆಯುತ್ತಿಲ್ಲ.

ಹೀಗಿದ್ದರೂ, ದೊಡ್ಡ ಪ್ರಮಾಣದಲ್ಲಿ ಮೂರು ವರ್ಗಾವಣೆ ಕೇಂದ್ರವನ್ನು ಸ್ಥಾಪಿಸಲು ಬಿಬಿಎಂಪಿ ಮುಂದಾಗಿದೆ. ಮಾಲಿನ್ಯ ನಿಯಂತ್ರಣ ಮಂಡಳಿ, ರಾಜ್ಯಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರದಿಂದ (ಎಸ್‌ಇಐಎಎ) ಈ ಕೇಂದ್ರಗಳ ಸ್ಥಾಪನೆಗೆ ಅನುಮತಿಯನ್ನೂ ಪಡೆದಿಲ್ಲ. ಅಲ್ಲದೆ, ಈ ಕೇಂದ್ರದ ಸುತ್ತ ಬಫರ್ ಝೋನ್ ಸ್ಥಾಪಿಸಬೇಕು. ಅಷ್ಟು ಪ್ರಮಾಣದ ಭೂಮಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಸಿಗುತ್ತದೆಯೇ ಎಂಬ ಪ್ರಶ್ನೆ ಉದ್ಭವವಾಗಿದೆ.

ಕೇಂದ್ರಗಳೇ ಪ್ರಾರಂಭವಾಗಿಲ್ಲ...

'ನಗರದಲ್ಲಿ ಸಣ್ಣ ಪ್ರಮಾಣದ ವರ್ಗಾವಣೆ ಕೇಂದ್ರಗಳೇ ಪ್ರಾರಂಭವಾಗಿಲ್ಲ. ಎಲ್ಲಿ ಜಾಗ ಸಿಗುವುದೋ ಅಲ್ಲಿ ಅವನ್ನು ಪ್ರಾರಂಭಿಸುತ್ತೇವೆ. ಇದೀಗ ಕೆಲವೇ ಕೆಲವು ಕಾರ್ಯನಿರ್ವಹಿಸುತ್ತಿವೆ' ಎಂದು ಸಣ್ಣ ಪ್ರಮಾಣದ ವರ್ಗಾವಣೆ ಕೇಂದ್ರಗಳ ಮೇಲುಸ್ತುವಾರಿಯಾಗಿರುವ ಘನತ್ಯಾಜ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಭೀಮೇಶ್ ಪ್ರತಿಕ್ರಿಯಿಸಿದರು.

ಕಸ ಎಲ್ಲಿ ಹಾಕಬೇಕು?

'ಕಸವನ್ನು ಮೂರು ವರ್ಗಾವಣೆ ಕೇಂದ್ರಗಳಿಗೆ ತಲುಪಿಸಿ, ಅಲ್ಲಿಂದ ಸಂಸ್ಕರಣೆ ಘಟಕಗಳಿಗೆ ಸಾಗಿಸಲಾಗುತ್ತದೆ. ಹೂಡಿಯಲ್ಲಿ ಕೇಂದ್ರದ ಕಾಮಗಾರಿ ಆರಂಭವಾಗಿದೆ. ಇನ್ನೆರಡಕ್ಕೆ ಜಾಗ ಹುಡುಕಲಾಗುತ್ತಿದೆ. ಎಲ್ಲರೂ ತಮ್ಮ ಭಾಗದಲ್ಲಿ ಕೇಂದ್ರ ಸ್ಥಾಪಿಸಬೇಡಿ ಎಂದರೆ ನಾವೇನು ಮಾಡುವುದು' ಎಂದು ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್ ಕುಮಾರ್ ಪ್ರಶ್ನಿಸಿದರು.

ಹಣ ದುರ್ಬಳಕೆ: ರಮೇಶ್ ದೂರು

'ಬಿಬಿಎಂಪಿ ಕಾಯ್ದೆ ಪ್ರಕಾರ ನಗರದ ಕಸ ನಿರ್ವಹಣೆ ಜವಾಬ್ದಾರಿ ಬಿಬಿಎಂಪಿಯದ್ದಾಗಿದೆ. ಆದರೆ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಕಂಪನಿ (ಬಿಎಸ್‌ಡಬ್ಲ್ಯುಎಂಎಲ್) ಸ್ಥಾಪಿಸಿ ಹಣ ವೆಚ್ಚ ಮಾಡಲು ಯೋಜಿಸಲಾಗಿದೆ. ಇದಕ್ಕೆ ಸಂವಿಧಾನದ ಪ್ರಕಾರ ಯಾವುದೇ ಟೆಂಡರ್ ಕರೆಯಲು ಅಧಿಕಾರವಿಲ್ಲ. ಆದರೂ, ಕೋಟ್ಯಂತರ ರೂಪಾಯಿ ವೆಚ್ಚ ಮಾಡಲು ಅಧಿಕಾರಿಗಳು ಮುಂದಾಗಿದ್ದಾರೆ. ಅನುಷ್ಠಾನ ಸಾಧ್ಯವಿಲ್ಲದ ಯೋಜನೆಯಿಂದ ಹಣ ದುರುಪಯೋಗಲಿದೆ. ಈ ಬಗ್ಗೆ ಮುಖ್ಯ ಕಾರ್ಯದರ್ಶಿಯವರನ್ನೂ ಪ್ರಶ್ನಿಸಲಾಗಿದೆ. ಉತ್ತರ ಬಂದಿಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ದೂರಿದರು.

ಕ್ರಿಸ್‌ಮಸ್ ಖರೀದಿ

ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಶಿವಾಜಿನಗರದ ಮಾರುಕಟ್ಟೆಯಲ್ಲಿ ಯುವತಿಯರು ವಿವಿಧ ಆಲಂಕಾರಿಕ ವಸ್ತುಗಳನ್ನು ಮಂಗಳವಾರ ಖರೀದಿಸಿದರು -ಪ್ರಜಾವಾಣಿ ಚಿತ್ರ/ರಂಜು ಪಿ.

ಧರಣಿ ಸ್ಥಳದಲ್ಲಿ ನೌಕರರು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಧರಣಿ ವೇಳೆ ಅಸ್ವಸ್ಥಗೊಂಡ ನೌಕರರೊಬ್ಬರನ್ನು ಚಿಕಿತ್ಸೆಗಾಗಿ ಕರೆದೊಯ್ಯಲಾಯಿತು – ಪ್ರಜಾವಾಣಿ ಚಿತ್ರ

ಬೆಂಗಳೂರು: ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಮರು ಜಾರಿಗೆ ಆಗ್ರಹಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ನೇತೃತ್ವದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಪ್ರತಿಭಟನೆಯು ಮಂಗಳವಾರ 2ನೇ ದಿನ ಪೂರೈಸಿತು.

ಆಮ್ ಆದ್ಮಿ ಪಕ್ಷವು ಸೇರಿದಂತೆ ವಿವಿಧ ಸಂಘ ಸಂಸ್ಥೆಗಳು ಹೋರಾಟಕ್ಕೆ ಬೆಂಬಲ ಸೂಚಿಸಿದ್ದು ನೌಕರರ ಪರವಾಗಿ ಧ್ವನಿಯೆತ್ತಿದವು. ನೌಕರರು ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಮಂಗಳವಾರ ಮತ್ತಷ್ಟು ನೌಕರರು ಬಂದು ಸೇರಿಕೊಂಡರು.

ಪ್ರತಿಭಟನ ಸ್ಥಳದಲ್ಲಿದ್ದ ಕೆಲವು ನೌಕರರು ಅಸ್ವಸ್ಥಗೊಂಡಿದ್ದು ಅವರನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಯಿತು.

ರಾಜಸ್ಥಾನ, ಛತ್ತೀಸ್‌ಗಢ, ಪಂಜಾಬ್, ಜಾರ್ಖಂಡ್‌ನಲ್ಲಿನ ಸರ್ಕಾರಗಳು ಎನ್‌ಪಿಎಸ್ ರದ್ದುಪಡಿಸಿವೆ. ರಾಜ್ಯದಲ್ಲೂ ರದ್ದು ಮಾಡುವಂತೆ ನೌಕರರು ಪಟ್ಟುಹಿಡಿದರು.

'ಗುಜರಾತ್‌ನಲ್ಲಿ ಕೂಡ ಒಪಿಎಸ್ ಜಾರಿ ಕುರಿತು ಎಎಪಿ ಭರವಸೆ ನೀಡಿದ್ದರೂ ಅಲ್ಲಿ ಪಕ್ಷ ಅಧಿಕಾರಕ್ಕೆ ಬರಲಿಲ್ಲ. ಕರ್ನಾಟಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಒಪಿಎಸ್ ಜಾರಿಗೆ ತರಲು ಬದ್ಧರಾಗಿದ್ದೇವೆ' ಎಂದು ಎಎಪಿ ರಾಜ್ಯ ಉಪಾಧ್ಯಕ್ಷ ಭಾಸ್ಕರ್ ರಾವ್ ಹೇಳಿದರು.

ನೌಕರರು, ಕಾರ್ಮಿಕರು, ರೈತರು, ಸಣ್ಣಪುಟ್ಟ ಉದ್ದಿಮೆದಾರರು ಬಿಜೆಪಿ ಸರ್ಕಾರಕ್ಕೆ ಲೆಕ್ಕಕ್ಕೇ ಇಲ್ಲ. ಇಷ್ಟು ದಿನ ಬೇರೆಬೇರೆ ವರ್ಗದ ಜನರು ಪ್ರತಿಭಟನೆ ನಡೆಸುತ್ತಿದ್ದು, ಈಗ ಸರ್ಕಾರಿ ನೌಕರರೇ ಬೀದಿಗಿಳಿಯುವ ಸ್ಥಿತಿ ಬಂದಿದೆ ಎಂದು ಪಕ್ಷದ ಮುಖಂಡ ಬ್ರಿಜೇಶ್ ಕಾಳಪ್ಪ ಬೇಸರ ವ್ಯಕ್ತಪಡಿಸಿದರು.

'2006ರ ನಂತರ ಸರ್ಕಾರಿ ಸೇವೆಗೆ ಸೇರಿದ ನೌಕರರಿಗೆ ಎನ್‌ಪಿಎಸ್‌ನಿಂದ ಅಭದ್ರತೆ ಕಾಡುತ್ತಿದೆ. ನಿವೃತ್ತಿ ನಂತರದ ಬದುಕಿನ ಬಗ್ಗೆ ಚಿಂತೆಗೀಡಾಗಿದ್ದಾರೆ. ಒಪಿಎಸ್ ಜಾರಿಯಾದರೆ ಸರ್ಕಾರಕ್ಕೆ ಹೆಚ್ಚೇನೂ ಆರ್ಥಿಕ ಹೊರೆ ಆಗುವುದಿಲ್ಲ' ಎಂದು ಕಾರ್ಮಿಕ ವಿಭಾಗದ ರಾಜ್ಯ ಅಧ್ಯಕ್ಷ ರವಿಶಂಕರ್ ಹೇಳಿದರು.

ಭಯ ಹುಟ್ಟಿಸಲು ಸಿಬಿಐ ದಾಳಿ: ಡಿಕೆಶಿ ಆರೋಪ

ಬೆಳಗಾವಿ: 'ನಾನು ಯಾರಿಗೂ ಸಹಾಯ ಮಾಡಬಾರದು, ಸಹಾಯ ಪಡೆಯಬಾರದು, ಯಾರಿಗೂ ಸಾಲ ಕೊಡಬಾರದು, ಸಂಘಟನೆಯಲ್ಲೂ ತೊಡಗಬಾರದು ಎಂಬ ರೀತಿಯಲ್ಲಿ ಭಯ ಹುಟ್ಟಿಸುತ್ತಿದ್ದಾರೆ. ಇದೇ ಸಿಬಿಐ, ಇಡಿ ದಾಳಿಯ ಉದ್ದೇಶ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ತಮ್ಮ ಶಿಕ್ಷಣ ಸಂಸ್ಥೆಗಳ ಮೇಲೆ ಸಿಬಿಐ ದಾಳಿ ನಡೆಸಿದ ವಿಚಾರವಾಗಿ ನಗರದಲ್ಲಿ ಮಂಗಳವಾರ ಪ್ರತಿಕ್ರಿಯೆ ನೀಡಿದ ಅವರು, 'ನನ್ನ ಸಂಪರ್ಕ ಇಟ್ಟುಕೊಂಡಿರುವ ಎಲ್ಲರ ಸಂಸ್ಥೆ, ಮನೆಗಳ ಮೇಲೂ ದಾಳಿ ನಡೆದಿದೆ. ನನ್ನ ವಕೀಲರಿಂದ ಹಿಡಿದು ಟ್ರಾವೆಲ್ ಏಜೆನ್ಸಿಯವರೆಗೂ ಯಾರನ್ನೂ ಬಿಟ್ಟಿಲ್ಲ' ಎಂದರು.

'ಸಿಬಿಐಗೆ ಮುಂಚೆಯೇ ನಾನು ಎಲ್ಲ ದಾಖಲೆ ಕೊಟ್ಟಿದ್ದೆ, ಚುನಾವಣೆ ಮುಗಿದ ಬಳಿಕ ಕರೆಯಿರಿ ಎಂದೂ ಹೇಳಿದ್ದೆ. ಆದರೆ, ತನಿಖಾ ಸಂಸ್ಥೆಗಳಿಗೆ ನಾನೊಬ್ಬನೇ ಕಾಣಿಸುತ್ತಿದ್ದೇನೆ' ಎಂದರು.

'ಪ್ರವರ್ಗ 2ಎ' ಮೀಸಲಿಗೆ ಆಗ್ರಹಿಸಿ ನಾಳೆಯಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಲಿಜ ಸಮುದಾಯಕ್ಕೆ 'ಪ್ರವರ್ಗ 2ಎ' ಮೀಸಲಾತಿ ಸೌಲಭ್ಯ ಕಲ್ಪಿಸಲು ಆಗ್ರಹಿಸಿ ಡಿ.22ರಿಂದ ಬೆಳಗಾವಿಯಲ್ಲಿ ಉಪವಾಸ ಸತ್ಯಾಗ್ರಹ ನಡೆಸಲು ರಾಜ್ಯ ಸಮಗ್ರ ಬಲಿಜ ವೇದಿಕೆ ನಿರ್ಧರಿಸಿದೆ.

ಬೆಳಗಾವಿಯ ಸುವರ್ಣಸೌಧದಲ್ಲಿ ಚಳಿಗಾಲದ ಅಧಿವೇಶನ ನಡೆಯುತ್ತಿದ್ದು, ಸರ್ಕಾರದ ಗಮನ ಸೆಳೆಯಲು ಪ್ರತಿಭಟನೆ ನಡೆಸಲಾಗುತ್ತಿದೆ. ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ಸಮುದಾಯದ ಜನರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ರಮೇಶ್ ತಿಳಿಸಿದ್ದಾರೆ.

'ಬೆಂಗಳೂರಿನಲ್ಲಿ ಎರಡು ಬಾರಿ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದರೂ ನ್ಯಾಯ ಸಿಕ್ಕಿಲ್ಲ. ಮತ್ತೆ ಪ್ರತಿಭಟನೆ ಹಾದಿ ತುಳಿದಿದ್ದೇವೆ' ಎಂದು ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

'ಬಲಿಜ ಸಮುದಾಯ ಹಾಗೂ ಅದರ ಉಪ ಜಾತಿಗಳಿಗೆ ಪೂರ್ಣ ಪ್ರಮಾಣದಲ್ಲಿ 2ಎ ಪಟ್ಟಿಗೆ ಸೇರಿಸಿ ನ್ಯಾಯ ಕಲ್ಪಿಸಬೇಕು. ಬಲಿಜ ಸಮುದಾಯದ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಸ್ಥಾಪಿಸಬೇಕು. ನಿಗಮಕ್ಕೆ ಸಮುದಾಯದ ಮುಖಂಡರನ್ನೇ ಅಧ್ಯಕ್ಷರನ್ನಾಗಿ ನೇಮಿಸಬೇಕು. ಸರ್ಕಾರಿ ಉದ್ಯೋಗದಲ್ಲಿ ಸೂಕ್ತ ಮೀಸಲಾತಿ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪ್ರಾತಿನಿಧ್ಯ ಒದಗಿಸಬೇಕು' ಎಂದು ಕೋರಿದ್ದಾರೆ.

'ಬಲಿಜ ಸಮುದಾಯ ಹಿಂದುಳಿದಿದೆ. ಹಿಂದುಳಿದ ವರ್ಗಗಳ ಆಯೋಗವು ಸಮುದಾಯದ ಸ್ಥಿತಿಗತಿಯ ಅಧ್ಯಯನ ನಡೆಸಿದೆ. ಆದರೆ, ಸರ್ಕಾರಕ್ಕೆ ವರದಿ ಸಲ್ಲಿಸಿಲ್ಲ. ಇದರಿಂದಲೂ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಸಿಗದೆ ವಂಚನೆಯಾಗಿದೆ' ಎಂದು ನೋವು ತೋಡಿಕೊಂಡಿದ್ದಾರೆ.

'ಪ್ರಜಾವಾಣಿ'ಯ ವರದಿ, ಸಂಪಾದಕೀಯ, ಆಳ–ಅಗಲ ಉಲ್ಲೇಖ

'ದೇಗುಲಗಳಲ್ಲಿ ಮುಕ್ತ ಪ್ರವೇಶದ ಫಲಕ ಹಾಕಿ'

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿರುವ ದೇವಸ್ಥಾನಗಳ ಪ್ರವೇಶ ದ್ವಾರದಲ್ಲಿ ಯಾವುದೇ ಜಾತಿ ಭೇದ ಇಲ್ಲದೇ ಎಲ್ಲ ಜಾತಿಯವರಿಗೆ ಮುಕ್ತ ಪ್ರವೇಶ ಇರುತ್ತದೆ ಎಂಬ ಫಲಕ ಹಾಕಬೇಕು, ಜಿಲ್ಲಾಧಿಕಾರಿಗಳು ಗ್ರಾಮ ವಾಸ್ತವ್ಯ ಮಾಡಿದಾಗ ದಲಿತರ ಮನೆಗೆ ಹೋಗಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದು ಕರ್ನಾಟಕ ವಿಧಾನಮಂಡಲದ ಪರಿಶಿಷ್ಟ ಜಾತಿ–ಪಂಗಡಗಳ ಕಲ್ಯಾಣ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಕಲ್ಯಾಣ ಸಮಿತಿಯ ಆರನೇ ವರದಿಯನ್ನು ಸಮಿತಿ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ ಅವರು ಮಂಗಳವಾರ ಸದನದಲ್ಲಿ ಮಂಡಿಸಿದರು.

ದಲಿತರ ಮೇಲಿನ ದೌರ್ಜನ್ಯ, ಅಸ್ಪೃಶ್ಯತೆ ಆಚರಣೆ, ನಕಲಿ ಪ್ರಮಾಣ ಪತ್ರದ ವಿವರಗಳನ್ನು ಉಲ್ಲೇಖಿಸಲಾಗಿದೆ.

ವರದಿಯ ಉದ್ದಕ್ಕೂ 'ಪ್ರಜಾವಾಣಿ'ಯ ಸಂಪಾದಕೀಯ, ಆಳ-ಅಗಲದ ವಿಶ್ಲೇಷಣೆ, ವರದಿ, ವಿಶೇಷ ವರದಿಗಳ ನಕಲು ಪ್ರತಿಯನ್ನು ಲಗತ್ತಿಸಲಾಗಿದೆ. ಹತ್ತಕ್ಕೂ ಹೆಚ್ಚು ಬಾರಿ, ಪ್ರಜಾವಾಣಿಯ ವರದಿಯನ್ನು ಉಲ್ಲೇಖಿಸಿ ವಿವರಿಸಲಾಗಿದೆ.

'ಏಕರೂಪದ ಶಿಷ್ಯವೇತನ ನಿಗದಿ ಮಾಡಿ'

ಎಲ್ಲ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಏಕರೂಪದ ಶಿಷ್ಯವೇತನ ನೀಡುವ ಪದ್ಧತಿ ಜಾರಿಗೆ ತರಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಎಂಫಿಲ್ ವಿದ್ಯಾರ್ಥಿಗಳಿಗೆ ₹20 ಸಾವಿರ, ಪಿಎಚ್‌ಡಿ ವಿದ್ಯಾರ್ಥಿಗಳಿಗೆ ₹35 ಸಾವಿರ ನೀಡಬೇಕು. ಐಐಟಿ, ಐಐಎಂ, ಐಐಎಸ್‌ಸಿಯಂತ ರಾಷ್ಟ್ರಮಟ್ಟದ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ ಪಡೆದವರಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ₹2 ಲಕ್ಷದಿಂದ ₹4 ಲಕ್ಷಕ್ಕೆ ಹೆಚ್ಚಿಸಬೇಕು ಎಂದೂ ಸಲಹೆ ನೀಡಿದೆ.

ವಿಧಾನ ಮಂಡಲದಲ್ಲಿ

ಶಿಫಾರಸುಗಳು

- ಅತಿಸೂಕ್ಷ್ಮ ಪ್ರದೇಶದ ಗ್ರಾಮಗಳಿಗೆ ಪೊಲೀಸರು ಆಗಾಗ್ಗೆ ಭೇಟಿ ಕೊಟ್ಟು ಗ್ರಾಮದ ಜನರಲ್ಲಿ ವಿಶ್ವಾಸ ಮೂಡಿಸಬೇಕು. ಪೊಲೀಸ್ ಗಸ್ತು ಹೆಚ್ಚಿಸಬೇಕು.
- ಉಳ್ಳೇರಹಳ್ಳಿಯಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯವು ಎರಡು ವಾರಗಳ ಬಳಿಕ ಹೊರಜಗತ್ತಿಗೆ ಗೊತ್ತಾಗಿದೆ. ಅಧಿಕಾರಿಗಳ ವೈಫಲ್ಯ, ಪೊಲೀಸರ ನಿರ್ಲಕ್ಷ್ಯ ಎದ್ದು ಕಾಣಿಸುತ್ತಿದ್ದು, ಈ ಬಗ್ಗೆ ತನಿಖೆ ನಡೆಸಬೇಕು.
- ಪರಿಶಿಷ್ಟ ಜಾತಿ–ಪಂಗಡದವರ ಮೇಲೆ ಅಸ್ಪೃಶ್ಯತೆ ಆಚರಣೆ, ದೌರ್ಜನ್ಯ ಪ್ರಕರಣ ಪ್ರತಿದಿನ ವರದಿಯಾಗುತ್ತಿರುವುದು ಕಳವಳಕಾರಿ. ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಕ್ರಮವಹಿಸಬೇಕು.
- ಅರ್ಜಿದಾರರ ನೈಜತೆಯನ್ನು ಪರಿಶೀಲಿಸದೇ ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ನೀಡಲು ಶಿಫಾರಸು ಮಾಡಿದ ಅಧಿಕಾರಿ/ನೌಕರರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು.
- ಪರಿಶಿಷ್ಟ ಜಾತಿ–ಪಂಗಡದವರ ಮೇಲಿನ ದೌರ್ಜನ್ಯ ಪ್ರಕರಣದಲ್ಲಿ ಶಿಕ್ಷೆ ಪ್ರಮಾಣ ಕನಿಷ್ಠ ಹಾಗೂ ಶೂನ್ಯ ಮಟ್ಟಕ್ಕೆ ಇಳಿದಿದೆ. ದೌರ್ಜನ್ಯ ಪ್ರಕರಣ ಹೆಚ್ಚಿರುವ ಜಿಲ್ಲೆಗಳಿಗೆ ಸಮಾಜ ಕಲ್ಯಾಣ, ಗೃಹ ಹಾಗೂ ನಾಗರಿಕ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ತಂಡವನ್ನು ಕಳುಹಿಸಿ ಅಧ್ಯಯನ ನಡೆಸಬೇಕು.

ನಿಮ್ಹಾನ್ಸ್ ನಿರ್ದೇಶಕರಿಗೆ ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪ ಸೂಚನೆ

'ಟೋಕನ್ ವ್ಯವಸ್ಥೆ ಸುಧಾರಿಸಿ'

ಪ್ರಜಾವಾಣಿ ವಾರ್ತೆ

ನ್ಯಾ.ಬಿ.ವೀರಪ್ಪ ಅವರಿಗೆ ವಾಣಿ ವಿಲಾಸ ಆಸ್ಪತ್ರೆಯಲ್ಲಿನ ವ್ಯವಸ್ಥೆ ಬಗ್ಗೆ ವೈದ್ಯಾಧಿಕಾರಿಗಳು ಮಾಹಿತಿ ನೀಡಿದರು

ಮುಖ್ಯಾಂಶಗಳು

- ನಿಮ್ಹಾನ್ಸ್, ವಾಣಿ ವಿಲಾಸ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿದ ವೀರಪ್ಪ
- 'ರೋಗಿಗಳ ನಡುವೆ ತಾರತಮ್ಯ ಮಾಡಬಾರದು'
- 'ಅಮೃತಧಾರೆ' ಕೇಂದ್ರದ ಕಾರ್ಯಕ್ಕೆ ಶ್ಲಾಘನೆ

ಬೆಂಗಳೂರು: 'ಹೊರ ರೋಗಿಗಳಿಗೆ ನೀಡುವ ಟೋಕನ್ ವ್ಯವಸ್ಥೆಯಲ್ಲಿ ಸುಧಾರಣೆ ತರಬೇಕು' ಎಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯಕಾರಿ ಅಧ್ಯಕ್ಷ ಹಾಗೂ ಹೈಕೋರ್ಟ್ ನ್ಯಾಯಮೂರ್ತಿ ಬಿ.ವೀರಪ್ಪ ಅವರು ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಅವರಿಗೆ ಸೂಚಿಸಿದರು.

ಮಂಗಳವಾರ ನಿಮ್ಹಾನ್ಸ್ ಹಾಗೂ ವಾಣಿ ವಿಲಾಸ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದರು. ರೋಗಿಗಳ ಆರೋಗ್ಯ ವಿಚಾರಿಸಿ ಚಿಕಿತ್ಸೆ ಹಾಗೂ ವ್ಯವಸ್ಥೆಯ ಬಗ್ಗೆ ಮಾಹಿತಿ ಪಡೆದರು.

ನಿಮ್ಹಾನ್ಸ್ ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ ಅವರು ಸಂಸ್ಥೆಯ ಕಾರ್ಯಚಟುವಟಿಕೆ ಬಗ್ಗೆ ಮಾಹಿತಿ ನೀಡಿ, 'ಪಾರ್ಶ್ವವಾಯು ಹಾಗೂ ಮಾನಸಿಕ ರೋಗಗಳಿಗೆ ತುರ್ತು ಚಿಕಿತ್ಸೆ ಒದಗಿಸಲು ಪ್ರತಿ ಜಿಲ್ಲೆಯಲ್ಲಿ ಉಪ ಕೇಂದ್ರಗಳನ್ನು ಆರಂಭಿಸುವ ಬಗ್ಗೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದರು.

'ಜಿಲ್ಲೆಗಳಲ್ಲಿ ತಜ್ಞ ಮನೋವೈದ್ಯರ ಕೊರತೆಯಿಂದಾಗಿ ಜನರು ನಿಮ್ಹಾನ್ಸ್‌ಗೆ ಬರುತ್ತಾರೆ. ಇಲ್ಲಿಗೆ ಬರುವ ಎಲ್ಲ ರೋಗಿಗಳನ್ನು ಸಮಾನವಾಗಿ ಕಾಣಬೇಕು. ರೋಗಿಗಳ ನಡುವೆ ತಾರತಮ್ಯ ಮಾಡಬಾರದು' ಎಂದು ನ್ಯಾಯಮೂರ್ತಿ ಅವರು ವೈದ್ಯಾಧಿಕಾರಿಗಳಿಗೆ ಹೇಳಿದರು.

ಇದಕ್ಕೂ ಮೊದಲು ವಾಣಿವಿಲಾಸ ಆಸ್ಪತ್ರೆಗೆ ಭೇಟಿ ನೀಡಿದ್ದ ಅವರಿಗೆ ವೈದ್ಯಕೀಯ ಅಧೀಕ್ಷಕಿ ಡಾ. ಸವಿತಾ ಆಸ್ಪತ್ರೆಯಲ್ಲಿನ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಿದರು.

ತಾಯಿಯ ಎದೆ ಹಾಲು ಸಂಗ್ರಹಿಸಿ, ಅಗತ್ಯವಿರುವ ಶಿಶುಗಳಿಗೆ ಪೂರೈಸುವ 'ಅಮೃತಧಾರೆ' ಕೇಂದ್ರದ ಕಾರ್ಯವನ್ನು ಶ್ಲಾಘಿಸಿದ ನ್ಯಾ.ಬಿ.ವೀರಪ್ಪ, ಆಸ್ಪತ್ರೆಯಲ್ಲಿ ಸಿಬ್ಬಂದಿ ಹೆಚ್ಚಿಸುವಂತೆ ಸೂಚಿಸಿದರು.

ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜೈಶಂಕರ್, ಉಪ ಕಾರ್ಯದರ್ಶಿ ರಾಘವೇಂದ್ರ ಶೆಟ್ಟಿಗಾರ್, ಸಾರ್ವಜನಿಕ ಸಂಪರ್ಕಾಧಿಕಾರಿ ವಿಘ್ನೇಶ್ ಕುಮಾರ್ ಅವರು ಇದ್ದರು.

ಗಡಿ ವಿಚಾರ: ಸರ್ಕಾರಕ್ಕೆ ಗಂಭೀರತೆಯೂ ಇಲ್ಲ, ಕಾಳಜಿಯೂ ಇಲ್ಲ– ಪಾಟೀಲ

ಬೆಳಗಾವಿ: 'ಗಡಿ ವಿಚಾರದಲ್ಲಿ ಮಹಾರಾಷ್ಟ್ರದ ನಡೆ ಅಕ್ಷಮ್ಯ. ಆದರೂ ಕರ್ನಾಟಕ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಅಮಿತ್ ಶಾ ಕರೆದಿದ್ದ ಸಭೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರಸ್ಕಾರ ಮಾಡಿ, ರಾಜ್ಯದ ಅಭಿಪ್ರಾಯ ಮುಟ್ಟಿಸಬೇಕಿತ್ತು' ಎಂದು ಶಾಸಕ ಎಚ್.ಕೆ. ಪಾಟೀಲ ಹೇಳಿದರು.

'ಗಡಿಯಲ್ಲಿ ಶಾಂತಿ ರಕ್ಷಣೆಗೆ ಕೇಂದ್ರ ಗೃಹಸಚಿವರು ಸಭೆ ನಡೆಸಿದರು. ಅಂದರೆ ಗಡಿಯಲ್ಲಿ ಅಶಾಂತಿ ಇದೆ ಎಂದು ಮೂರೂ ಕಡೆ ಅಧಿಕಾರದಲ್ಲಿರುವ ಬಿಜೆಪಿಯವರೇ ಪುರಾವೆ ಸೃಷ್ಟಿ ಮಾಡಿದಂತೆ ಆಯಿತಲ್ಲ. ಸಭೆಗೆ ಹೋಗಿ ತಪ್ಪು ಮಾಡಿದ ಮುಖ್ಯಮಂತ್ರಿ ಜನರ ಕ್ಷಮೆ ಕೇಳಬೇಕು' ಎಂದು ಮಂಗಳವಾರ ಹೇಳಿದರು.

'ಡಿ.30, ಜ.2ರಂದು ಬೃಹತ್ ಹೋರಾಟ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕೃಷ್ಣಾ ಮೇಲ್ದಂಡೆ ಯೋಜನೆ ಕುರಿತು ವಿಜಯಪುರದಲ್ಲಿ ಡಿ. 30ರಂದು, ಮಹಾದಾಯಿ ಯೋಜನೆ ವಿಚಾರವಾಗಿ ಹುಬ್ಬಳ್ಳಿ-ಧಾರವಾಡದಲ್ಲಿ ಜನವರಿ 2 ರಂದು ಬೃಹತ್ ಹೋರಾಟ ಆಯೋಜಿಸಲಾಗಿದೆ' ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಮಂಗಳವಾರ ನಗರದ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಆಗಿರುವ ಅನ್ಯಾಯ ಖಂಡಿಸಿ ಚಿತ್ರದುರ್ಗದಲ್ಲಿ ಶೀಘ್ರ ರ‍್ಯಾಲಿ ಹಮ್ಮಿಕೊಳ್ಳಲಾಗುವುದು. ಎಲ್ಲ ಸಮುದಾಯಗಳ ಕಲ್ಯಾಣಕ್ಕೆ ಕಾಂಗ್ರೆಸ್ ಯೋಜನೆ ರೂಪಿಸಿದ್ದು, ಚುನಾವಣಾ ಪ್ರಣಾಳಿಕೆ ಸಿದ್ಧಪಡಿಸಿ ಬಿಡುಗಡೆ ಮಾಡಲಿದೆ' ಎಂದೂ ಅವರು ತಿಳಿಸಿದರು.

ಕಾಟನ್‌ಪೇಟೆ ಠಾಣೆಯಲ್ಲೂ ಪ್ರಕರಣ

ಆರೋಪಿತ ಹತ್ತು ಮಂದಿ ಮುಖಂಡರು 2 ಸಾವಿರದಿಂದ 3 ಸಾವಿರ ಜನರನ್ನು ಅಕ್ರಮವಾಗಿ ಕೂಟ ಕಟ್ಟಿಕೊಂಡು ವಾಹನ ಸಂಚಾರಕ್ಕೆ ಅಡ್ಡಿಪಡಿಸಿದ್ದರು ಎಂದು ಎಫ್‌ಐಆರ್‌ನಲ್ಲಿ ಆರೋಪಿಸಲಾಗಿದೆ.

ಒಳಮೀಸಲಾತಿ ಹೋರಾಟ: 10 ಜನರ ವಿರುದ್ಧ ಎಫ್‌ಐಆರ್

ಬೆಂಗಳೂರು: ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಜಾರಿ ಹೋರಾಟ ಸಮಿತಿ ನೇತೃತ್ವದಲ್ಲಿ ಒಳ ಮೀಸಲಾತಿಗಾಗಿ ಹೋರಾಟ ನಡೆಸುತ್ತಿರುವ 10 ಮಂದಿ ಹೋರಾಟಗಾರರ ವಿರುದ್ಧ ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲೂ ಎಫ್‌ಐಆರ್ ದಾಖಲಾಗಿದೆ.

ಹೋರಾಟಗಾರರಾದ ಶಿವರಾಯ ಅಕ್ಕರಕ್ಕಿ, ಅಂಬಣ್ಣ ಅರೋಲಿಕರ್, ಪಾವಗಡ ಶ್ರೀರಾಮ್, ಶಂಕರ್ ಪೂಜಾರಿ, ಭಾಸ್ಕರ ಪ್ರಸಾದ್, ಎನ್.ಮೂರ್ತಿ, ಬಿ.ಗೋಪಾಲ್, ಭಾಗ್ಯಮ್ಮ, ಲಿಂಗರಾಜ್ ತಾರಾಫೈಲ್, ಹೆಣ್ಣೂರು ಶ್ರೀನಿವಾಸ್ ವಿರುದ್ಧ ಪ್ರಕರಣ ದಾಖಲಾಗಿದೆ.

ಸ್ವಾತಂತ್ರ್ಯ ಉದ್ಯಾನ ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ಪ್ರತಿಭಟನೆ ನಡೆಸಲು ಅವಕಾಶ ಇಲ್ಲ ಎಂದು ಹೈಕೋರ್ಟ್ ಆದೇಶ ನೀಡಿದ್ದು, ಇದನ್ನು ಲೆಕ್ಕಿಸದೆ ಮೆರವಣಿಗೆ ನಡೆಸಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ದೂರಲಾಗಿದೆ. ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲೂ ಎಫ್‌ಐಆರ್ ದಾಖಲಾಗಿತ್ತು.

ಈ ಕುರಿತು ಪ್ರತಿಕ್ರಿಯಿಸಿರುವ ಹೋರಾಟಗಾರ ಅಂಬಣ್ಣ ಅರೋಲಿಕರ್, 'ಹತ್ತು ಜನರ ಮೇಲಷ್ಟೇ ಅಲ್ಲ, 10 ಲಕ್ಷ ಜನರ ಮೇಲೆ ಪ್ರಕರಣ ದಾಖಲಿಸಿದರೂ ಹೆದರುವುದಿಲ್ಲ. ಈ ಪ್ರತಿಭಟನೆಗೆ ಪ್ರಚೋದನೆ ನೀಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಎ1 ಆರೋಪಿ, ಗೃಹ ಸಚಿವರನ್ನು ಎ2, ಸಮಾಜ ಕಲ್ಯಾಣ ಸಚಿವರನ್ನು ಎ3 ಆರೋಪಿಗಳನ್ನಾಗಿ ಮಾಡಬೇಕು' ಎಂದು ಒತ್ತಾಯಿಸಿದರು.

'ವಶಿಷ್ಠ'ಹಗರಣ: ಸಿಬಿಐ ತನಿಖೆಗೆ ಯು.ಬಿ. ವೆಂಕಟೇಶ್ ಪಟ್ಟು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಂಗಳೂರು ನಗರದ ವಶಿಷ್ಠ ಕ್ರೆಡಿಟ್ ಸೌಹಾರ್ದ ಸಹಕಾರ ಸಂಘದಲ್ಲಿ ನಡೆದಿರುವ ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್ ಅವರು ಮಂಗಳವಾರ ವಿಧಾನ ಪರಿಷತ್‌ನಲ್ಲಿ ಒತ್ತಾಯಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, 'ಕರ್ನಾಟಕ ರಾಜ್ಯ ಸಂಯುಕ್ತ ಸೌಹಾರ್ದ ಸಹಕಾರಿ ಕೈಗೊಂಡಿರುವ ಪರಿವೀಕ್ಷಣಾ ವರದಿ ಅನ್ವಯ ಈ ಸಂಘದಲ್ಲಿ ₹280 ಕೋಟಿ ಅವ್ಯವಹಾರವಾಗಿದೆ ಎಂದು ಸಚಿವರೇ ಉತ್ತರ ನೀಡಿದ್ದಾರೆ. ಆದರೆ, ಆರೋಪಿಗಳನ್ನು ರಕ್ಷಿಸುವ ಪ್ರಯತ್ನ ನಡೆಯುತ್ತಿದೆ' ಎಂದು ದೂರಿದರು.

'ಸಂಘದಲ್ಲಿ ಠೇವಣಿ ಇರಿಸಿದವರಿಗೆ ಹಣ ವಾಪಸ್ ನೀಡಿಲ್ಲ. ಬಾಗಲಕೋಟೆಯ ಡಿಸಿಸಿ ಬ್ಯಾಂಕ್‌ನಲ್ಲಿ ನಡೆದಿದೆ ಎನ್ನಲಾದ ₹12 ಕೋಟಿ ಹಗರಣವನ್ನು ಸಿಬಿಐ ತನಿಖೆಗೆ ವಹಿಸಲಾಗಿದೆ. ಆದರೆ, ₹280 ಕೋಟಿ ಹಗರಣವನ್ನು ಸಿಬಿಐಗೆ ವಹಿಸಲು ಏಕೆ ಹಿಂದೇಟು ಹಾಕುತ್ತಿದ್ದೀರಿ' ಎಂದು ಪ್ರಶ್ನಿಸಿದರು.

'ಜನರ ಶಾಪ ನಿಮಗೆ ತಟ್ಟುವುದು ಬೇಡ. ಜನರಿಗೆ ಪರಿಹಾರ ಒದಗಿಸಿ. ಸಂಘವನ್ನು ಸರ್ಕಾರವೇ ಈಗ ವಹಿಸಿಕೊಂಡಿದೆ. ಹೀಗಾಗಿ ಸಚಿವರೇ ನಿರ್ಧಾರ ಕೈಗೊಳ್ಳಬೇಕು' ಎಂದು ಕೋರಿದರು.

ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ಆರೋಪಿಗಳು ರಾಜರೋಷವಾಗಿ ಕಬ್ಬನ್ ಪಾರ್ಕ್, ಲಾಲ್‌ಬಾಗ್‌ನಲ್ಲಿ ಪ್ರತಿನಿತ್ಯ ಓಡಾಡುತ್ತಿದ್ದಾರೆ. ನಿವೃತ್ತರಾದವರ ನಂಬಿಕೆ ಉಳಿಸಿಕೊಳ್ಳಲು ತನಿಖೆಯನ್ನು ಸಿಬಿಐಗೆ ವಹಿಸಿ. ಜನರ ನಂಬಿಕೆ ಮುಖ್ಯ' ಎಂದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, 'ಈ ಹಗರಣದ ಪ್ರಕರಣವನ್ನು ತನಿಖೆ ನಡೆಸಲು ಸಿಐಡಿಗೆ ವಹಿಸಲಾಗಿದ. ಜತೆಗೆ, ಸುಸ್ತಿದಾರರಿಂದ ಸಾಲ ವಸೂಲಿಗೆ ಸಹಾಯಕ ಆಯುಕ್ತರನ್ನು ನೇಮಿಸಲಾಗಿದ್ದು, ಇದುವರೆಗೆ ₹2.56 ಕೋಟಿ ವಸೂಲಿ ಮಾಡಲಾಗಿದೆ' ಎಂದರು.

'ಬಾಗಲಕೋಟೆಯ ಬ್ಯಾಂಕ್‌ನ ಆಡಳಿತ ಮಂಡಳಿಯೇ ನಿರ್ಣಯ ಮಾಡಿದ್ದರಿಂದ ಸಿಬಿಐಗೆ ವಹಿಸಲಾಗಿದೆ. ಸುಮಾರು ಎರಡು ಸಾವಿರ ಠೇವಣಿದಾರರಿಗೆ ಅಂದಾಜು ₹260 ಕೋಟಿ ಪಾವತಿಸಬೇಕಾಗಿದೆ. ಸಿಐಡಿ ಶಕ್ತಿಯುತವಾಗಿದೆ. ಸಿಐಡಿ ಕಾರ್ಯವೈಖರಿ ಸಮರ್ಪಕ ಇಲ್ಲದಿದ್ದರೆ ಮಾತ್ರ ಮುಂದಿನ ಕ್ರಮಕೈಗೊಳ್ಳುತ್ತೇವೆ. ಸಿಬಿಐಗೆ ವಹಿಸಲು ಅಭ್ಯಂತರ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಸಚಿವರಿಂದ ತಪ್ಪು ಮಾಹಿತಿ'

ಬೆಂಗಳೂರು: ವಶಿಷ್ಠ ಬ್ಯಾಂಕ್ ಹಗರಣದ ಕುರಿತು ವಿಧಾನ ಪರಿಷತ್ತಿನ ಪ್ರಶ್ನೋತ್ತರ ಕಲಾಪದಲ್ಲಿ ಸಹಕಾರಿ ಸಚಿವರು ತಪ್ಪು ಉತ್ತರ ಕೊಟ್ಟು ಜಾರಿಕೊಂಡಿದ್ದಾರೆ ಎಂದು ಗುರುರಾಘವೇಂದ್ರ ಬ್ಯಾಂಕಿನ ಠೇವಣಿದಾರರ ಮತ್ತು ಷೇರುದಾರರ ಹಿತರಕ್ಷಣಾ ವೇದಿಕೆ ಮುಖ್ಯ ಪೋಷಕ ಡಾ.ಶಂಕರ್ ಗುಹಾ ದ್ವಾರಕನಾಥ್ ದೂರಿದ್ದಾರೆ.

ಹಗರಣದ ಬಗ್ಗೆ ವಿಧಾನ ಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ ಅವರ ಪ್ರಶ್ನೆಗೆ ಸಚಿವ ಎಸ್.ಟಿ. ಸೋಮಶೇಖರ್ ಅವರು ಕೊಟ್ಟಂತಹ ಉತ್ತರ ನೋಡಿದರೆ ನಗಬೇಕೋ, ಅಳಬೇಕೋ ಗೊತ್ತಾಗುತ್ತಿಲ್ಲ. ಅವರಿಗೆ ಇಲಾಖೆಯಲ್ಲಿ ಏನು ನಡೆಯುತ್ತಿದೆ ಎಂದು ಗೊತ್ತೇ ಇಲ್ಲ ಅಥವಾ ಏನು ಬೇಕಾದರೂ ಹೇಳಬಹುದು ಎಂದುಕೊಂಡಿರಬಹುದು ಎಂದು ತೋರುತ್ತದೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ಮೈಸೂರು ರೇಸ್

ಸ್ಪೀಡ್‌ಸ್ಟರ್ ಗೆಲ್ಲುವ ನಿರೀಕ್ಷೆ

ಚಾಮುಂಡಿ ಮಿಲಿಯನ್ 2022 ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಪೀಡ್‌ಸ್ಟರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ನಾಟ್ ಸೋ ನಾಟಿ 8, ಕಂಟ್ರೀಸ್ ಪೇಸ್ 3, ಬಾಕಸ್ 4
2ನೇ ರೇಸ್: ಓ ಕನ್ನಯ್ಯ 3, ಕುಶಾಖ್ 2, ಔರಿಲೆ 1
3ನೇ ರೇಸ್: ಕಿಂಗ್ಸ್ ಕಮಾಂಡ್ 8, ಸ್ವಿಸ್ ಟೈಗ್ರೆಸ್ 3, ಚಿಲ್ಲಿ ಬ್ರೀಝ್ 9
4ನೇ ರೇಸ್: ಓ ಹನ್ಸಿನಿ 1, ಸ್ಮಾರ್ಟ್ ಕ್ಯಾಡಿಲಾಕ್ 11, ಕೋಸ್ಟಲ್ ಕ್ರೂಝ್ 10
5ನೇ ರೇಸ್: ಸ್ಪೀಡ್‌ಸ್ಟರ್ 5, ಮೈ ಒಪಿನಿಯನ್ 1
6ನೇ ರೇಸ್: ಬಯೋಮೆಟ್ರಿಕ್ 1, ಅಮೇಜಿಂಗ್ ಸಫಾರಿ 9, ಲಾರ್ಡ್ ಕಮಾಂಡರ್ 11
7ನೇ ರೇಸ್: ನಾಟಿ ವುಡ್ಸ್ 8, ಗ್ಯಾಮ 9, ಮಿಲಾಸ್ 11

ಉತ್ತಮ ಬೆಟ್: ಓ ಕನ್ನಯ್ಯ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗಾಂಧಿನಗರ ವಿಭಾಗ, ವಾಣೀಜ್ಯ ಸಂಕೀರ್ಣ ಕಟ್ಟಡ, ಮೆಜೆಸ್ಟಿಕ್, ಬೆಂಗಳೂರು – 560 020.

ಸಂಖ್ಯೆ : ಕಾಪಾಅ/ಗಾವಿ/ಇ–ಪ್ರೊಕ್/019/2022–23 ದಿನಾಂಕ : 20.12.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ) (ಕೆಡಬ್ಲ್ಯೂ–4)

ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಇವರು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ	ಕಾಮಗಾರಿ ವಿವರ	ಇಎಂಡಿ ರೂ. ಲಕ್ಷಗಳಲ್ಲಿ
1	ವಾರ್ಡ್ ಸಂಖ್ಯೆ 94 ಶೇಷಾದ್ರಿಪುರಂನ ನೆಹರು ಸ್ಪೋರ್ಟ್ಸ್ ಕ್ಲಬ್‌ಗೆ ಹೈಟೆಕ್ ಜಿಮ್ ಉಪಕರಣಗಳನ್ನು ಒದಗಿಸುವುದು.	1.65
2	ವಾರ್ಡ್ ಸಂಖ್ಯೆ 94 ಶೇಷಾದ್ರಿಪುರಂನ ನೆಹರು ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಬಾಕಿ ಉಳಿದ ಕಾಮಗಾರಿಗಳು.	2.00

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ 26.12.2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ: 30.12.2022 ರ ಸಂಜೆ 4.00 ಗಂಟೆಗೆ. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 02.01.2023 ಸಂಜೆ 4.00 ಗಂಟೆಯವರೆಗೆ. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 04.01.2023 ರ ಮಧ್ಯಾಹ್ನ 12.30 ಗಂಟೆಗೆ. ಹೆಚ್ಚಿನ ಮಾಹಿತಿಗಳನ್ನು ಕೆಳಸಹಿದಾರರ ಕಛೇರಿಯಿಂದ ಅಥವಾ ದೂರವಾಣಿ 080–22441076 ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ.



ಅಷ್ಟಾಧ್ಯಾಯೀ
ಪದಸೃಷ್ಟಿಯ ಮಹಾಯಂತ್ರ

ತಿಲಕ ಎಂ. ರಾವ್

ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಸಂಶೋಧಕರಾಗಿದ್ದ ಋಷಿ ಅತುಲ್ ರಾಜಪೋಪಟ್ ಅವರ ಶೋಧಪ್ರಬಂಧ ಕಳೆದ ಕೆಲವು ದಿನಗಳಿಂದ ವಿಶ್ವದಲ್ಲಿ ಅನೇಕರ ಗಮನವನ್ನು ಸೆಳೆದಿದೆ. ಭಾರತೀಯ ವಿದ್ವಾಂಸರ ವಲಯದಲ್ಲಿ ಈ ಕುರಿತು ಪರ–ವಿರೋಧದ ಚರ್ಚೆಗಳು ನಡೆಯುತ್ತಿವೆ. ಹಾಗಾದರೆ ಈ ಸಂಶೋಧನೆಯ ಮಹತ್ವವೇನು? ಋಷಿ ಅತುಲ್ ರಾಜಪೋಪಟ್ ಯಾವ ಪ್ರಮುಖ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಿಸಿದ್ದಾರೆ? ಅವರು ಕಂಡುಕೊಂಡ ಉತ್ತರ ನಿಜವಾಗಿದ್ದೇ ಆದಲ್ಲಿ, ಅದು 21ನೇ ಶತಮಾನದ ಸಂಶೋಧನೆಗಳನ್ನು ಯಾವ ರೀತಿ ಪ್ರಭಾವಿಸಬಹುದು ಎಂಬುದು ಜಿಜ್ಞಾಸುಗಳಿಗೆ, ತಂತ್ರಜ್ಞಾನ ಕ್ಷೇತ್ರದಲ್ಲಿ ಆಸಕ್ತಿಯುಳ್ಳವರಿಗೆ ಕಾಡುತ್ತಿರುವ ಪ್ರಶ್ನೆ.

‘ಅಷ್ಟಾಧ್ಯಾಯೀ’ ಎಂಬುದು ಪಾಣಿನಿಯು ಸುಮಾರು 2000 ವರ್ಷಗಳಿಗಿಂತ ಹಿಂದೆ ರಚಿಸಿದ ಸಂಸ್ಕೃತ ವ್ಯಾಕರಣದ ಗ್ರಂಥ. ಸರಿಸುಮಾರು 4000 ಸೂತ್ರಗಳಲ್ಲಿ (ಕೆಲವೇ ಶಬ್ದಗಳಲ್ಲಿ ಲಕ್ಷಾಂತರ ಪದಗಳ ಕುರಿತು ಆಲೋಚಿಸಲು ಬರೆದಿರುವ ವಾಕ್ಯವೇ ಸೂತ್ರ) ಸಂಸ್ಕೃತ ಭಾಷೆಯ ಎಲ್ಲಾ ಪದಗಳನ್ನು ನಿರ್ದಿಷ್ಟ ನಿಯಮಗಳಿಗನುಸಾರವಾಗಿ ಗ್ರಹಿಸುವ ಸಾಧ್ಯತೆಯನ್ನು ಅಷ್ಟಾಧ್ಯಾಯಿಯು ತೆರೆದಿಡುತ್ತದೆ. ಸುಮಾರು 2000 ಧಾತುಗಳಿಗೆ (ಪದದ ಮೂಲರೂಪ) ಸುಮಾರು 500 ಪ್ರತ್ಯಯಗಳನ್ನು (ಪದಗಳನ್ನು ಸೃಜಿಸಲು ಧಾತುಗಳಿಗೆ ಸೇರಿಸುವ ಶಬ್ದಗಳು) ಬೇರೆ ಬೇರೆ ಹಂತದಲ್ಲಿ ಸೇರಿಸುವುದರಿಂದ ಲಕ್ಷಾಂತರ ಪದಗಳನ್ನು ಸೃಷ್ಟಿಸುವ ಸಾಧ್ಯತೆಯನ್ನು ಈ ಸೂತ್ರಗಳು ಹುಟ್ಟುಹಾಕುತ್ತವೆ. ಅಷ್ಟೇ ಅಲ್ಲದೇ, ಇಂದು ‘ಪ್ರೋಗ್ರಾಮಿಂಗ್’ ಕ್ಷೇತ್ರದಲ್ಲಿ ಬಳಸಲಾಗುವ ಅನೇಕ ಪರಿಕಲ್ಪನೆಗಳನ್ನು ಅಷ್ಟಾಧ್ಯಾಯಿಯು ಸಾವಿರಾರು ವರ್ಷಗಳ ಹಿಂದೆಯೇ ಬಳಸಿಕೊಂಡಿರುವುದು ಅನೇಕರನ್ನು ವಿಸ್ಮಯಗೊಳಿಸಿದೆ. ಈ ಎಲ್ಲಾ ಮತ್ತು ಇನ್ನಿತರ ಅನೇಕ ಕಾರಣಗಳಿಂದಾಗಿ, ಅಷ್ಟಾಧ್ಯಾಯಿಯು ಸಾವಿರಾರು ವರ್ಷಗಳಿಂದ ಸಾವಿರಾರು ಜಿಜ್ಞಾಸುಗಳಿಗೆ ಆಸಕ್ತಿಯ ವಿಷಯವಾಗಿರುವುದು ಮಾತ್ರವಲ್ಲದೇ, ಇಂದಿಗೂ ಸಂಸ್ಕೃತದ ವ್ಯಾಕರಣವನ್ನು ಅರಿಯಲು ಮತ್ತು ಇತರ ಭಾಷೆಯ ವ್ಯಾಕರಣದ ಕುರಿತು ಆಲೋಚಿಸಲು ಮಾನದಂಡವನ್ನಾಗಿ ಕಾಣಲಾಗುತ್ತದೆ.

ಈಗಾಗಲೇ ಚರ್ಚೆಯಲ್ಲಿರುವ ಋಷಿ ರಾಜಪೋಪಟ್ ಅವರ ಸಂಶೋಧನೆಗೂ ಈ ಅಷ್ಟಾಧ್ಯಾಯಿಯ ಒಂದು ಸೂತ್ರವೇ ವಿಷಯ. ಅಷ್ಟಾಧ್ಯಾಯಿಯ ಭಾಷೆ, ವ್ಯವಹಾರದಲ್ಲಿ ಬಳಸುವ ಭಾಷೆಗಿಂತ ಹೆಚ್ಚಾಗಿ ‘ಪ್ರೋಗ್ರಾಮಿಂಗ್ ಲಾಂಗ್ವೇಜ್’ಗೆ ಹತ್ತಿರವಾಗಿರುವುದರಿಂದ, ಅಷ್ಟಾಧ್ಯಾಯಿಯನ್ನು ಇಂದಿನ ವಿದ್ವಲ್ಲೋಕ ‘ವರ್ಡ್ ಜನರೇಟಿಂಗ್’/‘ಅನಲೈಸಿಂಗ್ ಮೆಷಿನ್’ ಎಂಬಂತೆ ಪರಿಗಣಿಸಿದೆ. ಅಂದರೆ ನಿರ್ದಿಷ್ಟ ಅರ್ಥವನ್ನು ‘ಇನ್‌ಪುಟ್’ ಆಗಿ ಕೊಟ್ಟರೆ, ಆ ಅರ್ಥದಲ್ಲಿ ಪದವನ್ನು ಸೃಜಿಸುವ ಯಂತ್ರವಾಗಿ, ಅಥವಾ ಲೋಕವ್ಯವಹಾರದಲ್ಲಿರುವ ಒಂದು ಪದವನ್ನು ನೀಡಿದರೆ, ಅದರ ಧಾತು-ಪ್ರತ್ಯಯಗಳನ್ನು ಕೊಡುವ ಯಂತ್ರದಂತೆ ಅಷ್ಟಾಧ್ಯಾಯಿಯನ್ನು ಕಲ್ಪಿಸಿಕೊಳ್ಳಬಹುದು. ಆದರೆ ಈ ರೀತಿ ಪದಗಳನ್ನು ಸೃಜಿಸಬೇಕಾದರೆ ಅಥವಾ ನೀಡಿರುವ ಒಂದು ಪದದ ಧಾತುಪ್ರತ್ಯಯಗಳನ್ನು ವಿಭಾಗಿಸಿ ಕೊಡಬೇಕಾದರೆ, ಸೂತ್ರಗಳ ಅನ್ವಯ ಕ್ರಮವನ್ನು ನಿರ್ಣಯಿಸುವ ‘ಅಲ್ಗಾರಿದಮ್’ (ನಿರ್ದಿಷ್ಟ ಕ್ರಮದಲ್ಲಿ ಕೆಲವು ನಿಯಮಗಳನ್ನು ಆಧರಿಸಿ ಸಮಸ್ಯೆಯೊಂದನ್ನು ಪರಿಹರಿಸುವ ಗಣಿತೀಯ ಸೂತ್ರೀಕೃತ ವ್ಯವಸ್ಥೆ) ಬೇಕಾಗುತ್ತದೆ. ಅಂದರೆ ಯಾವ ಸೂತ್ರವನ್ನು ಮೊದಲು ಬಳಸಬೇಕು, ಯಾವುದನ್ನು ತದನಂತರ ಎಂಬುದನ್ನು ನಿರೂಪಿಸುವುದಲ್ಲದೇ, ಅನೇಕ ಸೂತ್ರಗಳ ನಡುವೆ ವಿರೋಧವುಂಟಾದರೆ ಅದನ್ನು ಪರಿಹರಿಸುವ ಕ್ರಮ ಯಾವುದು ಎಂಬುದರ ಕುರಿತು ಕೂಡ ನಿಖರವಾದ ನಿಯಮಗಳು ಬೇಕಾಗುತ್ತವೆ, ಅದಿಲ್ಲದೇ ಇದ್ದಲ್ಲಿ, ಆಗ ‘ವರ್ಡ್ ಜನರೇಟಿಂಗ್’/‘ಅನಲೈಸಿಂಗ್ ಮೆಷಿನ್’ ರೂಪಗಳನ್ನು ಸೃಜಿಸದೇ ಸ್ತಬ್ಧವಾಗುತ್ತದೆ. ಉದಾಹರಣೆಗೆ, ‘ದೇವೈಃ’ (ದೇವರಿಂದ) ಎಂಬ ರೂಪವನ್ನು ಸೃಜಿಸುವ ಸಂದರ್ಭದಲ್ಲಿ, ದೇವಶಬ್ದದಲ್ಲಿರುವ ಅಕಾರಕ್ಕೆ ‘ಏಕಾರ’ ಮತ್ತು ‘ಭಿಃ’ ಎಂಬ ಪ್ರತ್ಯಯದ ಜಾಗದಲ್ಲಿ ’ಐಃ’ ಎಂಬ ಆದೇಶ – ಎರಡೂ ಪ್ರಾಪ್ತವಾದಾಗ, ಮೊದಲು ಯಾವುದನ್ನು ಮಾಡಬೇಕು ಎಂಬ ಪ್ರಶ್ನೆ ಉಂಟಾಗುತ್ತದೆ. ಏಕೆಂದರೆ ಮೊದಲು ‘ಐಃ’ ಎಂಬ ಆದೇಶವನ್ನು ಮಾಡಿದಲ್ಲಿ, ಆಗ ‘ಏಕಾರ’ವನ್ನು ಮಾಡಲು ಸಾಧ್ಯವಿಲ್ಲ. ಅಥವಾ ಮೊದಲು ಮೊದಲು ‘ಏಕಾರ’ವನ್ನು ಮಾಡಿದಲ್ಲಿ ನಂತರ ‘ಐಃ’ ಎಂಬ ಆದೇಶ ಸಾಧ್ಯವಿಲ್ಲ. ಇದು ಸೂತ್ರಗಳ ನಡುವಿನ ವಿರೋಧ. ಇದನ್ನು ಪರಿಹರಿಸದೇ ‘ದೇವೈಃ’ ಎಂಬ ರೂಪವನ್ನು ಸೃಜಿಸಲು ಸಾಧ್ಯವಿಲ್ಲ.

> ಅಷ್ಟಾಧ್ಯಾಯಿಯ ಭಾಷೆಯೂ ವ್ಯವಹಾರದಲ್ಲಿ ಬಳಸುವ ಭಾಷೆಗಿಂತ ಹೆಚ್ಚಾಗಿ ‘ಪ್ರೋಗ್ರಾಮಿಂಗ್ ಲಾಂಗ್ವೇಜ್’ಗೆ ಹತ್ತಿರವಾಗಿರುವುದರಿಂದ, ಅಷ್ಟಾಧ್ಯಾಯಿಯನ್ನು ಇಂದಿನ ವಿದ್ವಲ್ಲೋಕ ’ವರ್ಡ್ ಜನರೇಟಿಂಗ್’/‘ಅನಲೈಸಿಂಗ್ ಮೆಷಿನ್’ ಎಂಬಂತೆ ಪರಿಗಣಿಸಿದೆ...

ಹಾಗಾಗಿ, ಅಷ್ಟಾಧ್ಯಾಯಿಯನ್ನು ಒಂದು ‘ವರ್ಡ್ ಜನರೇಟಿಂಗ್’/‘ಅನಲೈಸಿಂಗ್ ಮೆಷಿನ್’ ಎಂದು ಭಾವಿಸುವುದಾದರೆ, ಅದು ಸರಿಯಾಗಿ ಕಾರ್ಯವನ್ನು ನಿರ್ವಹಿಸಲು ಸೂತ್ರಗಳ ವಿರೋಧದ ಸಂದರ್ಭದಲ್ಲಿ ಕ್ರಮವನ್ನು ನಿರ್ಣಯಿಸುವ ನಿಖರವಾದ ‘ಅಲ್ಗಾರಿದಮ್’ ಕೂಡ ಅತ್ಯವಶ್ಯಕ. ಹಾಗಾದರೆ ಅಷ್ಟಾಧ್ಯಾಯಿಯ ಸೂತ್ರಗಳ ವಿರೋಧದ ಸಂದರ್ಭದಲ್ಲಿ ಕ್ರಮವನ್ನು ನಿರ್ಣಯಿಸುವ ’ಅಲ್ಗಾರಿದಮ್’ ಅಷ್ಟಾಧ್ಯಾಯಿಯಲ್ಲಿಯೇ ಇದೆಯೇ ಅಥವಾ ಇದನ್ನು ನಂತರ ಬಂದ ಅಷ್ಟಾಧ್ಯಾಯಿಯ ವ್ಯಾಖ್ಯಾನಾದಿಗಳಿಂದ ಕಂಡುಕೊಳ್ಳಬೇಕಾಗುತ್ತದೆಯೇ ಎಂಬುದು ಋಷಿ ರಾಜಪೋಪಟ್ ಅವರ ಶೋಧಪ್ರಶ್ನೆ. ಈ ಸಂಶೋಧನೆಯಲ್ಲಿ ಅವರು ಕಂಡುಕೊಂಡ ಉತ್ತರವೆಂದರೆ, ಅಷ್ಟಾಧ್ಯಾಯಿಯು ಒಂದು ‘ಸೆಲ್ಫ್-ಸಫಿಷಿಯೆಂಟ್ ವರ್ಡ್ ಜನರೇಟಿಂಗ್’/‘ಅನಲೈಸಿಂಗ್ ಮೆಷಿನ್’ ಆಗಿದ್ದು, ಅಷ್ಟಾಧ್ಯಾಯಿಯಲ್ಲಿರುವ ಕೇವಲ ಒಂದು ಸೂತ್ರದಿಂದ ನಿಖರವಾದ ‘ಅಲ್ಗಾರಿದಮ್’ ಅನ್ನು ಕಂಡುಕೊಳ್ಳಬಹುದು ಎಂಬುದು. ಆದರೆ ಈ ಸೂತ್ರ ಎರಡು ಸಾವಿರ ವರ್ಷಗಳಿಂದ ಇದೇ ಅಷ್ಟಾಧ್ಯಾಯಿಯಲ್ಲಿರುವುದರಿಂದ, ಈ ವಿಷಯ ಈ ಮುಂಚೆ ತಿಳಿದಿರಲಿಲ್ಲವೇ? ಈ ಸಂಶೋಧನೆಯ ಹೊಸತನವೇನು? ಹೀಗೆಂದು ಕೇಳುವುದಾದರೆ, ಈವರೆಗಿನ ಚರ್ಚೆಗಳಲ್ಲಿ ಸೂತ್ರಗಳ ವಿರೋಧದ ಸಂದರ್ಭದಲ್ಲಿ ಕ್ರಮವನ್ನು ನಿರ್ಣಯಿಸುವ ‘ಅಲ್ಗಾರಿದಮ್’ಗೆ ಸಂಬಂಧಿಸಿ ಅಷ್ಟಾಧ್ಯಾಯಿಯು ‘ಸೆಲ್ಫ್-ಸಫಿಷಿಯೆಂಟ್ ವರ್ಡ್ ಜನರೇಟಿಂಗ್’/‘ಅನಲೈಸಿಂಗ್ ಮೆಷಿನ್’ ಎಂಬುದರ ಕುರಿತು ಹೊಳಹುಗಳಿದ್ದರೂ, ನಿಖರವಾಗಿ ಈ ರೀತಿ ಗುರುತಿಸಿರಲಿಲ್ಲ. ಅಂದರೆ ಸೂತ್ರಗಳ ಕ್ರಮವನ್ನು ನಿರ್ಣಯಿಸುವ ’ಅಲ್ಗಾರಿದಮ್’, ಅಷ್ಟಾಧ್ಯಾಯಿಯಲ್ಲಿ ನಿಖರವಾಗಿ ಇಲ್ಲವೆಂದು ಭಾವಿಸಿ, ನಂತರದ ಗ್ರಂಥಗಳಲ್ಲಿ ಹೇಳಲಾದ ಅನೇಕ ‘ಮೆಟಾರೂಲ್’(ಪರಿಭಾಷಾ) ಗಳಿಂದ ಅದನ್ನು ನಿರ್ಣಯಿಸಬೇಕಾಗುತ್ತದೆ ಎಂಬುದು ಈ ವರೆಗಿನ ಚರ್ಚೆಯಾಗಿತ್ತು. ಆದರೆ ಅಷ್ಟಾಧ್ಯಾಯಿಯಲ್ಲಿಯೇ ನಿಖರವಾದ ‘ಅಲ್ಗಾರಿದಮ್’ ಇದ್ದು ಅದನ್ನು ಬಳಸಿಕೊಂಡಲ್ಲಿ ಹೆಚ್ಚು ಸರಳವಾಗಿ ‘ವರ್ಡ್ ಜನರೇಟಿಂಗ್’/‘ಅನಲೈಸಿಂಗ್ ಮೆಷಿನ್’ ಕಾರ್ಯನಿರ್ವಹಿಸುವ ಸಾಧ್ಯತೆ ಇದೆ ಎಂಬುದು ಅವರ ಸಂಶೋಧನೆಯಾಗಿದೆ.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ‘ಕಂಪ್ಯೂಟರ್ ಪ್ರೋಗ್ರಾಮಿಂಗ್’ ಎಂಬುದು ಹೊಸ ಜ್ಞಾನಕ್ಷೇತ್ರವಾದ್ದರಿಂದ, ಈ ರೀತಿಯ ಪ್ರಶ್ನೆಯು ಹಿಂದಿನವರ ಗಮನವನ್ನು ಈವರೆಗೆ ವಿಶೇಷವಾಗಿ ಸೆಳೆದಿರಲಿಲ್ಲ. ಇಂದು ಇತರ ಜ್ಞಾನಕ್ಷೇತ್ರದ ಬೆಳವಣಿಗೆಯು ಅಷ್ಟಾಧ್ಯಾಯಿಯನ್ನು ಗ್ರಹಿಸುವ ಕುರಿತು ಹೊಸ ಪ್ರಶ್ನೆಗಳನ್ನು ಎತ್ತಿದೆ. ಈ ಹಿನ್ನೆಲೆಯಲ್ಲಿ ರಾಜಪೋಪಟ್ ಸಂಶೋಧನೆಗೆ ಸ್ವೀಕರಿಸಿರುವ ಪ್ರಶ್ನೆಗೆ ಹಾಗೂ ಅವರು ಕಂಡುಕೊಂಡಿರುವ ಉತ್ತರಕ್ಕೆ ಮಹತ್ವ ದೊರಕಿದೆ. ಮಾತ್ರವಲ್ಲ, ಎರಡು ಸಾವಿರ ವರ್ಷಗಳ ಬಳಿಕವೂ ಇಂದಿನ ಜ್ಞಾನಕ್ಷೇತ್ರಗಳು ಎತ್ತುತ್ತಿರುವ ಪ್ರಶ್ನೆಗಳಿಗೆ ಅಷ್ಟಾಧ್ಯಾಯಿಯಲ್ಲಿರುವ ಸೂತ್ರಗಳು, ಇಂದಿಗೂ ನಿಖರವಾದ ಉತ್ತರವನ್ನು ಕೊಡಬಲ್ಲದು ಎಂದಾದಲ್ಲಿ ಸಾವಿರಾರು ವರ್ಷಗಳ ಹಿಂದೆ ಭಾರತೀಯರು ಜ್ಞಾನಕ್ಷೇತ್ರದಲ್ಲಿ ಮಾಡಿದ ಸಾಧನೆಯ ಕಾಲೌಚಿತ್ಯವು ನಮಗೆ ಅಚ್ಚರಿಯನ್ನು ಉಂಟುಮಾಡದೇ ಇರದು. ಅಲ್ಲದೇ, ಹೊಸ ಪ್ರಶ್ನೆಗಳಿಗೆ ನಿಖರವಾದ ಉತ್ತರವನ್ನು ಅಷ್ಟಾಧ್ಯಾಯಿಯು ಕೊಟ್ಟಲ್ಲಿ, ಅದರಿಂದ ವ್ಯಾಖ್ಯಾನಪರಂಪರೆಯು ಅಪ್ರಸ್ತುತವೆಂದಾಗುವುದಿಲ್ಲ. ಆದರೆ ಋಷಿ ರಾಜಪೋಪಟ್ ಸಂಶೋಧನೆ ಎಷ್ಟರ ಮಟ್ಟಿಗೆ ಅಷ್ಟಾಧ್ಯಾಯಿಯ ಸೂತ್ರಗಳ ನಡುವಿನ ವಿರೋಧಗಳನ್ನು ಪರಿಹರಿಸಬಲ್ಲದು ಎಂಬುದರ ಬಗ್ಗೆ ಅನೇಕ ಸಾಂಪ್ರದಾಯಿಕ ವಿದ್ವಾಂಸರಿಗೆ ಪ್ರಶ್ನೆಗಳೂ ಇವೆ. ಪರ-ವಿರೋಧದ ಚರ್ಚೆಗಳೂ ನಡೆಯುತ್ತಿವೆ. ಸ್ಪಷ್ಟವಾದ ಉತ್ತರಕ್ಕಾಗಿ ಕಾದುನೋಡಬೇಕಾಗಿದೆ. ❖

ಇದು ಪ್ಲಾಸ್ಟಿಕ್ ಮಳೆಗಾಲ!

ಉದಯ ಶಂಕರ ಪುರಾಣಿಕ

ಪ್ರತಿವರ್ಷ ಉಪಯೋಗಿಸಿ ಬಿಸಾಡಿದ 30 ಲಕ್ಷ ಪ್ಲಾಸ್ಟಿಕ್ ಬಾಟಲಿಗಳು ಮಳೆಯಂತೆ ನಿಮ್ಮ ಊರಿನ ಮೇಲೆ ಬೀಳುತ್ತಿದೆ – ಎಂದು ನ್ಯೂಜಿಲೆಂಡಿನ ವಿಜ್ಞಾನಿಗಳು, ಅಕ್ಲಾಂಡ್ ನಗರವಾಸಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಇದೇನಿದು ಪ್ಲಾಸ್ಟಿಕ್ ಬಾಟಲಿಗಳ ಮಳೆ? ಹೇಗೆ ಸಾಧ್ಯ? ಇಂಥ ಪ್ರಶ್ನೆಗಳಿಗೆ ಈ ವಿಜ್ಞಾನಿಗಳು ವಾತಾವರಣವನ್ನು ಕಲುಷಿತಗೊಳಿಸುತ್ತಿರುವ ಮೈಕ್ರೋಪ್ಲಾಸ್ಟಿಕ್ ತ್ಯಾಜ್ಯ ಕುರಿತು ನಡೆಸಿರುವ ಅಧ್ಯಯನದಲ್ಲಿ ಉತ್ತರ ದೊರೆಯುತ್ತದೆ.

ಕಳೆದ 70 ವರ್ಷಗಳಲ್ಲಿ ಜಗತ್ತಿನಲ್ಲಿ 830 ಕೋಟಿ ಟನ್ ಪ್ಲಾಸ್ಟಿಕ್ ಉತ್ಪಾದನೆಯಾಗಿದೆ. ಆದರೆ ಇದರಲ್ಲಿ ಶೇ 9ರಷ್ಟು ಮಾತ್ರ ಮರುಬಳಕೆಯಾಗಿದೆ. ಉಳಿದಿದ್ದು ತ್ಯಾಜ್ಯವೆಂದು ಸುಡುವುದು ಅಥವಾ ಅವೈಜ್ಞಾನಿಕವಾಗಿ ನೆಲ–ಜಲಪ್ರದೇಶಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ಕಾಲಕ್ರಮೇಣ ಇಂತಹ ಪ್ಲಾಸ್ಟಿಕ್ ತ್ಯಾಜ್ಯ ಮೈಕ್ರೋಪ್ಲಾಸ್ಟಿಕ್ ಅಗಿ ಪರಿವರ್ತನೆಯಾಗುತ್ತದೆ ಮತ್ತು ನದಿ–ಸಾಗರಗಳ ಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಬೀಸುವ ಗಾಳಿಯಲ್ಲಿ ಬಹಳ ದೂರದವರೆಗೆ ಹರಡುವ ಈ ಮೈಕ್ರೋಪ್ಲಾಸ್ಟಿಕ್‌ಗಳು ಪರಿಸರಕ್ಕೆ ಅಪಾರ ಹಾನಿಯನ್ನುಂಟುಮಾಡುತ್ತಿವೆ.

ಇದಲ್ಲದೆ ನೈಲಾನ್, ಪಾಲಿಯಸ್ಟರ್‌ನಂತಹ ಸಿಂಥೆಟಿಕ್ ಬಟ್ಟೆಗಳನ್ನು ಒಗೆಯುವಾಗ, ವಾಹನಗಳು ಸಂಚರಿಸುವಾಗ ಟೈಯರ್‌ಗಳು ರಸ್ತೆಗೆ ಉಜ್ಜುವಾಗ – ಹೀಗೆ ಅನೇಕ ರೀತಿಯಲ್ಲಿ ಬಿಡುಗಡೆಯಾಗುವ ಮೈಕ್ರೋಪ್ಲಾಸ್ಟಿಕ್ ಕೂಡ ಪರಿಸರಕ್ಕೆ ಹಾನಿಯನ್ನುಂಟುಮಾಡುತ್ತಿದೆ.

ಅಕ್ಲಾಂಡ್ ನಗರದಲ್ಲಿ ಗಾಳಿಯಲ್ಲಿ ಸೇರಿರುವ 0.01 ಮಿಲಿಮೀಟರ್‌ನಷ್ಟು ಚಿಕ್ಕದಾದ ಮೈಕ್ರೋಪ್ಲಾಸ್ಟಿಕ್ ಕಣಗಳನ್ನು ಗುರುತಿಸಿ, ಲೆಕ್ಕ ಮಾಡಲು ವಿಜ್ಞಾನಿಗಳು ಅತ್ಯಾಧುನಿಕ ಸಂಗ್ರಹಣೆ ಮತ್ತು ವಿಶ್ಲೇಷಣೆ ವಿಧಾನಗಳನ್ನು ಬಳಸಿದರು. ನಗರದ ಹಲವಾರು ಕಡೆ ಹೀಗೆ ಸಂಗ್ರಹಿಸಿದ ಮೈಕ್ರೋಪ್ಲಾಸ್ಟಿಕ್ ಕಣಗಳನ್ನು ವಿಶ್ಲೇಷಣೆ ಮಾಡಿ, ಲೆಕ್ಕ ಮಾಡಿದಾಗ, ಪ್ರತಿ ಒಂದು ಚದರ ಮೀಟರ್ ಪ್ರದೇಶದಲ್ಲಿರುವ ವಾತಾವರಣದಲ್ಲಿ 4,885 ಮೈಕ್ರೋಪ್ಲಾಸ್ಟಿಕ್ ಕಣಗಳಿರುವುದು ಪತ್ತೆಯಾಗಿದೆ. ಇನ್ನು ಒಂದು ಚದರ ಮೀಟರ್ ಪ್ರದೇಶದಲ್ಲಿರುವ ವಾತಾವರಣದಲ್ಲಿ ಪ್ಯಾಕಿಂಗ್ ಮೊದಲಾದ ಉತ್ಪನ್ನಗಳಲ್ಲಿ ಬಳಸಲಾಗುವ ಪಾಲಿಸ್ಟೈರೀನ್ (ಥರ್ಮೋಕೂಲ್), ಪಾಲಿಎಥಿಲೀನ್ ಹಾಗೂ ಪಿಇಟಿ ಮೈಕ್ರೋ ಪ್ಲಾಸ್ಟಿಕ್ ಕಣಗಳಂತೆ, ವಿದ್ಯುತ್ ಮತ್ತು ವಿದ್ಯುನ್ಮಾನ ಉಪಕರಣಗಳಲ್ಲಿ ಹೆಚ್ಚಾಗಿ ಬಳಸುವ ಪಾಲಿಕಾರ್ಬನೇಟ್‌ನ ಮೈಕ್ರೋಪ್ಲಾಸ್ಟಿಕ್, ಪಿವಿಸಿ ಹಾಗೂ ರೆಸಿನ್ ತ್ಯಾಜ್ಯದ ಮೈಕ್ರೋಪ್ಲಾಸ್ಟಿಕ್ ಮುಂತಾದವುಗಳ ಕಣಗಳು ಪತ್ತೆಯಾಗಿವೆ.

ಅಕ್ಲಾಂಡ್ ನಗರವೊಂದರ ಮೇಲೆ ಪ್ರತಿವರ್ಷ 74 ಮೆಟ್ರಿಕ್ ಟನ್‌ಗಳಷ್ಟು ಮೈಕ್ರೋಪ್ಲಾಸ್ಟಿಕ್ ಕಣಗಳು ಮಳೆಯಂತೆ ಸುರಿಯುತ್ತಿವೆ. ಇದು 30 ಲಕ್ಷ ಪ್ಲಾಸ್ಟಿಕ್ ಬಾಟಲಿಗಳಿಗೆ ಸಮವಾಗುತ್ತದೆ – ಎಂದು ವಿಜ್ಞಾನಿಗಳು ಆತಂಕ ವ್ಯಕ್ತ ಪಡಿಸಿದ್ದಾರೆ. ಅಕ್ಲಾಂಡ್ ನಗರದಲ್ಲಿ ಅಕ್ಲಾಂಡ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ನಡೆಸಿದ ಅಧ್ಯಯನದಂತೆ ಜಗತ್ತಿನಾದ್ಯಂತ ಅಧ್ಯಯನ ನಡೆದಾಗ, ನಮ್ಮ-ನಿಮ್ಮ ಊರಿನ ಮೇಲೆ ಎಷ್ಟು ಟನ್‌ಗಳಷ್ಟು ಮೈಕ್ರೋಪ್ಲಾಸ್ಟಿಕ್ ಮಳೆಯಾಗುತ್ತಿದೆ; ಗಾಳಿ, ನೆಲ, ಜಲದ ಮಾಲಿನ್ಯಕ್ಕೆ ಕಾರಣವಾಗುತ್ತಿದೆ ಎಂದು ಹೆಚ್ಚು ನಿಖರವಾಗಿ ಗೊತ್ತಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ಭಾರತದಲ್ಲಿ ‘ನಮಾಮಿ ಗಂಗೆ’ಯಂತಹ ಬೃಹತ್ ನದಿ ಶುದ್ಧೀಕರಣ ಯೋಜನೆಗಳು ನಡೆಯಬೇಕು. ಮಹಾನಗರಗಳಲ್ಲಿ ವಾಹನ ಮತ್ತು ಉದ್ಯಮಗಳಿಂದಾಗುವ ವಾಯುಮಾಲಿನ್ಯದ ನಿಯಂತ್ರಣ ಆಗಬೇಕು. ನೆಲ, ಜಲ ಮತ್ತು ಗಾಳಿಯಲ್ಲಿನ ಮೈಕ್ರೋಪ್ಲಾಸ್ಟಿಕ್ ಕಣಗಳ ಪ್ರಮಾಣ ಕಡಿಮೆ ಮಾಡಲು ಕಠಿಣ ಕ್ರಮ ಕೈಗೊಳ್ಳುವುದು ಅಗತ್ಯವಿದೆ.

ಬರಿಗಣ್ಣಿಗೆ ಕಾಣಿಸದಷ್ಟು ಸೂಕ್ಷ್ಮವಾಗಿರುವ ಮೈಕ್ರೋಪ್ಲಾಸ್ಟಿಕ್ ಕಣಗಳು ಮನುಷ್ಯನ ಆರೋಗ್ಯಕ್ಕೆ ಮಾರಕವಾಗಿವೆ. ನಾವು ಉಸಿರಾಡುವ ಗಾಳಿಯ ಮೂಲಕ ದೇಹವನ್ನು ಪ್ರವೇಶಿಸುವ ಮೈಕ್ರೋಪ್ಲಾಸ್ಟಿಕ್‌ಗಳ ಕಣಗಳು ಮನುಷ್ಯನ ಶ್ವಾಸಕೋಶದಲ್ಲಿ ಸೇರಿರುವುದನ್ನು ಪತ್ತೆ ಮಾಡಿದ್ದಾರೆ. ಕೆಲವು ಕ್ಯಾನ್ಸರ್ ರೋಗಿಗಳ ಶ್ವಾಸಕೋಶಗಳಲ್ಲಿ ಕೂಡ ಇಂತಹ ಮೈಕ್ರೋಪ್ಲಾಸ್ಟಿಕ್ ಕಣಗಳು ಪತ್ತೆಯಾಗಿವೆ. ಮನುಷ್ಯನ ಮೆದುಳು, ಯಕೃತ್ತು, ಶ್ವಾಸಕೋಶ, ವೃಷಣಗಳು ಮತ್ತು ಕರುಳಬಳ್ಳಿ ಹಾಗೂ ತಾಯಿಯ ಎದೆಹಾಲಿನಲ್ಲಿ ಕೂಡ ಮೈಕ್ರೋಪ್ಲಾಸ್ಟಿಕ್ ಕಣಗಳು ಪತ್ತೆಯಾಗಿರುವುದು ವಿಜ್ಞಾನಿಗಳಲ್ಲಿ ಹಾಗೂ ವೈದ್ಯರಲ್ಲಿ ಆತಂಕವನ್ನುಂಟುಮಾಡಿದೆ. ಮಕ್ಕಳು ಮತ್ತು ಹಿರಿಯರ ಆರೋಗ್ಯದ ಮೇಲೆ ಮೈಕ್ರೋಪ್ಲಾಸ್ಟಿಕ್ ಕಣಗಳಿಂದ ಅಗುವ ಪರಿಣಾಮಗಳ ಕುರಿತು ಅನೇಕ ಅಧ್ಯಯನ ವರದಿಗಳು ಪ್ರಕಟವಾಗಿವೆ. ಮೈಕ್ರೋಪ್ಲಾಸ್ಟಿಕ್ ಕಣಗಳು ಮತ್ತು ನ್ಯಾನೋಪ್ಲಾಸ್ಟಿಕ್ ಕಣಗಳು ಮನುಷ್ಯನ ಆರೋಗ್ಯಕ್ಕೆ ಹೆಚ್ಚು ಮಾರಕವಾಗಿವೆ ಎಂದು ಈ ವರದಿಗಳು ತಿಳಿಸುತ್ತವೆ.

ಪರಿಸರ ಮತ್ತು ಅರೋಗ್ಯಕ್ಕೆ ಮಾರಕವಾದ ಪ್ಲಾಸ್ಟಿಕ್‌ಗಳ ಬಳಕೆಯನ್ನು ಬಿಟ್ಟು, ಪರಿಸರಸ್ನೇಹಿ ವಸ್ತುಗಳನ್ನು ಬಳಸಲು ಜನಸಾಮಾನ್ಯರು ಮುಂದಾಗಬೇಕು. ಪ್ಲಾಸ್ಟಿಕ್ ತ್ಯಾಜ್ಯದ ಮರುಬಳಕೆಯ ಪ್ರಮಾಣ ಹೆಚ್ಚಾಗಬೇಕು. ಪ್ಲಾಸ್ಟಿಕ್ ತ್ಯಾಜ್ಯದ ವೈಜ್ಞಾನಿಕ ನಿರ್ವಹಣೆ ವ್ಯವಸ್ಥೆ ದೇಶದಾದ್ಯಂತ ಜಾರಿಗೆ ಬರಬೇಕು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಎಸ್ಸೆಸ್ಸೆಲ್ಸಿ

11) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಭಾರತದಲ್ಲಿ ಅರಣ್ಯ ಹೊಂದಿರುವ ಪ್ರದೇಶದಲ್ಲಿ ಕರ್ನಾಟಕದ ಸ್ಥಾನ ಯಾವುದು?
ಎ) 23 ಬಿ) 13
ಸಿ) 26 ಡಿ) 17

ಉತ್ತರ:- (ಬಿ) 13

2) ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನ ಯಾವುದು?
ಎ) ಕಾಜಿರಂಗ ನ್ಯಾಷನಲ್ ಪಾರ್ಕ್- ಅಸ್ಸಾಂ.
ಬಿ) ಹಜಾರಿಭಾಗ ನ್ಯಾಷನಲ್ ಪಾರ್ಕ್- ಬಿಹಾರ.
ಸಿ) ಗಿರ್ ನ್ಯಾಷನಲ್ ಪಾರ್ಕ್ ಗುಜರಾತ್.
ಡಿ) ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನ- ಉತ್ತರಾಂಚಲ

ಉತ್ತರ:-(ಡಿ)ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನ-ಉತ್ತರಾಂಚಲ

3). ....ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟಮೊದಲ ಮಹಿಳಾ ಅಧ್ಯಕ್ಷೆ ಆಗಿದ್ದರು.
ಎ) ಸರೋಜಿನಿ ನಾಯ್ಡು ಬಿ)ವಿಜಯಲಕ್ಷ್ಮಿ ಪಂಡಿತ್
ಸಿ) ಲಕ್ಷ್ಮಿ ಸೆಹಗಲ್ ಡಿ) ಅನಿಬೆಸೆಂಟ್

ಉತ್ತರ:- (ಡಿ) ಅನಿಬೆಸೆಂಟ್

4) ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿಯೂ ಶಿಕ್ಷಣ ಶುಲ್ಕವನ್ನು ರದ್ದು ಮಾಡಲಾಯಿತು. ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ಸಿಕ್ಕಿತು. ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಲಾಯಿತು,. ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವವರಿಗೆ ವಿದ್ಯಾರ್ಥಿ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು 1905ರಲ್ಲಿ ಟಾಟಾರವರ ಬೆಂಬಲದಿಂದ ಸ್ಥಾಪಿಸಲಾಯಿತು.
ಮೇಲಿನ ಟಿಪ್ಪಣಿ ಯಾರಿಗೆ ಸರಿಹೊಂದುತ್ತದೆ?
ಎ) ನಾಲ್ವಡಿ ಕೃಷ್ಣರಾಜ ಒಡೆಯರು
ಬಿ) ಜಯಚಾಮರಾಜ ಒಡೆಯರ್
ಸಿ) ರಾಜ ಒಡೆಯರ್
ಡಿ) ಮೇಲಿನ ಯಾರೂಅಲ್ಲ

ಉತ್ತರ:- ಎ

5) ಭಾರತದಲ್ಲಿ ಮೊದಲ ವೈಸರಾಯ್ ಆಗಿ ನೇಮಕವಾದವರು ಯಾರು?
ಎ) ಲಾರ್ಡ್ ಕ್ಯಾನಿಂಗ್ ಬಿ) ಲಾರ್ಡ್ ಮಿಂಟೊ
ಸಿ) ಲಾರ್ಡ್ ವಾರನ್ ಹೇಸ್ಟಿಂಗ್
ಡಿ) ಲಾರ್ಡ್ ಮೆಟ್ಕಾಫ್ ಡಿ) ಮೌಂಟ್ ಬ್ಯಾಟನ್

ಉತ್ತರ:-(ಎ) ಲಾರ್ಡ್ ಕ್ಯಾನಿಂಗ್

9) ಭಾರತದಲ್ಲಿ ಮೊಟ್ಟಮೊದಲು ಆಧುನಿಕ ಯೋಜನೆಯ ಬಗ್ಗೆ ಚಿಂತಿಸಿ ಅದರ ಬಗ್ಗೆ ಪುಸ್ತಕವೊಂದನ್ನು ಬರೆದವರು ಯಾರು?
ಎ) ಡಾ. ಎಂ. ಎಸ್. ಸ್ವಾಮಿನಾಥನ್
ಬಿ) ಜವಾಹರ್ ಲಾಲ್ ನೆಹರೂ
ಸಿ) ಇಂದಿರಾ ಗಾಂಧಿ
ಡಿ) ಸರ್ ಎಂ. ವಿಶ್ವೇಶ್ವರಯ್ಯನವರು.

ಉತ್ತರ:- ಡಿ

ತಿದ್ದುಪಡಿ
ಗಮನಿಸಿ:– ನಿನ್ನೆಯ ಸಂಚಿಕೆಯಲ್ಲಿ ಪ್ರಕಟಿತ ಪ್ರಶ್ನೆ ಸಂಖ್ಯೆ 28ರ ಪರಿಹಾರದಲ್ಲಿ “ಒಂದು ನಿರ್ದಿಷ್ಟ ದಿನದಲ್ಲಿ ಪ್ರತಿ ಮಡಿಕೆಯ ಉತ್ಪಾದನಾ ವೆಚ್ಚ= $x(2x+3)$” ಎಂದು ಬದಲಾಯಿಸಿಕೊಳ್ಳುವುದು (ಅದೂ ಉತ್ಪಾದನಾ ವೆಚ್ಚ= $x(2x-3)$ಎಂದು ಇತ್ತು)

12) ಹೊಂದಿಸಿ ಬರೆಯಿರಿ:-

ಪಟ್ಟಿ-1	ಪಟ್ಟಿ-2
(1). ನೀಲಿ ಕ್ರಾಂತಿ	ಎ) ಮೀನುಗಳ ಉತ್ಪಾದನೆ
(2). ಹಳದಿ ಕ್ರಾಂತಿ	ಬಿ) ಎಣ್ಣೆ ಬೀಜಗಳ ಉತ್ಪಾದನೆ
(3) ಬಿಳಿ ಕ್ರಾಂತಿ	ಸಿ) ಹಾಲು ಉತ್ಪಾದನೆ
(4). ಬೆಳ್ಳಿ ಕ್ರಾಂತಿ	ಡಿ) ಮಾಂಸದ ಉತ್ಪಾದನೆ
(5). ಬಂಗಾರ ಕ್ರಾಂತಿ	ಇ) ಹಣ್ಣು/ಹೂಗಳ ಉತ್ಪಾದನೆ
(6). ಕೆಂಪು ಕ್ರಾಂತಿ	ಎಫ್) ಮೊಟ್ಟೆಗಳ ಉತ್ಪಾದನೆ

ಉತ್ತರ:- 1)ಎ 2)ಬಿ 3-ಸಿ 4-ಎಫ್ 5-ಇ 6-ಡಿ

13) ಹಸಿರು ಕ್ರಾಂತಿ ಎಂದರೇನು?

ಉತ್ತರ:-. 1967-70ರ ಅವಧಿಯಲ್ಲಿ ಭಾರತದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಆದಂತಹ ಶೀಘ್ರ ಪ್ರಗತಿಯನ್ನು ‘ಹಸಿರು ಕ್ರಾಂತಿ’ ಎಂದು ಗುರುತಿಸಲಾಗುತ್ತಿದೆ. 1967ರಲ್ಲಿ 74 ದಶಲಕ್ಷ ಟನ್ನುಗಳಷ್ಟಿದ್ದ ಆಹಾರ ಧಾನ್ಯಗಳ ಉತ್ಪಾದನೆಯು 1970ರ ವೇಳೆಗೆ 108ದಶಲಕ್ಷ ಟನ್‌ಗಳಿಗೆ ಹೆಚ್ಚಿತ್ತು. ಕೇವಲ 3 ವರ್ಷಗಳ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಅಗಾಧ ಪ್ರಮಾಣದಲ್ಲಿ ಹೆಚ್ಚಳವಾಯಿತು. ಇದು ಹಸಿರು ಬೆಳೆಗಳಲ್ಲಾದ ಪ್ರಗತಿಯಾದುದರಿಂದ ಇದಕ್ಕೆ ಹಸಿರು ಕ್ರಾಂತಿ ಎಂದು ಹೆಸರಿಸಲಾಯಿತು.

14) ಮಣ್ಣಿನ ಸವೆತದ ಕೆಟ್ಟ ಪರಿಣಾಮಗಳು ಯಾವುವು?

ಉತ್ತರ:- ಮಣ್ಣಿನ ಸವೆತವು ಅನೇಕ ಸಮಸ್ಯೆಗಳಿಗೆ ಕಾರಣವಾಗುವುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ,
1) ನದಿಗಳಲ್ಲಿ ಹೂಳು ತುಂಬಿ ಪ್ರವಾಹ ಉಂಟಾಗುತ್ತದೆ.
2) ನದಿಗಳಲ್ಲಿ ಹೂಳು ತುಂಬುವುದರಿಂದ ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತವೆ.
3) ಜಲಾಶಯ ಮತ್ತು ಕೆರೆಗಳಲ್ಲಿ ಹೂಳು ತುಂಬುವುದರಿಂದ ಅವುಗಳಲ್ಲಿ ನೀರು ಸಂಗ್ರಹಿಸುವ ಸಾಮರ್ಥ್ಯ ಕಡಿಮೆಯಾಗುತ್ತದೆ.
4) ಭೂಸವೆತದಿಂದ ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗುವುದು. ಇದರಿಂದ ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ. ಭಾರತವು ವ್ಯವಸಾಯ ಪ್ರಧಾನವಾದ ರಾಷ್ಟ್ರ ಇದರಿಂದ ಭೂ ಸವೆತ ವ್ಯವಸಾಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುವುದು. ಆದುದರಿಂದ ಫಲವತ್ತತೆ ಹಾಗೂ ಉತ್ಪಾದನೆಯನ್ನು ಕಾಪಾಡಲು ಮಣ್ಣಿನ ಸವೆತವನ್ನು ತಡೆಗಟ್ಟುವುದು ಅಗತ್ಯವಾಗಿದೆ.

15) ಭಾರತೀಯ ರಾಜ್ಯಗಳನ್ನು ನಿಯಂತ್ರಿಸಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯು ಹೇಗೆ ನೆರವಾಯಿತು?

ಉತ್ತರ:- ಸಹಾಯಕ ಸೈನ್ಯ ಪದ್ಧತಿಯ ಪ್ರಕಾರ
1. ಭಾರತೀಯ ರಾಜನು ಬ್ರಿಟಿಷ್ ಸೈನಿಕ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
2. ಸೇನೆಯ ವೇತನ ಮತ್ತು ನಿರ್ವಹಣೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೇ ಭರಿಸಬೇಕು. ಇಲ್ಲವೆ ನಿರ್ದಿಷ್ಟ ಕಂದಾಯ ಪ್ರದೇಶವನ್ನು ಬಿಟ್ಟುಕೊಡಬೇಕು.
3. ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನನ್ನು ನೇಮಿಸಿಕೊಳ್ಳಬೇಕು.
4. ಬ್ರಿಟಿಷರ ಅನುಮತಿ ಇಲ್ಲದೆ ಆಸ್ಥಾನದಲ್ಲಿ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ
5. ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್‌ನ ಸಮ್ಮತಿ ಬೇಕು.
ಈ ಮೊದಲಾದ ಷರತ್ತನ್ನು ಬ್ರಿಟಿಷರು ಭಾರತೀಯ ರಾಜರ ಮೇಲೆ ಹಾಕುವ ಮೂಲಕ ಭಾರತೀಯ ಸಂಸ್ಥಾನಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡರು

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನದಾರಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಗಣಿತ

ಪ್ರಜಾವಾಣಿ ನೋಡಿಯೊ
ಪಿಯುಸಿ ಭೌತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ದ್ವಿತೀಯ ಪಿಯುಸಿ : ಗಣಿತ ಶಾಸ್ತ್ರ ಮಾದರಿ ಪ್ರಶ್ನೆಗಳು

ಪಿಯುಸಿ

22) **(1, 2) ಬಿಂದುವಿನ ಮೂಲಕ ಹಾದು ಹೋಗುವ, $x2 = 4y$ ವಕ್ರರೇಖೆಯ ಲಂಬದ ಸಮೀಕರಣವನ್ನು ಕಂಡುಹಿಡಿಯಿರಿ.**

ಪರಿಹಾರ: $x2 = 4y$ ಅನ್ನು x ಗೆ ಅನುಗುಣವಾಗಿ ನಿಷ್ಪನ್ನ ಮಾಡಿದರೆ

$$\frac{dy^2}{dx} = \frac{x}{2}$$

$x^2 = 4y$ ವಕ್ರರೇಖೆಯ ಲಂಬದ ಸ್ಪರ್ಶಕ ಬಿಂದುವು (h, k) ಆಗಿರಲಿ. ಆದ್ದರಿಂದ (h, k) ಬಿಂದುವಿನಲ್ಲಿ ಸ್ಪರ್ಶಕದ ಓಟವು (slope)

$$\left.\frac{dy}{dx}\right]_{(hk)} = \frac{h}{2}$$

ಆದ್ದರಿಂದ(h, k) ಬಿಂದುವಿನಲ್ಲಿ ಲಂಬದ ಓಟವು $\frac{-2}{h}$

$\therefore (h, k)$ ಬಿಂದುವಿನಲ್ಲಿ ಲಂಬದ ಸಮೀಕರಣವು

$$y-k=\frac{-2}{h}(x-h)\ldots\ldots\ldots\ldots(1)$$

ಇದು (1, 2) ಬಿಂದುವಿನ ಮೂಲಕ ಹಾದು ಹೋಗುತ್ತದೆ

$$\therefore\ 2-k=\frac{-2}{h}(1-h) \text{ ಅಥವಾ } k=2+\frac{2}{h}(1-h)\ldots\ldots\ldots(2)$$

(h, k) ಬಿಂದುವು $x^2 = 4y$ ಮೇಲಿರುವುದರಿಂದ,

$$h^2 = 4k \ldots\ldots\ldots\ldots (3)$$

(2) ಮತ್ತು (3) ರಿಂದ $h = 2, k = 1$

$\therefore h, k,$ ಬೆಲೆಗಳನ್ನು (1)ಅಲ್ಲಿ ಅಳವಡಿಸಿದಾಗ, ಲಂಬದ ಸಮೀಕರಣವು,

$$y-1=\frac{-2}{2}(x-2) \text{ ಅಥವಾ } x+y=3$$

23) **3ಮೀ ಮತ್ತು 8ಮೀ. ಅಳತೆ ಹೊಂದಿರುವ ಒಂದು ಅಲ್ಯೂಮಿನಿಯಮ್ ಶೀಟಿನ ಮೂಲೆಗಳಿಂದ ಚೌಕಗಳನ್ನು ಕತ್ತರಿಸಿ, ಮತ್ತು ಬಾಹುಗಳನ್ನು ಮಡಿಸಿ, ತೆರೆದ ಮೇಲ್ಭಾಗವಿರುವ ಒಂದು ಪೆಟ್ಟಿಗೆಯನ್ನು ಮಾಡಬೇಕು. ಅಂತಹ ಪೆಟ್ಟಿಗೆಯ ಗರಿಷ್ಠ ಘನ ಅಳತೆ ಎಷ್ಟು.?**

ಪರಿಹಾರ: ಕತ್ತರಿಸಿದ ಚೌಕಗಳ ಬಾಹುಗಳು x ಇರಲಿ. ಆದ್ದರಿಂದ ಪೆಟ್ಟಿಗೆಯ ಎತ್ತರ x, ಉದ್ದ $8 - 2x$, ಮತ್ತು ಅಗಲ $3 - 2x$ ಆಗಿರುತ್ತದೆ (ಚಿತ್ರ). ಪೆಟ್ಟಿಗೆಯ ಘನ ಅಳತೆ $V(x)$ ಆದರೆ,



$$V(x) = x(3 - 2x)(8 - 2x) = 4x^3 - 22x^2 + 24x$$

ಆದ್ದರಿಂದ
$$\begin{cases} V'(x)=12x^2-44x+24=4(x-3)(3x-2) \\ V''(x)=24x-44 \end{cases}$$

ಈಗ $v(x) = 0$ ಆದಾಗ $x = 3,$. ಆದರೆ $x \neq 3$

ಆದ್ದರಿಂದ

$$x=\frac{2}{3}\ \therefore\ V''\left(\frac{2}{3}\right)=24\left(\frac{2}{3}\right)-44=-28<0$$

$\therefore x=2/3$ ಬಿಂದುವು, ಗರಿಷ್ಠ ಬೆಲೆಯ ಬಿಂದು. ಅಂದರೆ ಪ್ರತಿಯೊಂದು ಮೂಲೆಯಿಂದ 2/3 ಮೀ.ನಷ್ಟು ಬಾಹುವಿರುವ ಚೌಕವನ್ನು ಕತ್ತರಿಸಿ, ಉಳಿದಿರುವ ಶೀಟಿನಿಂದ ಪೆಟ್ಟಿಗೆಯನ್ನು ಮಾಡಿದರೆ, ಆಗ ಪೆಟ್ಟಿಗೆಯ ಘನಫಲ ಗರಿಷ್ಠವಾಗುತ್ತದೆ, ಮತ್ತು

$$V\left(\frac{2}{3}\right)=4\left(\frac{2}{3}\right)^3-22\left(\frac{2}{3}\right)^2+24\left(\frac{2}{3}\right)=\frac{200}{27} \text{ ಮೀ}^3$$

24) **$x^2+y^2=a^2$ ವೃತ್ತದಿಂದ ಆವೃತವಾದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.**

ಉತ್ತರ:–



ಚಿತ್ರದಲ್ಲಿ ತೋರಿಸಿರುವಂತೆ, $x^2 + y^2 = a^2$ ವೃತ್ತದಿಂದ ಆವೃತವಾಗಿರುವ ಕ್ಷೇತ್ರಫಲ = 4 (AOBA ಪ್ರದೇಶದ ಕ್ಷೇತ್ರಫಲ) = 4[ವೃತ್ತವನ್ನು ಸೂಚಿಸುವ ವಕ್ರರೇಖೆ, x–ಅಕ್ಷ, $x = 0$ ಮತ್ತು $x = a$ ಗಳಲ್ಲಿ ಎಳೆದಿರುವ ಲಂಬಗಳಿಂದಾವೃತವಾಗಿರುವ ಪ್ರದೇಶದ ಕ್ಷೇತ್ರಫಲ] [ವೃತ್ತವು x-ಮತ್ತು y-ಅಕ್ಷಗಳಿಗೆರಡಕ್ಕೂ ಸಮ್ಮಿತೀಯವಾಗಿರುವುದರಿಂದ].

$$= 4\int_0^a y\,dx$$

[ಉದ್ದದ ಪಟ್ಟಿಗಳನ್ನು ತೆಗೆದುಕೊಂಡಾಗ]

$$=4\int_0^a \sqrt{a^2-x^2}\,dx \qquad \left[\because x^2+y^2=a^2 \Rightarrow y=\pm\sqrt{a^2-x^2}\right]$$

AOBA ಪ್ರದೇಶವು ಮೊದಲ ಚತುರ್ಥಾಂಕದಲ್ಲಿರುವುದರಿಂದ, yಅನ್ನು ಧನ ಚಿಹ್ನೆಯೊಂದಿಗೆ ತೆಗೆದುಕೊಳ್ಳುತ್ತೇವೆ. ಅನುಕಲಿಸಿದಾಗ ನಮಗೆ ಇಡೀ ವೃತ್ತದ

ಕ್ಷೇತ್ರಫಲ $= 4\left[\frac{x}{2}\sqrt{a^2-x^2}+\frac{a^2}{2}\cdot\sin^{-1}\frac{x}{a}\right]_0^a$

$$=4\left[\left(\frac{a}{2}\times 0+\frac{a^2}{2}.\sin^{-1}1\right)-0\right]=4\left(\frac{a^2}{2}\right)\left(\frac{\pi}{2}\right)=\pi a^2 \text{ ಎಂದಾಗುತ್ತದೆ.}$$

25) **$y = x^2$ ವಕ್ರರೇಖೆ ಮತ್ತು $y = 4$ ಸರಳರೇಖೆಗಳ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.**

ಪರಿಹಾರ: $y = x_2$ ವಕ್ರ ರೇಖೆಯು y – ಅಕ್ಷದಲ್ಲಿ, ಮಾತ್ರ ಸಮ್ಮಿತಿಯವಾಗಿರುವುದರಿಂದ, ಚಿತ್ರ ದಲ್ಲಿ ತೋರಿಸಿರುವಂತೆ, ಬೇಕಾದ ಕ್ಷೇತ್ರಫಲ = AOBA ಪ್ರದೇಶದ ಕ್ಷೇತ್ರಫಲ



$$= 2\cdot\int_0^4 x\,dy$$

= 2[ವಕ್ರರೇಖೆ $x^2 = y$, y–ಅಕ್ಷ
$y = 0$ ಮತ್ತು $y = 4$
ರೇಖೆಗಳ ನಡುವಣ BONB ಪ್ರದೇಶದ ಕ್ಷೇತ್ರಫಲ]

$$=2\int_0^4 \sqrt{y}\,dy = 2\times\frac{2}{3}\left[y^{3/2}\right]_0^4=\frac{4}{3}\times 8=\frac{32}{3}$$

20.12.22

ತಹಶೀಲ್ದಾರ್ ಸೇರಿ ಐವರ ವಿರುದ್ಧ ಪ್ರಕರಣ

ಮೈಸೂರು: ಅನಿವಾಸಿ ಭಾರತೀಯರೊಬ್ಬರ ಪಿತ್ರಾರ್ಜಿತ ಜಮೀನಿಗೆ ನಕಲಿ ದಾಖಲೆ ಸೃಷ್ಟಿಸಿದ ಆರೋಪದ ಮೇರೆಗೆ ಮೈಸೂರು ತಾಲ್ಲೂಕು ತಹಶೀಲ್ದಾರ್, ಕಂದಾಯ ಇನ್‌ಸ್ಪೆಕ್ಟರ್ ಸೇರಿದಂತೆ ಐವರ ವಿರುದ್ಧ ವರುಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೌದಿ ಅರೇಬಿಯಾದಲ್ಲಿ ನೆಲೆಸಿರುವ ವರುಣಾ ಹೋಬಳಿಯ ದೇವೇಗೌಡನ ಹುಂಡಿ ಮೂಲದ ರವಿ ದೂರು ನೀಡಿದ್ದಾರೆ.

‘ನಕಲಿ ದಾಖಲೆ ಸೃಷ್ಟಿಯಲ್ಲಿ ಗ್ರಾಮ ಲೆಕ್ಕಾಧಿಕಾರಿ ಮಹೇಶ ಅವರು, ಆಗಿನ ಕಂದಾಯ ಇನ್‌ಸ್ಪೆಕ್ಟರ್ ಹಾಗೂ ತಹಶೀಲ್ದಾರ್ ನೆರವು ಪಡೆದು ಮರೀಗೌಡ ಹಾಗೂ ಶಿವರಾಮ್ ಅವರ ತಾಯಿಗೆ ಖಾತೆ ಮಾಡಿಸಿಕೊಟ್ಟಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದರು.

ಚಿತ್ರದುರ್ಗ ಮುರುಘಾ ಮಠ: ಆಡಳಿತಾಧಿಕಾರಿ ವಾಪಸ್ ಕರೆಸಿಕೊಳ್ಳಲು ಒತ್ತಾಯ, ಸರ್ಕಾರದ ಹಸ್ತಕ್ಷೇಪಕ್ಕೆ ಅಸಮಾಧಾನ

ಮಠಾಧೀಶರ ರಕ್ಷಣೆಗೆ ಕಾಯ್ದೆ ರೂಪಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮಠಾಧೀಶರ ಹಕ್ಕಿಗೆ ಚ್ಯುತಿ ಉಂಟು ಮಾಡುವ ಪಿತೂರಿಗಳು ನಡೆಯುತ್ತಿವೆ. ಪೋಕ್ಸೊ ಸೇರಿ ಹಲವು ಕಾನೂನುಗಳನ್ನು ದುರ್ಬಳಕೆ ಮಾಡಿಕೊಂಡು ಕಿರುಕುಳ ನೀಡಲಾಗುತ್ತಿದೆ. ಮಠಾಧೀಶರ ರಕ್ಷಣೆಗೆ ಸರ್ಕಾರ ಕಾಯ್ದೆ ರೂಪಿಸುವ ಅಗತ್ಯವಿದೆ ಎಂದು ಮುರುಘಾ ಮಠದ ಉಸ್ತುವಾರಿಯಾಗಿದ್ದ ಬಸವಪ್ರಭು ಸ್ವಾಮೀಜಿ ಒತ್ತಾಯಿಸಿದರು.

ಮುರುಘಾ ಮಠದಲ್ಲಿ ಮಂಗಳವಾರ ನಡೆದ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವರದಕ್ಷಿಣೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ದೌರ್ಜನ್ಯ ತಡೆ ಕಾಯ್ದೆಯ ರೀತಿ ಪೋಕ್ಸೊ ಕಾಯ್ದೆಯೂ ದುರ್ಬಳಕೆ ಆಗುತ್ತಿದೆ. ಇದು ಮುಂದುವರಿದರೆ ಯಾರೊಬ್ಬರೂ ಮಠಾಧೀಶರಾಗಲು ಮುಂದೆ ಬರುವುದಿಲ್ಲ’ ಎಂದರು.

ಮುರುಘಾ ಮಠದ ಬಸವಪ್ರಭು ಸ್ವಾಮೀಜಿ ನೇತೃತ್ವದ ಮಠಾಧೀಶರ ನಿಯೋಗ ಚಿತ್ರದುರ್ಗದ ಎಡಿಸಿ ಇ.ಬಾಲಕೃಷ್ಣ ಅವರಿಗೆ ಸಭೆಯ ನಿರ್ಣಯಗಳನ್ನು ನೀಡಿತು. ಗೋಕಾಕ ಶಾಖಾ ಮಠದ ಮುರುಘ ರಾಜೇಂದ್ರ ಸ್ವಾಮೀಜಿ, ಇಳಕಲ್‌ನ ಗುರುಮಹಾಂತ ಸ್ವಾಮೀಜಿ, ಅಥಣಿಯ ಶಿವಬಸವ ಸ್ವಾಮೀಜಿ ಇದ್ದಾರೆ.

‘ಮುರುಘಾ ಮಠದ ವಿಷಯದಲ್ಲಿ ಹಸ್ತಕ್ಷೇಪ ಮಾಡುತ್ತಿರುವ ಸರ್ಕಾರ, ಆಡಳಿತಾಧಿಕಾರಿ ನೇಮಿಸಿ ಮಠಾಧೀಶರ ಹಕ್ಕನ್ನು ಕಸಿದುಕೊಂಡಿದೆ. ಈ ಮೂಲಕ ಲಿಂಗಾಯತ ಸಮುದಾಯದ ಮಠಗಳ ಬಗ್ಗೆ ಸಮಾಜಕ್ಕೆ ತಪ್ಪು ಸಂದೇಶ ನೀಡಿದೆ. ಐದು ವರ್ಷಗಳ ಹಿಂದೆ ರಾಮಚಂದ್ರಾಪುರ ಮಠ ಇಂತಹದೇ ಸ್ಥಿತಿ ಎದುರಿಸಿದಾಗ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಲಿಲ್ಲ. ಆಡಳಿತಾಧಿಕಾರಿ ನೇಮಕದಿಂದ ಮುರುಘಾ ಮಠದ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟಾಗಿದೆ. ಮಠಗಳ ಮೇಲೆ ನಿಯಂತ್ರಣ ಸಾಧಿಸಲು ಮುಂದಾಗಿದೆ ಎಂಬ ಅನುಮಾನ ಭಕ್ತರಲ್ಲಿ ಮೂಡಿದೆ. ಈ ದ್ವಂದ್ವ ನೀತಿಯನ್ನು ಸರ್ಕಾರ ಕೈಬಿಡಬೇಕು’ ಎಂದು ಆಗ್ರಹಿಸಿದರು.

‘ಆಡಳಿತಾಧಿಕಾರಿ ನೇಮಕ ಆದೇಶವನ್ನು ಸರ್ಕಾರ ರದ್ದುಪಡಿಸಬೇಕು. ಆಡಳಿತಾಧಿಕಾರಿಯನ್ನು ಕೂಡಲೇ ವಾಪಸ್ ಕರೆಸಿಕೊಳ್ಳಬೇಕು. ಇಲ್ಲದಿದ್ದರೆ ಬೆಳಗಾವಿ ಅಥವಾ ಚಿತ್ರದುರ್ಗದಲ್ಲಿ ಡಿ.26ರಂದು ಧರಣಿ ನಡೆಸಲಾಗುವುದು’ ಎಂದರು.

‘ಬಂಧನದಲ್ಲಿರುವ ಶಿವಮೂರ್ತಿ ಶರಣರು ಹೈಕೋರ್ಟ್ ನಿರ್ದೇಶನದ ಪ್ರಕಾರ ಜನರಲ್ ಪವರ್ ಆಫ್ ಅಟಾರ್ನಿಯನ್ನು (ಜಿಪಿಎ) ತಮಗೂ ಹಾಗೂ ಎಸ್.ಬಿ. ವಸ್ತ್ರಮಠ ಅವರಿಗೂ ಹಸ್ತಾಂತರಿಸಿದ್ದರು. ಮುರುಘಾ ಮಠದ ಆಡಳಿತ ಸುಸೂತ್ರವಾಗಿ ನಡೆಯುತ್ತಿದ್ದು, ಆಡಳಿತಾಧಿಕಾರಿ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿಯವರಿಗೂ ಮನವರಿಕೆ ಮಾಡಲಾಗಿತ್ತು. ಆದರೂ ಆಡಳಿತಾಧಿಕಾರಿ ನೇಮಿಸಲಾಗಿದೆ. ಇದೇ ಸ್ಥಿತಿ ಇತರ ಮಠಗಳಿಗೂ ಬರಬಹುದು’ ಎಂದರು.

‘ಸಭೆಯ ನಿರ್ಣಯಗಳನ್ನು ಸರ್ಕಾರದ ಗಮನಕ್ಕೆ ತರುತ್ತೇವೆ. ಸರ್ಕಾರ ಸ್ಪಂದಿಸದೇ ಇದ್ದರೆ ಉಪವಾಸ ಸತ್ಯಾಗ್ರಹಕ್ಕೆ ಸಿದ್ಧ’ ಎಂದು ಗೋಕಾಕ ಶಾಖಾ ಮಠದ ಮುರುಘ ರಾಜೇಂದ್ರ ಸ್ವಾಮೀಜಿ ಹೇಳಿದರು.

ಇಳಕಲ್‌ನ ಗುರುಮಹಾಂತ ಸ್ವಾಮೀಜಿ, ಬಸವಕಲ್ಯಾಣದ ಶಿವಾನಂದ ಸ್ವಾಮೀಜಿ, ಅಥಣಿಯ ಶಿವಬಸವ ಸ್ವಾಮೀಜಿ, ಕಲಬುರಗಿಯ ಸಿದ್ಧಬಸವ ಕಬೀರ ಸ್ವಾಮೀಜಿ, ಬಸವ ಕುಂಬಾರ ಗುಂಡಯ್ಯ ಸ್ವಾಮೀಜಿ, ಹಲಸೂರಿನ ಶಿವಾನಂದ ಸ್ವಾಮೀಜಿ, ಕೊಪ್ಪಳದ ಸಿದ್ದಲಿಂಗ ಸ್ವಾಮೀಜಿ ಇದ್ದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಹಲವು ಸಮುದಾಯಗಳ 30ಕ್ಕೂ ಹೆಚ್ಚು ಮಠಾಧೀಶರು ಮುರುಘಾ ಮಠದ ಬೆಳವಣಿಗೆಗೆ ಸಂಬಂಧಿಸಿದಂತೆ ಈ ಸಂಬಂಧ ನಿರ್ಣಯಗಳನ್ನು ಕೈಗೊಂಡು, ಅದರ ಪ್ರತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಳುಹಿಸಿದರು.

ಕುರ್ಚಿ ಕೇಳಿದ ವಸ್ತ್ರಮಠ

ಆಡಳಿತಾಧಿಕಾರಿ ಕಚೇರಿಯಲ್ಲಿ ಕುಳಿತು ಕಾರ್ಯನಿರ್ವಹಿಸಲು ತಮಗೂ ಕುರ್ಚಿ ವ್ಯವಸ್ಥೆ ಮಾಡುವಂತೆ ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿಯಾಗಿದ್ದ ನಿವೃತ್ತ ನ್ಯಾಯಾಧೀಶ ಎಸ್.ಬಿ. ವಸ್ತ್ರಮಠ ಮಂಗಳವಾರ ಕೋರಿದ್ದಾರೆ.

ಶಿವಮೂರ್ತಿ ಶರಣರಿಂದ ಕಾನೂನು ಬದ್ಧವಾಗಿ ಜನರಲ್ ಪವರ್ ಆಫ್ ಅಟಾರ್ನಿ (ಜಿಪಿಎ) ಪಡೆದಿದ್ದು, ಕಚೇರಿಯಲ್ಲಿ ಕಾರ್ಯನಿರ್ವಹಿಸಲು ಅವಕಾಶವಿದೆ ಎಂದು ಅವರು ಹಕ್ಕು ಪ್ರತಿಪಾದಿಸಿದ್ದಾರೆ. ಆಡಳಿತಾಧಿಕಾರಿ ಪಿ.ಎಸ್. ವಸ್ತ್ರದ್ ಅವರು ಇದಕ್ಕೆ ಅನುಮತಿ ನೀಡಿಲ್ಲ. ಇದರಿಂದ ಕಚೇರಿಯಲ್ಲಿ ಕೆಲ ಹೊತ್ತು ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

> ಮಠಾಧೀಶರು ಸಭೆ ನಡೆಸಲು ಅನುಮತಿ ಪಡೆದಿಲ್ಲ. ಕೊನೆಯ ಗಳಿಗೆಯಲ್ಲಿ ಈ ವಿಚಾರ ಗಮನಕ್ಕೆ ಬಂದಿದೆ. ಗಮನಕ್ಕೆ ತರದೇ ಸಭೆ ನಡೆಸಿದ್ದು ಸರಿಯಲ್ಲ
>
> **ಪಿ.ಎಸ್. ವಸ್ತ್ರದ್,** ಆಡಳಿತಾಧಿಕಾರಿ, ಮುರುಘಾ ಮಠ

ಬೆಸ್ಕಾಂ: ಎಸ್‌ಇ ಸೇರಿ 8 ಮಂದಿ ಸೆರೆ

ನಕಲಿ ದಾಖಲೆ: ಅನುಕಂಪದ ನೇಮಕಾತಿ • ಇಬ್ಬರು ಆರೋಪಿಗಳು ನಾಪತ್ತೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಅಧಿಕಾರಿಗಳೊಂದಿಗೆ ಶಾಮೀಲಾಗುವ ಮೂಲಕ ನಕಲಿ ದಾಖಲೆ ಸೃಷ್ಟಿಸಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ)ಯಲ್ಲಿ ಅನುಕಂಪದ ಆಧಾರದ ನೇಮಕಾತಿ ಹೊಂದಿದ ಹಗರಣವೊಂದನ್ನು ಬಯಲಿಗೆ ಎಳೆದಿರುವ ಕೋಟೆ ಠಾಣೆ ಪೊಲೀಸರು, ಅಧೀಕ್ಷಕ ಎಂಜಿನಿಯರ್ (ಎಸ್‌ಇ) ಸೇರಿ ಎಂಟು ಜನ ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರತಿ ಹುದ್ದೆಗೆ ₹35 ರಿಂದ ₹ 40 ಲಕ್ಷ ವಸೂಲಿ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ.

ಬೆಸ್ಕಾಂ ದಕ್ಷಿಣ ವಲಯದ ಅಧೀಕ್ಷಕ ಎಂಜಿನಿಯರ್ ಎಸ್.ಟಿ. ಶಾಂತಮಲ್ಲಪ್ಪ, ಸಹಾಯಕ ಅಧಿಕಾರಿ ಎಲ್.ರವಿ, ಕಚೇರಿ ಸಹಾಯಕ ಎಚ್.ಸಿ. ಪ್ರೇಮಕುಮಾರ್, ಅನುಕಂಪದ ಆಧಾರದಲ್ಲಿ ನೌಕರಿ ಪಡೆದಿದ್ದ ವಿ.ವೀರೇಶ್, ಸಿ.ರಘುಕಿರಣ್, ಹರೀಶ್, ಎಂ.ಆರ್.ಶಿವಪ್ರಸಾದ್ ಹಾಗೂ ನೌಕರಿಗೆ ಅರ್ಜಿ ಸಲ್ಲಿಸಿದ್ದ ಸಿ.ಕೆ. ಫೈಜಾನ್ ಮುಜಾಹಿದ್ ಬಂಧಿತರು.

ಇದೇ ಪ್ರಕರಣದಲ್ಲಿ ಭಾಗಿಯಾಗಿರುವ ಜೆ.ರಕ್ಷಿತ್ ಮತ್ತು ಓ.ಕಾರ್ತಿಕ್ ಎಂಬುವವರು ತಲೆ ಮರೆಸಿಕೊಂಡಿದ್ದಾರೆ.

‘ಅನುಕಂಪದ ಆಧಾರದ ಮೇರೆಗೆ ನೌಕರಿ ನೀಡುವಂತೆ ಸಿ.ಕೆ. ಫೈಜಾನ್ ಮುಜಾಹಿದ್ ಬೆಸ್ಕಾಂಗೆ ಮನವಿ ಸಲ್ಲಿಸಿದ್ದ. ಸಹಾಯಕ ಮಾರ್ಗದಾಳು ಆಗಿದ್ದ ಸಹೋದರ ಸಿ.ಕೆ. ಮಹಮ್ಮದ್ ಷೇಕ್ ವಿದ್ಯುತ್ ಅಪಘಾತದಿಂದ ಮೃತಪಟ್ಟಿರುವುದಾಗಿ ದಾಖಲೆ ಒದಗಿಸಿದ್ದ. ಅನುಕಂಪದ ಆಧಾರದ ಉದ್ಯೋಗಕ್ಕೆ ಜಿಲ್ಲೆಯಿಂದ ಹೆಚ್ಚು ಪ್ರಸ್ತಾವಗಳು ಸಲ್ಲಿಕೆ ಆಗುತ್ತಿರುವುದರಿಂದ ಬೆಸ್ಕಾಂ ಉಪ ಲೆಕ್ಕಾಧಿಕಾರಿಯವರು ಅನುಮಾನದಿಂದ ಪರಿಶೀಲನೆ ನಡೆಸಿದಾಗ ಪ್ರಕರಣ ಗೊತ್ತಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್ ಮಂಗಳವಾರ ಮಾಹಿತಿ ನೀಡಿದರು.

‘ಸಿ.ಕೆ. ಮಹಮ್ಮದ್ ಷೇಕ್ ಎಂಬುವವರು ಚಿತ್ರದುರ್ಗ ಉಪವಿಭಾಗದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಿಲ್ಲ ಎಂಬುದನ್ನು ಖಚಿತ ಪಡಿಸಿಕೊಂಡ ಬೆಸ್ಕಾಂ ಅಧಿಕಾರಿಗಳು, ಮುಜಾಹಿದ್ ವಿರುದ್ಧ ದೂರು ದಾಖಲಿಸಿದರು. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಭಾರಿ ಹಗರಣವೊಂದು ಬೆಳಕಿಗೆ ಬಂದಿದೆ. ಎರಡು ವರ್ಷದಲ್ಲಿ ಆರು ಜನರು ನೌಕರಿ ಪಡೆದಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಅವರು ವಿವರಿಸಿದರು.

ಪ್ರತಿ ಹುದ್ದೆಗೆ ₹ 40 ಲಕ್ಷ ನಿಗದಿ!

ಬೆಸ್ಕಾಂನಲ್ಲಿ ಕಾರ್ಯ ನಿರ್ವಹಿಸದೇ ಇರುವವರನ್ನು ‘ಉದ್ಯೋಗಿ’ ಎಂಬಂತೆ ಬಿಂಬಿಸಿ ನಕಲಿ ದಾಖಲೆಗಳನ್ನು ಸೃಷ್ಟಿಸುವ ಮೂಲಕ, ನೌಕರಿ ನೀಡುತ್ತಿದ್ದ ಜಾಲ ಬರೋಬ್ಬರಿ ₹ 35ಲಕ್ಷದಿಂದ ₹ 40 ಲಕ್ಷ ಹಣ ಪಡೆಯುತ್ತಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ.

‘ಕಚೇರಿಯ ಸಹಾಯಕ ಅಧಿಕಾರಿ ಎಲ್.ರವಿ ಪ್ರಕರಣದ ಪ್ರಮುಖ ರೂವಾರಿ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಅನುಕಂಪದ ಆಧಾರದಲ್ಲಿ ಉದ್ಯೋಗ ನೀಡುವಂತೆ ಯುವಕರಿಂದ ಅರ್ಜಿ ಹಾಕಿಸುತ್ತಿದ್ದರು. ಬೆಸ್ಕಾಂ ನೌಕರ ಎಚ್.ಸಿ. ಪ್ರೇಮ್‌ಕುಮಾರ್ ಈ ಪ್ರಸ್ತಾವ ಅನುಮೋದನೆ ಆಗುವಂತೆ ನೋಡಿಕೊಳ್ಳುತ್ತಿದ್ದರು. ಅಧೀಕ್ಷಕ ಎಂಜಿನಿಯರ್ ಶಾಂತಮಲ್ಲಪ್ಪ ನೇಮಕಾತಿ ಆದೇಶ ನೀಡುತ್ತಿದ್ದರು. ಕಿರಿಯ ಎಂಜಿನಿಯರ್ ಸೇರಿ ಹಲವು ಹುದ್ದೆಗಳಿಗೆ ಇದೇ ರೀತಿ ನೇಮಕಾತಿ ಮಾಡಿಕೊಂಡಿದ್ದರು’ ಎಂದು ಪೊಲೀಸ್ ವರಿಷ್ಠಾಧಿಕಾರಿ ಪರಶುರಾಮ್ ವಿವರಿಸಿದರು.

ಶಾಂತಮಲ್ಲಪ್ಪ,



ಎಲ್‌.ರವಿ

ಪ್ರೇಮಕುಮಾರ್

ವಿ.ವೀರೇಶ್

ಸಿ.ರಘುಕಿರಣ್

ಯಶಸ್ವಿನಿ ಸೋಮಶೇಖರ್ ‘ಮುಡಾ’ ಅಧ್ಯಕ್ಷ

ಮೈಸೂರು: ಬಿಜೆಪಿ ಮುಖಂಡ ಯಶಸ್ವಿನಿ ಸೋಮಶೇಖರ್ ಅವರನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧ್ಯಕ್ಷರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಿ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ಯಶಸ್ವಿನಿ ಸೋಮಶೇಖರ್

‘ಬಿಜೆಪಿ ನಗರ ಘಟಕದ ಪ್ರಧಾನ ಕಾರ್ಯದರ್ಶಿ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ್ದೇನೆ. ಪಕ್ಷವು ಬಹಳ ವರ್ಷಗಳ ನಂತರ ನನ್ನನ್ನು ಗುರುತಿಸಿ ಜವಾಬ್ದಾರಿ ನೀಡಿದೆ. ಇದನ್ನು ಸಮರ್ಥವಾಗಿ ನಿಭಾಯಿಸುವ ವಿಶ್ವಾಸವಿದೆ. ಡಿ.21ರಂದು ಬೆಳಿಗ್ಗೆ 11ಕ್ಕೆ ಅಧಿಕಾರ ಸ್ವೀಕರಿಸಲಿದ್ದೇನೆ’ ಎಂದು ಸೋಮಶೇಖರ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ನರಗುಂದ: ನಾಲ್ಕನೇ ತರಗತಿ ವಿದ್ಯಾರ್ಥಿ ಹತ್ಯೆ ಪ್ರಕರಣ

ಶಿಕ್ಷಕ ಮುತ್ತಪ್ಪ ಹಡಗಲಿ ಬಂಧನ

ಪ್ರಜಾವಾಣಿ ವಾರ್ತೆ

ಗದಗ: ನರಗುಂದ ತಾಲ್ಲೂಕಿನ ಹದ್ಲಿ ಗ್ರಾಮದ ಸರ್ಕಾರಿ ಶಾಲೆಯ ನಾಲ್ಕನೇ ತರಗತಿ ವಿದ್ಯಾರ್ಥಿ ಭರತ್‌ನನ್ನು ಹತ್ಯೆ ಮಾಡಿ, ಅತಿಥಿ ಶಿಕ್ಷಕಿ ಗೀತಾ ಬಾರಕೇರ ಹಾಗೂ ಸಹಶಿಕ್ಷಕ ಸಂಗನಗೌಡ ಪಾಟೀಲ ಅವರ ಮೇಲೆ ಗಂಭೀರ ಹಲ್ಲೆ ನಡೆಸಿ ಪರಾರಿಯಾಗಿದ್ದ ಆರೋಪಿ ಮುತ್ತಪ್ಪ ಹಡಗಲಿಯನ್ನು ಪೊಲೀಸರು ಬಂಧಿಸಿದ್ದಾರೆ.

ಮುತ್ತಪ್ಪ ಹಡಗಲಿ

ಆರೋಪಿ ಮುತ್ತಪ್ಪ ನರಗುಂದ ಪಟ್ಟಣ ಸಮೀಪ ಇರುವ ರೋಣ ಕ್ರಾಸ್ ಬಳಿ ಮಂಗಳವಾರ ಪೊಲೀಸರ ಬಲೆಗೆ ಬಿದ್ದಿದ್ದಾನೆ.

‘ಹದ್ಲಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಅತಿಥಿ ಶಿಕ್ಷಕನಾಗಿದ್ದ ಮುತ್ತಪ್ಪ ಹಡಗಲಿ ಹಾಗೂ ಗೀತಾ ಬಾರಕೇರ ಅವರ ನಡುವೆ ಮೊದಲಿನಿಂದಲೂ ಸಲುಗೆ ಇತ್ತು. ಶಾಲೆಯಿಂದ ಶೈಕ್ಷಣಿಕ ಪ್ರವಾಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಗೀತಾ ಬಾರಕೇರ ಸಹಶಿಕ್ಷಕ ಸಂಗನಗೌಡ ಪಾಟೀಲ ಜತೆಗೆ ಆಪ್ತವಾಗಿ ನಡೆದುಕೊಂಡಿದ್ದು, ಇವರಿಬ್ಬರ ನಡುವೆ ವಾಗ್ವಾದಕ್ಕೆ ಕಾರಣವಾಗಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ವಿದ್ಯಾರ್ಥಿ ಸಾವಿಗೆ ಕಾರಣನಾದ ಆರೋಪಿ ಮುತ್ತಪ್ಪನನ್ನು ಬಂಧಿಸಲಾಗಿದೆ. ಆತನನ್ನು ವಿಚಾರಿಸಲಾಗಿ, ಗೀತಾ ಮತ್ತು ನನ್ನ ನಡುವೆ ಸಲುಗೆ ಇತ್ತು ಎಂದು ತಿಳಿಸಿದ್ದಾನೆ. ಅಲ್ಲದೇ, ಪ್ರವಾಸಕ್ಕೆ ಹೋದ ಸಂದರ್ಭದಲ್ಲಿ ಆಕೆ ಸಹಶಿಕ್ಷಕನೊಂದಿಗೆ ಆಪ್ತವಾಗಿ ನಡೆದುಕೊಂಡಿದ್ದು ಸಿಟ್ಟು ತರಿಸಿತ್ತು. ಈ ಕಾರಣದಿಂದಲೇ, ಗೀತಾಗೆ ಸಂಬಂಧಪಟ್ಟವರು ಯಾರೇ ಸಿಕ್ಕರೂ ಹೊಡೆದು ಹಾಕಬೇಕು ಎಂದು ನಿರ್ಧರಿಸಿದ್ದಾಗಿ ಆರೋಪಿ ತಿಳಿಸಿದ್ದಾನೆ’ ಎಂದು ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಪ್ರಕಾಶ್ ದೇವರಾಜು ತಿಳಿಸಿದ್ದಾರೆ.

‘ಮುತ್ತಪ್ಪ ಮತ್ತು ಗೀತಾ ನಡುವೆ ನಡೆದಿರುವ ವಾಟ್ಸ್‌ಆ್ಯಪ್ ಚಾಟ್, ಫೋನ್ ಕಾಲ್ ಹಿಸ್ಟರಿ ಸಿಕ್ಕಿದೆ. ಆದರೆ, ಆರೋಪಿ ಹೇಳುವಂತೆ ಇವರಿಬ್ಬರ ನಡುವೆ ಸಲುಗೆ ಇತ್ತೇ ಎಂಬುದು ದೃಢಪಡಲು ಇನ್ನಷ್ಟು ಸಾಕ್ಷಿ ಹಾಕಬೇಕಿದೆ. ಈಗ ಸಿಕ್ಕಿರುವ ಹೇಳಿಕೆ ಪ್ರಕಾರ ಆತ ಗೀತಾ ಮೇಲಿನ ಮೋಹದಿಂದ ಈ ಕೃತ್ಯ ಎಸಗಿರುವುದು ದೃಢಪಟ್ಟಿದೆ’ ಎಂದಿದ್ದಾರೆ.

‘ಹಲ್ಲೆಗೊಳಗಾಗಿ ಕಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ತಾಯಿ ಗೀತಾ ಬಾರಕೇರ ಅವರ ಸ್ಥಿತಿ ಚಿಂತಾಜನಕವಾಗಿದೆ’ ಎಂದು ಸಂಬಂಧಿಕರು ತಿಳಿಸಿದ್ದಾರೆ.

ಶಿಕ್ಷಕಿ ಆರೋಗ್ಯ ವಿಚಾರಿಸಿದ ಸಚಿವ

ಹುಬ್ಬಳ್ಳಿ: ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ಹದ್ಲಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅತಿಥಿ ಶಿಕ್ಷಕನ ಹಲ್ಲೆಯಿಂದ ಗಂಭೀರ ಗಾಯಗೊಂಡು ಕಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅತಿಥಿ ಶಿಕ್ಷಕಿ ಗೀತಾ ಅವರ ಆರೋಗ್ಯವನ್ನು ಶಿಕ್ಷಣ ಸಚಿವ ಬಿ.ಸಿ. ನಾಗೇಶ ವಿಚಾರಿಸಿದರು.

ಮಂಗಳವಾರ ಬೆಳಿಗ್ಗೆ ಆಸ್ಪತ್ರೆಗೆ ಭೇಟಿ ನೀಡಿದ ಸಚಿವರು, ಗಾಯಾಳು ಶಿಕ್ಷಕಿಯ ಕುಟುಂಬದವರೊಂದಿಗೆ ಮಾತನಾಡಿ ಧೈರ್ಯ ತುಂಬಿದರು. ಶಿಕ್ಷಕಿಯ ಆರೋಗ್ಯ ಸ್ಥಿತಿ ಮತ್ತು ಚಿಕಿತ್ಸೆ ಕುರಿತು ವೈದ್ಯರಿಂದ ಮಾಹಿತಿ ಪಡೆದರು.

ಗುಡಿಬಂಡೆ ತಾ.ಪಂ ಇಒ ಅಮಾನತು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಕೇಬಲ್ ಅಳವಡಿಕೆಗೆ ಅನುಮತಿ ನೀಡಲು ಲಂಚ ಪಡೆದ ಆರೋಪದಲ್ಲಿ ಗುಡಿಬಂಡೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ರವೀಂದ್ರ ಅವರನ್ನು ಅಮಾನತುಗೊಳಿಸಲಾಗಿದೆ.

‘ರವೀಂದ್ರ ಅವರು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಇದೇ ಪ್ರಕರಣದಲ್ಲಿ ಆರೋಪ ಎದುರಿಸುತ್ತಿರುವ ಬಾಗೇಪಲ್ಲಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಎಸ್. ಆನಂದ್ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಲಾಗಿದೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಉಪಕಾರ್ಯದರ್ಶಿ ಆದೇಶದಲ್ಲಿ ತಿಳಿಸಿದ್ದಾರೆ.

ರವೀಂದ್ರ



ಆನಂದ್

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನವೆಂಬರ್‌ನಲ್ಲಿ ಗುಡಿಬಂಡೆ ತಾಲ್ಲೂಕಿನ ಎಲ್ಲೋಡು ಗ್ರಾಮ ಪಂಚಾಯಿತಿ ಪಿಡಿಒ ಡಿ.ಎಸ್. ಮಂಜುನಾಥ್, ಬೀಚಗಾನಹಳ್ಳಿ ಪಿಡಿಒ ಎಂ.ಎನ್. ಬಾಲಕೃಷ್ಣ, ಸೋಮೇನಹಳ್ಳಿ ಪಿಡಿಒ ಎನ್. ವೆಂಕಟಾಚಲಪತಿ, ಬಾಗೇಪಲ್ಲಿ ತಾಲ್ಲೂಕು ಗೂಳೂರು ಪಂಚಾಯಿತಿ ಪಿಡಿಒ ಬಾಬಾಸಾಬ, ಚೇಳೂರು ಪಿಡಿಒ ಗೌಸ್‌ಪೀರ್ ಅವರನ್ನು ಜಿಲ್ಲಾ ಪಂಚಾಯಿತಿ ಸಿಇಒ ಅಮಾನತುಗೊಳಿಸಿದ್ದರು.

ಸಾಹಿತ್ಯ ಸಮ್ಮೇಳನ: ಪ್ರತಿನಿಧಿ ನೋಂದಣಿ-ನೀರಸ ಪ್ರತಿಕ್ರಿಯೆ

ಒಂದನೇ ಪುಟದಿಂದ...

ನೋಂದಣಿಗೆ 5 ದಿನಗಳು ಮಾತ್ರ ಉಳಿದಿದ್ದರೂ, ಶೇ 20ರಷ್ಟು ಪ್ರತಿನಿಧಿಗಳು ಮಾತ್ರ ನೋಂದಣಿ ಮಾಡಿಕೊಂಡಿದ್ದಾರೆ. ಇನ್ನೂ 16 ಸಾವಿರ ಪ್ರತಿನಿಧಿಗಳು ನೋಂದಣಿಯಾಗುವುದು ಕಷ್ಟ ಎಂದು ಅರಿತ ಪರಿಷತ್, ಕಳೆದ ಮೂರು ದಿನಗಳಿಂದ ಆಫ್‌ಲೈನ್ ನೋಂದಣಿಗೂ ಅವಕಾಶ ಕಲ್ಪಿಸಿದೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ₹500 ಶುಲ್ಕ ಕಟ್ಟಿ, ನೋಂದಾಯಿಸಿಕೊಳ್ಳಬಹುದು.

ಆರಂಭದಿಂದಲೂ ಆಕ್ಷೇಪ: ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಬರುವವರು ಕಡ್ಡಾಯವಾಗಿ ಕನ್ನಡ ಸಾಹಿತ್ಯ ಪರಿಷತ್ ಸದಸ್ಯರಾಗಿರಬೇಕು. ಆ್ಯಪ್ ಮೂಲಕವೇ ಮೊದಲು ಸದಸ್ಯತ್ವ ಪಡೆದು, ನಂತರ ಪ್ರತಿನಿಧಿಯಾಗಿ ನೋಂದಣಿ ಮಾಡಿಕೊಳ್ಳಬೇಕು ಎಂದು ಕಸಾಪ ಹೊಸದಾಗಿ ನಿಯಮ ರೂಪಿಸಿತ್ತು. ಸಾಹಿತ್ಯ ಸಮ್ಮೇಳನದ ಆ್ಯಪ್ ಬಳಕೆ ಮತ್ತು ಕಸಾಪ ಸದಸ್ಯತ್ವ ಕಡ್ಡಾಯ ಕುರಿತು ಆಕ್ಷೇಪಗಳು ವ್ಯಕ್ತವಾಗಿದ್ದವು.

ಪ್ರತಿ ಸಮ್ಮೇಳನದಂತೆ ಈ ಸಮ್ಮೇಳನಕ್ಕೆ ಏಕೆ ಆಫ್‌ಲೈನ್ ನೋಂದಣಿಗೆ ಅವಕಾಶ ನೀಡಿಲ್ಲ. ಎಲ್ಲರಿಗೂ ಆ್ಯಪ್ ಬಳಸಿ ನೋಂದಣಿ ಮಾಡಿಕೊಳ್ಳಲು ಬರುವುದಿಲ್ಲ ಎಂದು ಹಲವಾರು ಕಲಾವಿದರು, ಸಾಹಿತ್ಯಾಸಕ್ತರು ಧ್ವನಿ ಎತ್ತಿದ್ದರು. ಇದಕ್ಕೆ ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರು, ‘ಪ್ರತಿನಿಧಿಯಾಗಿ ಬರುವವರು ಪರಿಷತ್ತಿನ ಸದಸ್ಯತ್ವ ಪಡೆಯಬೇಕು ಎಂದು ನಿರೀಕ್ಷಿಸುವುದರಲ್ಲಿ ತಪ್ಪೇನಿದೆ’ ಎಂದು ಸಮರ್ಥಿಸಿಕೊಂಡಿದ್ದರು.

ನಿಯಮ ಸಡಿಲಿಕೆ: ಪ್ರತಿನಿಧಿಗಳ ನೋಂದಣಿಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದ್ದನ್ನು ಮನಗಂಡ ಕಸಾಪ, ಆಫ್‌ಲೈನ್ ನೋಂದಣಿಯಲ್ಲಿ ಕಸಾಪ ಸದಸ್ಯತ್ವ ಕಡ್ಡಾಯ ಎಂಬ ನಿಯಮವನ್ನು ಸಡಿಲಿಸಿದೆ. ಆನ್‌ಲೈನ್ ನೋಂದಣಿಯಲ್ಲೂ ನಿಯಮ ಸಡಿಲಿಸಬೇಕು ಎಂಬುದು ಸಾಹಿತ್ಯಾಸಕ್ತರ ಒತ್ತಾಯವಾಗಿದೆ.

‘ಪುಸ್ತಕ ಮಾರಾಟ ಮತ್ತು ವಾಣಿಜ್ಯ ಮಳಿಗೆಗೆ ಸಂಬಂಧಿಸಿದಂತೆ ಈಗಾಗಲೇ ಆ್ಯಪ್ ಮೂಲಕ 500 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಹೆಚ್ಚಿನ ಬೇಡಿಕೆ ಕಂಡು ಬಂದ ಕಾರಣ ಇನ್ನೂ 100 ಹೆಚ್ಚುವರಿ ಸ್ಟಾಲ್‌ಗಳಿಗೆ ಅವಕಾಶ ಕಲ್ಪಿಸಲಾಗಿದೆ’ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

> ಆಫ್‌ಲೈನ್ ನೋಂದಣಿ ಆರಂಭವಾಗಿದ್ದು, ಸುಮಾರು 3 ಸಾವಿರ ಮಂದಿ ನೋಂದಣಿಯಾಗಿದ್ದಾರೆ. 5 ದಿನಗಳಲ್ಲಿ ಒಟ್ಟು 20 ಸಾವಿರ ನೋಂದಣಿ ನಿರೀಕ್ಷೆಯಿದೆ
>
> **ಲಿಂಗಯ್ಯ ಹಿರೇಮಠ,** ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ, ಹಾವೇರಿ

‘ಸಲಹೆಯನ್ನು ಗೌರವಿಸುತ್ತೇವೆ’

‘ತಂತ್ರಜ್ಞಾನದ ನೆರವಿನಿಂದ ಮನೆಯಲ್ಲೇ ಕುಳಿತು ಪ್ರತಿನಿಧಿಗಳು ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳಲಿ ಎಂಬ ಉದ್ದೇಶದಿಂದ ಪ್ರಥಮ ಬಾರಿಗೆ ಆ್ಯಪ್ ರಚಿಸಿದ್ದೆವು. ಇದಕ್ಕೆ ಕೆಲವರಷ್ಟೇ ಆಕ್ಷೇಪ ವ್ಯಕ್ತಪಡಿಸಿದರು. ನಾವು ಎಲ್ಲರ ಸಲಹೆ, ಸೂಚನೆಗಳನ್ನು ಗೌರವಿಸುತ್ತೇವೆ. ನಮಗೆ ಯಾವುದೇ ಪ್ರತಿಷ್ಠೆ ಇಲ್ಲ. ಹೀಗಾಗಿ ಆಫ್‌ಲೈನ್ ನೋಂದಣಿಗೂ ಅವಕಾಶ ಮಾಡಿಕೊಟ್ಟಿದ್ದೇವೆ. ಜತೆಗೆ ಕಸಾಪ ಸದಸ್ಯತ್ವ ಕಡ್ಡಾಯ ಎಂಬ ನಿಯಮವನ್ನು ಸಡಿಲಿಕೆ ಮಾಡಿದ್ದೇವೆ’ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ‘ಪ್ರಜಾವಾಣಿ’ಗೆ ಹೇಳಿದರು.

ಉದ್ಯೋಗ ವಾಣಿ

ಕರ್ನಾಟಕ ಸರ್ಕಾರ
(ಆರ್ಥಿಕ ಇಲಾಖೆ)
ವಿತ್ತೀಯ ಕಾರ್ಯನೀತಿ ಸಂಸ್ಥೆ (ವಿಕಾಸಂ)
ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು – 560060
ದೂ: 080–26971000, ಫ್ಯಾಕ್ಸ್: 080–26971010, ವೆಬ್‌ಸೈಟ್: www.fpibengaluru.karnataka.gov.in

No:FPI/PROC/Jr.Prog-FD/1/2022-23 ದಿನಾಂಕ: 19-12-2022

ಅಧಿಸೂಚನೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಗಣಕ ಕೋಶದಲ್ಲಿ ಗುತ್ತಿಗೆ ಆಧಾರದ ಮೇರೆಗೆ **ಒಂದು ಜೂನಿಯರ್ ಪ್ರೋಗ್ರಾಮರ್** ಹುದ್ದೆಯ ನೇಮಕಾತಿಗಾಗಿ ವಿತ್ತೀಯ ಕಾರ್ಯನೀತಿ ಸಂಸ್ಥೆ, ಆರ್ಥಿಕ ಇಲಾಖೆ ವತಿಯಿಂದ ಅರ್ಜಿಯನ್ನು ಕರೆಯಲಾಗಿದೆ.

ಆಸಕ್ತಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ವಿವರ ಮತ್ತು ನಿಗಧಿತ ನಮೂನೆಯ ಅರ್ಜಿಗಾಗಿ ವಿತ್ತೀಯ ಕಾರ್ಯನೀತಿ ಸಂಸ್ಥೆಯ **www.fpibengaluru.karnataka.gov.in** ವೆಬ್‌ಸೈಟ್ ಸಂಪರ್ಕಿಸುವುದು. ಸಂಪೂರ್ಣವಾಗಿ ಭರ್ತಿ ಮಾಡಿದ ಅರ್ಜಿಯನ್ನು ಸಂಬಂಧಪಟ್ಟ ಅಗತ್ಯ ದಾಖಲೆಗಳೊಂದಿಗೆ **“ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ,** ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ ಅಂಚೆ, ಕೆಂಗೇರಿ, ಬೆಂಗಳೂರು–560060”ಗೆ ಖುದ್ದಾಗಿ ಅಥವಾ ಅಂಚೆ ಅಥವಾ ಇ–ಮೇಲ್ ವಿಳಾಸ: **director@fpibangalore.gov.in** ಮೂಲಕ **ದಿನಾಂಕ: 27.12.2022 ಸಂಜೆ 5.30 ರೊಳಗೆ** ಸಲ್ಲಿಸುವುದು.

DIPR/CP/3623/Yakshi/2022-23 ಸಹಿ/– ನಿರ್ದೇಶಕರು, ವಿಕಾಸಂ

SVVK TRUST®
KPSVS AYURVEDIC MEDICAL COLLEGE & HOSPITAL
MANVI - 584123 Dist- Raichur Karnataka
www.aayurvediccollegemanvi.org - e-mail : kalmath_edu@yahoo.co.in
Facebook: ayurvediccollegemanvi

APPOINTMENTS

S.No.	Subjects / Departments	No. of Post		
		Professor	Reader	Lecturer
1	Shareera Rachana	1	OR 01	01
2	Swastha Vritta	1	OR 01	--
3	Prasuti Tantra & Stree Roga	1	OR 01	--
4	Kaumara Bhritya	1	OR 01	--
5	Kaya Chikitsa	1	01	--
6	Shalakya Tantra	1	OR 01	--
7	Shalya Tantra	1	OR 01	–

Qualification, Experience as per NCISM Norms, Faculty should possess Karnataka State Registration or Central Registration. Interested Faculty shall apply immediately with all testimonials before 05 days of Notification date.
Salary: Negotiable based on Experience
CONTACT : 9448162595 / 7795362970 / 9900289775
email : kalmath_edu@yahoo.co.in

ಪ್ರಜಾವಾಣಿ

ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:
ಮೊ: 96069 12220

RASHTROTTHANA CBSE SCHOOLS
Keshava Shilpa, Kempegowdanagar, Bengaluru-560 019
Website: www.rvkcbse.in

We are a Not- For- Profit organization imparting value based education and inculcating Bharatiya Culture in our students from last 17 years.

"NATION FIRST" is our philosophy and we strive hard for the academic excellence of our students along with all round development through "Panchamukhi Shikshana".

We at our CBSE Schools require dedicated and enthusiastic teaching staff. Freshers can also apply. Candidates with higher educational qualification and experience will be an added advantage. Salary will not be a constraint for deserving candidate having flair for teaching.

REQUIRE

- **PGT:** Postgraduate in Physics, Chemistry, Biology, Mathematics with B.Ed. Preference will be given to experienced person who can prepare students for KCET / COMED.K
- **TGT - English / Kannada / Hindi / Sanskrit / Maths / Science / Soc. Science:** Postgraduate / Graduate in the relevant subjects with B.Ed.
- **PRT - English / Kannada / Hindi / Sanskrit / Maths / Science / Soc. Science:** Graduate in the relevant subjects with B.Ed., / D.Ed.
- **P.P.T - Kindergarten Teachers Montessori Teachers:** NTT / Montessori Diploma
- **P.E.T:** M. P.Ed. / B.P.Ed., (Preference will be given to Ladies)
- **Performing Arts: Teachers, Karate, Dance, Yoga, Vocal Music, Tabla, Key Board:** Proficiency Certificate with experience in the respective subjects
- **Visual Art:** B.F.A. / B.V.A.
- **Swimming Coach & Life Guard:** Certificate in relevant area (Preference will be given to Ladies)
- **Computer Instructor:** BCA / MCA
- **Librarian:** M.L. & I.Sc. / B.L. & I.Sc.
- **Counselor:** M.Sc. in Child & Adult Psychology
- **Special Educator:** Certificate from Rehabilitation Council of India
- **Wellness Teacher:**
- **Admin Head / HR Head:** Graduate with 2-3 yrs experience in relevant field in school administration.

Send your application through e-mail separately to Respective Schools within 10 days

RASHTROTTHANA VIDYA KENDRA (CBSE)
Arkavathy Layout, Thanisandra Main Road, Bengaluru-560 077
Ph.: 28465972, 9880651978, E-mail: hr@rvkb.edu.in

RASHTROTTHANA VIDYA KENDRA (CBSE)
Banashankari 6th Stage, 8th Block, Near NICE Office, Bengaluru-560 060. Ph.: 9945202661, 9945582661
E-mail: rvkbsk@gmail.com

JAIGOPAL GARODIA RASHTROTTHANA VIDYA KENDRA (CBSE)
Main Road, Ramamurthynagar, Bengaluru-560 016
Ph.: 25665133 / 34, E-mail: jgrvkb@gmail.com

RASHTROTTHANA VIDYA KENDRA (CBSE)
Nituvalli, Davangere-577 004. Ph.: 9480766501, 9449320601
E-mail: rvkdvgcbse@gmail.com

RASHTROTTHANA VIDYA KENDRA (CBSE)
Kudligi Road, Hagaribommanahalli-583 212, Bellary District
Ph.: 9481291834 / 07022564818 / 9964747979, E-mail: rvkhbhcbse@gmail.com

RASHTROTTHANA VIDYA KENDRA (CBSE) BOYS RESIDENTIAL SCHOOL
Garag Road, Madhavanagar, Dharwad-580 011
Ph.: 0836 - 2485124 / 127, 9731845212
E-mail: principalrvkd@yahoo.com

RASHTROTTHANA VIDYA KENDRA (CBSE)
Vijayanagara 4th Stage, Belawadi, Mysore-570 032
Ph.: 7022039491, Email: hr.rvkv@rvkcbsc.in

RASHTROTTHANA VIDYA KENDRA (CBSE)
Near Shri Nagara, Mandakalli, Mysore-570 008
Ph.: 6366761769, Email: hr.rvks@rvkcbsc.in

RASHTROTTHANA VIDYA KENDRA (CBSE)
KHB Colony, 1st Phase, Sattur, Dharwad-580 009
Ph.: 9945899882, Email: rvk.str.dwd@rashtrotthana.org

RASHTROTTHANA VIDYA KENDRA (CBSE)
Devala Ganagaapura Road, Sharana Sirasagi, Kalburgi-585103
Ph.: 9945899668, Email: rvk.klbg@rashtrotthana.org

TEACHERS FOR ALL SUBJECTS REQUIRED FOR OUR STATE BOARD SCHOOLS AT Bengaluru, Munganhalli (Chintamani) Hagaribommanhalli, Chitradurga, Davangere, Dharwad
Eligible candidates may send their resume to:
adminschool@rashtrotthana.org
General Secretary
SWASTH SUSTHIR SAMAJ NIRMAN

ಒಪಿಎಸ್ ವ್ಯವಸ್ಥೆ ಜಾರಿಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪ • ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಚರ್ಚೆಯ ಬಳಿಕ ಎನ್‌ಪಿಎಸ್ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಹೊಸ ಪಿಂಚಣಿ ಪದ್ಧತಿ (ಎನ್‌ಪಿಎಸ್) ರದ್ದುಪಡಿಸಿ ಹಳೆ ಪಿಂಚಣಿ ಪದ್ಧತಿ (ಒಪಿಎಸ್) ಜಾರಿ ಮಾಡಿದರೆ ರಾಜ್ಯದ ಬೊಕ್ಕಸ, ಅಭಿವೃದ್ಧಿ ಚಟುವಟಿಕೆಗಳ ಮೇಲೆ ಆಗುವ ಪರಿಣಾಮಗಳ ಬಗ್ಗೆ ಸದನದಲ್ಲಿ ಸುದೀರ್ಘ ಚರ್ಚೆ ನಡೆಸಿದ ಬಳಿಕವಷ್ಟೇ ಸರ್ಕಾರ ತನ್ನ ತೀರ್ಮಾನ ಪ್ರಕಟಿಸಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮಂಗಳವಾರ ವಿಧಾನಸಭೆಯ ಶೂನ್ಯವೇಳೆಯಲ್ಲಿ ಜೆಡಿಎಸ್‌ನ ಕೆ.ಎಸ್. ಲಿಂಗೇಶ್ ಅವರು ಈ ವಿಷಯ ಪ್ರಸ್ತಾಪಿಸಿದರು. 'ಎನ್‌ಪಿಎಸ್ ರದ್ದು ಮಾಡಬೇಕು ಎಂದು ಆಗ್ರಹಿಸಿ ರಾಜ್ಯ ಸರ್ಕಾರಿ ನೌಕರರು ಇಡೀ ರಾಜ್ಯದಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. 2006ರ ಬಳಿಕ ನೇಮಕಾತಿ ಆದವರಿಗೆ ಯಾವುದೇ ರೀತಿ ಪಿಂಚಣಿ ಸೌಲಭ್ಯ ಸಿಗುತ್ತಿಲ್ಲ. ಎನ್‌ಪಿಎಸ್‌ನ ನಿಧಿ ಸ್ಥಾಪಿಸಿ ನೌಕರರ ವೇತನದಿಂದ ಕಟಾವು ಮಾಡಿದ ಮೊತ್ತವನ್ನು ಠೇವಣಿ ಇರಿಸಿ ನಿವೃತ್ತಿ ವೇಳೆ ಇಡುಗಂಟು ನೀಡುವ ಯೋಜನೆಯೇನೂ ಜಾರಿಯಲ್ಲಿದೆ. ಆದರೆ, ಅದನ್ನು ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ್ದರಿಂದ ಖಚಿತ ಇಡುಗಂಟು ಸಿಗುತ್ತಿಲ್ಲ. ನಿವೃತ್ತರಾದವರು ಜೀವನ ಹೇಗೆ ನಡೆಸಬೇಕು' ಎಂದು ಪ್ರಶ್ನಿಸಿದರು.

ಇದಕ್ಕೆ ಧ್ವನಿಗೂಡಿಸಿದ ಜೆಡಿಎಸ್‌ನ ಎ.ಟಿ. ರಾಮಸ್ವಾಮಿ, 'ನೌಕರರು ಮುಷ್ಕರ ನಿರತರಾಗಿರುವುದರಿಂದಾಗಿ ಆಡಳಿತ ವ್ಯವಸ್ಥೆಯ ಮೇಲೆ ಪರಿಣಾಮ ಬೀರಲಿದ್ದು, ಜನರಿಗೆ ತೊಂದರೆಯಾಗಿದೆ. ಸರ್ಕಾರ ನಿರ್ಧಾರ ಪ್ರಕಟಿಸಬೇಕು' ಎಂದು ಆಗ್ರಹಿಸಿದರು.

ಕಾಂಗ್ರೆಸ್, ಬಿಜೆಪಿ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರಲ್ಲದೇ, ಎನ್‌ಪಿಎಸ್ ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ ಬೊಮ್ಮಾಯಿ, 'ಈ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಾಗಿರುವುದು ಸರ್ಕಾರವೇ. ಇಡೀ ರಾಜ್ಯದ ಜನರ ಶ್ರಮದಿಂದ ಬೊಕ್ಕಸಕ್ಕೆ ಹಣ ಹರಿದು ಬರುತ್ತಿದೆ. ಯಾವುದಕ್ಕೆ ಎಷ್ಟು ಸಂಪನ್ಮೂಲ ಖರ್ಚು ಮಾಡಬೇಕು ಎಂದು ಸದನದಲ್ಲಿ ಒಪ್ಪಿಗೆ ಪಡೆದು ಖರ್ಚು ಮಾಡುತ್ತಿದ್ದೇವೆ. ನೌಕರರಿಗೆ ಎಲ್ಲ ರೀತಿಯ ಸೌಲಭ್ಯವನ್ನೂ ನೀಡಿದ್ದೇವೆ. ಮೊದಲೆಲ್ಲ ತುಟ್ಟಿಭತ್ಯೆಯನ್ನು(ಡಿ.ಎ) ಕೇಂದ್ರ ಸರ್ಕಾರ ಜಾರಿಗೆ ಮಾಡಿದ ಐದಾರು ತಿಂಗಳು, ಒಂದು ವರ್ಷದ ಬಳಿಕ ಇಲ್ಲಿ ಹೆಚ್ಚಳ ಮಾಡಲಾಗುತ್ತಿತ್ತು. ಈಗ 24 ಗಂಟೆಯಲ್ಲೇ ಡಿ.ಎ. ಹೆಚ್ಚಳ ಮಾಡುತ್ತಿದ್ದೇವೆ. ಏಳನೇ ವೇತನ ಆಯೋಗ ರಚನೆ ಮಾಡಿ ವೇತನ ಪರಿಷ್ಕರಣೆ ಪ್ರಕ್ರಿಯೆ ಆರಂಭಿಸಿದ್ದೇವೆ. ಸರ್ಕಾರ ನೌಕರರ ಪರವಾಗಿದೆ' ಎಂದು ವಿವರಿಸಿದರು.

ಆದರೆ, 2006ರಿಂದ ಈಚೆಗೆ ಎನ್‌ಪಿಎಸ್ ರಾಜ್ಯದಲ್ಲಿ ಜಾರಿಯಾಗಿದೆ. ಇದರ ಸಾಧಕ–ಬಾಧಕಗಳ ಮೇಲೆ ಸದನದಲ್ಲಿ ಚರ್ಚೆ ನಡೆಯಬೇಕಿದೆ. ರಾಜ್ಯ ಬೊಕ್ಕಸದ ನಿಭಾವಣೆ, ಅಭಿವೃದ್ಧಿ ಚಟುವಟಿಕೆ, ಕಲ್ಯಾಣ ಕಾರ್ಯಕ್ರಮಗಳಿಗೆ ಸಂಪನ್ಮೂಲ ಹಂಚಿಕೆ ಮಾಡಬೇಕಾಗಿದೆ. ನೌಕರರ ಹಿತಕೂಡ ಮುಖ್ಯವಾಗಿದೆ. ಸರ್ಕಾರ ಏಕಪಕ್ಷೀಯವಾಗಿ ಈ ತೀರ್ಮಾನ ತೆಗೆದುಕೊಳ್ಳುವುದಕ್ಕಿಂತ, ಎಲ್ಲ ಆಯಾಮಗಳಿಂದ ಚರ್ಚೆ ನಡೆಸಿ ನಿರ್ಣಯ ತೆಗೆದುಕೊಳ್ಳುವುದು ಸೂಕ್ತ. ಇದರ ಮೇಲಿನ ಚರ್ಚೆ ಸಮಯ ನಿಗದಿ ಮಾಡಿ ಎಂದು ಬೊಮ್ಮಾಯಿ ಅವರು, ಸಭಾಧ್ಯಕ್ಷರನ್ನು ಕೋರಿದರು.

ನೌಕರರು ಎದುರಿಸುತ್ತಿರುವ ಸಮಸ್ಯೆ ಗಂಭೀರವಾಗಿದೆ. ಸಮಯ ನೋಡಿಕೊಂಡು ಚರ್ಚೆಗೆ ಕಾಲಾವಕಾಶ ನೀಡಲಾಗುವುದು ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಭರವಸೆ ನೀಡಿದರು.

ಶಾಸಕರಿಗೂ ಎನ್‌ಪಿಎಸ್ ಅನ್ವಯಿಸಿ: ಆಯನೂರು

'ಸರ್ಕಾರಿ ನೌಕರರಿಗೆ ಅನ್ವಯವಾಗುವ ಎನ್‌ಪಿಎಸ್ ಶಾಸಕರಿಗೆ ಯಾಕೆ ಅನ್ವಯ ಆಗುವುದಿಲ್ಲ. ಅದನ್ನು ಶಾಸಕರಿಗೂ ಅನ್ವಯಿಸಬೇಕು' ಎಂದು ಬಿಜೆಪಿಯ ಆಯನೂರು ಮಂಜುನಾಥ ಹೇಳಿದರು.

ವಿಧಾನಪರಿಷತ್ತಿನಲ್ಲಿ ಎನ್‌ಪಿಎಸ್ ಕುರಿತು ನಿಯಮ 330ರ ಅಡಿ ಚರ್ಚೆಯಲ್ಲಿ ಪಾಲ್ಗೊಂಡ ಅವರು, ಪಿಂಚಣಿ ಎನ್ನುವುದು ಮುಂದೂಡಲ್ಪಟ್ಟ ವೇತನ. ಅದನ್ನು ಪಡೆಯುವುದು ನೌಕರರ ಹಕ್ಕು ಎಂದೂ ಅವರು ಪ್ರತಿಪಾದಿಸಿದರು.

ಜೆಡಿಎಸ್‌ನ ಮರಿತಿಬ್ಬೇಗೌಡ, ಬಿಜೆಪಿಯ ಎಸ್.ವಿ. ಸಂಕನೂರ, ಶಶಿಲ್ ನಮೋಶಿ, ಕೆ.ವೈ. ನಾರಾಯಣಸ್ವಾಮಿ ಅವರು, ಎನ್‌ಪಿಎಸ್ ರದ್ದುಗೊಳಿಸಿ ಒಪಿಎಸ್ ಜಾರಿಗೆ ಆಗ್ರಹಿಸಿದರು. 2006ರ ನಂತರ ನೇಮಕಗೊಂಡಿರುವ ಸರ್ಕಾರಿ, ಅನುದಾನಿತ ಶಾಲಾ ಕಾಲೇಜುಗಳ ನೌಕರರಿಗೆ ನಿಶ್ಚಿತ ಪಿಂಚಣಿ ಸೌಲಭ್ಯ ಕಲ್ಪಿಸದೆ ಇರುವುದರಿಂದ ಅವರ ನಿವೃತ್ತಿ ನಂತರದ ಬದುಕು ದುಸ್ತರವಾಗಿದೆ. ಈ ವರ್ಗದ ನೌಕರರಿಗೆ ಜ್ಯೋತಿ ಸಂಜೀವಿನಿ ಸೌಲಭ್ಯವೂ ಇಲ್ಲ' ಎಂದರು.

ಸುದ್ದಿ 2 ನಿಮಿಷ

ಕೆಪಿಟಿಸಿಎಲ್: ಜನವರಿ ಮೊದಲ ವಾರ ಆಯ್ಕೆ ಪಟ್ಟಿ

ಬೆಳಗಾವಿ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಸಹಾಯಕ ಎಂಜಿನಿಯರ್ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಜನವರಿ ಮೊದಲ ವಾರದಲ್ಲಿ ಪ್ರಕಟಿಸಲಾಗುವುದು ಎಂದು ಇಂಧನ ಸಚಿವ ವಿ. ಸುನೀಲ್ ಕುಮಾರ್ ಹೇಳಿದರು.

ವಿಧಾನಸಭೆ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಎಸ್. ಸುರೇಶ್ ಕುಮಾರ್, ಈ ಹುದ್ದೆಗಳ ಆಯ್ಕೆಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಐದು ತಿಂಗಳ ಹಿಂದೆಯೇ ಪರೀಕ್ಷೆ ನಡೆಸಿದೆ. ಫಲಿತಾಂಶ ಪ್ರಕಟಿಸುವುದು ಹೋಗಲಿ, ಕನಿಷ್ಠ ಕೀ ಉತ್ತರವನ್ನು ಪ್ರಕಟಿಸಿಲ್ಲ ಎಂದು ಆಕ್ಷೇಪಿಸಿದರು.

ಇಂತಹ ಹುದ್ದೆಗಳಿಗೆ ನೇಮಕವಾದವರು ಆಡಳಿತ ಯಂತ್ರದ ಭಾಗವಾಗುತ್ತಾರೆ. ಕರ್ನಾಟಕದಲ್ಲಿ ಕೆಇಎ ಹಾಗೂ ಕರ್ನಾಟಕ ಲೋಕಸೇವಾ ಆಯೋಗವು ಯಾವುದೇ ಪರೀಕ್ಷೆ ನಡೆಸಿದರೂ ಫಲಿತಾಂಶ ಪ್ರಕಟಿಸಲು ವಿಳಂಬ ತೋರುತ್ತಲೇ ಇದೆ. ಈ ರೀತಿ ಧೋರಣೆಯಿಂದಾಗಿ ಮುಂದೆ ಆಡಳಿತಾಂಗಕ್ಕೆ ಬರುವವರು ಆರಂಭದಲ್ಲೇ ಸಿನಿಕರಾಗುವ, ವ್ಯವಸ್ಥೆ ಬಗ್ಗೆಯೇ ಹತಾಶರಾಗುವ ಸ್ಥಿತಿ ತಲುಪುವಂತಾಗಿದೆ. ಈ ಬೆಳವಣಿಗೆ ರಾಜ್ಯಕ್ಕೆ, ಆಡಳಿತಕ್ಕೆ ಒಳಿತು ತರುವುದಿಲ್ಲ. ಕೆಇಎ, ಕೆಪಿಎಸ್‌ಸಿಯನ್ನು ಚುರುಕುಗೊಳಿಸಬೇಕಾದ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಸೇಂದಿ ವನದಲ್ಲಿ ಸಾಗುವಳಿ ಮಾಡಿದವರಿಗೆ ಭೂಮಿ: ಅಶೋಕ

ಬೆಳಗಾವಿ: ರಾಜ್ಯದ ಸೇಂದಿ ವನಗಳಲ್ಲಿ ಹಲವು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ರೈತರಿಗೆ ಆ ಭೂಮಿಯನ್ನು ನೀಡಲು ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ ಅವರು ತಿಳಿಸಿದರು.

'ಈವರೆಗೆ ಇಂತಹ ಅವಕಾಶ ಇರಲಿಲ್ಲ, ನಮ್ಮ ಸರ್ಕಾರ ಈ ಕ್ರಮ ತೆಗೆದುಕೊಂಡಿದ್ದು, ಇದರಿಂದ ಸಾವಿರಾರು ರೈತರಿಗೆ ಅನುಕೂಲ ಆಗಲಿದೆ' ಎಂದು ಅವರು ವಿಧಾನಸಭೆಯಲ್ಲಿ ಮಂಗಳವಾರ ಗಮನಸೆಳೆಯುವ ಸೂಚನೆಯಡಿ ಕಾಂಗ್ರೆಸ್‌ನ ರಾಜೇಗೌಡ ಪ್ರಶ್ನೆಗೆ ಉತ್ತರಿಸಿದರು.

ಈ ಹಿಂದೆ ಸೇಂದಿವನದ ಜಮೀನು ಕೊಡಲು ಸಾಧ್ಯವಿರಲಿಲ್ಲ, ಅದಕ್ಕೆ ನಮ್ಮ ಸರ್ಕಾರ ಅವಕಾಶ ಮಾಡಿದೆ ಎಂದು ಅವರು ಹೇಳಿದರು.

ಕುಮ್ಕಿ, ಬಾಣೆ ಜಮೀನು ವಿಚಾರವಾಗಿ ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಕಾನೂನಾತ್ಮಕವಾಗಿ ಚರ್ಚೆ ಮಾಡಿ ರೈತರಿಗೆ ನ್ಯಾಯ ಒದಗಿಸಲಾಗುವುದು. ಈ ವಿಚಾರವಾಗಿ ರೈತರ ಪರವಾಗಿ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಲಿದೆ. ಇಂತಹ ಭೂಮಿಯನ್ನು ಕೈಗಾರಿಕಾ ಉದ್ದೇಶಗಳಿಗೆ ಕೊಡುವ ಪ್ರಶ್ನೆಯೇ ಇಲ್ಲ ಎಂದರು.

ಹಾಸನಕ್ಕೆ ರೇವಣ್ಣ: ಜ.15ರ ಬಳಿಕ ನಿರ್ಧಾರ

ಬೆಳಗಾವಿ: 'ಹಾಸನವೋ ಹೊಳನರಸೀಪುರವೋ ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಲಾಗುವುದು ಎಂಬ ಬಗ್ಗೆ ಜನವರಿ 15ರ (ಧನುರ್ಮಾಸ ಕಳೆದ ನಂತರ) ಬಳಿಕ ನಿರ್ಧಾರ ಮಾಡುವೆ' ಎಂದು ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ಹೇಳಿದರು.

ಹಾಸನ ಜಿಲ್ಲೆಯ ವಿವಿಧ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಮೊದಲ ಪಟ್ಟಿಯಲ್ಲಿ ಇಲ್ಲವಲ್ಲ? ಎಲ್ಲಿ ನಿಮ್ಮ ಸ್ಪರ್ಧೆ ಎಂದು ಮಾಧ್ಯಮದವರು ಕೇಳಿದ ಪ್ರಶ್ನೆಗೆ, 'ನಿಮ್ಮನ್ನೆಲ್ಲ ಕೇಳಿ, ದಿನಾಂಕಗಳನ್ನು ನೋಡಿ ತೀರ್ಮಾನ ಪ್ರಕಟಿಸುತ್ತೇನೆ' ಎಂದರು.

ಹಾಸನದಲ್ಲಿ ಸ್ಪರ್ಧೆ ಖಚಿತವೇ ಎಂದಿದ್ದಕ್ಕೆ, 'ರೇವಣ್ಣ ನಿಂತರೆ 50 ಸಾವಿರ ಮತಗಳಿಂದ ಸೋಲಿಸುತ್ತೇವೆ ಎಂದು ಕೆಲವರು ಹೇಳಿಕೊಂಡು ಓಡುತ್ತಿದ್ದಾರೆ. ಅವರ ಸವಾಲು ಸ್ವೀಕರಿಸಲೇಬೇಕಲ್ಲ. ಎಲ್ಲವನ್ನು ಹೇಳುವುದಕ್ಕೆ ಸಮಯ ಬರುತ್ತೆ. ಒಳ್ಳೆಯ ದಿನಾಂಕ ಬರಬೇಕಲ್ಲ' ಎಂದು ಹೇಳಿದರು.

ಕಬ್ಬು ಬೆಳೆಗಾರರ ಬವಣೆ: ದರ ಹೆಚ್ಚಿಸಲು ಒತ್ತಾಯ

ವಿಧಾನ ಪರಿಷತ್‌ನಲ್ಲಿ ಬಿರುಸಿನ ಚರ್ಚೆ • ಸಭಾಪತಿ ಪೀಠದ ಮುಂದೆ ಕಾಂಗ್ರೆಸ್, ಜೆಡಿಎಸ್ ಸದಸ್ಯರ ಧರಣಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕಬ್ಬು ತೂಕದಲ್ಲಿ ಮೋಸ, ದರ ವ್ಯತ್ಯಾಸ ಮತ್ತು ಕೂಲಿಕಾರ್ಮಿಕರ ಬವಣೆ ವಿಧಾನ ಪರಿಷತ್‌ನಲ್ಲಿ ಮಂಗಳವಾರ ಚರ್ಚೆಗೆ ಗ್ರಾಸವಾದವು.

ಪ್ರಶ್ನೋತ್ತರ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಠೋಡ್, 'ಪ್ರತಿ ಟನ್‌ಗೆ ಆಂಧ್ರಪ್ರದೇಶದಲ್ಲಿ ₹3,200, ತಮಿಳುನಾಡಿನಲ್ಲಿ ₹3,150, ಉತ್ತರ ಪ್ರದೇಶದಲ್ಲಿ ₹3,500, ಹರಿಯಾಣದಲ್ಲಿ ₹3,700, ಪಂಜಾಬ್‌ನಲ್ಲಿ ₹3,800 ನೀಡಲಾಗುತ್ತಿದೆ. ಆದರೆ, ಕರ್ನಾಟಕದಲ್ಲಿ ಅತಿ ಕಡಿಮೆ ದರ ನೀಡಲಾಗುತ್ತಿದೆ. ಇದರಿಂದ, ಕಬ್ಬು ಬೆಳೆಗಾರರು ಸಂಕಷ್ಟದಲ್ಲಿದ್ದಾರೆ' ಎಂದು ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಕ್ಕರೆ ಸಚಿವ ಶಂಕರ್ ಪಾಟೀಲ ಮುನೇನಕೊಪ್ಪ ಅವರು, 'ಬೇರೆ ರಾಜ್ಯಗಳಲ್ಲಿ ಎಸ್‌ಎಪಿ ಕಾನೂನು ಇದೆ. ಕರ್ನಾಟಕದಲ್ಲಿ ಈ ಕಾನೂನು ಜಾರಿಗೊಳಿಸಿಲ್ಲ. ಎಫ್‌ಆರ್‌ಪಿ ಆಧಾರದ ಮೇಲೆ ಹಲವು ಕಾರ್ಖಾನೆಗಳು ನಿಗದಿಪಡಿಸಿದ ದರಕ್ಕಿಂತ ಹೆಚ್ಚು ಹಣ ನೀಡುತ್ತಿವೆ. 73 ಕಾರ್ಖಾನೆಗಳ ಪೈಕಿ 34ರಲ್ಲಿ ಎಥನಾಲ್ ಉತ್ಪಾದನೆ ಮಾಡಲಾಗುತ್ತಿದೆ. ಹೊಸದಾಗಿ ಎಥನಾಲ್ ತಯಾರಿಸಲು 41 ಕಾರ್ಖಾನೆಗಳು ಅರ್ಜಿ ಸಲ್ಲಿಸಿವೆ. ಜತೆ ಉಪ ಉತ್ಪನ್ನಗಳ ಲಾಭವನ್ನು ರೈತರಿಗೆ ನೀಡಬೇಕು' ಎಂದು ಸರ್ಕಾರ ಆದೇಶ ಹೊರಡಿಸಿದೆ' ಎಂದು ವಿವರಿಸಿದರು.

ಈ ಹಂತದಲ್ಲಿ ಮಧ್ಯಪ್ರವೇಶಿಸಿ ಹೇಳಿಕೆ ನೀಡಲು ಮುಂದಾದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ ಅವರಿಗೆ ಸಭಾಪತಿ ಅವಕಾಶ ನೀಡಲಿಲ್ಲ. ಆಗ ಜೆಡಿಎಸ್‌ನ ಮರಿತಿಬ್ಬೇಗೌಡ ಅವರು ಆಕ್ಷೇಪ ವ್ಯಕ್ತಪಡಿಸಿ, ಹಿರಿಯ ಸಚಿವರ ಹೇಳಿಕೆಗೆ ಅವಕಾಶ ನೀಡಬೇಕು ಎಂದು ಪಟ್ಟು ಹಿಡಿದು ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು. ಕಾಂಗ್ರೆಸ್ ಸದಸ್ಯರು ಸಹ ಅವರಿಗೆ ಬೆಂಬಲ ಸೂಚಿಸಿ ಪೀಠದ ಮುಂದೆ ಧರಣಿ ನಡೆಸಿದರು.

'ಕಬ್ಬು ಬೆಳೆ ಲಾಭದಾಯಕ ಎಂದು ಸರ್ಕಾರ ಹೇಳುತ್ತಿದೆ. ಆದರೆ, ನ್ಯಾಯಬದ್ಧವಾಗಿರುವ ದರವನ್ನು ರೈತರಿಗೆ ಏಕೆ ಕೊಡುತ್ತಿಲ್ಲ' ಎಂದು ಕಾಂಗ್ರೆಸ್ ಸದಸ್ಯ ಪಿ.ಆರ್. ರಮೇಶ್ ಪ್ರಶ್ನಿಸಿದರು.

ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿದ ಸಕ್ಕರೆ ಸಚಿವರು, 'ತೂಕದಲ್ಲಿ ಮೋಸ ಮಾಡುವುದನ್ನು ತಡೆಯಲು ಮೊದಲ ಬಾರಿ ದಾಳಿ ನಡೆಸಲಾಗಿದೆ. ಈ ರೀತಿ ದಾಳಿಗಳು ನಿರಂತರವಾಗಿ ನಡೆಯಲಿವೆ. ತೂಕದಲ್ಲಿ ಮೋಸ ಮಾಡಿದರೆ ಕ್ರಮ ಕೈಗೊಳ್ಳುತ್ತೇವೆ' ಎಂದರು.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಕಬ್ಬು ದರದ ಕುರಿತ ನಡೆದ ಚರ್ಚೆಯಲ್ಲಿ ಸಚಿವ ಮುರುಗೇಶ್ ನಿರಾಣಿ ಅವರ ಹೇಳಿಕೆಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್ ಸದಸ್ಯರು ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಗರ್ಭಿಣಿಯ ಸಂಕಷ್ಟ ಬಿಚ್ಚಿಟ್ಟ ಸವದಿ

ಕಬ್ಬು ಕಟಾವು ಮಾಡಲು ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬಂದಿದ್ದ ಗರ್ಭಿಣಿಯೊಬ್ಬರ ಸಂಕಷ್ಟಗಳನ್ನು ಬಿಜೆಪಿ ಸದಸ್ಯ ಲಕ್ಷ್ಮಣ್ ಸವದಿ ವಿವರಿಸಿದರು.

'ಈ ಮಹಿಳೆಯ ಕಷ್ಟ ನೋಡಿದರೆ ಎಂಥ ಕಟುಕನ ಕಣ್ಣಲ್ಲಿ ಕಣ್ಣೀರು ಬರಬೇಕು. ಎಂಟು ತಿಂಗಳ ಗರ್ಭಿಣಿ ಕಬ್ಬು ಕಟಾವು ಮಾಡಲು ಬಂದಿದ್ದರು. ಹೆರಿಗೆ ಸಂದರ್ಭದಲ್ಲಿ ಮೂರು ದಿನ ಮಾತ್ರ ರಜೆ ತೆಗೆದುಕೊಂಡು ಮತ್ತೆ ಕೆಲಸಕ್ಕೆ ಹಾಜರಾದರು. ಪ್ರತಿ ಟನ್‌ಗೆ ₹320–₹350 ಕೂಲಿ ಪಡೆಯುವ ಇಂತಹ ಕೂಲಿಕಾರ್ಮಿಕರು ರಕ್ತ ಸುಟ್ಟು, ಬೆವರು ಚೆಲ್ಲುತ್ತಾರೆ. ಇಂತಹ ತಾಯಿಯ ಶಾಪ ಮೋಸ ಮಾಡುವವರಿಗೆ ತಟ್ಟುವುದಿಲ್ಲವೇ? ನಿಮಗೆ ಕರುಣೆ ಬರುವುದಿಲ್ಲವೇ?' ಎಂದು ಪ್ರಶ್ನಿಸಿದರು.

'ಕಾರ್ಖಾನೆಗಳಲ್ಲಿ ಮೋಸ ಆಗುವುದಿಲ್ಲ ಎನ್ನುವುದನ್ನು ಒಪ್ಪುವುದಿಲ್ಲ. ತೂಕದಲ್ಲಿ 2–3 ಟನ್ ವ್ಯತ್ಯಾಸ ಮಾಡುವವರ ಫೋಟೊಗಳನ್ನು ಎಲ್ಲಿ ಹಾಕಬೇಕು. ಮೋಸ ಮಾಡುವವರಿಗೆ ಕೈಮುಗಿಯುತ್ತೇನೆ. ಕಾಲಿಗೆ ಬೀಳುತ್ತೇನೆ. ದಯವಿಟ್ಟು ಅನ್ಯಾಯ ಮಾಡಬೇಡಿ' ಎಂದು ಕೋರಿದರು.

ಕಾರ್ಖಾನೆಗೆ ಕಬ್ಬು ಕಳುಹಿಸಿದ 15 ದಿನಗಳಲ್ಲಿ ರೈತರಿಗೆ ಹಣ ಕೊಡಬೇಕು. ಇಲ್ಲದಿದ್ದರೆ ಬಡ್ಡಿ ಸಮೇತ ನೀಡಬೇಕು. ಆದರೆ, ಯಾರೂ ಪಾವತಿಸುತ್ತಿಲ್ಲ

ಪ್ರಕಾಶ್ ರಾಠೋಡ್
ವಿರೋಧ ಪಕ್ಷದ ಮುಖ್ಯ ಸಚೇತಕ

ನಮ್ಮ ಯಾವುದೇ ಕಾರ್ಖಾನೆಗಳಿಗೆ ಯಾವುದೇ ಸಮಯದಲ್ಲಿ ದಿಢೀರ್ ದಾಳಿ ನಡೆಸಿ ಪರಿಶೀಲಿಸಬಹುದು. ನಮ್ಮ ಯಾವುದೇ ಕಾರ್ಖಾನೆಗಳಲ್ಲಿ ಮೋಸ ನಡೆಯುತ್ತಿಲ್ಲ

ಮುರುಗೇಶ್ ನಿರಾಣಿ
ಕೈಗಾರಿಕೆ ಸಚಿವ

ಭೂ ಪರಿವರ್ತನೆ ಇನ್ನಷ್ಟು ಸರಳ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೃಷಿಭೂಮಿಯಲ್ಲಿ ಸ್ವಂತಕ್ಕೆ ಮನೆ, ಕೃಷಿ ಪರಿಕರಗಳನ್ನು ಸಂಗ್ರಹಿಸಿಡಲು ಕಟ್ಟಡ, ತೋಟದ ಮನೆ ನಿರ್ಮಿಸಿಕೊಳ್ಳಲು ರೈತರು ಅರ್ಜಿ ಸಲ್ಲಿಸಿದ ಏಳು ದಿನಗಳ ಒಳಗೇ ಮಂಜೂರಾತಿ ಆದೇಶ ಹೊರಡಿಸಲು ಜಿಲ್ಲಾಧಿಕಾರಿಗೆ ಗಡುವು ವಿಧಿಸುವ ಉದ್ದೇಶದಿಂದ 'ಕರ್ನಾಟಕ ಭೂ ಕಂದಾಯ ಕಾಯ್ದೆ ತಿದ್ದುಪಡಿ' ಮಸೂದೆ ಮಂಡಿಸಲಾಗಿದೆ.

ಈ ಮಸೂದೆಯನ್ನು ಕಂದಾಯ ಸಚಿವ ಆರ್. ಅಶೋಕ ಮಂಗಳವಾರ ವಿಧಾನಸಭೆಯಲ್ಲಿ ಮಂಡಿಸಿದರು. ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಸೆಕ್ಷನ್ 95 ಮತ್ತು 96ನ್ನು ಮತ್ತಷ್ಟು ತಿದ್ದುಪಡಿ ತರುವ ಉದ್ದೇಶವನ್ನು ಮಸೂದೆ ಹೊಂದಿದೆ.

'ಮಹಾ ಯೋಜನೆ (ಮಾಸ್ಟರ್ ಪ್ಲಾನ್) ಅಥವಾ ನಗರ ಯೋಜನಾ ಪ್ರಾಧಿಕಾರದ ಮಂಜೂರಾತಿ ಅನ್ವಯ ಕೃಷಿಭೂಮಿ ಅಥವಾ ಅದರ ಭಾಗವನ್ನು ಯಾವುದಾದರೂ ಇತರ ಉದ್ದೇಶಕ್ಕೆ ಬಳಸಲು ಇಚ್ಛಿಸುವವರು ನಿಗದಿಪಡಿಸಿದ ದಂಡ ಪಾವತಿಸಿ ಪ್ರಮಾಣಪತ್ರ ಸಹಿತ ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಬೇಕು. ಹೀಗೆ ಸಲ್ಲಿಕೆಯಾದ ಅರ್ಜಿಗಳಿಗೆ ಏಳು ದಿನಗಳಲ್ಲಿ ಜಿಲ್ಲಾಧಿಕಾರಿ ಮಂಜೂರಾತಿ ಆದೇಶ ಹೊರಡಿಸಬೇಕು. 15 ದಿನ ಕಳೆದರೂ ಜಿಲ್ಲಾಧಿಕಾರಿ ಅರ್ಜಿಗಳ ವಿಲೇವಾರಿ ಮಾಡದಿದ್ದರೆ, ಕೃಷಿಯೇತರ ಭೂಮಿಯಾಗಿ ಪರಿವರ್ತನೆ ಆಗಿದೆ ಎಂದು ಪರಿಭಾವಿಸಿಕೊಳ್ಳಬಹುದು' ಎಂದು ಪ್ರಸ್ತಾವಿತ ಮಸೂದೆಯಲ್ಲಿ ತಿಳಿಸಲಾಗಿದೆ.

ಮೀಸಲು ಹೆಚ್ಚಳಕ್ಕೆ ಮಸೂದೆ: ಪರಿಶಿಷ್ಟ ಜಾತಿಯ ಮೀಸಲಾತಿ ಪ್ರಮಾಣವನ್ನು ಶೇ 15ರಿಂದ 17ಕ್ಕೆ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಕಾಯ್ದೆ ರೂಪಿಸಲು ವಿಧಾನಸಭೆಯಲ್ಲಿ ಮಸೂದೆ ಮಂಡಿಸಲಾಯಿತು.

ಕೈಗಾರಿಕೆಗಳ ಉತ್ತೇಜನಕ್ಕೆ 'ವಿಶೇಷ ಹೂಡಿಕೆ ಪ್ರದೇಶ' ಮಸೂದೆ–2022'ನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು.

ರಾಜ್ಯದ ಗಡಿಭಾಗದಲ್ಲಿ 57 ತಾಲ್ಲೂಕುಗಳಿದ್ದವು. ಸರ್ಕಾರ ಹೊಸದಾಗಿ 47 ತಾಲ್ಲೂಕುಗಳನ್ನು ರಚಿಸಿದೆ. ಅದರಲ್ಲಿ 11 ತಾಲ್ಲೂಕುಗಳು ಗಡಿ ಭಾಗಕ್ಕೆ ಬರುತ್ತದೆ. ಈ ತಾಲ್ಲೂಕುಗಳನ್ನು ಗಡಿಭಾಗ ಎಂದು ಪರಿಗಣಿಸಲು ಅನುವು ಮಾಡಿಕೊಡುವ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಮಸೂದೆಯನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ವಿಧಾನಸಭೆಯಲ್ಲಿ ಮಂಡಿಸಿದರು.

ನಾಮಪತ್ರ ಸಲ್ಲಿಕೆ

ಬೆಳಗಾವಿಯ ಸುವರ್ಣ ಸೌಧದಲ್ಲಿ ಮಂಗಳವಾರ ವಿಧಾನ ಪರಿಷತ್ ಸದಸ್ಯ ಬಸವರಾಜ ಹೊರಟ್ಟಿ ಅವರು ಸಭಾಪತಿ ಸ್ಥಾನದ ಚುನಾವಣೆಗೆ ನಾಮಪತ್ರ ಸಲ್ಲಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ. ಶಾಸಕ ಬಿ.ಎಸ್. ಯಡಿಯೂರಪ್ಪ, ಸಚಿವ ಜೆ.ಸಿ. ಮಾಧುಸ್ವಾಮಿ ಇದ್ದರು –ಪ್ರಜಾವಾಣಿ ಚಿತ್ರ

ಮುಖ್ಯಮಂತ್ರಿ ಮಾತು ನಂಬುವೆ: ಕೆ.ಎಸ್.ಈಶ್ವರಪ್ಪ

ಬೆಂಗಳೂರು: 'ಸಚಿವ ಸಂಪುಟಕ್ಕೆ ನನ್ನನ್ನು ಹಾಗೂ ಶಾಸಕ ರಮೇಶ್ ಜಾರಕಿಹೊಳಿ ಅವರನ್ನು ಸೇರ್ಪಡೆ ಮಾಡುವ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೈಕಮಾಂಡ್ ಜತೆಗೆ ಚರ್ಚಿಸಿದ್ದಾರೆ. ಮುಖ್ಯಮಂತ್ರಿ ಮಾತಿನ ಮೇಲೆ ನಂಬಿಕೆ–ವಿಶ್ವಾಸವಿದ್ದು, ಸದ್ಯಕ್ಕೆ ಯಾವ ನಿರ್ಧಾರವನ್ನೂ ತೆಗೆದುಕೊಳ್ಳುವುದಿಲ್ಲ' ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಹೇಳಿದರು.

ಸಚಿವ ಸ್ಥಾನ ಸಿಗದೆ ಮುನಿಸಿಕೊಂಡಿರುವ ಈಶ್ವರಪ್ಪ ಬೆಳಗಾವಿಯಲ್ಲಿ ನಡೆಯುತ್ತಿರುವ ಕಲಾಪಕ್ಕೆ ಗೈರುಹಾಜರಾಗಿದ್ದು, ಮಂಗಳವಾರ ನಗರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ತಮ್ಮ ನಡೆ ಕುರಿತು ವಿವರಿಸಿದರು.

'ಸಂಪುಟಕ್ಕೆ ತೆಗೆದುಕೊಳ್ಳುವ ವಿಚಾರದಲ್ಲಿ ಹೈಕಮಾಂಡ್ ಸಹ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದೆ ಎನ್ನುವುದನ್ನು ಮುಖ್ಯಮಂತ್ರಿ ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ. ನನಗೂ ಮಂಗಳವಾರ ಬೆಳಿಗ್ಗೆಯಷ್ಟೇ ಈ ವಿಷಯ ತಿಳಿಯಿತು' ಎಂದು ಪ್ರತಿಕ್ರಿಯಿಸಿದರು.

'ರಾಜ್ಯದಲ್ಲಿ ಬಿಜೆಪಿ ಕಟ್ಟಲು ಯಡಿಯೂರಪ್ಪ, ಅನಂತಕುಮಾರ್ ಅವರ ಜತೆಗೆ ಹೆಗಲಿಗೆ ಹೆಗಲು ಕೊಟ್ಟು ಪ್ರವಾಸ ಮಾಡಿದ್ದೇನೆ. ಪ್ರಲ್ಹಾದ ಜೋಶಿ, ಜಗದೀಶ ಶೆಟ್ಟರ್ ಅವರು ಪಕ್ಷದ ಅಧ್ಯಕ್ಷರಾದ ಮೇಲೆ ಪಕ್ಷಕ್ಕೆ ಬಲ ಬಂದಿತ್ತು' ಎಂದರು.

'ನನ್ನ ಮೇಲಿದ್ದ ಪ್ರಕರಣಕ್ಕೆ ಈಗ ಕ್ಲೀನ್‌ಚಿಟ್ ಸಿಕ್ಕಿದೆ. ಆಪಾದನೆ ನಿರಾಧಾರ ಎನ್ನುವುದು ಸ್ಪಷ್ಟವಾದ ತಕ್ಷಣ ಸಂಪುಟಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಮುಖಂಡರು ಭರವಸೆ ನೀಡಿದ್ದರು. ಕ್ಲೀನ್‌ಚಿಟ್ ದೊರೆತು ನಾಲ್ಕು ತಿಂಗಳಾದರೂ ವಿಳಂಬ ಧೋರಣೆಯು ಬೇಸರ ತರಿಸಿದೆ. ಪಕ್ಷವು ಹಿರಿಯರನ್ನು ಕಡೆಗಣಿಸಿಲ್ಲ. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಅವರ ನಡುವೆ ಗೊಂದಲ ಇಲ್ಲ. ನನ್ನ ಮೇಲೆ ಯಾರೂ ಪಿತೂರಿ ನಡೆಸಿಲ್ಲ' ಎಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಈಶ್ವರಪ್ಪ, ರಮೇಶ ಜತೆ ಸಂಪರ್ಕದಲ್ಲಿದ್ದೇನೆ: ಬೊಮ್ಮಾಯಿ

ಬೆಳಗಾವಿ: 'ಶಾಸಕರಾದ ಕೆ.ಎಸ್.ಈಶ್ವರಪ್ಪ ಮತ್ತು ರಮೇಶ ಜಾರಕಿಹೊಳಿ ಅವರ ಜತೆ ಸಂಪರ್ಕದಲ್ಲಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುವರ್ಣ ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಇವರಿಬ್ಬರೂ ವಿಧಾನಮಂಡಲದ ಅಧಿವೇಶನದಲ್ಲಿ ಭಾಗವಹಿಸದೇ ಇರುವುದು ಬಹಿಷ್ಕಾರವಲ್ಲ ಎಂದರು.

'ತಮ್ಮ ಮೇಲಿದ್ದ ಪ್ರಕರಣಗಳಲ್ಲಿ ಮುಕ್ತರಾದ ಮೇಲೆ ಮತ್ತೊಮ್ಮೆ ಸಂಪುಟಕ್ಕೆ ಸೇರಬೇಕೆನ್ನುವ ಅವರ ಚಿಂತನೆ ಸರಿಯಾಗಿಯೇ ಇದೆ. ಅವರ ವಿಚಾರವನ್ನು ದೆಹಲಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಚರ್ಚೆ ಮಾಡಿದ್ದೇನೆ. ಅವರೂ ಕೂಡ ಸಕಾರಾತ್ಮಕವಾಗಿದ್ದಾರೆ. ಮಿಕ್ಕ ವಿಚಾರಗಳನ್ನು ವೈಯಕ್ತಿಕವಾಗಿ ಅವರ ಜತೆ ಹಂಚಿಕೊಂಡಿದ್ದೇನೆ' ಎಂದರು.

ಮಹಾಜನ್ ವರದಿ ಅಂತಿಮ

ಒಂದನೇ ಪುಟದಿಂದ

'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕರ್ನಾಟಕ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿ ಮತ್ತು ಗೃಹ ಸಚಿವರನ್ನು ಕರೆಸಿದ್ದು ಸರಿಯಲ್ಲ. ಅವರು ಕರೆದ ಸಭೆಗೆ ನೀವು ಹೋಗಬಾರದಿತ್ತು. ಇದರಿಂದ ಗಡಿ ವಿವಾದ ಇದೆ ಎಂಬುದನ್ನು ನಾವೇ ಒಪ್ಪಿಕೊಂಡಂತಾಗುತ್ತದೆ' ಎಂದು ಸಿದ್ದರಾಮಯ್ಯ ಆಕ್ಷೇಪ ವ್ಯಕ್ತಪಡಿಸಿದರು.

'ಡಬಲ್ ಎಂಜಿನ್ ಸರ್ಕಾರ ಅಲ್ಲ ಟ್ರಬಲ್ ಎಂಜಿನ್ ಸರ್ಕಾರ ಆಗಿದೆ. ಈ ವಿಷಯಕ್ಕೆ ಮಧ್ಯ ಪ್ರವೇಶಿಸಬೇಡಿ, ಬಾಯಿ ಮುಚ್ಚಿಕೊಂಡು ಇರಿ ಎಂದು ಅಲ್ಲಿ ಹೇಳಬೇಕಿತ್ತು. ಮಹಾರಾಷ್ಟ್ರದ ಸಚಿವರು, ಸಂಸದರು ಕರ್ನಾಟಕಕ್ಕೆ ನುಗ್ಗದಂತೆ ತಡೆದು ಒಳ್ಳೆಯ ಕ್ರಮ ತೆಗೆದುಕೊಂಡಿದ್ದೀರಿ' ಎಂದು ಅವರು ಹೇಳಿದರು.

ಆಗ ಮಧ್ಯಪ್ರವೇಶಿಸಿ ಮಾತನಾಡಿದ ಬೊಮ್ಮಾಯಿ, 'ಎರಡೂ ರಾಜ್ಯಗಳ ನಡುವೆ ಯಾವುದೇ ರೀತಿಯಲ್ಲಿ ಅಶಾಂತಿ ಉಂಟಾಗಬಾರದು, ವ್ಯಾಪಾರ–ವ್ಯವಹಾರಗಳಿಗೆ, ಸಂಚಾರಕ್ಕೆ ತೊಂದರೆ ಆಗಬಾರದು. ಉಳಿದಂತೆ ವ್ಯಾಜ್ಯವನ್ನು ನ್ಯಾಯಾಲಯದಲ್ಲೇ ಬಗೆಹರಿಸಿಕೊಳ್ಳಿ ಎಂದು ಅಮಿತ್ ಶಾ ಸಭೆಯಲ್ಲಿ ಹೇಳಿದರು. ಸಭೆಯಲ್ಲಿ ಏಕನಾಥ ಶಿಂದೆ ಅವರ ಪ್ರಶ್ನೆಗಳಿಗೆ ತೀಕ್ಷ್ಣವಾಗಿಯೇ ಪ್ರತಿಕ್ರಿಯೆ ನೀಡಿದ್ದೇನೆ' ಎಂದು ವಿವರಿಸಿದರು.

'ಗಡಿ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣವನ್ನು ಕೈಗೆತ್ತಿಕೊಳ್ಳಬಹುದೇ ಎಂಬ ಬಗ್ಗೆ ವಿಚಾರಣೆ ನಡೆಯಬೇಕಿದೆ. ಈ ವಿಷಯದಲ್ಲಿ ಮಹಾರಾಷ್ಟ್ರವೇ ಪ್ರಚೋದನೆ ಮಾಡುತ್ತಿದೆ. ಆದರೆ, ನೀವು (ಕಾಂಗ್ರೆಸ್ ನಾಯಕರು) ಅತಿಯಾಗಿ ವ್ಯಾಖ್ಯಾನ ಮಾಡುವ ಅಗತ್ಯವಿಲ್ಲ. ಶಾ ಅವರು ಗಡಿ ವಿವಾದವನ್ನು ಬಗೆಹರಿಸಲು ಕರೆದಿರಲಿಲ್ಲ. ಜವಾಬ್ದಾರಿಯುತವಾಗಿ ಸತ್ಯದಿಂದ ಮಾತನಾಡಬೇಕು' ಎಂದು ಬೊಮ್ಮಾಯಿ ತಿರುಗೇಟು ನೀಡಿದರು.

'ಆ ಸಭೆಯಲ್ಲಿ ಏನಾಯಿತು ಎಂಬ ಬಗ್ಗೆ ಮುಖ್ಯಮಂತ್ರಿಯವರು ಮಾಹಿತಿಯನ್ನು ನೀಡಲಿಲ್ಲ, ಸ್ವಯಂಪ್ರೇರಿತರಾಗಿ ಹೇಳಿಕೆ ನೀಡಬೇಕಿತ್ತು ಅಥವಾ ಶ್ವೇತಪತ್ರ ಮಂಡಿಸಬೇಕಿತ್ತು' ಎಂದು ಕಾಂಗ್ರೆಸ್‌ನ ಎಚ್.ಕೆ.ಪಾಟೀಲ ತರಾಟೆಗೆ ತೆಗೆದುಕೊಂಡರು.

'ಸಭೆಯಲ್ಲಿ ಆದ ಮಾಹಿತಿಯ ಬಗ್ಗೆ ಮಾಧ್ಯಮಗಳಿಗೆ ಅವತ್ತೇ ತಿಳಿಸಿದ್ದೇನೆ' ಎಂದು ಬೊಮ್ಮಾಯಿ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಆ ವಿಷಯ ಪತ್ರಿಕೆಗಳಲ್ಲಿ ದೊಡ್ಡದಾಗಿ ಬರುವ ಹಾಗೆ ಮಾಡಬೇಕಿತ್ತು' ಎಂದರು.

ಇದರಿಂದ ಕೊಂಚ ಮುಜಗರಕ್ಕೆ ಒಳಗಾದ ಬೊಮ್ಮಾಯಿ, 'ನೀವು ವಿರೋಧಪಕ್ಷದವರ ಹಾಗೇ ಹೇಳುತ್ತೀರಲ್ಲ' ಎಂದರು. 'ನಾನು ಆ ರೀತಿ ಹೇಳಿದ್ದಲ್ಲ, ನೀವು ಆ ಮಾಹಿತಿ ದೊಡ್ಡದಾಗಿ ಬರುವ ಹಾಗೆ ಮಾಡಬಹುದಿತ್ತು ಎಂಬುದಷ್ಟೇ ನನ್ನ ಉದ್ದೇಶವಾಗಿತ್ತು ' ಎಂದು ಕಾಗೇರಿ ಸಮಜಾಯಿಷಿ ನೀಡಿದರು. 'ಸಭಾಧ್ಯಕ್ಷರ ಬಗ್ಗೆ ಆಕ್ಷೇಪ ವ್ಯಕ್ತಪಡಿಸುವುದು ಸರಿಯಲ್ಲ' ಎಂದು ಸಿದ್ದರಾಮಯ್ಯ ಅವರು ನಗುತ್ತಲೇ ಹೇಳಿದರು. ಬೊಮ್ಮಾಯಿ ಬಳಿಕ ಮೆತ್ತಗಾದರು.

ಕರ್ನಾಟಕದ ವಿರುದ್ಧ 'ಮಹಾ' ಅಧಿವೇಶನದಲ್ಲಿ ಟೀಕೆ

ಒಂದನೇ ಪುಟದಿಂದ

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು,'ಮೊದಲ ಬಾರಿಗೆ ಕೇಂದ್ರ ಸರ್ಕಾರವು ಮಧ್ಯಪ್ರವೇಶಿಸಿರುವುದು ಸಕಾರಾತ್ಮಕ ಹೆಜ್ಜೆಯಾಗಿದೆ' ಎಂದು ಹೇಳಿದರು.

'ಈ ವಿಷಯವನ್ನು ವಿಸ್ತೃತವಾಗಿ ಚರ್ಚಿಸುವ ಕುರಿತು ಈಗಾಗಲೇ ನಿರ್ಧರಿಸಲಾಗಿದ್ದು, ಇದಕ್ಕೆ ಆಡಳಿತ ಹಾಗೂ ಪ್ರತಿಪಕ್ಷಗಳು ಒಪ್ಪಿಗೆ ಸೂಚಿಸಿವೆ' ಎಂದು ಸ್ಪೀಕರ್ ರಾಹುಲ್ ನಾರ್ವೇಕರ್ ತಿಳಿಸಿದರು.

ಎನ್‌ಸಿಪಿ ಶಾಸಕ ಹಸನ್ ಮುಶ್ರಿಫ್ ಸೇರಿದಂತೆ ಅನೇಕರು ಕರ್ನಾಟಕದಲ್ಲಿ ಎಂಇಎಸ್ ಆಯೋಜಿಸಿದ್ದ ಮಹಾ ಮೇಳಾವದಲ್ಲಿ ಭಾಗವಹಿಸಲು ತೆರಳಿದ್ದರು. ಈ ವೇಳೆ ಗಡಿಯಲ್ಲಿ ಕರ್ನಾಟಕದ ಪೊಲೀಸರು ತಮ್ಮ ಮೇಲೆ ಲಾಠಿ ಚಾರ್ಜ್ ಮಾಡಿದ್ದಾರೆ ಎಂದು ನಾಯಕರು ಆರೋಪಿಸಿದ್ದರು.

ಆದರೆ, ಮಹಾರಾಷ್ಟ್ರ ಪೊಲೀಸರು ಅವರನ್ನು ಬಂಧಿಸಿ ಬಳಿಕ ಬಿಡುಗಡೆ ಮಾಡಿದ್ದರು. ಆದರೆ, ಕೊಲ್ಹಾಪುರ ಜಿಲ್ಲಾ ಪೊಲೀಸರು ಬಂಧನದ ಹೇಳಿಕೆಯನ್ನು ನಿರಾಕರಿಸಿದ್ದಾರೆ.

ಮೀಸಲಾತಿ ಹೆಚ್ಚಳ: ಪ್ರತ್ಯೇಕ ಚರ್ಚೆಗೆ ಅವಕಾಶ

ಬೆಳಗಾವಿ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಳಕ್ಕೆ ಇರುವ ಕಾನೂನಾತ್ಮಕ ಅವಕಾಶ ಹಾಗೂ ಅಡ್ಡಿಗಳ ಬಗ್ಗೆ ಚರ್ಚಿಸಲು ಸಮಯ ನಿಗದಿ ಮಾಡುವುದಾಗಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಭರವಸೆ ನೀಡಿದರು.

ಈ ವಿಷಯದ ಬಗ್ಗೆ ಚರ್ಚಿಸಲು ಅವಕಾಶ ಕೋರಿ ನಿಲುವಳಿ ಸೂಚನೆ ಮಂಡಿಸಲು ಮುಂದಾದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಮೀಸಲಾತಿ ಹೆಚ್ಚಳದ ಪರವಾಗಿ ನಾವಿದ್ದೇವೆ. ಆದರೆ, ನೀವು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸಿ ಆದೇಶ ಹೊರಡಿಸಿದ್ದೀರಿ. ಸಂವಿಧಾನದ 9ನೇ ವಿಧಿಗೆ ತಿದ್ದುಪಡಿ ತರದೇ ಮೀಸಲಾತಿ ಹೆಚ್ಚಳ ಮಾಡುವುದು ಸಾಧ್ಯವಿಲ್ಲ ಎಂದು ಮೊದಲಿನಿಂದಲೂ ನಾವು ಪ್ರತಿಪಾದಿಸುತ್ತಾ ಬಂದಿದ್ದೇವೆ. ಇದು ಸಂವಿಧಾನಕ್ಕೆ ಸಂಬಂಧಿಸಿದ ವಿಷಯವಾಗಿದ್ದರಿಂದಾಗಿ ಚರ್ಚೆಗೆ ಅವಕಾಶ ಕೊಡಬೇಕು' ಎಂದರು. ಸಚಿವ ಜೆ.ಸಿ. ಮಾಧುಸ್ವಾಮಿ ಇದಕ್ಕೆ ಒಪ್ಪಲಿಲ್ಲ. ಕೊನೆಗೆ ಸಿ. ಎಂ ಚರ್ಚೆಗೆ ಒಪ್ಪಿಗೆ ಸೂಚಿಸಿದರು. ಸ್ಪೀಕರ್ ಅದಕ್ಕೆ ಸಮ್ಮತಿಸಿದರು.

'ಎಸ್‌ಸಿ ಮೀಸಲಾತಿ ಹೆಚ್ಚಳ ಇಲ್ಲ'

ನವದೆಹಲಿ: ಪರಿಶಿಷ್ಟ ಜಾತಿಯ (ಎಸ್‌ಸಿ) ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದೆ ಇಲ್ಲ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಲೋಕಸಭೆಯಲ್ಲಿ ಕೋಲಾರ ಸಂಸದ ಎಸ್.ಮುನಿಸ್ವಾಮಿ ಕೇಳಿರುವ ಪ್ರಶ್ನೆಗೆ ಸಚಿವರು ಮಂಗಳವಾರ ಲಿಖಿತ ಉತ್ತರ ನೀಡಿದ್ದಾರೆ.

ಖರ್ಗೆ ಹೇಳಿಕೆ: ರಾಜ್ಯಸಭೆಯಲ್ಲಿ ಕೋಲಾಹಲ

ನವದೆಹಲಿ(ಪಿಟಿಐ): ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಜಸ್ಥಾನದ ಅಲವರ್‌ನಲ್ಲಿ ಬಿಜೆಪಿ ಬಗ್ಗೆ ನೀಡಿರುವ ವಿವಾದಾತ್ಮಕ ಹೇಳಿಕೆ ಮಂಗಳವಾರ ರಾಜ್ಯಸಭೆಯಲ್ಲಿ ಕಾವೇರಿದ ಚರ್ಚೆ ಮತ್ತು ಕೋಲಾಹಲವನ್ನೇ ಸೃಷ್ಟಿಸಿತು.

ಖರ್ಗೆ ತಮ್ಮ ಕೀಳುಮಟ್ಟದ ಹೇಳಿಕೆಗೆ ಕ್ಷಮೆಯಾಚಿಸಬೇಕೆಂದು ಆಡಳಿತರೂಢ ಪಕ್ಷದ ಸದಸ್ಯರು ಪಟ್ಟುಹಿಡಿದು ಪ್ರತಿಭಟನೆ ನಡೆಸಿದರು. ಆಗ, ವಿಪಕ್ಷ ಮತ್ತು ಆಳಿತ ಪಕ್ಷದ ಸದಸ್ಯರ ನಡುವೆ ವಾಕ್ಸಮರವೂ ನಡೆಯಿತು. ಆಡಳಿತ ಪಕ್ಷದ ಸದಸ್ಯರು ಮೇಜಿನ ಮೇಲೆ ನಿಂತು ಅಶಿಸ್ತಿನಿಂದ ವರ್ತಿಸಿದ್ದಕ್ಕೂ ಕಲಾಪ ಸಾಕ್ಷಿಯಾಯಿತು.

ರಾಜ್ಯಸಭೆ ವಿರೋಧ ಪಕ್ಷದ ನಾಯಕರೂ ಆದ ಮಲ್ಲಿಕಾರ್ಜುನ ಖರ್ಗೆ ಅವರು ಅಲವರ್‌ನಲ್ಲಿ ಸೋಮವಾರ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆಯಲ್ಲಿ 'ದೇಶದ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ನಾಯಕರು ಹೋರಾಡಿದ್ದಾರೆ. ರಾಷ್ಟ್ರಕ್ಕಾಗಿ ಬಲಿದಾನ ನೀಡಿದ್ದಾರೆ. ಆದರೆ, ಬಿಜೆಪಿಯ ಒಂದು ನಾಯಿಯೂ ದೇಶಕ್ಕಾಗಿ ಸತ್ತಿಲ್ಲ' ಎಂದು ಟೀಕಿಸಿದ್ದರು.

ಸದನದ ನಾಯಕ ಪೀಯೂಷ್ ಗೋಯೆಲ್, 'ಖರ್ಗೆ ಅವರಿಗೆ ಹೇಗೆ ಮಾತನಾಡಬೇಕೆಂಬುದು ತಿಳಿದಿಲ್ಲ. ಅವರ ಹೇಳಿಕೆಯಲ್ಲಿ ಕಾಂಗ್ರೆಸಿಗರ ಅಸೂಯೆ ಕಾಣಿಸುತ್ತಿದೆ. ಕೀಳು ಹೇಳಿಕೆಗೆ ಅವರು ಕ್ಷಮೆ ಕೇಳಲಿ' ಎಂದರು.

'ಖರ್ಗೆ ಅವರಿಗೆ ಇತಿಹಾಸ ನೆನಪಿಲ್ಲ. ಜಮ್ಮು ಮತ್ತು ಕಾಶ್ಮೀರದಲ್ಲಿ ಏನಾಯಿತು, ತಮ್ಮ ಪಕ್ಷದ ಆಡಳಿತದಲ್ಲಿ ಚೀನಾ, ಭಾರತದ 38,000 ಕಿ.ಮೀ ಭೂಮಿ ಹೇಗೆ ಆಕ್ರಮಿಸಿತೆನ್ನುವುದನ್ನು ಅವರು ಮರೆತಿದ್ದಾರೆ' ಎಂದು ಗೋಯೆಲ್ ಟೀಕಿಸಿದರು.

ಕ್ಷಮೆ ಕೇಳಲು ನಿರಾಕರಿಸಿದ ಖರ್ಗೆ, 'ರಾಜಕೀಯ ಹೇಳಿಕೆ ನೀಡಿರುವುದು ಸಂಸತ್ತಿನ ಹೊರಗೆ. ಅದನ್ನು ಇಲ್ಲಿ ಚರ್ಚಿಸುವ ಅಗತ್ಯವಿಲ್ಲ. ಒಂದು ವೇಳೆ ಆ ಹೇಳಿಕೆ ಇಲ್ಲಿ ಪುನರುಚ್ಚರಿಸಿದರೆ ಬಿಜೆಪಿಗೆ ಅರಗಿಸಿಕೊಳ್ಳಲು ಕಷ್ಟ. ದೇಶಕ್ಕಾಗಿ ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಪ್ರಾಣವನ್ನೇ ಸಮರ್ಪಿಸಿದ್ದಾರೆ. ನಮ್ಮ ಪಕ್ಷದ ಭಾರತ್ ಜೋಡೊ ಯಾತ್ರೆಯನ್ನು ಬಿಜೆಪಿಯವರು 'ತೋಡೊ (ವಿಭಜನೆ)'ಎಂದಿದ್ದಕ್ಕೆ ಪ್ರತಿಕ್ರಿಯಿಸಿರುವೆ ಅಷ್ಟೇ' ಎಂದರು.

ಗಡಿಯ ಆಕ್ರಮಣದಲ್ಲಿ ತೊಡಗಿರುವ ಚೀನಾದ ಬಗ್ಗೆ ಬಿಜೆಪಿ ಸರ್ಕಾರ ಮಾತಿನಲ್ಲಿ ಸಿಂಹದಂತೆ ಘರ್ಜಿಸಿದರೂ ಕೃತಿಯಲ್ಲಿ ಮಾತ್ರ ಇಲಿಯಂತೆ ವರ್ತಿಸುತ್ತಿದೆ. ಈ ಬಗ್ಗೆ ಸಂಸತ್‌ನಲ್ಲೂ ಚರ್ಚಿಸಲಾಗದೆ ಪಲಾಯನ ಮಾಡುತ್ತಿದೆ ಎಂದು ಖರ್ಗೆ ಟೀಕಿಸಿದರು.

ನವದೆಹಲಿಯಲ್ಲಿ ಸಂಸತ್ ಚಳಿಗಾಲದ ಅಧಿವೇಶನದ ವೇಳೆ 'ಸಿರಿಧಾನ್ಯ ವರ್ಷ 2023' ಪ್ರಯುಕ್ತ ಮಂಗಳವಾರ ಏರ್ಪಡಿಸಿದ್ದ ಔತಣ ಕೂಟದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೊಂದಿಗೆ ಭೋಜನ ಸವಿದರು –ಪಿಟಿಐ ಚಿತ್ರ

ನಕಲಿ ನಾಯಕರ ನಕಲಿ ಪಕ್ಷ: ಬಿಜೆಪಿ ತಿರುಗೇಟು

'ಈಗ ಇರುವುದು ಮೂಲ ಕಾಂಗ್ರೆಸ್ ಅಲ್ಲ, ಅದೊಂದು ಇಟಲಿ ಕಾಂಗ್ರೆಸ್' ಎಂದು ಬಿಜೆಪಿಯು ಮಂಗಳವಾರ ಪುನರುಚ್ಚರಿಸುವ ಮೂಲಕ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಟೀಕೆಗೆ ಪ್ರತ್ಯುತ್ತರ ನೀಡಿದೆ.

ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು 'ಖರ್ಗೆ ಅವರ ಹೇಳಿಕೆಯನ್ನು ನಮ್ಮ ಪಕ್ಷ ತೀವ್ರವಾಗಿ ಖಂಡಿಸುತ್ತದೆ. ಸ್ವಾತಂತ್ರ್ಯ ನಂತರ ಕಾಂಗ್ರೆಸ್ ವಿಸರ್ಜಿಸಬೇಕೆಂದು ಮಹಾತ್ಮಾ ಗಾಂಧಿ ಪ್ರತಿಪಾದಿಸಿದ್ದರು. ಆದರೆ, ಅದನ್ನು ಮುಂದುವರಿಸಿದ ವಿಪಕ್ಷವು ದೇಶದ ಜನರ ದಿಕ್ಕು ತಪ್ಪಿಸುತ್ತಿದೆ' ಎಂದು ಹರಿಹಾಯ್ದಿದ್ದಾರೆ.

'ಸುಭಾಷ್ ಚಂದ್ರ ಬೋಸ್, ಬಾಲ ಗಂಗಾಧರ ತಿಲಕ್ ಹಾಗೂ ಸರ್ದಾರ್ ವಲ್ಲಭ ಭಾಯಿ ಪಟೇಲ್ ಅವರನ್ನು ಕಾಂಗ್ರೆಸ್ ಪಕ್ಷ ಹೇಗೆ ನಡೆಸಿಕೊಂಡಿತೆನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಈಗಿನದು ಮೂಲ ಕಾಂಗ್ರೆಸ್ ಅಲ್ಲವೇ ಅಲ್ಲ. ಇದು ನಕಲಿ ನಾಯಕರು ತುಂಬಿರುವ ನಕಲಿ ಕಾಂಗ್ರೆಸ್. ಪಕ್ಷದ ಅಧ್ಯಕ್ಷರು ರಬ್ಬರ್ ಸ್ಟಾಂಪ್' ಎಂದು ಜೋಶಿ ಅವರು, ಖರ್ಗೆಯವರನ್ನು ಗುರಿಯಾಗಿಸಿ ಟೀಕಾಪ್ರಹಾರ ಮಾಡಿದರು.

ಉಪಾಧ್ಯಕ್ಷರ ಸಮಿತಿಗೆ ಪಿ.ಟಿ. ಉಷಾ ನೇಮಕ

ನವದೆಹಲಿ: ರಾಜ್ಯಸಭೆಯಲ್ಲಿ ಸಭಾಪತಿ ಮತ್ತು ಉಪಸಭಾಪತಿ ಅವರು ಲಭ್ಯವಿಲ್ಲದಿದ್ದಾಗ ಸದನದ ಕಲಾಪಗಳನ್ನು ನಡೆಸುವ ಉಪಸಭಾಪತಿಗಳ ಸಮಿತಿಗೆ ಖ್ಯಾತ ಅಥ್ಲೀಟ್ ಪಿ.ಟಿ. ಉಷಾ ಅವರನ್ನು ನೇಮಕ ಮಾಡಲಾಗಿದೆ. ಇದರೊಂದಿಗೆ ಅವರು ಸಮಿತಿಗೆ ನೇಮಕಗೊಂಡ ರಾಜ್ಯಸಭೆಯ ಮೊದಲ ನಾಮನಿರ್ದೇಶಿತ ಸಂಸದೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಚಳಿಗಾಲದ ಅಧಿವೇಶನ ಇದೇ 23ಕ್ಕೆ ಮುಕ್ತಾಯ?

ನವದೆಹಲಿ (ಪಿಟಿಐ): ಸಂಸತ್‌ನ ಚಳಿಗಾಲದ ಅಧಿವೇಶನವು ನಿಗದಿತ ಅವಧಿಗಿಂತ ಒಂದು ವಾರ ಮುಂಚಿತವಾಗಿಯೇ ಡಿಸೆಂಬರ್ 23ರಂದು ಮುಕ್ತಾಯಗೊಳ್ಳಬಹುದು. ಸ್ಪೀಕರ್ ಓಂ ಬಿರ್ಲಾ ಅವರ ಅಧ್ಯಕ್ಷತೆಯಲ್ಲಿ ನಡೆದ ಲೋಕಸಭೆಯ ವ್ಯವಹಾರ ಸಲಹಾ ಸಮಿತಿಯ ಸಭೆಯಲ್ಲಿ, ಅಧಿವೇಶನ ಶೀಘ್ರ ಕೊನೆಗೊಳಿಸಲು ಶಿಫಾರಸು ಮಾಡುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಜಾಹೀರಾತು: ಎಎಪಿಯಿಂದ ₹ 97 ಕೋಟಿ ವಸೂಲಿಗೆ ಆದೇಶ

ನವದೆಹಲಿ (ಪಿಟಿಐ): 2016ರಲ್ಲಿ ಸರ್ಕಾರಿ ಜಾಹೀರಾತುಗಳ ಹೆಸರಿನಲ್ಲಿ ಪಕ್ಷದ ರಾಜಕೀಯ ಜಾಹೀರಾತುಗಳನ್ನು ಎಎಪಿ ಪ್ರಕಟಿಸಿದೆ. ಇದರ ವೆಚ್ಚ ₹ 97 ಕೋಟಿಯನ್ನು ಎಎಪಿಯಿಂದ ವಸೂಲಿ ಮಾಡುವಂತೆ ಮುಖ್ಯ ಕಾರ್ಯದರ್ಶಿಗೆ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೆನ ಅವರು ನಿರ್ದೇಶನ ನೀಡಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಮಾಹಿತಿ ಮತ್ತು ಪ್ರಸಾರ ಸಚಿವಾಲಯದ 'ಸರ್ಕಾರಿ ಜಾಹೀರಾತುಗಳಲ್ಲಿನ ವಿಷಯ ನಿಯಂತ್ರಣ ಕುರಿತ ಸಮಿತಿ'ಯು ನೀಡಿದ್ದ ನಿರ್ದೇಶನದ ಮೇರೆಗೆ ದೆಹಲಿ ಸರ್ಕಾರದ ಮಾಹಿತಿ ಮತ್ತು ಪ್ರಚಾರ ನಿರ್ದೇಶನಾಲಯವು, 'ಕ್ರಮಬದ್ಧವಲ್ಲದ ಜಾಹೀರಾತುಗಳಿಗೆ ₹ 97,14,69,137 ವೆಚ್ಚ ಮಾಡಲಾಗಿದೆ' ಎಂದು ಹೊರಡಿಸಿದ್ದ ತನ್ನ ಅಧಿಸೂಚನೆಯಲ್ಲಿ ತಿಳಿಸಿತ್ತು ಎಂದೂ ಅಧಿಕಾರಿಗಳು ಹೇಳಿದ್ದಾರೆ.

ಈ ನಡೆಯನ್ನು ಬಿಜೆಪಿ ಸ್ವಾಗತಿಸಿದೆ. ಎಎಪಿಯಿಂದ ವಸೂಲಿ ಮಾಡಬೇಕಿರುವ ₹400 ಕೋಟಿ ಎಂದು ಬಿಜೆಪಿ ಹೇಳಿದೆ.

ಲೆಫ್ಟಿನೆಂಟ್ ಗವರ್ನರ್‌ಗೆ ಅಧಿಕಾರವಿಲ್ಲ: 'ರಾಜಕೀಯ ಜಾಹೀರಾತು'ಗಳಿಗೆ ಖರ್ಚು ಮಾಡಲಾದ ₹ 97 ಕೋಟಿಯನ್ನು ಪಕ್ಷದಿಂದ ವಸೂಲಿ ಮಾಡುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಆದೇಶಿಸಲು ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ಅಧಿಕಾರ ಇಲ್ಲ' ಎಂದು ಆಮ್ ಆದ್ಮಿ ಪಾರ್ಟಿ (ಎಎಪಿ) ಮಂಗಳವಾರ ಹೇಳಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಮುಖ್ಯ ವಕ್ತಾರ ಸೌರಭ್ ಭಾರದ್ವಾಜ್, 'ಲೆಫ್ಟಿನೆಂಟ್ ಗವರ್ನರ್ ಅವರ ನಿರ್ದೇಶನ ನಮಗೆ 'ಹೊಸ ಪ್ರೇಮ ಪತ್ರ'ವಿದ್ದಂತೆ. ಈ ನಿರ್ದೇಶನಕ್ಕೆ ಕಾನೂನಿನಡಿ ಯಾವುದೇ ಮಾನ್ಯತೆ ಇಲ್ಲ' ಎಂದು ಹೇಳಿದರು.

'ಎಎಪಿ ಈಗ ರಾಷ್ಟ್ರೀಯ ಪಕ್ಷವಾಗಿ ಹೊರಹೊಮ್ಮಿರುವುದರಿಂದ ಬಿಜೆಪಿ ಗಾಬರಿಗೊಂಡಿದೆ. ಈ ಕಾರಣಕ್ಕಾಗಿಯೇ ದೆಹಲಿ ಮಹಾನಗರ ಪಾಲಿಕೆಯ ಅಧಿಕಾರವನ್ನು ಲೆಫ್ಟಿನೆಂಟ್ ಗವರ್ನರ್ ಬಳಿ ಉಳಿಯುವಂತೆ ಮಾಡಿದೆ' ಎಂದರು.

'ಬಿಜೆಪಿಯ ನಿರ್ದೇಶನದಂತೆಯೇ ಲೆಫ್ಟಿನೆಂಟ್ ಗವರ್ನರ್ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದರಿಂದ ದೆಹಲಿ ಜನರು ತೊಂದರೆ ಅನುಭವಿಸುವಂತಾಗಿದೆ. ದೆಹಲಿ ನಿವಾಸಿಗಳು ಹೆಚ್ಚು ಸಂಕಷ್ಟ ಎದುರಿಸಿದಷ್ಟೂ ಬಿಜೆಪಿಗೆ ಖುಷಿಯಾಗುತ್ತದೆ' ಎಂದು ಅವರು ಟೀಕಿಸಿದರು.

ಉದ್ಯೋಗ ಆಮಿಷ: ₹2.67 ಕೋಟಿ ವಂಚನೆ

ದೆಹಲಿ ನಿಲ್ದಾಣದಲ್ಲಿ ರೈಲುಗಳ ಎಣಿಕೆಗೆ 28 ಅಭ್ಯರ್ಥಿಗಳನ್ನು ನಿಲ್ಲಿಸಿದ್ದ ವಂಚಕರು!



ಚಿತ್ರ: ಕಣಕಾಲಮಠ

ನವದೆಹಲಿ(ಪಿಟಿಐ): ರೈಲ್ವೆಯಲ್ಲಿ ಉದ್ಯೋಗ ನೀಡುವ ಆಮಿಷ ಒಡ್ಡಿ, ತಮಿಳುನಾಡಿನ ಕನಿಷ್ಠ 28 ಮಂದಿಯನ್ನು ದೆಹಲಿಯ ರೈಲ್ವೆ ನಿಲ್ದಾಣದ ವಿವಿಧ ಪ್ಲಾಟ್‌ಫಾರ್ಮ್‌ಗಳಲ್ಲಿ ಒಂದು ತಿಂಗಳ ಕಾಲ ನಿತ್ಯವೂ 8 ಗಂಟೆಗಳವರೆಗೆ ರೈಲುಗಳ ಆಗಮನ, ನಿರ್ಗಮನ ಮತ್ತು ಬೋಗಿಗಳನ್ನು ಎಣಿಸಲು ನಿಯೋಜಿಸಿದ್ದ ಘಟನೆ ವರದಿಯಾಗಿದೆ.

ಹೀಗೆ ನಿತ್ಯವೂ ರೈಲುಗಳನ್ನು ಎಣಿಸುತ್ತಿದ್ದ 28 ಮಂದಿಗೆ ತಾವು ವಂಚನೆಗೊಳಗಾಗಿದ್ದೇವೆ ಎಂಬ ಅರಿವೂ ಇರಲಿಲ್ಲ.

ರೈಲ್ವೆಯಲ್ಲಿ ಟ್ರಾವೆಲ್ ಟಿಕೆಟ್ ಎಕ್ಸಾಮಿನರ್ (ಟಿಟಿಇ), ಟ್ರಾಫಿಕ್ ಅಸಿಸ್ಟೆಂಟ್ ಮತ್ತು ಕ್ಲರ್ಕ್‌ಗಳ ಉದ್ಯೋಗ ನೀಡುವುದಾಗಿ ವಂಚಕರ ಗುಂಪೊಂದು 28 ಅಭ್ಯರ್ಥಿಗಳಿಂದ ಸುಮಾರು ₹2.67 ಕೋಟಿ ವಸೂಲಿ ಮಾಡಿದೆ. ಉದ್ಯೋಗ ತರಬೇತಿಯ ಭಾಗವಾಗಿ ರೈಲುಗಳ ಎಣಿಕೆಗೆ ಅಭ್ಯರ್ಥಿಗಳನ್ನು ವಂಚಕರ ಗುಂಪು ನಿಯೋಜಿಸಿತ್ತು ಎಂದು ಮೂಲಗಳು ತಿಳಿಸಿವೆ.

ತರಬೇತಿಯ ಆದೇಶಗಳು, ಗುರುತಿನ ಚೀಟಿಗಳು, ತರಬೇತಿ ಪೂರ್ಣಗೊಂಡ ಪ್ರಮಾಣಪತ್ರಗಳು ಮತ್ತು ನೇಮಕಾತಿ ಪತ್ರಗಳಂತಹ ಎಲ್ಲಾ ದಾಖಲೆಗಳನ್ನು ಅಭ್ಯರ್ಥಿಗಳು ರೈಲ್ವೆಯ ಅಧಿಕಾರಿಗಳಿಗೆ ತೋರಿಸಿದಾಗ ಅವು ನಕಲಿ ಎಂದು ತಿಳಿದು ಬಂದಿದೆ.

ಈ ರೀತಿ ವಂಚನೆಗೊಳಗಾದವರಲ್ಲಿ ಬಹುತೇಕರು ಎಂಜಿನಿಯರಿಂಗ್, ತಾಂತ್ರಿಕ ಶಿಕ್ಷಣ ಪದವೀಧರರಾಗಿದ್ದಾರೆ. ಪ್ರತಿ ಉದ್ಯೋಗಾಕ್ಷಿಯಿಂದ ತಲಾ ₹ 2 ಲಕ್ಷದಿಂದ ₹ 24 ಲಕ್ಷದವರೆಗೆ ಹಣವನ್ನು ವಂಚಕರ ಗುಂಪು ಪಡೆದಿದೆ.

ಮಾಜಿ ಸೈನಿಕ ಸುಬ್ಬುಸ್ವಾಮಿ ಎಂಬುವರು ಅಭ್ಯರ್ಥಿಗಳು ಮತ್ತು ವಂಚಕರ ನಡುವೆ ಸಂಪರ್ಕ ಸೇತುವಾಗಿದ್ದರು. 'ಇದೊಂದು ವಂಚನೆಯ ಜಾಲವೆಂದು ನನಗೆ ತಿಳಿದಿರಲಿಲ್ಲ. ಅನುಮಾನಗೊಂಡು ಪರಿಶೀಲಿಸಿದಾಗ ನಾನು ಅವರ ಬಲೆಗೆ ಬಿದ್ದಿದ್ದೇನೆ ಎಂದು ತಿಳಿಯಿತು' ಎಂದು ಸುಬ್ಬುಸ್ವಾಮಿ ಅವರು ತಿಳಿಸಿದ್ದಾರೆ.

ಪ್ರತಿ ಅಭ್ಯರ್ಥಿಯು ಸುಬ್ಬುಸ್ವಾಮಿ ಅವರಿಗೆ ಹಣವನ್ನು ಪಾವತಿಸಿದ್ದು, ಬಳಿಕ ಈ ಹಣವನ್ನು ಸುಬ್ಬುಸ್ವಾಮಿ ಅವರು ವಿಕಾಸ್ ರಾಣಾ ಎಂಬ ವ್ಯಕ್ತಿಗೆ ಪಾವತಿಸಿದ್ದಾರೆ.

ರಾಣಾ ತಾನು ದೆಹಲಿಯ ಉತ್ತರ ರೈಲ್ವೆ ಕಚೇರಿಯಲ್ಲಿ ಉಪನಿರ್ದೇಶಕನಾಗಿದ್ದೇನೆ ಎಂದು ಸುಳ್ಳುಹೇಳಿ, ಅಭ್ಯರ್ಥಿಗಳಿಗೆ ವಂಚಿಸಿರುವ ಕುರಿತು ಸುಬ್ಬುಸ್ವಾಮಿ ದೆಹಲಿ ಪೊಲೀಸ್‌ನ ಆರ್ಥಿಕ ಅಪರಾಧ ವಿಭಾಗಕ್ಕೆ (ಇಒಡಬ್ಲ್ಯು) ದೂರು ನೀಡಿದ್ದಾರೆ.

ರೈಲ್ವೆ ಸಚಿವಾಲಯದ ಮಾಧ್ಯಮ ಮತ್ತು ಸಂವಹನ ವಿಭಾಗದ ಹೆಚ್ಚುವರಿ ಮಹಾನಿರ್ದೇಶಕ ಯೋಗೇಶ್ ಬವೇಜಾ ಇಂತಹ ನಕಲಿ ಉದ್ಯೋಗಜಾಲಗಳ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ತಿಳಿಸಿದ್ದಾರೆ.

ನೀತಿ ಆಯೋಗದ ಅಧ್ಯಕ್ಷ ಸಮನ್ ಬೆರಿ ಅವರು ನಾಗಾಲ್ಯಾಂಡ್‌ನ 'ಬೆಟರ್ ಲೈಫ್ ಫೌಂಡೇಷನ್'ನ ಸಂಸ್ಥಾಪಕ ಸೆತ್ರಿಚೆಮ್ ಸಂಗ್ಟಮ್ ಅವರಿಗೆ 'ರೋಹಿಣಿ ನಯ್ಯರ್ ಪ್ರಶಸ್ತಿ'ಯನ್ನು ದೆಹಲಿಯಲ್ಲಿ ಮಂಗಳವಾರ ಪ್ರದಾನ ಮಾಡಿದರು —ಪಿಟಿಐ ಚಿತ್ರ

ನಾಗಾಲ್ಯಾಂಡ್: ಗ್ರಾಮೀಣ ಸಾಧಕನಿಗೆ ರೋಹಿಣಿ ನಯ್ಯರ್ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಮಾಡಿರುವ ಅನುಪಮ ಸೇವೆಗಾಗಿ ನಾಗಾಲ್ಯಾಂಡ್‌ನ 'ಬೆಟರ್ ಲೈಫ್ ಫೌಂಡೇಷನ್'ನ ಸಂಸ್ಥಾಪಕ ಸೆತ್ರಿಚೆಮ್ ಸಂಗ್ಟಮ್ ಅವರಿಗೆ 'ರೋಹಿಣಿ ನಯ್ಯರ್ ಪ್ರಶಸ್ತಿ' ಪ್ರದಾನ ಮಾಡಲಾಗಿದೆ.

ರೋಹಿಣಿ ನಯ್ಯರ್ ಪ್ರತಿಷ್ಠಾನದ ಆಶ್ರಯದಲ್ಲಿ ಇಲ್ಲಿನ ಇಂಡಿಯಾ ಇಂಟರ್‌ನ್ಯಾಷನಲ್ ಫೌಂಡೇಷನ್‌ನಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ನೀತಿ ಆಯೋಗದ ಉಪಾಧ್ಯಕ್ಷ ಸುಮನ್ ಬೆರಿ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಈ ಪ್ರಶಸ್ತಿಯು ₹10 ಲಕ್ಷ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಸಂಗ್ಟಮ್ ಅವರು ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾದ ಹಳೆ ವಿದ್ಯಾರ್ಥಿ. ಅವರು 13 ವರ್ಷಗಳ ಹಿಂದೆ ಫೌಂಡೇಷನ್ ಸ್ಥಾಪಿಸಿ ನಾಗಾಲ್ಯಾಂಡ್‌ನ ಗ್ರಾಮೀಣ ಭಾಗದಲ್ಲಿ 1200 ರೈತ ಕುಟುಂಬಗಳ ಜೀವನದಲ್ಲಿ ಪರಿವರ್ತನೆ ತಂದಿದ್ದಾರೆ.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸಂಗ್ಟಮ್, 'ಗ್ರಾಮೀಣರ ಜೀವನದಲ್ಲಿ ಭದ್ರತೆ ತರಲು, ಜೀವವೈವಿಧ್ಯ ಉಳಿಸಲು ಫೌಂಡೇಷನ್ ಸ್ಥಾಪಿಸಿದೆ. ಕೃಷಿಕರಲ್ಲಿ ಜಾಗೃತಿ ಮೂಡಿಸಿದೆ. ಈ ಹಿಂದೆ ಅಲ್ಲಿನ ರೈತರು ಪ್ರತಿ ಎಕರೆಗೆ ₹34 ಸಾವಿರ ಆದಾಯ ಪಡೆಯುತ್ತಿದ್ದರು. ಈಗ ಅವರ ಆದಾಯ ₹1.46 ಲಕ್ಷಕ್ಕೆ ಏರಿದೆ' ಎಂದರು.

ಪ್ರತಿಷ್ಠಾನದ ಅಧ್ಯಕ್ಷ ದೀಪಕ್ ನಯ್ಯರ್ ಮಾತನಾಡಿ, '2021ರ ಅಕ್ಟೋಬರ್‌ನಲ್ಲಿ ನಿಧನರಾದ ಅರ್ಥಶಾಸ್ತ್ರಜ್ಞೆ ರೋಹಿಣಿ ನಯ್ಯರ್ ಅವರು ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಮಾಡಿರುವ ಮಹತ್ವದ ಕೆಲಸಗಳನ್ನು ಗೌರವಿಸುವ ದಿಸೆಯಲ್ಲಿ ಅವರ ಹೆಸರಿನಲ್ಲಿ ಪ್ರತೀ ವರ್ಷ ಪ್ರಶಸ್ತಿ ನೀಡಲಾಗುತ್ತದೆ. ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಮಹಿಳೆ ಹೆಸರಿನಲ್ಲಿ ನೀಡುತ್ತಿರುವ ಮೊದಲ ಪ್ರಶಸ್ತಿ ಇದಾಗಿದೆ. ಯುವ ಸಾಧಕರಿಗೆ ಗ್ರಾಮೀಣ ಕ್ಷೇತ್ರದಲ್ಲಿ ಕೆಲಸ ಮಾಡಲು ಈ ಪ್ರಶಸ್ತಿ ಇನ್ನಷ್ಟು ಉತ್ತೇಜನ ನೀಡಲಿದೆ' ಎಂದರು.

ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯೆ ರೆನಾನಾ ಝಾಬ್ವಲಾ ಮಾತನಾಡಿ, 'ಈ ಪ್ರಶಸ್ತಿಗೆ 102 ಅರ್ಜಿಗಳು ಬಂದಿದ್ದವು. ಅಂತಿಮ ಸುತ್ತಿಗೆ ಏಳು ಮಂದಿಯನ್ನು ಆಯ್ಕೆ ಮಾಡಲಾಯಿತು. ಪ್ರಶಸ್ತಿ ಪುರಸ್ಕೃತರ ಆಯ್ಕೆ ಮಾಡುವುದು ದೊಡ್ಡ ಸವಾಲಾಯಿತು' ಎಂದರು.

ಯೋಜನಾ ಆಯೋಗದಲ್ಲಿದ್ದ (ಈಗಿನ ನೀತಿ ಆಯೋಗ) ವೇಳೆ ರೋಹಿಣಿ ಅವರು ಗ್ರಾಮೀಣ ಅಭಿವೃದ್ಧಿ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡಿ ಗುರುತಿಸಿಕೊಂಡಿದ್ದರು.

ಗಾಲಿಕುರ್ಚಿಯಲ್ಲಿ ಬಂದ ತರೂರ್

ನವದೆಹಲಿ(ಪಿಟಿಐ): ಈಚೆಗಷ್ಟೇ ಎಡಗಾಲು ಉಳುಕಿರುವ ಕಾರಣ, ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ಮಂಗಳವಾರ ಸಂಸತ್ತಿಗೆ ಗಾಲಿಕುರ್ಚಿಯಲ್ಲಿ ಬಂದರು. ಈ ವೇಳೆ ತಮಗಾದ ಅನುಭವ ದಾಖಲಿಸಿರುವ ಅವರು, 'ಅಂಗವಿಕಲರಿಗೆ ನಾವು ಎಂಥ ಕೆಟ್ಟ ಸೌಲಭ್ಯ ಕಲ್ಪಿಸಿದ್ದೇವೆ' ಎಂದು ಟ್ವೀಟ್ ಮಾಡಿದ್ದಾರೆ.

ಈ ತಾತ್ಕಾಲಿಕ ಅಂಗವೈಕಲ್ಯವು ನಾವು ಅಂಗವಿಕಲರಿಗೆ ಎಷ್ಟು ಕೆಟ್ಟ ಸೌಲಭ್ಯಗಳನ್ನು ಕಲ್ಪಿಸಿದ್ದೇವೆ ಎಂಬುದನ್ನು ಮನವರಿಕೆ ಮಾಡಿದೆ. ಅಂಗವಿಕಲರಿಗೆ ನಾನು ಬೆಂಬಲ ನೀಡುತ್ತೇನೆ ಎಂದು ಬರೆದುಕೊಂಡಿದ್ದಾರೆ.

ಕೇರಳ: ಹಕ್ಕಿ ಜ್ವರ ಉಲ್ಬಣ

ಕೋಟಯಂ (ರಾಯಿಟರ್ಸ್): ಕೇರಳದ ಕೋಟಯಂ ಜಿಲ್ಲೆಯ ಎರಡು ಹಳ್ಳಿಗಳಲ್ಲಿ ಹಕ್ಕಿ ಜ್ವರ ಪ್ರಕರಣಗಳು ಏಕಾಏಕಿ ಉಲ್ಬಣಿಸಿದ್ದು, ರೋಗ ವ್ಯಾಪಕವಾಗಿ ಹರಡದಂತೆ ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮವಾಗಿ ನೂರಾರು ಕೋಳಿಗಳನ್ನು ಸಂಹರಿಸಲಾಗಿದೆ ಎಂದು ಸ್ಥಳೀಯ ಆರೋಗ್ಯಾಧಿಕಾರಿಗಳು ಹೇಳಿದ್ದಾರೆ.

ಜಿಲ್ಲೆಯ ಎರಡು ಹಳ್ಳಿಗಳಲ್ಲಿ ಬ್ರಾಯ್ಲರ್ ಕೋಳಿಗಳಲ್ಲಿ ಕಳೆದ ವಾರ ಜ್ವರ ಕಾಣಿಸಿತ್ತು. ಇದರಿಂದಾಗಿ ನೂರಾರು ಸಂಖ್ಯೆಯಲ್ಲಿ ಬಾತುಕೋಳಿಗಳು ಮತ್ತು ಇತರ ಸಾಕು ಪಕ್ಷಿಗಳನ್ನು ಹಿಡಿದು ಕೊಲ್ಲಲಾಗಿದೆ ಎಂದು ಜಿಲ್ಲಾ ಪಶು ವೈದ್ಯರು ತಿಳಿಸಿದ್ದಾರೆ.

'ಸೋಂಕು ಕಾಣಿಸಿದ ಕೊಳಗಳ ಸುತ್ತ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಕೋಳಿಗಳು ಮತ್ತು ವಿವಿಧ ಸಾಕು ಪಕ್ಷಿಗಳನ್ನು ಕೊಲ್ಲುವ ಕಾರ್ಯಾಚರಣೆ ಪ್ರಾರಂಭಿಸಿದ್ದೇವೆ' ಎಂದು ಕೋಟಯಂನ ಪಶು ವೈದ್ಯಕೀಯ ಇಲಾಖೆ ಮುಖ್ಯಸ್ಥ ಶಜಿ ಪಣಿಕರ್ ತಿಳಿಸಿದರು.

'ಸಂಪೂರ್ಣ ಸ್ವತಂತ್ರ ಕೋರುವ ವಯಸ್ಸು 18 ಅಲ್ಲ'

ಕೊಚ್ಚಿ (ಪಿಟಿಐ): 18 ವರ್ಷ ವಯಸ್ಸಿಗೆ ಕಾಲಿಡುತ್ತಿದ್ದಂತೆ ಸಂಪೂರ್ಣ ಸ್ವತಂತ್ರ ಕೋರುವುದು ಸೂಕ್ತವಲ್ಲ ಮತ್ತು ಸಮಾಜದ ದೃಷ್ಟಿಯಲ್ಲಿ ಇದು ಉತ್ತಮವಲ್ಲ ಎಂದು ಕೇರಳ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು (ಕೆಯುಎಚ್‌ಎಸ್) ಕೇರಳ ಹೈಕೋರ್ಟ್‌ಗೆ ತಿಳಿಸಿದೆ.

ವಿದ್ಯಾರ್ಥಿ ನಿಲಯದಲ್ಲಿ ರಾತ್ರಿ 9:30ರ ಮೇಲೆ ವಿದ್ಯಾರ್ಥಿನಿಯರ ಓಡಾಟವನ್ನು ನಿರ್ಬಂಧಿಸಿರುವುದನ್ನು ವಿರೋಧಿಸಿ ಕೋಯಿಕ್ಕೋಡ್ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿಯೊಬ್ಬರು ಕೇರಳ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ವೇಳೆ ಹೈಕೋರ್ಟ್‌ಗೆ ತನ್ನ ನಿಲುವು ಸಲ್ಲಿಸಿರುವ ಕೆಯುಎಚ್‌ಎಸ್, ರಾತ್ರಿ ನಿದ್ದೆಗೆಡುವುದು ಮತ್ತು ರಾತ್ರಿಯ ಮೋಜು ಮಾಡುವುದು ವಿದ್ಯಾರ್ಥಿಗಳಿಗೆ ತಕ್ಕುದಾದುದಲ್ಲ ಎಂದು ಹೇಳಿದೆ.

ವಿದ್ಯಾರ್ಥಿ ನಿಲಯಗಳ ವೇಳಾಪಟ್ಟಿಯನ್ನು ಸಡಿಲಿಸುವಂತೆ ರಾಜ್ಯ ಸರ್ಕಾರ ಡಿಸೆಂಬರ್ 6ರಂದು ಆದೇಶ ಹೊರಡಿಸಿದೆ. ಹೊಸ ಆದೇಶದಂತೆ ಹುಡುಗರು ಮತ್ತು ಹುಡುಗಿಯರ ವಿದ್ಯಾರ್ಥಿ ನಿಲಯಗಳ ಗೇಟುಗಳನ್ನು ರಾತ್ರಿ 9:30ಕ್ಕೆ ಮುಚ್ಚಬೇಕು. ಆದರೆ ವಿದ್ಯಾರ್ಥಿಗಳು ನಿರ್ದಿಷ್ಟ ಕಾರಣಕ್ಕಾಗಿ ತಡವಾಗಿ ಬಂದರೆ ಅವರಿಗೆ ಒಳಹೋಗಲು ಅನುವು ಮಾಡಬೇಕು ಎಂದು ಸರ್ಕಾರ ಪರ ವಕೀಲರು ಕೋರ್ಟ್‌ಗೆ ತಿಳಿಸಿದರು. ಇದನ್ನು ನ್ಯಾಯಮೂರ್ತಿ ದೇವನ್ ರಾಮಚಂದ್ರನ್ ಅನುಮೋದಿಸಿದರು.

ಆದರೆ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕೆಯುಎಚ್‌ಎಸ್, ಮಿದುಳಿನ ಪಕ್ವತೆಯು ವಯಸ್ಸಿನ ಆಧಾರದಲ್ಲಿ ಆಗಿರುವುದಿಲ್ಲ. ಪರಿಸರದ ಒತ್ತಡ, ತೊಂದರೆಯುಂಟು ಮಾಡಬಲ್ಲ ನಡವಳಿಕೆ, ಮಾದಕವಸ್ತು ವ್ಯಸನ, ವೇಗದ ವಾಹನ ಚಾಲನೆ, ಅಸುರಕ್ಷಿತ ಲೈಂಗಿಕ ಸಂಪರ್ಕದಂತಹ ಆಕರ್ಷಣೆಗಳನ್ನು ಪ್ರತಿರೋಧಿಸುವ ಶಕ್ತಿಯನ್ನು ಹದಿಹರೆಯದವರ ಮಿದುಳು ಹೊಂದಿರುವುದಿಲ್ಲ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿರುವ ಅಂಶ ಎಂದು ಕೋರ್ಟ್‌ಗೆ ತಿಳಿಸಿತು.

ವಿದ್ಯಾರ್ಥಿನಿಯರು ಮಾತ್ರ ಈ ನಿರ್ಬಂಧಕ್ಕೆ ಒಳಗಾಗಬೇಕೇ. ಈ ನಿಯಮಗಳು ಹುಡುಗರಿಗೆ ಏಕೆ ಅನ್ವಯವಾಗುವುದಿಲ್ಲ ಎಂದು ಎಂದು ಆರಂಭದಲ್ಲಿ ಹೈಕೋರ್ಟ್ ವಿ.ವಿಯನ್ನು ಪ್ರಶ್ನಿಸಿತು. ಹುಡುಗಿಯರನ್ನು ಕೂಡಿ ಹಾಕುವ ಬದಲು ಅವರವರ ಯೋಗಕ್ಷೇಮವನ್ನು ಅವರೇ ನೋಡಿಕೊಳ್ಳುವಂತೆ ಮಾಡುವತ್ತ ಸರ್ಕಾರ, ಸಾರ್ವಜನಿಕ ಸಂಸ್ಥೆಗಳು ಗಮನಹರಿಸಬೇಕು ಎಂದು ಹೈಕೋರ್ಟ್ ಹೇಳಿತು.

ಸಂಕ್ಷಿಪ್ತ ಸುದ್ದಿ

ಬಿಹಾರ ಸೇತುವೆ ಕುಸಿತ– ತನಿಖೆಗೆ ಆದೇಶ

ಬೇಗುಸರಾಯ್, ಬಿಹಾರ (ಪಿಟಿಐ): ಇಲ್ಲಿಯ ಬುರ್ಹಿ ಗಂಡಕ್ ನದಿಗೆ ಅಡ್ಡಲಾಗಿ ₹13.48 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಸೇತುವೆಯು ಉದ್ಘಾಟನೆಯಾಗುವುದಕ್ಕೂ ಮುನ್ನವೇ ಕುಸಿದ ಪ್ರಕರಣವನ್ನು ತನಿಖೆಗೆ ಒಳಪಡಿಸಲು ಆದೇಶಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜೀನಾಮೆಗೆ ಆಗ್ರಹ

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಹಿಂದಿನ ಎಂವಿಎ ಸರ್ಕಾರದಲ್ಲಿ ಸಚಿವರಾಗಿದ್ದಾಗ, ಕೊಳೆಗೇರಿ ನಿವಾಸಿಗಳಿಗೆ ಮೀಸಲಾಗಿದ್ದ ಭೂಮಿಯನ್ನು ಖಾಸಗಿಯವರಿಗೆ ಹಂಚಿಕೆ ಮಾಡುವ ಸಂಬಂಧ ನಿರ್ಧಾರ ತೆಗೆದುಕೊಂಡಿದ್ದ ವಿಷಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಬಾಂಬೆ ಹೈಕೋರ್ಟ್ ಆದೇಶಿಸಿದೆ. ಆದೇಶದ ಬಳಿಕ ವಿರೋಧ ಪಕ್ಷಗಳು ಶಿಂದೆ ರಾಜೀನಾಮೆಗೆ ಒತ್ತಾಯಿಸಿವೆ.

ಎಲ್‌ಇಟಿಯ 3 ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಮಂಗಳವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಮೂವರು ಲಷ್ಕರ್-ಎ-ತೈಯಬಾ ಭಯೋತ್ಪಾದಕರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹತ್ಯೆಗೀಡಾದವರಲ್ಲಿ ಒಬ್ಬ ಕಾಶ್ಮೀರಿ ಪಂಡಿತ್ ಪುರಾಣ ಕ್ರಿಶನ್ ಭಟ್ ಹತ್ಯೆಯಲ್ಲಿ ಭಾಗಿಯಾಗಿದ್ದ ಎನ್ನಲಾದ ಲತೀಫ್ ಲೋನ್ ಎಂದು ತಿಳಿಸಿದ್ದಾರೆ.

ಸಮಗ್ರ ಶಿಕ್ಷಣ – ಕರ್ನಾಟಕ
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು–560001.
ಸಂಖ್ಯೆ : ಸಶಿಕ/ಕೆ.ಶಿ.ಕ/ಎನ್.ಇ.ಪಿ/2022–23 ದಿನಾಂಕ: 19.12.2022

ಪ್ರಕಟಣೆ

ವಿಷಯ : ಕರ್ಮಯೋಗಿ ಶಿಕ್ಷಕ್ ತರಬೇತಿ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲು ತರಬೇತಿ ಸಾಹಿತ್ಯ ರಚಿಸಿ ವಿತರಿಸುವ ಕುರಿತು ಸೇವಾ ಸಂಸ್ಥೆಗಳಿಂದ ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತರ ಅರ್ಹ ಸಂಸ್ಥೆಗಳು ಟೆಂಡರ್ ಸಲ್ಲಿಸಲು ಅರ್ಜಿ ಆಹ್ವಾನಿಸಿದ್ದು ಇ-ಟೆಂಡರ್ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 19.01.2023ರ ಸಂಜೆ 5:30 ಗಂಟೆಯವರೆಗೆ.

ಸಹಿ/–
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ – ಕರ್ನಾಟಕ
ವಾಸಾಸಂಇ/ವಾಪ್ರ/ಜಿಎ/3619/2022–23

ಭಾರತೀಯ ಸ್ಟೇಟ್ ಬ್ಯಾಂಕ್
ಅರಕೆರೆ ಶಾಖೆ, ಬೆಂಗಳೂರು ನಗರ ಜಿಲ್ಲೆ

ಕೆಳಕಂಡ ವ್ಯಕ್ತಿಯ ಕೆಳಗೆ ಉಲ್ಲೇಖಿಸಲಾಗಿರುವ ಭಾರತೀಯ ಸ್ಟೇಟ್ ಬ್ಯಾಂಕ್‌ನ ಶಾಖೆಗಳಲ್ಲಿ ತಮ್ಮ ಚಿನ್ನಾಭರಣಗಳನ್ನು ಅಡಮಾನ ನೀಡಿರುತ್ತಾರೆ ಮತ್ತು ಅವರ ಹೆಸರಿನ ಎದುರಿನಲ್ಲಿ ನಮೂದಿಸಲಾಗಿರುವ ಸಾಲಗಳನ್ನು ಪಡೆದುಕೊಂಡಿರುತ್ತಾರೆ. ಆಯಾ ಸಾಲಗಾರರಿಗೆ ರವಾನಿಸಲಾಗಿದ್ದ ನೋಟಿಸ್‌ಗಳು ಬಟವಾಡೆಗೊಳ್ಳದೆ/ ತಿರಸ್ಕೃತಗೊಂಡು ಮರಳಿ ಬಂದಿರುತ್ತವೆ. ಸಾಲಗಳು ಕೂಡ ಮರುಪಾವತಿ ಆಗಿರುವುದಿಲ್ಲ, ಆದ್ದರಿಂದ ಕೆಳಕಂಡ ಚಿನ್ನಾಭರಣಗಳನ್ನು 23-12-2022 ರಂದು ಹರಾಜು ಹಾಕಲಾಗುತ್ತಿದೆ.

ಕ್ರ. ಸಂ.	ಶಾಖೆಯ ಹೆಸರು ಮತ್ತು ವಿಳಾಸ	ಸಾಲಗಾರರ ಹೆಸರು	ಸಾಲಗಾರರ ವಿಳಾಸ	ಲೋನ್ ಅಕೌಂಟ್ ನಂಬರ್	ಸಾಲ ನೀಡಿರುವ ದಿನಾಂಕ	ಚಿನ್ನಾಭರಣಗಳ ಒಟ್ಟು ತೂಕ	ಬಡ್ಡಿ ಹೊರತುಪಡಿಸಿದಂತೆ ಬಾಕಿಮೊತ್ತ (ರೂ.ಗಳಲ್ಲಿ)
1.	ಎಸ್‌ಬಿಐ ಅರಕೆರೆ (18346), ಶ್ರೀನಿಧಿ ಪ್ಯಾರಾಡೈಸ್ ಜಿ-2, ನಂ. 754/86, ಹುಳಿಮಾವು, ಬನ್ನೇರುಘಟ್ಟ ರಸ್ತೆ, ಬೆಂಗಳೂರು 560076	ಜಿ.ಎನ್.ಬಿ. ರಾಜೇಶ್ವರಿ	ಎಸ್.ಎಂ. ಇಂಜಿನಿಯರಿಂಗ್ ನಂ.215, 4ನೇ ಹಂತ, ಬೊಮ್ ಇನ್ ಜಿಗಣಿ ಲಿಂಕ್ ರಸ್ತೆ ಬೊಮ್ಮಸಂದ್ರ ಬೆಂಗಳೂರು-560099	40807884790	24/02/2022	53.8 ಗ್ರಾಂ	1,39,183/-

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕೆಳಕಂಡ ಷರತ್ತು ಮತ್ತು ನಿಬಂಧನೆಗಳ ಮೇರೆಗೆ ಆಯಾ ಶಾಖೆಯ ಪ್ರಾಂಗಣದಲ್ಲಿಯೇ 23-12-2022 ರಂದು ಬೆಳಿಗ್ಗೆ 11:00 ಗಂಟೆಗೆ, ಮೇಲೆ ಉಲ್ಲೇಖಿಸಲಾಗಿರುವ ಚಿನ್ನಾಭರಣಗಳನ್ನು ಸಾರ್ವಜನಿಕ ಹರಾಜಿನ ಮುಖಾಂತರ ಮಾರಾಟ ಮಾಡಲಾಗುತ್ತದೆ.

ಷರತ್ತು ಮತ್ತು ನಿಬಂಧನೆಗಳು
1. ಆಸಕ್ತಿಯುಳ್ಳ ಪಕ್ಷಗಾರರು ಡಿಸೆಂಬರ್ 22 ರೊಳಗಾಗಿ ರೂ. 1000/- (ಒಂದು ಸಾವಿರ ಮಾತ್ರ) ಭದ್ರತಾ ಠೇವಣಿ ಪಾವತಿಸತಕ್ಕದ್ದು. ಯಶಸ್ವಿ ಬಿಡ್‌ದಾರರ ಈ ಠೇವಣಿಯನ್ನು ಮಾರಾಟ ಇತ್ಯರ್ಥಗೊಂಡ ಬಳಿಕ, ಅವರ ಮಾರಾಟ ಮೌಲ್ಯದಲ್ಲಿ ಹೊಂದಾಣಿಕೆ ಮಾಡಲಾಗುತ್ತದೆ. ಇನ್ನಿತರರಿಗೆ ಬಡ್ಡಿರಹಿತವಾಗಿ ಹಿಂದಿರುಗಿಸಲಾಗುತ್ತದೆ.
2. ಯಶಸ್ವಿ ಬಿಡ್‌ದಾರರು, ಮಾರಾಟ ಇತ್ಯರ್ಥಗೊಂಡ ತಕ್ಷಣ ಸ್ಥಳದಲ್ಲಿಯೇ ಆಭರಣಗಳ ಬೆಲೆಯ 50% ಮೊಬಲಗನ್ನು ಪಾವತಿಸತಕ್ಕದ್ದು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ, ಇನ್ನುಳಿದ ಮೊತ್ತವನ್ನು ಹರಾಜು ದಿನಾಂಕದಿಂದ ಒಂದು ವಾರದೊಳಗೆ ಪಾವತಿಸಬೇಕು, ಇಲ್ಲವಾದಲ್ಲಿ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಮತ್ತು ಸಂಪೂರ್ಣ ಬಿಡ್ ಮೊತ್ತವನ್ನು ಪಾವತಿಸಿದ ಬಳಿಕವಷ್ಟೇ ಆಭರಣಗಳನ್ನು ನೀಡಲಾಗುತ್ತದೆ.
3. ಆಸಕ್ತಿಯುಳ್ಳ ಬಿಡ್‌ದಾರರು ಹರಾಜಿಗಿಂತ ಎರಡು ಗಂಟೆ ಮುಂಚೆ ಆಭರಣಗಳನ್ನು ಪರೀಕ್ಷಿಸಬಹುದು.
4. ಎಲ್ಲಿದೆಯೊ ಹೇಗಿದೆಯೊ ಆಧಾರದಲ್ಲಿ ಹರಾಜು ಕೈಗೊಳ್ಳಲಾಗುತ್ತದೆ ಮತ್ತು ಆಭರಣಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಬ್ಯಾಂಕ್ ಹೊಣೆಯಾಗಿರುವುದಿಲ್ಲ.
5. ಯಾವುದೇ ಕಾರಣ ನೀಡದೆಯೇ ಸದರಿ ಹರಾಜನ್ನು ರದ್ದುಪಡಿಸುವ ಅಥವಾ ಮುಂದೂಡುವ ಹಕ್ಕು ಬ್ಯಾಂಕ್‌ನದ್ದಾಗಿರುತ್ತದೆ.
6. ಯಾವುದೇ ಕಾರಣ ನೀಡದೆಯೇ ಯಾವುದೇ ಬಿಡ್ ಸ್ವೀಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ. ಆದ್ದರಿಂದ, ಈ ಕುರಿತಂತೆ ಬ್ಯಾಂಕ್‌ನ ನಿರ್ಧಾರವೇ ಅಂತಿಮ ನಿರ್ಧಾರವಾಗಿರುತ್ತದೆ.
7. ದಯವಿಟ್ಟು ಗಮನಿಸಿ, ಇನ್ನಿತರ ಎಲ್ಲಾ ವಿಷಯಗಳಲ್ಲಿ ಬ್ಯಾಂಕ್‌ನ ನಿರ್ಧಾರವೇ ಅಂತಿಮ ನಿರ್ಧಾರವಾಗಿರುತ್ತದೆ ಮತ್ತು ಈ ಕುರಿತಂತೆ ಯಾವುದೇ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ.
8. ಸದರಿ ಹರಾಜಿನಲ್ಲಿ ಪಾಲ್ಗೊಳ್ಳುವ ವ್ಯಕ್ತಿಗಳು, ತಾವು ಮೇಲಿನ ನಿಬಂಧನೆಗಳಿಗೆ ಬದ್ಧರಾಗಿದ್ದೇವೆ ಎಂಬುದನ್ನು ಖಚಿತಪಡಿಸುವುದಕ್ಕಾಗಿ, ಹರಾಜು ಆರಂಭವಾಗುವುದಕ್ಕೂ ಮುನ್ನವೇ, ಕಡ್ಡಾಯವಾಗಿ ರಜಿಸ್ಟರ್‌ನಲ್ಲಿ ತಮ್ಮ ಸಹಿ ಹಾಕತಕ್ಕದ್ದು.

ದಿನಾಂಕ: 21-12-2022
ಸ್ಥಳ: ಬೆಂಗಳೂರು
ಸಹಿ/- ಶಾಖಾ ಪ್ರಬಂಧಕರು
ಎಸ್‌ಬಿಐ, ಶಾಖೆ ಅರಕೆರೆ, ಬೆಂಗಳೂರು ನಗರ ಜಿಲ್ಲೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ–6, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು – 560 002.
ಸಂಖ್ಯೆ:ಕಾಪಾಅ/ಯೋಕೇ–6/ಟೆಂಡರ್/04/2022–23 ದಿನಾಂಕ: 20.12.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು ಯೋಜನೆ ಕೇಂದ್ರ–6, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಅರ್ಹ ಟೆಂಡರುದಾರರುಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ
ಮಹದೇವಪುರ ವಲಯದ ವಾರ್ಡ್ ಸಂಖ್ಯೆ–53 ಬಸವನಪುರ, ವಾರ್ಡ್ ಸಂಖ್ಯೆ–54 ಹೂಡಿ, ವಾರ್ಡ್ ಸಂಖ್ಯೆ–82 ಗರುಡಾಚಾರ್‌ಪಾಳ್ಯ ಮತ್ತು ವಾರ್ಡ್ ಸಂಖ್ಯೆ–150 ಬೆಳ್ಳಂದೂರಿನಲ್ಲಿ ನಗರ ಸಾರ್ವಜನಿಕ ಆರೋಗ್ಯ ಕೇಂದ್ರ ಕಟ್ಟಡಗಳನ್ನು ನಿರ್ಮಾಣ ಮಾಡುವುದು.	255.32	3.83 ಲಕ್ಷ (1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮತ್ತು ಉಳಿಕೆ ಬಿಡ್ ದಾಖಲೆಯಲ್ಲಿ ಸೂಚಿಸಿರುವಂತೆ)
ಬೆಂಗಳೂರಿನ ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಬರುವ 07 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ದುರಸ್ಥಿ ಮತ್ತು ಉನ್ನತ್ತೀಕರಣ ಮಾಡುವುದು	208.17	3.13 ಲಕ್ಷ (1.00 ಲಕ್ಷ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮತ್ತು ಉಳಿಕೆ ಬಿಡ್ ದಾಖಲೆಯಲ್ಲಿ ಸೂಚಿಸಿರುವಂತೆ)

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 07.01.2023ರ ಸಂಜೆ 5:30 ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ದಾಖಲೆಗಳನ್ನು ಇ–ಪೋರ್ಟಲ್ ಮೂಲಕ ದಿನಾಂಕ 22.12.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ವಿಚಾರಣೆಗಳನ್ನು ದಿನಾಂಕ 31.12.2022ರ ಸಂಜೆ 5:30 ಗಂಟೆಯೊಳಗೆ ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ–6, ಬೃ.ಬೆಂ.ಮ.ಪಾಲಿಕೆ ಇಲ್ಲಿ ಸಲ್ಲಿಸಬಹುದು. (4) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ ಇಲ್ಲಿ ದಿನಾಂಕ 02.01.2023ರ ಸಂಜೆ 4:00 ಗಂಟೆಗೆ ನಡೆಸಲಾಗುವುದು. (5) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ–6, ಬೃ.ಬೆಂ.ಮ.ಪಾಲಿಕೆ ಇಲ್ಲಿ ದಿನಾಂಕ 09.01.2023ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (6) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. (7) ತಿದ್ದುಪಡಿ / ಮಾರ್ಪಾಡುಗಳು / ಬದಲಾವಣೆಗಳೇನಾದರು ಇದ್ದಲ್ಲಿ ಅವುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–6

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಧಾರವಾಡ ಗ್ರಾಮಾಂತರ ವಿಭಾಗ, ಧಾರವಾಡ
ಇ–ಟೆಂಡರ್ ಪ್ರಕಟಣೆ ಸಂಖ್ಯೆ:05/2022. (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಧಾರವಾಡ ವಿಭಾಗ ವ್ಯಾಪ್ತಿಯ ವಿವಿಧ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ/ಖಾಲಿಯಾಗುವ ಖಾಯಂ ವಾಣಿಜ್ಯ ಮಳಿಗೆಗಳಿಗೆ ಐದು (5) ವರ್ಷಗಳ ಅವಧಿಗೆ, ತೆರೆದ ಸ್ಥಳಗಳಿಗೆ ಐದು/ಹತ್ತು (5/10) ವರ್ಷಗಳ ಅವಧಿಗೆ ಹಾಗೂ ಸ್ವಚ್ಛತಾ ಗುತ್ತಿಗೆ ಎರಡು (2) ವರ್ಷಗಳ ಅವಧಿಗೆ, ಪರವಾನಿಗೆದಾರರನ್ನು ಆಯ್ಕೆ ಮಾಡಲು ದಿ: 21/12/2022 ರಿಂದ ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್–ಕಂ–ಹರಾಜು ಆಹ್ವಾನಿಸಲಾಗಿದೆ, ಟೆಂಡರ್–ಕಂ–ಹರಾಜು ದಸ್ತಾವೇಜಗಳನ್ನು ದಿನಾಂಕ: 07/01/2023 ರಂದು ವೇಳೆ: 17:00ವರೆಗೆ ಇ–ಪ್ರೊಕ್ಯುರಮೆಂಟ್ ವೆಬ್ ಸೈಟ್ ವಿಳಾಸ "Karnataka E-Procurement Portal" ಮೂಲಕ ಡೌನಲೋಡ ಮಾಡಿಕೊಳ್ಳಬಹುದು, ದಿನಾಂಕ:07/01/2023 ರಂದು ವೇಳೆ 17:00 ಘಂಟೆಯವರೆಗೆ ಆನ್ ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿರುತ್ತದೆ. ದಿನಾಂಕ:09/01/2023 ರಂದು 11:00 ಗಂಟೆಗೆ ಇ–ಟೆಂಡರ್ ತೆರೆಯಲಾಗುವುದು. ಇ–ಪ್ರೊಕ್ಯರಮೆಂಟ್ ಸೆಲ್‌ನಿಂದ DSC (Digital Signature Certificate) ಪಡೆದಿರುವ ಅಧಿಕೃತ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಚೇರಿ, ವಾಕರಸಾ ಸಂಸ್ಥೆ, ಧಾರವಾಡ ವಿಭಾಗ ಧಾರವಾಡಕ್ಕೆ ಸಂಪರ್ಕಿಸಲು ಕೋರಲಾಗಿದೆ. ಕಚೇರಿ ದೂರವಾಣಿ ಸಂಖ್ಯೆ "7760996271."&7760129545 ATS.

ಯಾವುದೇ ಕಾರಣ ನೀಡದೇ ಪ್ರಸ್ತಾವನೆಗಳನ್ನು ಸ್ವೀಕರಿಸುವ, ಮಾರ್ಪಡಿಸುವ, ತಿರಸ್ಕರಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ವಾಕರಸಾ ಸಂಸ್ಥೆ, ಧಾರವಾಡ ಗ್ರಾಮಾಂತರ ವಿಭಾಗ, ಧಾರವಾಡ
ವಾ.ಸಾ.ಇ/ಧಾ/881/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರ್‌ರವರ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ತುಂಗಾ ಮೇಲ್ದಂಡೆ ಯೋಜನಾ ವಿಭಾಗ, ಶಿವಮೊಗ್ಗ
ಫೋನ್: 08182-254832 ಫ್ಯಾಕ್ಸ್ : 08182-254832
E-mail : eeutpsmg@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ– ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

1) ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ ತುಂ.ಮೆ.ಯೋ. ವಿ/ಪಿಬಿ–2/ಟೆಂಡರ್/46 ದಿನಾಂಕ:15.12.2022. 2) ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ ತುಂ.ಮೆ.ಯೋ. ವಿ/ಪಿಬಿ –2/ಟೆಂಡರ್/47 ದಿನಾಂಕ:15.12.2022. 3) ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ ತುಂ.ಮೆ.ಯೋ. ವಿ/ಪಿಬಿ–2/ಟೆಂಡರ್/48 ದಿನಾಂಕ:15.12.2022. 4) ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ ತುಂ.ಮೆ.ಯೋ. ವಿ/ಪಿಬಿ–2/ಟೆಂಡರ್/49 ದಿನಾಂಕ:15.12.2022.

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿ ಬರುವ ಹೊಸಹಳ್ಳಿ ಏತ ನೀರಾವರಿ ಯೋಜನೆಯಡಿ ಬರುವ ನಲವತ್ತು ಮೂರು (43) ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ. 21.54 ರಿಂದ 145.91 ಲಕ್ಷಗಳವರೆಗೆ ಇರುತ್ತದೆ. (2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ / ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ : 21.12.2022 17.30 ಘಂಟೆಯವರೆಗೆ. (3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 17.12.2022 ರಿಂದ 26.12.2022 ಸಾಯಂಕಾಲ 17.30 ಘಂಟೆಯವರೆಗೆ (ಕಚೇರಿ ವೇಳೆಯಲ್ಲಿ)
ಟೆಂಡರನ್ನು ತೆರೆಯುವ ದಿನಾಂಕ/ ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://eproc.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜನಿಯರ್,
ಕ.ನೀ.ನಿ.ನಿ., ತುಂ.ಮೆ.ಯೋ. ವಿಭಾಗ,
ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.122-12
ಝೇಂಕಾರ್/2022-23

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001. ಫೋನ್ ಸಂ. 080–22265383
ವೆಬ್‌ಸೈಟ್: www.kiadb.in
ನಂ.ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–32/16048/2022–23 ದಿನಾಂಕ: 19.12.2022

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹಾಗೂ ಕೆಳಗಿನ ಷೆಡ್ಯೂಲ್‌ನಲ್ಲಿ ಸೂಚಿಸಲಾದ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹಾಗೂ ಕರ್ನಾಟಕ ಸರ್ಕಾರದ ಕೆಪಿಡಬ್ಲ್ಯೂಡಿಯಿಂದ ನೀಡಲಾದ ದರ್ಜೆ–ಖ (ಸಿವಿಲ್) ಮಾನ್ಯತೆ ಪಡೆದ ಪರವಾನಗಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್ ಆಹ್ವಾನಿಸಿದೆ.

ಕಾಮಗಾರಿಯ ಹೆಸರು: (1) ಕಲಬುರಗಿ ಜಿಲ್ಲೆಯ, ನಂದೂರ್ ಕೇಸರಟಗಿ 2ನೇ ಹಂತ, ಕೈಗಾರಿಕ ಪ್ರದೇಶದಲ್ಲಿರುವ ಸಿಎ ನಿವೇಶನ (ಅಗ್ನಿ ಶಾಮಕ ಠಾಣೆಗೆ ಕಾಯ್ದಿರಿಸಲಾದ) ರಲ್ಲಿ ಪ್ಲಗ್ & ಪ್ಲೇ ಮೂಲ ಸೌಕರ್ಯ ಸ್ಥಾಪನೆ. (2) ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ತಾಂಡ್ಯ 2ನೇ ಹಂತದ 1ನೇ ಫೇಸ್‌ನಲ್ಲಿ ಆರ್‌ಸಿಸಿ ಬದಿ ಚರಂಡಿ, ಕಲ್ವರ್ಟ್‌ಗಳ ನಿರ್ಮಾಣ ಮತ್ತು ಹೆಚ್‌ಡಿಪಿಇ ನೀರು ಸರಬರಾಜು ಕೊಳವೆ ಮಾರ್ಗಗಳನ್ನು ಒಳಗೊಂಡಂತೆ 15ಮೀ & 18ಮೀ ಅಗಲದ ಡಾಂಬರು ರಸ್ತೆ ರಚನೆ ಒಳಗೊಂಡಂತೆ ಉಪ ಬಡಾವಣೆ ರಚಿಸುವುದು
ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ ಸಮಯ : 09.01.2023, ಸಂಜೆ 4.00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2
ಕೆ.ಐ.ಎ.ಡಿ.ಬಿ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/3616/ಆಕಾರ್/22–23

ಕಾರ್ಯನಿರ್ವಾಹಕ ಅಭಿಯಂತರ ಕಚೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ
ಸಂಖ್ಯೆ : ಗ್ರಾ.ಕು.ನೀ.&ನೈ.ವಿ./ಬಾಗಲಕೋಟ/ಪಿಬಿ–1,4/ಟೆಂಡರ್/2022–23/2010
ದಿನಾಂಕ : 19–12–2022

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

Jamakhandi Taluka - 1) Indent No-53301 (Saradar Vasti) APT-61.27 Lakhs,
2) Indent No-53300 (Bavi Maddi Vasti) APT-76.61 Lakhs,
Badami Taluka - 1) Indent No-53312 (Budangad) APT-75.87 Lakhs.

1) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ. 2) ಟೆಂಡರ್ ಪಾರಂ ಸಲ್ಲಿಸುವ ಅಂತಿಮ ದಿನಾಂಕ : 29–12–2022 ಸಾಯಂಕಾಲ 5.30 ಗಂಟೆಯವರೆಗೆ. 3) ಹೆಚ್ಚಿನ ವಿವರಗಳಿಗಾಗಿ ಅಂತರ್ಜಾಲದಲ್ಲಿ ನೋಡಬಹುದಾಗಿದೆ. ವಿಳಾಸ www.eproc.karnataka.gov.in.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಗ್ರಾ.ಕು.ನೀ.&ನೈ ವಿಭಾಗ, ಬಾಗಲಕೋಟ.
ಡಿಐಪಿಆರ್/ಬಾಗಲಕೋಟ/708/ಮಣಿಪಾಲ್/2022–23

ಕರ್ನಾಟಕ ಸರ್ಕಾರ
ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ರಾಮನಗರ ವಿಭಾಗ, ರಾಮನಗರ

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂ: 52/ಕಾಅ/ಗ್ರಾ.ಕು.ನೀ&ನೈ.ವಿ/ರಾ/ಟೆಂಡರ್/ಸ.ಇಂ–1&2/ಎಫ್‌ಎಸ್‌ಎಂ/1910–1920/2022–23. ದಿನಾಂಕ: 19.12.2022

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ SBM ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ಕನಕಪುರ ಮತ್ತು ರಾಮನಗರ ತಾಲ್ಲೂಕಿನ FSM ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿದೆ.

1. ಕನಕಪುರ ತಾಲ್ಲೂಕಿನ FSM Workಗೆ ಟೆಂಡರ್‌ಗಿಟ್ಟ ಮೊತ್ತ : ರೂ. 71.86 ಲಕ್ಷಗಳು ಇ.ಎಂ.ಡಿ. ಮೊತ್ತ : ರೂ. 1.44 ಲಕ್ಷಗಳು
2. ರಾಮನಗರ ತಾಲ್ಲೂಜಿನ FSM Workಗೆ ಟೆಂಡರ್‌ಗಿಟ್ಟ ಮೊತ್ತ: ರೂ. 68.59 ಲಕ್ಷಗಳು, ಇ.ಎಂ.ಡಿ. ಮೊತ್ತ : ರೂ. 1.37 ಲಕ್ಷಗಳು
3. ಕಾಲಾವಧಿ: 06 ತಿಂಗಳು
4. ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ: 06.01.2023 ಸಂಜೆ 5.30 ಗಂಟೆಯವರೆಗೆ
5. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.01.2023 ಬೆಳಿಗ್ಗೆ 11.00 ಗಂಟೆಯ ನಂತರ
6. ಆರ್ಥಿಕ ಬಿಡ್ ತೆರೆಯುವ ದಿನಾಂಕ: 13.01.2023 ಬೆಳಿಗ್ಗೆ 11.00 ಗಂಟೆಯ ನಂತರ

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದು ಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ/ವೆಬ್‌ಸೈಟ್ www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ರಾಮನಗರ ವಿಭಾಗ, ರಾಮನಗರ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜನಿಯರ್ ರವರ ಕಛೇರಿ, ವಿಜನಿನಿ ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ, ತುಮಕೂರು ಜಿಲ್ಲೆ–572132,
ದೂ ಸಂಖ್ಯೆ: 08137–282112 Email:eeyetmadhugiri4@gmail.com
ಕ್ರ.ಸಂ:ಕಾಇಂ:ವಿಜನಿನಿ/ಎಹೊಯೋ/ಮ/ವಿ.04/ಟೆ.ಅ–13/2022–23/
ದಿನಾಂಕ: 20.12.2022

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಎತ್ತಿನಹೊಳೆ ಯೋಜನೆಯಡಿ ಕೆಳಗೆ ತಿಳಿಸಲಾದ ಕಾಮಗಾರಿಯನ್ನು ಎರಡು ಟೆಂಡರ್ ದಾಖಲೆಗಳ ವ್ಯವಸ್ಥೆಯಲ್ಲಿ ಅರ್ಹ ಗುತ್ತಿಗೆದಾರರುಗಳಿಂದ ಐಟಂ–ವೈಸ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನ http://www.eproc.karnataka.gov.in ವೆಬ್ ಸೈಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕಾಮಗಾರಿಗಳ ಹೆಸರು: **01.** Construction of Aquaduct from Ch Km.258.810 to Km 259.440 including construction of Causeway CD works, and other structures under yettinahole project YGC Pkg-XXVII. **02.** Construction of gravity canal from Km.259.440 to Km 261.00 comprising of earth work excavation, formation of embankment, CC lining using mechanical paver including construction of CD works, Aquaduct and other structures under yettinahole project YGC Pkg-XXVIII. **03.** Construction of gravity canal from Km.261.00 to Km 261.690 comprising of earth work excavation, formation of embankment, CC lining using mechanical paver including construction of CD works, Cut & Cover and other structures under yettinahole project YGC Pkg-XXIX

ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ, ಟೆಂಡರಿನ ವೇಳಾಪಟ್ಟಿ, ನಿಗದಿಪಡಿಸಿದ ಇ.ಎಂ.ಡಿ ಮೊತ್ತ, ಗುತ್ತಿಗೆದಾರರ ದರ್ಜೆ, ಟೆಂಡರ್ ಷರತ್ತುಗಳು, ಟೆಂಡರ್ ಪ್ರೋಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು http://www.eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.4, ಮಧುಗಿರಿ

ಸುಭಾಷಿತ

ಯಾರಿಗೆ ತಾವು ಇರುವಲ್ಲಿಯೇ ಸಂತೋಷ, ಉತ್ಸಾಹ, ಕುತೂಹಲ ಇರುವುದಿಲ್ಲವೋ ಅಂತಹವರು ಅವನ್ನು ಹುಡುಕಿಕೊಂಡು ಪ್ರವಾಸಕ್ಕೆ ಹೋಗುವುದು ವ್ಯರ್ಥ.

–ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಬಿಹಾರದ ಕಳ್ಳಬಟ್ಟಿ ದುರಂತ ಸರ್ಕಾರದ ವೈಫಲ್ಯದ ದ್ಯೋತಕ

ಬಿಹಾರದಲ್ಲಿ ಕಳ್ಳಬಟ್ಟಿ ಕುಡಿದು 70ಕ್ಕೂ ಹೆಚ್ಚು ಜನ ಮೃತಪಟ್ಟಿದ್ದಾರೆ. ಕಳ್ಳಬಟ್ಟಿ ಕುಡಿದ ಇನ್ನೂ ಹಲವರು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ ಎಂದು ವರದಿಗಳು ಹೇಳುತ್ತಿವೆ. ಹೀಗಾಗಿ, ಸಾವಿನ ಸಂಖ್ಯೆಯು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಬಿಹಾರದ ಸಾರಣ್ ಜಿಲ್ಲೆಯ ಛಪರಾ ಈ ಕಳ್ಳಬಟ್ಟಿ ದುರಂತದ ಕೇಂದ್ರಬಿಂದು. ಇದುವರೆಗೆ ಹೆಚ್ಚಿನ ಜನ ಪ್ರಾಣ ಕಳೆದುಕೊಂಡಿರುವುದು ಇಲ್ಲೇ. ನೆರೆಯ ಸಿವಾನ್ ಜಿಲ್ಲೆ ಮಾತ್ರವೇ ಅಲ್ಲದೆ ದೂರದ ಬೇಗುಸರಾಯ್ ಜಿಲ್ಲೆಯಲ್ಲಿಯೂ ಕಳ್ಳಬಟ್ಟಿ ಕುಡಿದು ಜನ ಪ್ರಾಣ ಕಳೆದುಕೊಂಡ ಪ್ರಕರಣಗಳು ವರದಿಯಾಗಿವೆ. ಈ ಕಳ್ಳಬಟ್ಟಿ ಸಿದ್ಧವಾಗಿದ್ದು ಎಲ್ಲಿ ಎಂಬುದರ ತನಿಖೆಯನ್ನು ಬಿಹಾರ ಸರ್ಕಾರವು ಚುರುಕಾಗಿ ನಡೆಸಬೇಕು. ಆಗ ಮಾತ್ರ ಇದು ಇನ್ನಷ್ಟು ಕಡೆಗಳಿಗೆ ಸರಬರಾಜು ಆಗುವುದನ್ನು ತಡೆಯಬಹುದು. ರಾಜ್ಯದಲ್ಲಿ ವ್ಯಾಪಕವಾಗಿರುವ ಮದ್ಯ ಸೇವನೆ ಹಾಗೂ ಬಡತನವನ್ನು ನಿವಾರಿಸುವಲ್ಲಿ ಸರ್ಕಾರ ಅನುಸರಿಸುತ್ತಿರುವ ಕ್ರಮಗಳು ವಿಫಲವಾಗಿವೆ ಎಂಬುದನ್ನು ಈ ದುರಂತವು ಇನ್ನೊಮ್ಮೆ ಸ್ಪಷ್ಟಪಡಿಸಿದೆ. ಬಿಹಾರದ ಸಂಯುಕ್ತ ಜನತಾದಳ (ಜೆಡಿಯು) ನೇತೃತ್ವದ ಸರ್ಕಾರವು ರಾಜ್ಯದಲ್ಲಿ ಮದ್ಯ ತಯಾರಿಕೆ ಹಾಗೂ ಮಾರಾಟವನ್ನು 2016ರಲ್ಲಿ ನಿಷೇಧಿಸಿತು. ಆದರೆ ನಿಷೇಧವು ತನ್ನ ಉದ್ದೇಶ ಈಡೇರಿಸುವಲ್ಲಿ ವಿಫಲವಾಗಿದೆ ಎಂಬುದು ಕೆಲವು ಸಮಯದಿಂದ ಸ್ಪಷ್ಟವಾಗುತ್ತಿದೆ. ಮದ್ಯವನ್ನು ಇತರ ರಾಜ್ಯಗಳಿಂದ ತರಲಾಗುತ್ತಿದೆ. ಅಕ್ರಮವಾಗಿ ಹೆಚ್ಚಾಗಿ, ಕಳ್ಳಬಟ್ಟಿ ತಯಾರಿಸಿ ಅದನ್ನು ಬಡವರಿಗೆ ಮಾರಾಟ ಮಾಡಲಾಗುತ್ತಿದೆ. ರಾಜ್ಯದಲ್ಲಿ ಮದ್ಯವನ್ನು ನಿಷೇಧಿಸಿದ ಕ್ರಮವು ಸಮಸ್ಯೆಯು ಬೇರೊಂದು ರೂಪ ಪಡೆಯಲು ಕಾರಣವಾಯಿತು. ಅಲ್ಲಿ ಈಗ ಅಗ್ಗದ ಹಾಗೂ ವಿಷಕಾರಿ ರಾಸಾಯನಿಕ ಬಳಸಿ ಮದ್ಯವನ್ನು ಅಕ್ರಮವಾಗಿ ತಯಾರಿಸಲಾಗುತ್ತಿದೆ. ಈಚಿನ ವರ್ಷಗಳಲ್ಲಿ ರಾಜ್ಯದಲ್ಲಿ ಕಳ್ಳಬಟ್ಟಿ ದುರಂತದ ಹಲವು ಪ್ರಕರಣಗಳು ವರದಿಯಾಗಿವೆ. ಮದ್ಯ ನಿಷೇಧ ಜಾರಿಯಲ್ಲಿರುವ ಗುಜರಾತ್‌ನಲ್ಲಿಯೂ ಇದೇ ಸಮಸ್ಯೆ ಇದೆ. ಅಲ್ಲಿ ಜುಲೈನಲ್ಲಿ ಕಳ್ಳಬಟ್ಟಿ ಸೇವಿಸಿ 40ಕ್ಕೂ ಹೆಚ್ಚು ಮಂದಿ ಜೀವ ಕಳೆದುಕೊಂಡಿದ್ದರು.

ಬಿಹಾರದಲ್ಲಿ ಮದ್ಯವನ್ನು ನಿಷೇಧಿಸಿದ ಕ್ರಮವು ಸಮಸ್ಯೆಯು ಬೇರೊಂದು ರೂಪ ಪಡೆಯಲು ಕಾರಣವಾಗಿದೆ. ಅಕ್ರಮ ಮದ್ಯ ಸೇವನೆಯು ಜನರ ಜೀವ ಕಸಿಯುತ್ತಿದೆ, ವಿನಾಶಗಳನ್ನು ತಂದಿಡುತ್ತಿದೆ

ಮದ್ಯ ಮಾರಾಟ ನಿಷೇಧದ ಉದ್ದೇಶವು ಜಗತ್ತಿನ ಯಾವುದೇ ಪ್ರದೇಶದಲ್ಲೂ ಈಡೇರಿದ ನಿದರ್ಶನ ಇಲ್ಲ. ಆದರೆ ಇದನ್ನು ಒಪ್ಪಿಕೊಳ್ಳದಿರುವ ಮೂಲಕ ಹಾಗೂ ಮದ್ಯ ನಿಷೇಧದ ನೀತಿಯನ್ನು ಪುನರ್ ಪರಿಶೀಲಿಸಲು ಮುಂದಾಗದ ಮೂಲಕ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಪರಿಸ್ಥಿತಿಯನ್ನು ಇನ್ನಷ್ಟು ಜಟಿಲಗೊಳಿಸುತ್ತಿದ್ದಾರೆ. ಈಗ ಆಗಿರುವ ದುರಂತಕ್ಕೆ ಪ್ರತಿಕ್ರಿಯಿಸುವಾಗ ನಿತೀಶ್ ಕುಮಾರ್ ಅವರು, ಮೃತರ ಕುಟುಂಬಗಳಿಗೆ ಪರಿಹಾರ ನೀಡಲಾಗದು ಎಂದು ಪ್ರಕಟಿಸಿದ್ದಾರೆ. ತಮ್ಮ ತಪ್ಪು ನೀತಿಯಿಂದಾಗಿ ಸಂಕಟ ಅನುಭವಿಸುತ್ತಿರುವವರಿಗೆ ಅವರು ಏಕೆ ಶಿಕ್ಷೆ ವಿಧಿಸುತ್ತಿದ್ದಾರೆ? ಮೃತರು ಬಡವರು. ತಮ್ಮವರನ್ನು ಕಳೆದುಕೊಂಡಿರುವ ಕುಟುಂಬಗಳು, ತಮ್ಮ ಜೀವನಾಧಾರವನ್ನು ಕಳೆದುಕೊಂಡಿವೆ. ಅವರಿಗೆ ಪರಿಹಾರ ಘೋಷಿಸುವ ಬದಲು ಮುಖ್ಯಮಂತ್ರಿ, ಆ ಕುಟುಂಬಗಳ ಸಂಕಷ್ಟವನ್ನು ಇನ್ನಷ್ಟು ಹೆಚ್ಚು ಮಾಡುತ್ತಿದ್ದಾರೆ.

ಬಿಹಾರ ಮತ್ತು ಗುಜರಾತ್ ಮಾತ್ರವೇ ಅಲ್ಲದೆ ಮದ್ಯ ನಿಷೇಧವು ಮಿಜೋರಾಂ ಹಾಗೂ ನಾಗಾಲ್ಯಾಂಡ್ ರಾಜ್ಯಗಳಲ್ಲಿಯೂ ಜಾರಿಯಲ್ಲಿ ಇದೆ. ಚುನಾವಣಾ ರಾಜಕೀಯವು ಇಂತಹ ಕ್ರಮಗಳಿಗೆ ಒತ್ತಾಯಿಸುವುದು ನಿಲ್ಲುತ್ತಿಲ್ಲ. ರಾಜಕಾರಣಿಗಳು ಮಹಿಳೆಯರ ಮತ ಗಳಿಸಲು ಮದ್ಯ ನಿಷೇಧದ ಭರವಸೆ ನೀಡುತ್ತಾರೆ. ನಿಷೇಧ ಜಾರಿಗೆ ಬಂದ ಆರಂಭದಲ್ಲಿ ಬಿಹಾರದಲ್ಲಿ ಕೌಟುಂಬಿಕ ದೌರ್ಜನ್ಯ ಪ್ರಕರಣಗಳು ಕಡಿಮೆ ಪ್ರಮಾಣದಲ್ಲಿ ವರದಿಯಾಗಿದ್ದವು. ಆದರೆ, ಅಕ್ರಮ ಮದ್ಯ ಸುಲಭವಾಗಿ ಲಭ್ಯವಾಗಿ, ಈ ಪ್ರಯೋಜನವನ್ನು ಸೀಮಿತಗೊಳಿಸಿತು. ಅಕ್ರಮವಾಗಿ ಮದ್ಯ ತಯಾರಿಸುವವರ ಜೊತೆ ಪೊಲೀಸರು ಶಾಮೀಲಾದ ಕಾರಣದಿಂದಾಗಿ, ಇಂತಹ ಮದ್ಯದ ತಯಾರಿಕೆ ಹಾಗೂ ಮಾರಾಟವು ಹೆಚ್ಚಾಯಿತು. ಜನ ಇವುಗಳನ್ನು ಸೇವಿಸಿ ಪ್ರಾಣ ಕಳೆದುಕೊಳ್ಳುವಂತೆ ಆಯಿತು. ಮದ್ಯಕ್ಕೆ ಜನ ದಾಸರಾಗುವುದು ಒಂದು ದೊಡ್ಡ ಸಮಸ್ಯೆ ಎಂಬುದು ನಿಜ. ಆದರೆ, ಮದ್ಯ ನಿಷೇಧವು ರೋಗದ ಲಕ್ಷಣಕ್ಕೆ ಮಾತ್ರ ಚಿಕಿತ್ಸೆ ನೀಡುವುದಕ್ಕೆ ಸಮ; ಅದು ರೋಗಕ್ಕೆ ಕಾರಣವಾಗುವ ಅಂಶಕ್ಕೆ ಚಿಕಿತ್ಸೆ ನೀಡುವುದಿಲ್ಲ. ಅಕ್ರಮ ಮದ್ಯ ಸೇವನೆಯು ಜನರ ಜೀವ ಕಸಿಯುತ್ತಿದೆ, ವಿನಾಶಗಳನ್ನು ತಂದಿಡುತ್ತಿದೆ. ಇದು ಕೊನೆಗೊಳ್ಳಬೇಕು.

ಗತದಲ್ಲಿ ಗಾಯವಷ್ಟೇ ಅಲ್ಲ, ಗಾಯ ಮಾಯಿಸುವ ಮಂತ್ರದಂಡಗಳೂ ಇವೆಯೆಂಬುದು ಮರೆವಿಗೆ ಸರಿದಿದೆ

ಅಂತರಂಗದಲಿ ಉಷೆಯಿಲ್ಲದ ಬಹಿರಂಗದ ವೇಷ

ವಿಶ್ಲೇಷಣೆ

ಡಾ. ಸಬಿತಾ ಬನ್ನಾಡಿ

ಒಬ್ಬರಿಗೊಬ್ಬರ ಬೆಂಬಲ, ವಿಶ್ವಾಸ, ತುಂಬಿ ತುಳುಕುವ ನಗು. ಹೊರಗಿನಿಂದ ನೋಡಿದರೆ ಬಡತನದ ಪ್ರತೀಕ ದಂತಿರುವ ಚಿಕ್ಕ ಮನೆ. ಮನೆಯೊಡೆಯ ಚೆಂಬನ್ ಕುಂಜುವಿಗೆ ಒಂದು ದೋಣಿ ಮತ್ತು ಬಲೆ ಕೊಂಡು ಕೊಳ್ಳಬೇಕು ಎಂಬುದು ಜೀವಮಾನದ ಆಸೆ. ಅದಕ್ಕಾಗಿ ಹೆಂಡತಿಯ ಬೆಂಬಲದ ಜೊತೆಗೆ ಪಾರಿಕುಟ್ಟಿ ಎಂಬ ಯುವಕನೂ ಸಹಾಯ ಮಾಡುತ್ತಾನೆ. ಆಸೆ ಈಡೇರುತ್ತದೆ.

ಚೆಂಬನ್‌ಕುಂಜುವಿಗೆ ಶ್ರೀಮಂತರ ಬದುಕಿನ ಭೋಗವನ್ನು ಹತ್ತಿರದಿಂದ ನೋಡುತ್ತಾ, ಆಸೆ ಹೆಮ್ಮರ ವಾಗತೊಡಗುತ್ತದೆ. ಇನ್ನಷ್ಟು ದೋಣಿ ಬೇಕು, ತಾನು ದೋಣಿ ಖರೀದಿಸಿದವನಿಗೆ ಇರುವಂತಹ ಹೆಂಡತಿ ಬೇಕು, ದೊಡ್ಡ ಮನೆ ಬೇಕು... ಈಗ ನಿಧಾನಕ್ಕೆ ಆತ ಶ್ರೀಮಂತ ನಾಗುತ್ತಾ ಹೆಂಡತಿಯೆಡೆಗೆ ನಿರ್ಲಕ್ಷ್ಯ, ಕಷ್ಟದಲ್ಲಿ ಕೈಹಿಡಿದ ಪಾರಿಕುಟ್ಟಿಗೇ ದ್ರೋಹ ಮಾಡತೊಡಗುತ್ತಾನೆ. ಅವನು ದಿವಾಳಿ ಆಗುವಂತೆ ಮಾಡುತ್ತಾನೆ. ಹೆಂಡತಿ ಅನಾರೋಗ್ಯದಿಂದ ಸಾಯುತ್ತಾಳೆ. ತಾನು ದೋಣಿ ಖರೀದಿಸಿದವನ ಹೆಂಡತಿ ಈಗ ವಿಧವೆ. ಅವಳನ್ನು ಮದುವೆಯಾಗುತ್ತಾನೆ. ಶ್ರೀಮಂತ ಚೆಂಬನ್‌ಕುಂಜು ಈಗ ದೊಡ್ಡ ಮನೆಯ ಒಡೆಯ. ಆದರೀಗ ಮನೆಯ ಆತ್ಮವಾಗಿದ್ದ ನಗು ಮಾಯವಾಗಿದೆ. ಹೊರಗಿನಿಂದ ನೋಡಿದರೆ ಆತ ಈಗ ತುಂಬ 'ಏಳಿಗೆ' ಹೊಂದಿದ್ದಾನೆ! ಇದು, ತಕಳಿ ಶಿವಶಂಕರ್ ಪಿಳ್ಳೈ ಅವರು ಬರೆದ ಮಲಯಾಳಂ ಕಾದಂಬರಿ 'ಚೆಮ್ಮೀನ್'ನಲ್ಲಿ ಬರುವ ಕತೆಯ ಒಂದು ಎಳೆ.

ಈ ಚೆಂಬನ್‌ಕುಂಜು ನಾವು 'ಭಾವಿಸಿರುವ' ಅಭಿವೃದ್ಧಿಯ ರೂಪಕವಾಗಿ ಸದಾ ನನ್ನನ್ನು ಕಾಡುತ್ತಾನೆ. ಇದು ಒಬ್ಬ ವ್ಯಕ್ತಿಯ ಕತೆಯಲ್ಲ. ನಾವು ರೂಪಿಸುವ ಸಂಸ್ಥೆಗಳು, ದೇಶ ಕಟ್ಟುವ ಮಾದರಿಗಳು ಎಲ್ಲದರಲ್ಲೂ, ಅಲ್ಲಿನ ಸದಸ್ಯರು ಪರಸ್ಪರ ವಿಶ್ವಾಸ, ಪ್ರೀತಿ, ಕಾಳಜಿಯಿಂದ ಒಬ್ಬರಿಗೊಬ್ಬರು ಒದಗಿಬರಬೇಕು. ಸಣ್ಣ ಮಟ್ಟದಲ್ಲಿದ್ದಾಗ ಇವುಗಳನ್ನೆಲ್ಲಾ ಅನುಭವಿಸುವ ನಾವು, ಅದು ದೊಡ್ಡ-ದಾಗತೊಡಗಿದಂತೆ 'ಅಪರಿಚಿತ'ರಾಗತೊಡಗುತ್ತೇವೆ. ಆ ಅಪರಿಚಿತತೆಗಾಗಿ ಹಗಲಿರುಳೂ ಕೆಲಸ ಮಾಡುತ್ತಾ, ಹಣದ ಹರಿವು ಹೆಚ್ಚಾಗುವುದು, ಜೊತೆಗೇ ಸಾಲದ ಪ್ರಮಾಣವೂ ಹೆಚ್ಚಾಗುತ್ತಾ ಅನುಮಾನ, ಅವಿಶ್ವಾಸ, ಅಸಮಾಧಾನ, ಕ್ರೌರ್ಯವೂ ಮೇರೆ ಮೀರತೊಡಗುತ್ತವೆ.

ಈ ಅಭಿವೃದ್ಧಿ ಅಥವಾ ಏಳಿಗೆಯ ಕಲ್ಪನೆಯಲ್ಲೇ ತೊಡಕುಗಳಿವೆ. ಕೈಗಾರಿಕಾ ಕ್ರಾಂತಿಯ ನಂತರದಲ್ಲಿ ಮನುಷ್ಯರ ಬದುಕುಗಳನ್ನು ವಿವರಿಸಿಕೊಳ್ಳುವ ಕ್ರಮದಲ್ಲಿ ಆದ ದೋಷವನ್ನು ಮೌಲ್ಯವಾಗಿಸಿ ಜಗತ್ತಿನಾದ್ಯಂತ ಪಸರಿಸುವಲ್ಲಿ ಬ್ರಿಟಿಷ್ ವಸಾಹತುಶಾಹಿ ಮಾಡಿದ ಕೆಲಸದಿಂದ ಸದ್ಯಕ್ಕಂತೂ ಬಿಡುಗಡೆ ಕಾಣುತ್ತಿಲ್ಲ. ಇದನ್ನು ನಮ್ಮೊಳಗು ಎಷ್ಟು ಆಳವಾಗಿ ಪ್ರೀತಿಸುತ್ತಿದೆಯೆಂದರೆ, ಬಾಯಿಯಲ್ಲಿ ನಾವು ನಮ್ಮ ಸಂಸ್ಕೃತಿ, ಸ್ವದೇಶಿ, ಇತಿಹಾಸ ಎಂದೆಲ್ಲಾ ಮಾತಾಡುತ್ತಾ ಅಂತರಂಗದಲ್ಲಿ ಅದಕ್ಕೆ ವಿರುದ್ಧ ವಾದುದನ್ನೇ ಪೋಷಿಸುತ್ತೇವೆ.

ನಾವು ಈಗೀಗ ಇತಿಹಾಸ ಬದಲಿಸುವ ನೆಪದಲ್ಲಿ, ಬ್ರಿಟಿಷ್ ವಸಾಹತುಶಾಹಿ ಇಲ್ಲಿತ್ತು ಎಂಬುದನ್ನೇ ಮರೆಸಲು ನೋಡುತ್ತಿದ್ದೇವೆ. ನಮಗೀಗ ಅವರ ವಿರುದ್ಧ ಹೋರಾಡಿ ಸ್ವಾತಂತ್ರ್ಯ ಗಳಿಸಿದ್ದಕ್ಕಿಂತಲೂ ಮುಸ್ಲಿಮರ ವಿರುದ್ಧ ಹೋರಾಡಿದವರನ್ನು ಮುನ್ನೆಲೆಗೆ ತರಬೇಕೆಂಬ ತರಾತುರಿ ಹೆಚ್ಚತೊಡಗಿದೆ. ಯಾಕೆಂದರೆ ಅಂತರಾಳದಲ್ಲಿ ನಾವು ಬ್ರಿಟಿಷ್ ಮೌಲ್ಯಗಳನ್ನು ಆರಾಧಿಸುತ್ತೇವೆ. ಮೂಲವಾಸಿಗಳ ಜ್ಞಾನ, ಬದುಕು, ಆಸ್ತಿಗಳನ್ನು ನಾಶ ಮಾಡಿ ಸಾಮ್ರಾಜ್ಯ ಕಟ್ಟಿದವರು ಬ್ರಿಟಿಷರು. ತಮ್ಮ ಸಂಪತ್ತು, ತಂತ್ರಜ್ಞಾನ ಮತ್ತು ಅಧಿಕಾರದ ಠೇಂಕಾರದ ಮುಂದೆ ಎಲ್ಲರೂ ಶರಣಾಗುವಂತೆ ಮಾಡಿದವರು. ಇಂದು ಅವರ ಮೂಲದೇಶ ಇಂಗ್ಲೆಂಡ್ ಆರ್ಥಿಕವಾಗಿ ಹಿಂದೆ ಬೀಳು-ತ್ತಿರುವುದನ್ನು ಕೆಲವರು ಸಂಭ್ರಮಿಸುವಾಗಲೂ, ನಾವು ಅವರದೇ ನೆರಳುಗಳಾಗಿ ಅದೇ ಠೇಂಕಾರವನ್ನು ಆದರ್ಶವಾಗಿಸಿಕೊಳ್ಳುತ್ತಿದ್ದೇವೆ ಎಂಬುದೂ ನಮ್ಮ ಮಹಾಮರೆವಿನ ಭಾಗವೇ ಆಗಿದೆ.

2017ರಲ್ಲಿ 'ವಿಕ್ಟೋರಿಯಾ ಮತ್ತು ಅಬ್ದುಲ್ಲಾ' ಎಂಬ ನಿಜ ಕತೆಯನ್ನು ಆಧರಿಸಿದ ಸಿನಿಮಾ ಬಂದಿತ್ತು. ವಿಕ್ಟೋರಿಯಾ ಮತ್ತು ಅಬ್ದುಲ್ಲಾ ಇಂಗ್ಲೆಂಡ್ ಹಾಗೂ ಭಾರತವು ಪ್ರತಿನಿಧಿಸುವ ಸಂಸ್ಕೃತಿಯ ಫಲದ ಪ್ರತಿನಿಧಿಗಳಾಗಿ ನನಗೆ ಕಾಣಿಸುತ್ತಾರೆ. ಜಗತ್ತಿನಾದ್ಯಂತ ಕೊಳ್ಳೆಹೊಡೆದ ಮೇರೆಯಿಲ್ಲದ ಶ್ರೀಮಂತಿಕೆ ಮತ್ತು ರಾಜಸತ್ತೆಯ ಒಡತಿ ವಿಕ್ಟೋರಿಯಾ. ಯಾರ ಅಂಕೆಗೂ ಒಳಪಡದ ಆಕೆಯನ್ನು ಸುತ್ತುವರಿದ ದೊಡ್ಡ ಪಡೆ ಇದೆ. ಒಳಗೊಳಗೇ ಅವಳನ್ನು ಇಷ್ಟಪಡದವರೂ ಎದುರಿಗೆ ನಾಜೂಕು ನಟನೆಯಲ್ಲಿ ಪಳಗಿಹೋಗಿದ್ದಾರೆ. ತಮ್ಮಿಚ್ಛೆಯಂತೆ ಅವಳನ್ನು ನಿಯಂತ್ರಿಸುತ್ತಿರುತ್ತಾರೆ. ವಯಸ್ಸಾದ ಆಕೆಗೆ ಇಷ್ಟೆಲ್ಲಾ ಇದ್ದೂ ಒಂಟಿತನ ಕಾಡುತ್ತಿದೆ. ಅಕ್ಷರಶಃ ಎಸೆದ ಮೂಟೆಯಂತೆ ಬಿದ್ದುಕೊಳ್ಳುವ ಆಕೆಯನ್ನು ಬೆಳಗಿನಲ್ಲಿ ಸೇವಕಿಯರು ಉರುಳಿಸಿ, ಎಬ್ಬಿಸಿ ಹೆಣಕ್ಕೆ ಶೃಂಗಾರ ಮಾಡಿದಂತೆ ಮಾಡಿಸಿ ಅಂದಿನ ಯಾಂತ್ರಿಕ ಸಭೆ, ಸಮಾರಂಭಗಳಿಗೆ ಸಜ್ಜುಗೊಳಿಸಬೇಕು.

ಹೀಗಿರುವಾಗ ಭಾರತದ ಬ್ರಿಟಿಷ್ ಆಡಳಿತದಲ್ಲಿ ಯುವ ಗುಮಾಸ್ತನಾಗಿದ್ದ ಅಬ್ದುಲ್ ಕರೀಮ್ ಆಕೆಯ ಗೋಲ್ಡನ್ ಜುಬಿಲಿ ಆಚರಣೆಗೆ ಒಂದು ಚಿನ್ನದ ನಾಣ್ಯದ ಉಡುಗೊರೆಯನ್ನು ಕೊಡಲು ಹೋಗಿ ಅವಳ ಗಮನ ಸೆಳೆಯುತ್ತಾನೆ. ಅವನ ಮುಗ್ಧ ಧೈರ್ಯ, ತುಂಟಾಟಿಕೆ, ಚುರುಕುತನ ಎಲ್ಲವೂ ಅಜ್ಜಿಯನ್ನು ಸೆಳೆದು ಅವಳಲ್ಲಿ ಜೀವನೋತ್ಸಾಹ ಪುಟಿದು, ಹೊಸದನ್ನು ಕಲಿಯುವ ಉಮೇದು ಹುಟ್ಟುತ್ತದೆ. ಅವನು ತನ್ನ ಬಳಿಯೇ ಇರುವಂತೆ ಮಾಡಲು ಉರ್ದು ಕಲಿಸುವ ಗುರುವಾಗಿ ಅವನನ್ನು ನೇಮಿಸಿಕೊಳ್ಳುತ್ತಾಳೆ. ಈ ಬಡವನ ಚೈತನ್ಯ ಅವಳ ಶವಸದೃಶ ಶ್ರೀಮಂತಿಕೆಯ ಜಡತ್ವವನ್ನು ಅಲುಗಾಡಿಸುತ್ತದೆ. ಹಾಗೆಯೇ ಅವಳ ಸುತ್ತ ಇರುವ ಬಂಟರುಗಳ ಎದೆಬಡಿತವನ್ನು ಹೆಚ್ಚಿಸುತ್ತದೆ. ವ್ಯಕ್ತಿಗತ ಸ್ವಾರ್ಥದ ಮೂಟೆಗಳನ್ನು ಹೊತ್ತು ದೇಶ, ರಾಜಪ್ರೇಮದ ಕವಚ ಧರಿಸಿರುವವರು ಇದನ್ನು ಹೇಗಾದರೂ ಮುರಿಯುವ ಷಡ್ಯಂತ್ರ ಹೂಡುತ್ತಿರುತ್ತಾರೆ. ರಾಣಿಯ ಸಾವಿನೊಂದಿಗೆ ಅವನು ರಾಣಿಯೊಂದಿಗೆ ಕಳೆದ ದಿನಗಳ ಎಲ್ಲ ದಾಖಲೆಗಳನ್ನೂ ಅಮಾನುಷವಾಗಿ ಸುಟ್ಟು ಅವನನ್ನು ಭಾರತಕ್ಕೆ ಅಟ್ಟುತ್ತಾರೆ. ಆ ಮೂಲಕ ಅವರು ಭಾರತದ ಬದುಕಿನ ಲೋಕನೋಟವೊಂದನ್ನೂ ಸುಟ್ಟು ಹಾಕುತ್ತಾರೆ.

ಭಾರತವು ಜಗತ್ತಿಗೆ ನೀಡಿದ ಲೋಕನೋಟಗಳನ್ನು ನಾವು ಧಾರ್ಮಿಕತೆಯ ಮುಸುಕಿನೊಳಗೆ ಹೀಗೇ ಸುಟ್ಟುಹಾಕಲು ನಿರಂತರ ಪ್ರಯತ್ನ ಮಾಡಿದ್ದೇವೆ, ಮಾಡುತ್ತಿದ್ದೇವೆ. ಧಾರ್ಮಿಕ ಆಚರಣೆಯ ಬಗೆಗೆ ನಮಗಿರುವ ಮೋಹವು ಈ ಲೋಕನೋಟಗಳನ್ನು ಬದುಕಿನ ಭಾಗವಾಗಿಸಿಕೊಳ್ಳುವುದರ ಬಗೆಗೆ ಇಲ್ಲವೇ ಇಲ್ಲ. ಹಾಗೆ ಇರುವವರು ಅಲ್ಪಸಂಖ್ಯೆಯಲ್ಲಿದ್ದಾರೆ. ಆಕ್ರಮಣ, ಅಧಿಕಾರದ ಚಾಟಿ, ನಿಯಂತ್ರಣಗಳ ಮೂಲಕ ಬಹುಮತಿತ್ವವನ್ನು ಹತ್ತಿಕ್ಕುವುದು ಇಲ್ಲೂ ನಿರಂತರವಾಗಿ ನಡೆದುಕೊಂಡು ಬಂದ ನಡೆಯೇ. ಆದರೆ ಅದನ್ನು ಎದುರಿಸಲು ಭಾರತವು ಮತ್ತೆ ಮತ್ತೆ ಹೆಕ್ಕಿಕೊಟ್ಟಿದ್ದು ಪ್ರೀತಿ, ಮಮತೆಯ ದಾರಿಯನ್ನೇ. ಬುದ್ಧ, ಮಹಾವೀರ, ಶರಣರು, ಸಿಖ್ ಗುರುಪಂಥ, ಸೂಫಿ ಸಂತರು, ದಾಸರು, ತತ್ವಪದಕಾರರು, ಜನಪದ ದೈವಗಳಾದ ಸಾಂಸ್ಕೃತಿಕ ನಾಯಕರು, ಯಾರನ್ನೇ ನೋಡಿದರೂ ಇಲ್ಲಿ ಎಲ್ಲರನ್ನೂ ಒಳಗೊಳ್ಳುವ, ಸಾಮುದಾಯಿಕ ಏಳಿಗೆಯ, ಜೊತೆಗೇ ಅಂತರಂಗದ ತಂಪಿನಲ್ಲಿ ದೇಹ ಭಾವಗಳನ್ನು ಕಾಪಿಟ್ಟು-ಕೊಳ್ಳುವ, ಇವೆಲ್ಲದರ ಜೊತೆಗೆ ಸುತ್ತಲಿನ ಪ್ರಕೃತಿಯನ್ನು ನಮ್ಮೊಂದಂಗವಾಗಿ ಪೊರೆಯುವ ಲೋಕನೋಟವೇ ಮುನ್ನೆಲೆಗೆ ಬರುತ್ತದೆ. ಆದರೆ ನಾವಿಂದು ಸಂಪೂರ್ಣ ವಿರುದ್ಧಗತಿಯಲ್ಲಿ ನಡೆಯುತ್ತಿದ್ದೇವೆ.

ಪೌರುಷದ ಅಟ್ಟಹಾಸ, ದಬ್ಬಾಳಿಕೆ, ನಿಯಂತ್ರಣಗಳನ್ನು ಹೀರೊಯಿಸಂ ಆಗಿಸುವ ಪ್ರವೃತ್ತಿ, ಪ್ರಕೃತಿಯ ಮೇಲಿನ ದಾಳಿಯೇ ಮೂಲವಾದ ಅಭಿವೃದ್ಧಿ ಯೋಜನೆಗಳು, ವ್ಯಕ್ತಿ ಆರಾಧನೆಯ ಮೇರೆಮೀರಿದ ಪ್ರತಿಕ್ರಿಯೆಗಳು, ಕೊನೆಯಿಲ್ಲದ ಭೋಗದ ದಾಹದಿಂದ ಛಿದ್ರಗೊಂಡ ಮನಸ್ಸುಗಳು, ಪ್ರತೀ ಸಂಸ್ಥೆಯಲ್ಲೂ ರಾಜಕೀಯ ಮೇಲಾಟಗಳು, ಕುಟುಂಬಗಳಲ್ಲಿ ಅಸಂತೃಪ್ತಿ... ಒಮ್ಮೆ ನಿಲುಗಡೆ ತೆಗೆದುಕೊಂಡು ಯೋಚಿಸಬಾರದೇ?

ಉತ್ತರ ಕೊರಿಯಾದ 'ದೊರೆ' ನಾಟಕ ನೋಡಿದ ಹುಡುಗರನ್ನು ಗಲ್ಲಿಗೆ ಹಾಕುತ್ತಾನೆ. ಇರಾನಿನ 'ದೊರೆ' ಹಿಜಾಬ್ ವಿರೋಧಿಸಿದ ಆಟಗಾರನನ್ನು ಗಲ್ಲಿಗೇರಿಸುತ್ತಾನೆ. ನಮ್ಮ ದೊರೆಗಳು ಬಣ್ಣ ಬಳಿದು ಶಾಲೆ ಉದ್ಧಾರ ಮಾಡುತ್ತೇವೆ ಎನ್ನುತ್ತಾ ಮನಸ್ಸು ರಿಪೇರಿ ಮಾಡಹೊರಡುವುದೂ ಇಂತಹ ನಡೆಗಳ ಮುನ್ನುಡಿ ಎಂದರೆ ಉರಿದು ಬೀಳುತ್ತಾರೆ. ಆಧುನಿಕ ಯಾಂತ್ರಿಕತೆಯ ಸ್ವರ್ಗ ಮತ್ತು ಮನೋವಿಕೃತಿಯ ಮೇಲಾಟಗಳು ಚೆಂಬನ್ ಕುಂಜುವಿನ ಮನೆಯ ದುರಂತದಂತೆ, ಮನುಷ್ಯಸಮಾಜವೆಂಬ ಗುಡಿಯೊಳಗಿನ ನಗುವನ್ನು ಕಿತ್ತುಕೊಳ್ಳುತ್ತಿರುವುದನ್ನು ಎಲ್ಲ ರೀತಿಯ ದೊರೆಗಳಿಗೂ ಪ್ರಜೆಗಳಿಗೂ ಕಾಣಿಸಲು ತುರ್ತಾಗಿ ಕನ್ನಡಿಯೊಂದು ಬೇಕಾಗಿದೆ.

ಲೇಖಕಿ: ಪ್ರಾಧ್ಯಾಪಕಿ
ಸರ್ಕಾರಿ ಪ್ರಥಮದರ್ಜೆ ಕಾಲೇಜು, ತರೀಕೆರೆ

ಚುರುಮುರಿ

ಅಂತರಂಗ ಸುದ್ದಿ

• ಮಣ್ಣೆರಾಜು

'**ಎಲೆಕ್ಷನ್** ಖರ್ಚಿಗೆ ಪಕ್ಷ ಕೊಟ್ಟ 15 ಕೋಟಿ ರೂಪಾಯಿಯಲ್ಲಿ 5 ಕೋಟಿ ಖರ್ಚು ಮಾಡಿ, ಉಳಿದ ಹತ್ತನ್ನು ಜೇಬಿಗಿಳಿಸಿದ್ದು ಉಳಿಕೆಯೋ ಗಳಿಕೆಯೋ?' ಸುಮಿ ಕೇಳಿದಳು.

'ಆ ಪಕ್ಷದ ಆರ್ಥಿಕ ಸಾಮರ್ಥ್ಯದ ಹೆಗ್ಗಳಿಕೆ ಅಂದುಕೊಳ್ಳಬಹುದು' ಅಂದ ಶಂಕ್ರಿ.

'ಆದರೆ, ಪಕ್ಷದ ಆಂತರಿಕ ವಿಚಾರವನ್ನು ಬಹಿರಂಗಗೊಳಿಸಿದರೆ ಪಕ್ಷದ ವರ್ಚಸ್ಸಿಗೆ ಧಕ್ಕೆ ಆಗೋದಿಲ್ವೆ? ಸಂಸಾರದ ಗುಟ್ಟು ವ್ಯಾಧಿ ರಟ್ಟು, ಪಕ್ಷದ ಗುಟ್ಟು ಬೀದಿ ರಟ್ಟು ಕಣ್ರೀ...'

'ಹೌದು, ಗುಟ್ಟು ರಟ್ಟು ಮಾಡದಂತೆ ನಾಯಕರ ಬಾಯಿಕಟ್ಟಬೇಕು, ಇಲ್ಲವೆ ಪಕ್ಷದ ನಾಯಕರು ಬಾಯಿ ನಾಯಕರನ್ನು ಬಾಯ್ಕಾಟ್ ಮಾಡಿ ಪಕ್ಷದ ಮಾನ ಕಾಪಾಡಬೇಕು'.

'ಈ ಪ್ರಕರಣದ ಸರಾಸರಿ ಸತ್ಯಾಂಶವೇನು?'

'ತಮ್ಮ ಹುಳುಕು ಮುಚ್ಚಿಕೊಳ್ಳಲು ಬೇರೆ ನಾಯಕರ ಹುಳುಕನ್ನು ಕೆದಕಿ ಕೆರಳಿಸಬಾರದು...'

'ಇದೆಲ್ಲಾ ಗಮನಿಸಿದರೆ, ಚುನಾವಣಾ ವೆಚ್ಚಕ್ಕೆ ವಿಧಿಸಿರುವ ಮಿತಿ ದೊಡ್ಡ ನಗೆಪಾಟಲು ಅನಿಸುತ್ತದೆ. 'ಆ ಮೊತ್ತವು ಪ್ರಚಾರದ ಓಡಾಟದ ಪೆಟ್ರೋಲ್, ಡೀಸೆಲ್ಲಿಗೂ ಸಾಕಾಗೋದಿಲ್ಲ, ಕರಪತ್ರ ಕೊಟ್ಟು, ಕೈ ಮುಗಿದು ಮತ ಕೇಳುವ ಕಾಲ ಇದಲ್ಲ' ಅನ್ನೋದು ಅನುಭವಿ ನಾಯಕರ ಅಂತರಂಗದ ಅಭಿಪ್ರಾಯ ಆಗಿರಬಹುದೆ?'

'ಇರಬಹುದು, ವಸ್ತುಸ್ಥಿತಿ ಹಾಗೂ ವೆಚ್ಚ ಏರಿಕೆಗೆ ಅನುಗುಣವಾಗಿ ಚುನಾವಣಾ ವೆಚ್ಚದ ಮಿತಿ ಹಿಗ್ಗಿಸುವ ಕಾಲ ಬಂದರೂ ಬರಬಹುದು'.

'ಚುನಾವಣೆ ಅಭ್ಯರ್ಥಿಗಳ ಪಟ್ಟಿ ಸಿದ್ಧವಾಗುವ ಈ ಪರ್ವ ಕಾಲದಲ್ಲಿ ಟಿಕೆಟ್ ವಂಚಿತರು, ಸ್ಥಾನಮಾನ ವಂಚಿತರು ನಾಯಕರ ವಿರುದ್ಧ ಸಿಡಿದೇಳಬಹುದು. ಪಕ್ಷ ಬೇರ್ಪಡೆ, ಸೇರ್ಪಡೆಗಳು ನಡೆದು ಮತ್ತಷ್ಟು ರಾಜಕೀಯ ಗುಟ್ಟುಗಳು ಬಯಲಾಗಬಹುದು'.

'ಹೋಗ್ಲಿಬಿಡು, ರಾಜಕೀಯ ಪಕ್ಷಗಳ ಅಂತರಂಗದ ವಿಚಾರ ನಮಗೇಕೆ? ಪಕ್ಷಗಳು ಅಭ್ಯರ್ಥಿಗಳ ಪಟ್ಟಿ ಸಿದ್ಧ ಮಾಡುವ ಸಡಗರದಲ್ಲಿವೆ. ಮತದಾರರ ಪಟ್ಟಿಯಲ್ಲಿ ನಮ್ಮ ಹೆಸರು ಇದೆಯೇ ಅನ್ನೋದನ್ನು ಖಚಿತಪಡಿಸಿಕೊಂಡು ನಾವೂ ಚುನಾವಣೆಗೆ ಸಿದ್ಧರಾಗೋಣ...' ಎಂದ ಶಂಕ್ರಿ.

ದಿನದ ಟ್ವೀಟ್

ತುರ್ತು ಕ್ರಮ ಅಗತ್ಯ

ಚೀನಾದಲ್ಲಿನ ಕೋವಿಡ್ ಪ್ರಕರಣಗಳಿಗೆ ಸಂಬಂಧಿಸಿದ ವರದಿಗಳು ನಿಜವೇ ಆಗಿದ್ದರೆ, ಚೀನಾದಿಂದ ಬರುವ ಎಲ್ಲ ವಿಮಾನಗಳನ್ನೂ ತಕ್ಷಣ ನಾವು ನಿಷೇಧಿಸುವುದು ಸರಿಯಾದ ಕ್ರಮ.

ಇಷ್ಕರಣ್ ಸಿಂಗ್ ಭಂಡಾರಿ, ವಕೀಲ

ಕಿಡಿನುಡಿ

ಸರ್ಕಾರವು ಮತಬ್ಯಾಂಕ್ ದೃಷ್ಟಿಯಿಂದ ಮೀಸಲಾತಿ ನೀಡುತ್ತಿದ್ದರೆ ಮೀಸಲಾತಿಯ ನಿಜ ಅರ್ಥ ಕಳೆದುಹೋಗುತ್ತದೆ.

ಕೋಡಿಹಳ್ಳಿ ಚಂದ್ರಶೇಖರ್, ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಘಟಕದ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 21-12-1997

• **ಕೆಎಂಎಫ್ ನೇಮಕಾತಿಗಳಿಗೆ ಚುನಾವಣಾ ಆಯೋಗ ತಡೆ**

ಬೆಂಗಳೂರು, ಡಿ. 20– ಕರ್ನಾಟಕ ಹಾಲು ಮಂಡಳಿಯ (ಕೆಎಂಎಫ್) ವಿವಿಧ ಹುದ್ದೆಗಳಿಗೆ ಹೊಸದಾಗಿ ಸುಮಾರು 150 ಮಂದಿಯ ನೇಮಕಾತಿಗೆ ಕೇಂದ್ರ ಚುನಾವಣಾ ಆಯೋಗ ತಡೆಯಾಜ್ಞೆ ನೀಡಿದೆ.

'ರಾಜ್ಯದಲ್ಲಿ ವಿಧಾನಪರಿಷತ್ ಚುನಾವಣೆ ನಡೆಯುತ್ತಿರುವಾಗ ಹಾಗೂ ಕೆಲವೇ ದಿನಗಳಲ್ಲಿ ಲೋಕಸಭಾ ಚುನಾವಣೆ ನಡೆಯಲಿರುವಾಗ ಈ ರೀತಿ ಸಾಮೂಹಿಕ ನೇಮಕಾತಿ ಮಾಡುವುದು ಚುನಾವಣಾ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗುತ್ತದೆ' ಎಂದು ಚುನಾವಣಾ ಆಯೋಗ ಅಭಿಪ್ರಾಯಪಟ್ಟಿದೆ.

ಅಲ್ಲದೆ, 1998ರ ಮಾರ್ಚ್ 15ರವರೆಗೆ ಯಾವುದೇ ಅಭ್ಯರ್ಥಿಗೆ ನೇಮಕಾತಿ ಪತ್ರ ನೀಡಬಾರದು ಎಂದು ಕೆಎಂಎಫ್‌ಗೆ ಆದೇಶಿಸಿದೆ.

• **ಹಟ್ಟಿ ಚಿನ್ನದ ಗಣಿ 22ರಂದು ಪುನರಾರಂಭ**

ಬೆಂಗಳೂರು, ಡಿ. 20– ಕಳೆದ ನಾಲ್ಕು ದಿನಗಳಿಂದ ಬೀಗಮುದ್ರೆ ಹಾಕಿದ್ದ ಐತಿಹಾಸಿಕ ಹಟ್ಟಿ ಚಿನ್ನದ ಗಣಿಯ ಕೆಲಸ ಕಾರ್ಯಗಳು ಸೋಮವಾರದಿಂದ (ಡಿ.22) ಪುನರಾರಂಭ ಆಗಲಿವೆ.

ವಾರದ ಎಲ್ಲ ಏಳು ದಿನ ಕೆಲಸ ಪದ್ಧತಿ, ಉತ್ಪದನಾ ವೆಚ್ಚ ತಗ್ಗಿಸುವ ಹಾಗೂ ಇತರ ಬೇಡಿಕೆಗಳ ಕುರಿತು ಆಡಳಿತ ಮಂಡಳಿ ಹಾಗೂ ಕಾರ್ಮಿಕ ಸಂಘದ ಪದಾಧಿಕಾರಿಗಳ ನಡುವೆ ಶುಕ್ರವಾರ ನಗರದಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು ಎಂದು ಹಟ್ಟಿ ಚಿನ್ನದ ಗಣಿಯ ಅಧ್ಯಕ್ಷ ಕೆ.ಎನ್. ಶ್ರೀವಾಸ್ತವ ಅವರು ತಿಳಿಸಿದರು.

• **ಸಾಂಸ್ಥಿಕ ಚುನಾವಣೆ ನಡೆಸಿದ ಶಿವಸೇನೆ**

ಮುಂಬೈ, ಡಿ. 20 (ಪಿಟಿಐ): ಚುನಾವಣಾ ಆಯೋಗದಿಂದ ಕ್ರಮ ಎದುರಿಸುವುದನ್ನು ತಪ್ಪಿಸಿಕೊಳ್ಳಲು ಶಿವಸೇನೆ ಪಕ್ಷವು ಇಂದು ಪಕ್ಷದ ಸಾಂಸ್ಥಿಕ ಚುನಾವಣೆಯನ್ನು ನಡೆಸಿ ಬಾಳಾ ಠಾಕ್ರೆ ಅವರನ್ನು ಸರ್ವಾನುಮತದಿಂದ ಪಕ್ಷದ ಮುಖ್ಯಸ್ಥರನ್ನಾಗಿ (ಶಿವಸೇನೆ ಪ್ರಮುಖ) ಅವರು ಜೀವಿಸಿರುವವರೆಗೆ ಆಯ್ಕೆ ಮಾಡಿದೆ.

ಚುನಾವಣಾ ಆಯೋಗವು ಶಿವಸೇನೆ ಪಕ್ಷವು ಪಕ್ಷದ ಸಾಂಸ್ಥಿಕ ಚುನಾವಣೆಗಳನ್ನು ನಡೆಸುವುದಕ್ಕೆ ಡಿ.24ರವರೆಗೆ ಗಡುವು ನೀಡಿತ್ತು.

50 ವರ್ಷಗಳ ಹಿಂದೆ

ಗುರುವಾರ, 21-12-1972

• **ಕಾಂಗ್ರೆಸ್ ತ್ಯಜಿಸಿದ ಆಂಧ್ರ ಸಚಿವರಿಂದ ಹೊಸ ಪಕ್ಷ ರಚನೆ**

ಹೈದರಾಬಾದ್, ಡಿ. 20– ಆಂಧ್ರಪ್ರದೇಶ ಸಚಿವ ಸಂಪುಟಕ್ಕೆ ತಮ್ಮ ರಾಜೀನಾಮೆಗಳನ್ನು ಸಲ್ಲಿಸಿರುವ ಒಂಬತ್ತು ಮಂದಿ ಆಂಧ್ರದ ಸಚಿವರು, ಇಂದು ಕಾಂಗ್ರೆಸ್ ಪಕ್ಷದ ಜತೆ ತಮ್ಮ ಸಂಪರ್ಕವನ್ನು ಕಡಿದುಕೊಂಡು 'ಆಂಧ್ರ ಕಾಂಗ್ರೆಸ್' ಎಂಬ ಹೊಸ ಪಕ್ಷವನ್ನು ಸ್ಥಾಪಿಸಿದರು.

ಪ್ರತ್ಯೇಕ ಆಂಧ್ರ ರಾಜ್ಯ ಸ್ಥಾಪನೆಯೇ ಈ ಹೊಸ ಪಕ್ಷದ ಘೋಷಿತ ಉದ್ದೇಶ.

ಉಪಮುಖ್ಯಮಂತ್ರಿ ಬಿ.ವಿ.ಸುಬ್ಬಾರೆಡ್ಡಿ ಅವರು ಈ ಹೊಸ ಪಕ್ಷದ ಅಧ್ಯಕ್ಷರು. ಕೃಷಿ ಮಂತ್ರಿ ಕಾಕಾನಿ ವೆಂಕಟರತ್ನಂ ಅವರು ಪಕ್ಷದ ವ್ಯವಸ್ಥಾಪಕ ಪ್ರಧಾನ ಕಾರ್ಯದರ್ಶಿ.

ಸುಬ್ಬಾರೆಡ್ಡಿ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಹೊಸ ಪಕ್ಷ ರಚಿಸುವ ನಿರ್ಧಾರ ಕೈಗೊಳ್ಳಲಾಯಿತು.

• **ಬೆಂಗಳೂರು-ಮೈಸೂರು ರೈಲು ಮಾರ್ಗದ ಬ್ರಾಡ್‌ಗೇಜ್ ಪರಿವರ್ತನೆ**

ನವದೆಹಲಿ, ಡಿ.20– ಬೆಂಗಳೂರು-ಮೈಸೂರು ನಡುವಣ ರೈಲು ಮಾರ್ಗವನ್ನು ಬ್ರಾಡ್‌ಗೇಜ್‌ಗೆ ಪರಿವರ್ತಿಸುವ ಸಲಹೆಯನ್ನು ರೈಲ್ವೆ ಮಂಡಳಿ ತೀವ್ರವಾಗಿ ಪರಿಶೀಲಿಸುತ್ತಿದೆ ಎಂದು ರೈಲ್ವೆ ಸಚಿವ ಟಿ.ಎ.ಪೈ ಅವರು ಮೈಸೂರು ವಿಧಾನ ಪರಿಷತ್ತಿನ ಉಪಾಧ್ಯಕ್ಷ ಟಿ.ಎನ್.ನರಸಿಂಹ ಮೂರ್ತಿಯವರಿಗೆ ತಿಳಿಸಿದರೆಂದು ವರದಿಯಾಗಿದೆ.

ಸಂಗತ

ಭಾವಚಿತ್ರ ಬದಿಗಿಟ್ಟು 'ಅಭಾವ'ದತ್ತ ನೋಡಿ

ಸದನದ ಕಲಾಪಗಳ ದೃಷ್ಟಿ ರಾಜ್ಯದ ಜನತೆಯ ಹಿತಾಸಕ್ತಿಯ ಕಡೆ ಇರಬೇಕಲ್ಲವೇ?

• ನಾ. ದಿವಾಕರ

ಖ್ಯಾತನಾಮರ ಪ್ರತಿಮೆ ಮತ್ತು ಸ್ಮಾರಕಗಳಿಗೆ ಸಂಬಂಧಿಸಿದ ವಿಚಾರ ಒಂದೆಡೆಯಾದರೆ, ಸಾರ್ವಜನಿಕ ಕಟ್ಟಡಗಳ ಬಣ್ಣ, ರಸ್ತೆ, ವೃತ್ತ, ಮೇಲ್ಸೇತುವೆ, ರೈಲುಗಳ ಹೆಸರುಗಳಿಗೆ ಸಂಬಂಧಿಸಿದ ವಿವಾದ ಮತ್ತೊಂದೆಡೆ. ಕರ್ನಾಟಕದ ರಾಜಕೀಯ ವಲಯದಲ್ಲಿ ನಡೆಯುತ್ತಿರುವ ಚರ್ಚೆಗಳನ್ನು ಗಮನಿಸುವ ಯಾರಿಗೇ ಆದರೂ ಈ ರಾಜ್ಯದಲ್ಲಿ ಸಾಮಾನ್ಯ ಜನರನ್ನು ಬಾಧಿಸುವ ಯಾವುದೇ ಸಮಸ್ಯೆಗಳಿಲ್ಲ, ಎಲ್ಲವೂ ಸುಭಿಕ್ಷವಾಗಿ, ಸುಸೂತ್ರವಾಗಿ ನಡೆಯುತ್ತಿವೆ ಎಂದು ಭಾಸವಾದರೆ ಅಚ್ಚರಿಯೇನಿಲ್ಲ. ಆದರೆ ವಸ್ತುಸ್ಥಿತಿಯತ್ತ ಕಣ್ಣು ಹಾಯಿಸಿದರೆ ಕಾಣುವುದೇ ಬೇರೆ.

ಭುಗಿಲೆದ್ದಿರುವ ಗಡಿ ವಿವಾದವೂ ಸೇರಿದಂತೆ ಹಲವಾರು ಗೊಂದಲಗಳ ನಡುವೆಯೇ ಕರ್ನಾಟಕದ ವಿಧಾನಮಂಡಲದ ಅಧಿವೇಶನ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿದೆ. ಬೆಳಗಾವಿಯಲ್ಲಿ ಅಧಿವೇಶನ ನಡೆಸುವ ಉದ್ದೇಶವನ್ನೇ ಮರೆತಂತಿರುವ ರಾಜಕೀಯ ಪಕ್ಷಗಳಿಗೆ ಸುವರ್ಣಸೌಧ ಮತ್ತು ವಿಧಾನಸೌಧದ ನಡುವೆ ಇರುವ ಸೂಕ್ಷ್ಮ ವ್ಯತ್ಯಾಸವೇ ಅರ್ಥವಾಗಿಲ್ಲ ಎನಿಸುತ್ತದೆ.

ಏಕೀಕರಣವಾದ ದಿನದಿಂದಲೂ ಆಡಳಿತ ನೀತಿಗಳಲ್ಲಿ, ಆರ್ಥಿಕ ನೀತಿಗಳಲ್ಲಿ ತಾರತಮ್ಯವನ್ನೇ ಎದುರಿಸುತ್ತಿರುವ ಉತ್ತರ ಕರ್ನಾಟಕದ ಜಿಲ್ಲೆಗಳ ಭೌಗೋಳಿಕ, ಸಾಮಾಜಿಕ, ಆರ್ಥಿಕ, ಭಾಷಿಕ ಹಾಗೂ ಸಾಂಸ್ಕೃತಿಕ ಸಮಸ್ಯೆಗಳನ್ನು ಬಗೆಹರಿಸುವ ದಿಸೆಯಲ್ಲಿ, ಅಧಿವೇಶನ ನಡೆಯುವ ಸ್ಥಳ ಅಥವಾ ಕಟ್ಟಡ ಮುಖ್ಯ-ವಾಗುವುದಿಲ್ಲ. ಬೆಂಗಳೂರುಕೇಂದ್ರಿತ ರಾಜ್ಯ ಆಡಳಿತ ವ್ಯವಸ್ಥೆಯಲ್ಲಿ ಉತ್ತರ ಕರ್ನಾಟಕದ ಜನರ ಸಮಸ್ಯೆಗಳಿಗೆ ಸರ್ಕಾರಗಳು ಹೆಚ್ಚು ಗಮನ ನೀಡುತ್ತಿಲ್ಲ ಎಂಬ ಆಪಾದನೆಗಳ ನಡುವೆಯೇ, ಸುವರ್ಣಸೌಧ ಮತ್ತು ಅಲ್ಲಿ ನಡೆಯುವ ಅಧಿವೇಶನಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡಲಾಗಿದೆ. ಇದನ್ನು ಅರಿತಾದರೂ ಸರ್ಕಾರ ಮತ್ತು ವಿರೋಧ ಪಕ್ಷಗಳು ಆ ಪ್ರಾಂತ್ಯದ ಜಿಲ್ಲೆಗಳು ಎದುರಿಸುತ್ತಿರುವ ಹತ್ತು ಹಲವಾರು ಸಮಸ್ಯೆಗಳ ಬಗ್ಗೆ ವರ್ಷಕ್ಕೊಮ್ಮೆ ಗಂಭೀರ ಚರ್ಚೆ ನಡೆಸುವುದು ವಿವೇಕಯುತ ಕ್ರಮವಾದೀತು.

ಸದನದ ಕಲಾಪಗಳು ಬಹುಪಾಲು ಸಂದರ್ಭಗಳಲ್ಲಿ ಪರಸ್ಪರ ದೋಷಾರೋಪಗಳ ನಡುವೆ, ಸರ್ಕಾರ ಮತ್ತು ವಿರೋಧ ಪಕ್ಷಗಳ ಕಚ್ಚಾಟದ ನಡುವೆಯೇ ತಮ್ಮ ಔಚಿತ್ಯ ಕಳೆದುಕೊಳ್ಳುತ್ತಿರುವುದನ್ನು ಗಮನಿಸುತ್ತಲೇ ಬಂದಿದ್ದೇವೆ. ಸರ್ಕಾರದ ನಡೆ–ನಿಲುವು–ಹೇಳಿಕೆ ವಿರೋಧಿಸಿ ಸಭಾತ್ಯಾಗ ಮಾಡುವ ವಿರೋಧ ಪಕ್ಷಗಳಿಗೆ ತಮ್ಮ ವಾಕ್‌ಔಟ್ ಪ್ರಹಸನದ ಹಿಂದೆಯೇ ಯಾವುದೋ ಒಂದು ಜನಪರ ಅಲ್ಲದ ಮಸೂದೆ, ಕಾನೂನು ಸದನದಲ್ಲಿ ಅನುಮೋದನೆ ಪಡೆದಿರುತ್ತದೆ ಎಂಬ ವಿವೇಕ ಇರಬೇಕಲ್ಲವೇ? ಸದನದಲ್ಲಿ ನಡೆಯುವ ಚರ್ಚೆಗಳು ಬಾಹ್ಯ ಸಮಾಜದ ಕೋಟ್ಯಂತರ ಮತದಾರರು ಮತ್ತು ಸಾಮಾನ್ಯ ಜನರ ಧ್ವನಿಯನ್ನು ಪ್ರತಿನಿಧಿಸುತ್ತವೆ ಎನ್ನುವ ವಿವೇಕವೂ ಜನಪ್ರತಿನಿಧಿಗಳಲ್ಲಿ ಇರಬೇಕಲ್ಲವೇ?

ರಾಜ್ಯದ ಇಂದಿನ ಪರಿಸ್ಥಿತಿಯನ್ನು ಒಮ್ಮೆ ಗಮನಿಸಿದರೂ ಸಾಕು, ರಾಜಧಾನಿಯಿಂದ ಬೆಳಗಾವಿಯವರೆಗೆ ನಡೆಯುತ್ತಿರುವ ಜನಾಂದೋಲನಗಳು, ಹಕ್ಕೊತ್ತಾಯಗಳು, ಪ್ರತಿಭಟನೆಗಳು, ಹೋರಾಟಗಳು ಢಾಳಾಗಿ ಕಾಣುತ್ತವೆ. ರೈತರು ತಮ್ಮ ಬೇರೆ ಬೇರೆ ಬೇಡಿಕೆಗಳ ಈಡೇರಿಕೆಗೆ ನಿರಂತರವಾಗಿ ಹೋರಾಟ ನಡೆಸುತ್ತಿದ್ದಾರೆ, ಹೊಸ ಪಿಂಚಣಿ ಯೋಜನೆಯನ್ನು (ಎನ್‌ಪಿಎಸ್) ರದ್ದುಪಡಿಸಿ ಹಳೆಯ ಯೋಜನೆಯನ್ನು (ಒಪಿಎಸ್) ಜಾರಿಗೊಳಿಸಲು ಲಕ್ಷಾಂತರ ಕಾರ್ಮಿಕರು ಮುಷ್ಕರ ನಡೆಸುತ್ತಿದ್ದಾರೆ. ಅಂಗನವಾಡಿ-ಆಶಾ ಕಾರ್ಯಕರ್ತೆಯರು ಉತ್ತಮ ವೇತನ, ಸೌಲಭ್ಯಗಳಿಗಾಗಿ ಹೋರಾಡುತ್ತಿದ್ದಾರೆ. ಭೂಮಿ ಕಳೆದುಕೊಂಡಿರುವ, ಕಳೆದುಕೊಳ್ಳುವ ಆತಂಕದಲ್ಲಿ-ರುವ ರೈತಾಪಿ ಸಮುದಾಯ ಹೋರಾಟ ನಡೆಸುತ್ತಿದೆ.



ನಿತ್ಯಾಚಾರವಾಗಿರುವ ಆಡಳಿತ ವ್ಯವಸ್ಥೆಯ ಭ್ರಷ್ಟಾಚಾರ ಎಲ್ಲ ವಲಯಗಳಲ್ಲೂ ವ್ಯಾಪಿಸಿದೆ. ಮಹಾರಾಷ್ಟ್ರ ಸರ್ಕಾರದ ಅವಿವೇಕದ ನಡೆಯ ಪರಿಣಾಮವಾಗಿ ಗಡಿ ವಿವಾದ ಮತ್ತೊಮ್ಮೆ ಭುಗಿಲೆದ್ದಿದೆ. ಬೆಳಗಾವಿ ನಗರ ಮತ್ತು ಗಡಿ ಪ್ರದೇಶ ಉದ್ವಿಗ್ನವಾಗಿದೆ. ಅಸ್ಪೃಶ್ಯತೆಯ ಪ್ರಸಂಗಗಳು ಹೆಚ್ಚಾಗುತ್ತಿವೆ. ಮಹಿಳಾ ದೌರ್ಜನ್ಯ ಪರಾಕಾಷ್ಠೆ ತಲುಪಿದೆ. ಬಾಲಕಿಯರ ಮೇಲಿನ ಲೈಂಗಿಕ ಶೋಷಣೆಯು ಪಾಂಡವಪುರದ ಸರ್ಕಾರಿ ಹಾಸ್ಟೆಲ್‌ವೊಂದರಿಂದ ದುರ್ಗದ ಮುರುಘಾಮಠದವರೆಗೂ ವ್ಯಾಪಿಸಿದೆ. ನರಗುಂದ ತಾಲ್ಲೂಕಿನ ಹದ್ಲಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅತಿಥಿ ಶಿಕ್ಷಕರೊಬ್ಬರು 10 ವರ್ಷದ ವಿದ್ಯಾರ್ಥಿಯ ಮೇಲೆ ಕಬ್ಬಿಣದ ಸಲಾಕೆಯಿಂದ ಹಲ್ಲೆ ನಡೆಸಿದ್ದಾರೆ, ಆ ಬಾಲಕ ಸಾವನ್ನಪ್ಪಿದ್ದಾನೆ. ಬಾಲಕನ ತಾಯಿಯೂ ಗಾಯಗೊಂಡಿದ್ದಾರೆ. ಇದರ ನಡುವೆಯೇ ಬೆಲೆ ಏರಿಕೆಯ ಬಿಸಿ ಇಡೀ ರಾಜ್ಯದ ಜನರನ್ನು ಕಾಡುತ್ತಿದೆ. ಇವೆಲ್ಲವನ್ನೂ ಸಾಮಾಜಿಕ ಕ್ಷೋಭೆಯ ಸಂಕೇತವಾಗಿಯೇ ನೋಡಬೇಕಾಗುತ್ತದೆ.

ರಾಜಕೀಯ ಲಾಭಕ್ಕಾಗಿ ಖ್ಯಾತನಾಮರ ಪ್ರತಿಮೆ, ಭಾವಚಿತ್ರಗಳನ್ನು ಬಳಸುವ ಪರಂಪರೆ ಹೊಸದೇನಲ್ಲ. ಈಗ ಸಾವರ್ಕರ್ ಈ ಸಾಲಿಗೆ ಸೇರ್ಪಡೆಯಾಗಿರುವ ಮತ್ತೋರ್ವ ನಾಯಕರಾಗಿದ್ದಾರೆ. ಸೌಧದ ಸಭಾಂಗಣದಲ್ಲಿ ಅಥವಾ ಸದನದಲ್ಲಿ ಯಾವ ನಾಯಕರ ಭಾವಚಿತ್ರಗಳು ಇರಬೇಕು ಎನ್ನುವುದ-ಕ್ಕಿಂತಲೂ, ಕಲಾಪದಲ್ಲಿ ಏನು ಚರ್ಚೆಯಾಗಬೇಕು ಎನ್ನುವ ಪ್ರಶ್ನೆ ಮುಖ್ಯ ಅಲ್ಲವೇ? ಪ್ರತಿಮೆ, ಸ್ಮಾರಕ, ಭಾವಚಿತ್ರಗಳಿಗಿಂತಲೂ ಆ ನಾಯಕರ ಆಲೋಚನೆಗಳನ್ನು ಗೌರವಿಸಿ, ಪ್ರಜಾಸತ್ತಾತ್ಮಕ ವಾತಾವರಣ-ದಲ್ಲಿ ಜನಸಾಮಾನ್ಯರ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆಯಾಗುವುದು, ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದು ಮುಖ್ಯ ಅಲ್ಲವೇ? ಜನಪ್ರತಿನಿಧಿಗಳಿಗೆ ಇಷ್ಟಾದರೂ ಸಾರ್ವಜನಿಕ ಪ್ರಜ್ಞೆ ಇರಬೇಕಲ್ಲವೇ?

ವಾಚಕರ ವಾಣಿ

ಶಿಕ್ಷಕರ ದುರ್ವರ್ತನೆ: ಆತಂಕದ ಬೆಳವಣಿಗೆ

ದೆಹಲಿಯಲ್ಲಿ ಶಿಕ್ಷಕಿಯೊಬ್ಬರು ತನ್ನ ವಿದ್ಯಾರ್ಥಿಯನ್ನು ಥಳಿಸಿ ಕೆಳಗೆಸೆದ ಪ್ರಕರಣ ಹಸಿಯಾಗಿರುವಾಗಲೇ ಕರ್ನಾಟಕದ ಹದ್ಲಿ ಗ್ರಾಮದಲ್ಲಿ ಅತಿಥಿ ಶಿಕ್ಷಕನೊಬ್ಬ ನಾಲ್ಕನೇ ತರಗತಿಯ ವಿದ್ಯಾರ್ಥಿಯನ್ನು ಹೊಡೆದು ಕೊಂದಿರುವ ಹೃದಯ ವಿದ್ರಾವಕ ಘಟನೆ ನಡೆದಿದೆ. ಅದೇ ಶಾಲೆಯಲ್ಲಿ ಅತಿಥಿ ಶಿಕ್ಷಕಿಯಾಗಿರುವ ಆ ಹುಡುಗನ ತಾಯಿಯ ಮೇಲೆಯೂ ಆತ ಹಲ್ಲೆ ನಡೆಸಿದ್ದಾನೆ. ಶಾಲೆಯಲ್ಲಿ ಮಕ್ಕಳು ಎಷ್ಟು ಸುರಕ್ಷಿತರು ಎಂಬ ಪ್ರಶ್ನೆ ಪೋಷಕರನ್ನು ಕಾಡುತ್ತಿದೆ. ಶಿಕ್ಷಕ ವೃತ್ತಿ ಎಲ್ಲ ವೃತ್ತಿಗಳಂತಲ್ಲ, ಸದಾ ಕಲಿಯುತ್ತಾ ಮಕ್ಕಳನ್ನು ಪ್ರೀತಿಸುತ್ತಾ ಅವರಲ್ಲಿ ಕಲಿಕೆಯನ್ನುಂಟು ಮಾಡುವ ತಾಳ್ಮೆ, ಜಾಣ್ಮೆ ಮತ್ತು ಮಾನವೀಯ ಗುಣಗಳು ಶಿಕ್ಷಕರಿಗೆ ಇರಬೇಕು. ಆದರೆ ಇತ್ತೀಚಿನ ಸುದ್ದಿಗಳನ್ನು ನೋಡಿದರೆ ಕೆಲವು ಶಿಕ್ಷಕರು ನಡೆದುಕೊಳ್ಳುತ್ತಿರುವ ರೀತಿ ಆತಂಕ ಹುಟ್ಟಿಸುತ್ತದೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು ಈ ರೀತಿ ನಡೆದುಕೊಳ್ಳಲು ಕಾರಣವೇನು ಎಂಬ ಬಗ್ಗೆ ಅಧ್ಯಯನ ನಡೆಸಿ, ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕಾದ ಕೆಲಸ ತುರ್ತಾಗಿ ಆಗಬೇಕಾಗಿದೆ.

ಈ. ಬಸವರಾಜು, ಬೆಂಗಳೂರು

ಚಿತ್ರಪಟಗಳ ಪ್ರದರ್ಶನಶಾಲೆಯಾದೀತು!

ಕರ್ನಾಟಕ ವಿಧಾನಸಭಾಧ್ಯಕ್ಷರು ಏಳು ಮಂದಿ ಸ್ಫೂರ್ತಿದಾಯಕ ನೇತಾರರ ಭಾವಚಿತ್ರಗಳನ್ನು ಚಳಿಗಾಲದ ಅಧಿವೇಶನದ ಪೂರ್ವಭಾವಿಯಾಗಿ ಬೆಳಗಾವಿ ಸುವರ್ಣಸೌಧದಲ್ಲಿ ಅನಾವರಣಗೊಳಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಡಿ. 20). ನಾವು ಅನುದಿನ ಸ್ಮರಿಸಬೇಕಾದದ್ದು ಈ ಏಳು ಮಂದಿಯನ್ನು ಮಾತ್ರವೇ? ಸ್ವತಂತ್ರ ಭಾರತದ ಅಸ್ತಿತ್ವ ಮತ್ತು ಇರಸಣಿಕೆಗಳಿಗೆ ತಮ್ಮ ಸರ್ವಸ್ವವನ್ನೂ ಧಾರೆಯೆರೆದ ಬೇರೆ ಮಹಾಮಹಿಮರು ಇಲ್ಲವೇ ಇಲ್ಲವೇ? ಹಾಗಾದರೆ ರಾಮಕೃಷ್ಣ ಪರಮಹಂಸರು, ಅರವಿಂದ ಘೋಷರು, ರವೀಂದ್ರನಾಥ ಟ್ಯಾಗೋರರು, ಸುಬ್ರಹ್ಮಣ್ಯ ಭಾರತಿಯವರು, ಕಿತ್ತೂರು ಚೆನ್ನಮ್ಮ, ಛತ್ರಪತಿ ಶಿವಾಜಿ ಮಹಾರಾಜರು, ಕುವೆಂಪು, ಕೃಷ್ಣರಾಜ ಒಡೆಯರ್ ಅವರಂತಹ ಅನೇಕಾನೇಕ ಮಹಾನ್ ನೇತಾರರು ಎಲ್ಲಿಗೆ ಹೋದರು?

ಆಯಾ ವಿಧಾನಸಭೆ ಅಥವಾ ಸಂಸತ್ ಭವನದಲ್ಲಿ ಇವರೆಲ್ಲರ ಭಾವಚಿತ್ರಗಳನ್ನು ಹಾಕುತ್ತಾ ಹೋದರೆ, ಅದು ಚಿತ್ರಪಟಗಳ ಪ್ರದರ್ಶನಶಾಲೆಯಾಗುತ್ತದೆಯೇ ವಿನಾ ವೈಧಾನಿಕ ಕಲಾಪ ನಡೆಸುವ ಸದನ ಎನಿಸುವುದಿಲ್ಲ. ಇಂತಲ್ಲಿನ ಕಾರ್ಯಕಲಾಪಗಳಿಗೆ ಸಾಕ್ಷಿಯಾಗತಕ್ಕವರು (ಹಾಗೇ ಸದಸ್ಯರ ಆತ್ಮಸಾಕ್ಷಿಗೆ ಚುಚ್ಚಬೇಕಾದವರು) ಬಿ.ಆರ್. ಅಂಬೇಡ್ಕರ್ ಅವರು ಮಾತ್ರ... ಹಾಗೆಯೇ ಸ್ವತಂತ್ರ ಭಾರತ ಸ್ಮರಿಸಬೇಕಾದದ್ದು, ಇಡೀ ಸ್ವಾತಂತ್ರ್ಯ ಹೋರಾಟಗಾರರೆಲ್ಲರ ಪ್ರತಿನಿಧಿಯಾಗಿ ಮಹಾತ್ಮ ಗಾಂಧೀಜಿಯನ್ನು ಮಾತ್ರ. ಮಿಕ್ಕೆಲ್ಲರನ್ನೂ ನಮ್ಮ ನಮ್ಮ ಹೃದಯಗಳಲ್ಲಿ ಅನುಸಂಧಾನ ಮಾಡಿಕೊಂಡರೆ ಸಾಕಾದೀತು!

ಆರ್.ಕೆ.ದಿವಾಕರ, ಬೆಂಗಳೂರು

ಧಾರ್ಮಿಕ ಹಬ್ಬ ಮತ್ತು ಹೊಸ ವರ್ಷ

ಈಗ ಪ್ರತಿವರ್ಷ ಡಿಸೆಂಬರ್ ಬಂತೆಂದರೆ ಹೊಸ ವರ್ಷಾಚರಣೆಯ ಕುರಿತು ವಾದ ವಿವಾದಗಳು ಪ್ರಾರಂಭವಾಗುತ್ತವೆ. ಕೆಲವರು ಜನವರಿ ಒಂದು ಸರಿ ಎಂದರೆ, ಮತ್ತೆ ಕೆಲವರು ಯುಗಾದಿ ಪಾಡ್ಯವೇ ನಮ್ಮ ಹೊಸ ವರ್ಷದ ಪ್ರಾರಂಭ ಎನ್ನುತ್ತಾರೆ. ಒಂದು ವರ್ಷ ಮುಗಿಯುವುದು ಎಂದರೆ, ಭೂಮಿಯು ಸೂರ್ಯನ ಸುತ್ತ ಒಂದು ಪ್ರದಕ್ಷಿಣೆಯನ್ನು ಮುಗಿಸುವುದು ಎಂದು ಅರ್ಥ. ಭೂಮಿ 365.24 ದಿನಗಳಲ್ಲಿ ತನ್ನ ಒಂದು ಸುತ್ತು ಪೂರ್ಣಗೊಳಿಸುವುದರಿಂದ ಗ್ರೆಗೋರಿಯನ್ ಕ್ಯಾಲೆಂಡರ್‌ನಲ್ಲಿ ಇದು ಶೇಕಡ 99.99 ಸರಿ. ಆದರೆ ಹನ್ನೆರಡು ಅಮಾವಾಸ್ಯೆ ಅಂದರೆ 354 ದಿನಗಳ (59 ದಿನಗಳಿಗೆ ಎರಡು ಅಮಾವಾಸ್ಯೆ) ನಂತರ ಬರುವ ಯುಗಾದಿ ಪಾಡ್ಯಕ್ಕೆ ಇದು ಕರಾರುವಾಕ್ಕಾಗಿ ಸಂಭವಿಸುವುದಿಲ್ಲ. ಇದನ್ನು ಸರಿದೂಗಿಸಲು ನಾವು ಎರಡೂವರೆ– ಮೂರು ವರ್ಷಕ್ಕೆ ಅಧಿಕ ಮಾಸವನ್ನು ಸೇರಿಸುತ್ತೇವೆ. ಹೀಗಾಗಿ, ಯುಗಾದಿ ಪಾಡ್ಯವನ್ನು ಧಾರ್ಮಿಕ ಹಬ್ಬವಾಗಿ ಮನೆಮಂದಿಯೊಂದಿಗೆ ದೇವರ ಮನೆಯಲ್ಲಿ ಆಚರಿಸೋಣ. ಹೊಸ ವರ್ಷದ ದಿನವನ್ನು ಜಾಗತಿಕವಾಗಿ ಮನ್ನಣೆ ಪಡೆದಿರುವ ಜನವರಿ ಒಂದರಂದು, ಜಾತಿ–ಮತ ಭೇದವಿಲ್ಲದೆ ಖುಷಿಯಾಗಿ ಸಾರ್ವಜನಿಕವಾಗಿ ಆಚರಿಸುವುದು ಅರ್ಥಪೂರ್ಣವೆನಿಸುತ್ತದೆ.

ರವಿ ಮುನವಳ್ಳಿ, ಆರ್.ಎಚ್.ಯಲಿಗಾರ, ಮುನವಳ್ಳಿ

ಹಾವು ಕಡಿತಕ್ಕೆ ಚಿಕಿತ್ಸೆ: ಬೇಕು ತರಬೇತಿ

ಹಳ್ಳಿಗಳಲ್ಲಿ ರೈತರು, ರೈತ ಕೂಲಿ ಕಾರ್ಮಿಕರು ಸಾಮಾನ್ಯವಾಗಿ ಮನೆಗಳಲ್ಲಿ, ಹೊಲಗದ್ದೆಗಳಲ್ಲಿ ಹಾವುಗಳ ಕಡಿತಕ್ಕೆ ತುತ್ತಾಗುತ್ತಿದ್ದಾರೆ. ಎಲ್ಲ ಆಸ್ಪತ್ರೆಗಳನ್ನು ಸುತ್ತಿ ನುರಿತ ವೈದ್ಯರನ್ನು ಕಾಣುವ ಹೊತ್ತಿಗೆ ಮೈಗೆ ವಿಷವೇರಿ ಅವರು ತಮ್ಮ ಚಲನವಲನಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಅದೃಷ್ಟ ಇದ್ದರೆ ಬದುಕಬಹುದು, ಇಲ್ಲದಿದ್ದರೆ ಸಾವು ಸಂಭವಿಸಬಹುದು. ಹಾವು ಕಚ್ಚಿದ ರೋಗಿಗೆ ತಾತ್ಕಾಲಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ಕಳುಹಿಸಿಕೊಡಲು ಅನುವಾಗುವಂತೆ ಆರೋಗ್ಯ ಕಾರ್ಯಕರ್ತರಿಗೆ ತರಬೇತಿ ನೀಡಬೇಕು. ಅವರು ಕೇಂದ್ರಸ್ಥಾನದಲ್ಲಿ ವಾಸ ಇರುವಂತೆ ಸೂಚಿಸಬೇಕು. ಅವರ ಮೊಬೈಲ್ ಸಂಖ್ಯೆ ಎಲ್ಲೆಡೆ ಲಭ್ಯ ಇರಬೇಕು. ತಕ್ಕ ಔಷಧವನ್ನು ಪೂರೈಸಬೇಕು. ಈ ರೀತಿ ಯೋಜನೆ ರೂಪಿಸಿ ಕಾರ್ಯರೂಪಕ್ಕೆ ತಂದರೆ, ರೋಗಿಯು ಕೋಮಾ ಸ್ಥಿತಿಗೆ ತಲುಪುವ ಮೊದಲೇ ನುರಿತ ವೈದ್ಯರನ್ನು ತಲುಪಿ ಪ್ರಾಣ ಉಳಿಸಿಕೊಳ್ಳಬಹುದು.

ಡಾ. ಡಿ.ಸಿ.ನಾಯಕ್, ದಾವಣಗೆರೆ

ಬಿಲಾವಲ್: ಇನ್ನೂ ಬುದ್ಧಿ ಬಲಿತಿಲ್ಲ

ಪಾಕಿಸ್ತಾನದಲ್ಲಿ ಒಂದು ಅಸ್ತವ್ಯಸ್ತ ಸರ್ಕಾರವಿದೆ. ಅದಕ್ಕೊಬ್ಬ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ. ಈತ, ಪಾಕಿಸ್ತಾನದ ಪ್ರಧಾನಿಯಾಗಿದ್ದ ಬೆನಜೀರ್ ಭುಟ್ಟೊ ಅವರ ಮಗ. ಆದರೆ ಬುದ್ಧಿ ಮಾತ್ರ ಬಲಿತಿಲ್ಲ. ಭಾರತವನ್ನು ತೆಗಳುವ ಭರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಗುಜರಾತಿನ ಕಟುಕ' ಅಂತ ಜರಿದಿದ್ದಾನೆ. ವಿದೇಶಾಂಗ ಸಚಿವರೊಬ್ಬರು ಹೀಗೆ ಹುಚ್ಚುಹುಚ್ಚಾಗಿ ಮಾತನಾಡುವುದು ಖಂಡನಾರ್ಹ. ಒಸಾಮ ಬಿನ್ ಲಾಡೆನ್ ಪಾಕಿಸ್ತಾನದಲ್ಲಿಯೇ ಆಶ್ರಯ ಪಡೆದಿದ್ದನ್ನು ಈತ ಮರೆತುಹೋದಂತೆ ತೋರುತ್ತದೆ.

ಚಂದ್ರಕಾಂತ ನಾಮಧಾರಿ, ಅಂಕೋಲಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸ್ಕೌಟ್ಸ್–ಗೈಡ್ಸ್ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ

ಯಾವುದೇ ಜನಾಂಗ, ಧರ್ಮ, ಭಾಷೆ, ವರ್ಣಗಳ ಭೇದವಿಲ್ಲದೇ ಯುವಜನರ ಸರ್ವಾಂಗೀಣ ಅಭಿವೃದ್ಧಿಯ ಉದ್ದೇಶ ಹೊಂದಿರುವ ಸ್ಕೌಟ್ಸ್ ಮತ್ತು ಗೈಡ್ಸ್ ಒಂದು ಅಂತರರಾಷ್ಟ್ರೀಯ ಸಂಸ್ಥೆ. ವಿಶ್ವದ ಬಹುತೇಕ ದೇಶಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯನಿರ್ವಹಿಸುತ್ತಿದೆ. ವಿಶ್ವದ ಎಲ್ಲ ದೇಶಗಳಲ್ಲಿನ ಸ್ಕೌಟ್ಸ್ ಮತ್ತು ಗೈಡ್‌ಗಳು ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಸೇರುವ ಬೃಹತ್ ಮೇಳವೇ ಜಾಂಬೂರಿ. ಅಂತಹ ವಿಶ್ವದ ಮೊದಲ ಸಾಂಸ್ಕೃತಿಕ ಜಾಂಬೂರಿ ಭಾರತದಲ್ಲಿ, ಅದರಲ್ಲೂ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯಲ್ಲಿ ನಡೆಯುತ್ತಿದೆ

● ಗಣೇಶ ಚಂದನಶಿವ

ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಂತರರಾಷ್ಟ್ರೀಯ ಮಟ್ಟದ ಪ್ರಪ್ರಥಮ ಸಾಂಸ್ಕೃತಿಕ ಜಾಂಬೂರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ಸಜ್ಜಾಗಿದೆ. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆವರಣದಲ್ಲಿ ಇದೇ 21ರಿಂದ 27ರವರೆಗೆ ದೇಶ–ವಿದೇಶದ ಮಕ್ಕಳ ಪ್ರತಿಭೆ–ಸಾಹಸ ಪ್ರದರ್ಶನ ಅನಾವರಣಗೊಳ್ಳಲಿದೆ. ಸ್ಕೌಟ್ಸ್ ಮತ್ತು ಗೈಡ್ಸ್‌ನಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ 24 ಜಾಂಬೂರಿ ಆಗಿದ್ದು, ಇದು 25ನೇ ಕಾರ್ಯಕ್ರಮ. ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ಇದೇ ಮೊದಲ ಬಾರಿಗೆ ಅದೂ ನಮ್ಮ ರಾಜ್ಯದಲ್ಲಿ ಆಗುತ್ತಿದೆ.

ನಮ್ಮ ದೇಶದ ವಿವಿಧ ರಾಜ್ಯಗಳು ಹಾಗೂ 10 ದೇಶಗಳವರು ಸೇರಿ ಒಟ್ಟು 50 ಸಾವಿರ ಸ್ಕೌಟ್ಸ್–ಗೈಡ್ಸ್/ ರೋವರ್ಸ್–ರೇಂಜರ್ಸ್‌ಗಳು (ಶಿಬಿರಾರ್ಥಿ ವಿದ್ಯಾರ್ಥಿಗಳು), 10 ಸಾವಿರ ದಳನಾಯಕರು (ತರಬೇತುದಾರರು), 3 ಸಾವಿರ ಸ್ವಯಂ ಸೇವಕರು ಪಾಲ್ಗೊಳ್ಳುತ್ತಿದ್ದಾರೆ.

‘ಸ್ಕೌಟ್ಸ್ ಮತ್ತು ಗೈಡ್ಸ್‌ನ ಇಂತಹ ಕಾರ್ಯಕ್ರಮಗಳಿಗೆ ಮಕ್ಕಳಿಗೆ ಟೆಂಟ್‌ಗಳನ್ನು ಹಾಕಲಾಗುತ್ತದೆ. ರಾಜ್ಯ–ದೇಶವಾರು ತಂಡಗಳಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಇರುತ್ತಿತ್ತು. ಇದೇ ಮೊದಲ ಬಾರಿಗೆ ಶಿಬಿರಾರ್ಥಿಗಳಿಗೆ ವಸತಿ ವ್ಯವಸ್ಥೆ ಮತ್ತು ಸಾಮೂಹಿಕ ಭೋಜನದ ವ್ಯವಸ್ಥೆ ಮಾಡಿದ್ದೇವೆ’ ಎನ್ನುತ್ತಾರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಮುಖ್ಯಸ್ಥ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಮುಖ್ಯ ಆಯುಕ್ತ ಡಾ.ಮೋಹನ ಆಳ್ವ.

5 ಬೃಹತ್ ಮೇಳ: ಬೆಳಿಗ್ಗೆ 10ರಿಂದ ರಿಂದ ರಾತ್ರಿ 9 ಗಂಟೆಯವರೆಗೆ ಜನಮನ ತಣಿಸುವ ಅಪೂರ್ವ ಕಾರ್ಯಕ್ರಮಗಳು ಇಲ್ಲಿಯ 5 ಬೃಹತ್ ವೇದಿಕೆಯಲ್ಲಿ ನಡೆಯಲಿವೆ. ಕೃಷಿ, ವಿಜ್ಞಾನ, ಪುಸ್ತಕ, ಕಲಾ ಹಾಗೂ ಆಹಾರ ಮೇಳಗಳು ನಡೆಯಲಿವೆ. ಕೃಷಿ ಮೇಳಕ್ಕಾಗಿಯೇ ಸಿದ್ಧಪಡಿಸಿರುವ ಇಲ್ಲಿಯ ತೋಟದಲ್ಲಿ 100 ವಿಧದ ತರಕಾರಿ ಬೆಳೆಯಲಾಗಿದೆ. ವಿಜ್ಞಾನ ಮೇಳವು ಪ್ರಾಥಮಿಕದಿಂದ ಸ್ನಾತಕೋತ್ತರದವರೆಗಿನ ಎಲ್ಲಾ ವಿದ್ಯಾರ್ಥಿಗಳನ್ನು ಆಕರ್ಷಿಸಲಿದೆ.

ವೈಜ್ಞಾನಿಕ ಆಟಿಕೆಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ದೇಶ–ವಿದೇಶಗಳ ಪ್ರತಿಭಾನ್ವಿತ ಕಲಾವಿದರ ಸಂಗಮದ ಚಿತ್ರಕಲೆ, ಶಿಲ್ಪಕಲೆ, ವ್ಯಂಗ್ಯ ಚಿತ್ರ ಮತ್ತು ಛಾಯಾಚಿತ್ರ ಪ್ರದರ್ಶನವು ಕಲಾಮೇಳದ ಪ್ರಮುಖ ಆಕರ್ಷಣೆಯಾಗಿದೆ. ಮಕ್ಕಳ ಚಟುವಟಿಕೆಗಾಗಿಯೇ 10 ವೇದಿಕೆಗಳನ್ನು ಮೀಸಲಿಡಲಾಗಿದ್ದು, ಬುಡಕಟ್ಟು ಸಮುದಾಯಗಳಿಗೆ ಸೇರಿದ 150ಕ್ಕೂ ಹೆಚ್ಚು ಮಕ್ಕಳೂ ಇದರಲ್ಲಿ ಭಾಗಿಯಾಗಲಿದ್ದಾರೆ.

ಇದೇ ಮೊದಲ ಬಾರಿಗೆ ಶಿಬಿರಾರ್ಥಿ ಮಕ್ಕಳಿಗೆ ಬ್ಯಾಗ್, ಎರಡು ಟಿ–ಶರ್ಟ್, ಕ್ಯಾಪ್, ನೀರಿನ ಬಾಟಲಿಗಳನ್ನು ಒಳಗೊಂಡ ₹750 ಮೌಲ್ಯದ ಸ್ವಾಗತ ಕಿಟ್ ನೀಡಲಾಗುತ್ತಿದೆ. ಈ ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರ ₹10 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಶಿಬಿರಾರ್ಥಿ ಮಕ್ಕಳಿಗೆ ₹1500 ಶುಲ್ಕ ನಿಗದಿ ಮಾಡಿದ್ದು, ಅದರಿಂದ ₹7 ಕೋಟಿಯಷ್ಟು ಹಣ ಸಂಗ್ರಹವಾಗಲಿದೆ. ₹35 ಕೋಟಿಗೂ ಹೆಚ್ಚು ವೆಚ್ಚವಾಗುತ್ತಿದ್ದು, ರಾಜ್ಯ ಸರ್ಕಾರ ಇನ್ನಷ್ಟು ನೆರವು ನೀಡಬೇಕು ಎಂಬುದು ಮೋಹನ ಆಳ್ವ ಅವರ ಮನವಿ.

ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಗಾಗಿ ಮಕ್ಕಳ ಸಾಹಸ ಪ್ರದರ್ಶನಕ್ಕೆ ಸಿದ್ಧಗೊಳ್ಳುತ್ತಿರುವ ಮೈದಾನ

ಪ್ರಮುಖ ಆಕರ್ಷಣೆ

- 35 ಸಾಹಸಮಯ ಕ್ರೀಡೆಗಳು
- ಅರಣ್ಯ ಸಂಪತ್ತಿನ ಜಾಗೃತಿ ಮೂಡಿಸಲು ಜಂಗಲ್ ಟ್ರಯಲ್
- ಪ್ರತಿ ದಿನ ತಂಡ ತಂಡವಾಗಿ 5 ಕಿ.ಮೀ.ನಷ್ಟು ಸ್ವಚ್ಛತಾ ಕಾರ್ಯ (ಒಟ್ಟು 168 ಕಿ.ಮೀ. ಸ್ವಚ್ಛಗೊಳಿಸುವ ಗುರಿ)
- ಕೈಮಗ್ಗ, ಖಾದಿ, ರೇಷ್ಮೆ, ಕರಕುಶಲ ವಸ್ತುಗಳು, ತಿಂಡಿತಿನಿಸುಗಳ ದೇಸಿ ಮಳಿಗೆಗಳು
- ಉಚಿತ ಪ್ರವೇಶ
- 1000ಕ್ಕೂ ಮಿಕ್ಕಿದ ವೈವಿಧ್ಯಮಯ ಮತ್ತು ದಿನವಹಿ ಅಗತ್ಯವಸ್ತುಗಳ ಮಾರಾಟ ಮಳಿಗೆಗಳು
- ಮಧ್ಯಾಹ್ನ ಮತ್ತು ರಾತ್ರಿ ಉಚಿತ ಊಟೋಪಚಾರ
- ಪ್ರಥಮ ಬಾರಿ ಸಾಹಿತ್ಯ ಚಟುವಟಿಕೆ
- ಸಿಡಿಮದ್ದು ಪ್ರದರ್ಶನ
- ಪ್ರಥಮ ಬಾರಿಗೆ ಹಸಿರು ಹೊರೆಕಾಣಿಕೆಯ ಸಂಕಲ್ಪ
- ಸಿನಿ ಸಿರಿ, ಛಾಯಾಚಿತ್ರ ಪ್ರದರ್ಶನ, ಮ್ಯಾರಥಾನ್ ಓಟ
- ಮ್ಯಾಜಿಕ್ ಷೋ, ಪಪೆಟ್ ಷೋ, ಗಾಳಿಪಟ ಷೋ, ಯೋಗಾಥಾನ್

‘ಅವಿಸ್ಮರಣೀಯವಾಗಿಸಲು ಶ್ರಮ’

ನಮ್ಮ ನೆಲದಲ್ಲಿ ನಡೆಯುತ್ತಿರುವ ವಿಶ್ವದ ಪ್ರಥಮ ಅಂತರರಾಷ್ಟ್ರೀಯ ಮಟ್ಟದ ಸಾಂಸ್ಕೃತಿಕ ಜಾಂಬೂರಿಯನ್ನು ಅವಿಸ್ಮರಣೀಯವಾಗಿಸುವಂತೆ ಸಂಘಟಿಸಿದ್ದೇವೆ.

ಉತ್ತಮ ಸ್ಪಂದನೆ ಸಿಗುತ್ತಿದೆ. ದೇವಸ್ಥಾನ–ಧಾರ್ಮಿಕ ಕಾರ್ಯಕ್ರಮಗಳಿಗೆ ಹೊರೆಕಾಣಿಕೆ ಸಾಮಾನ್ಯ. ಆದರೆ, ಜನರು ಇಂತಹ ಕಾರ್ಯಕ್ರಮಕ್ಕೂ ಹೊರೆಕಾಣಿಕೆ ಸಲ್ಲಿಸುತ್ತಿದ್ದಾರೆ. ಇಡೀ ರಾಜ್ಯದ ಎಲ್ಲ ವರ್ಗದ ಜನರು ಕೊಡುಗೆ ನೀಡುತ್ತಿದ್ದಾರೆ. ಅಕ್ಕಿ, ತೆಂಗು, ಸಕ್ಕರೆ, ಬೆಲ್ಲ ನಮ್ಮ ಅಗತ್ಯದಷ್ಟು ಸಂಗ್ರಹವಾಗಿದೆ.

ಅಚ್ಚುಕಟ್ಟು ವ್ಯವಸ್ಥೆಗೆ ಒತ್ತು ನೀಡಲಾಗಿದೆ. ಮನರಂಜನೆಯಿಂದ ಹಿಡಿದು ಭರಪೂರ ಮಾಹಿತಿ ಒಂದೇ ಕಡೆ ಸಿಗುವುದು ರಾಜ್ಯದಲ್ಲಿ ಬಹುಶಃ ಇದೇ ಮೊದಲು. ಸಾರ್ವಜನಿಕರು ಒಂದು ದಿನ ಬಂದು ಹೋದರೆ ಅವರಿಗೆ ಇದು ಅವಿಸ್ಮರಣೀಯವಾಗಲಿದೆ. ದೂಳು ಮುಕ್ತ ಪರಿಸರ ಇದೆ. ಮಧ್ಯಾಹ್ನ ಮತ್ತು ರಾತ್ರಿ ಸೇರಿ ನಿತ್ಯ ಐದು ಬಗೆಯ ಸಿಹಿ ಪದಾರ್ಥ ಊಟದ ವ್ಯವಸ್ಥೆ ಇದೆ.

ಮೋಹನ ಆಳ್ವ, ದಕ್ಷಿಣ ಕನ್ನಡ ಜಿಲ್ಲಾ ಮುಖ್ಯ ಆಯುಕ್ತ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್

‘ಇದು ಅನೌಪಚಾರಿಕ ಶಿಕ್ಷಣ ವ್ಯವಸ್ಥೆ’

ಸ್ಕೌಟ್ಸ್–ಗೈಡ್ಸ್ ಎನ್ನುವುದು ಅನೌಪಚಾರಿಕ ಶಿಕ್ಷಣ ವ್ಯವಸ್ಥೆ. ವೈಯಕ್ತಿಕ ಶುಚಿತ್ವ, ಉತ್ತಮ ನಡವಳಿಕೆ, ಸಮಾಜ ಮತ್ತು ರಾಷ್ಟ್ರವನ್ನು ಪ್ರೀತಿಸುವುದು, ಸಹಾಯ ಹಸ್ತ ಚಾಚುವುದು ಮತ್ತು ಸೇವಾ ಮನೋಭಾವ, ಪ್ರಾಣಿ ಪ್ರಪಂಚ, ಸಸ್ಯ ಪ್ರಪಂಚ, ಪೃಥ್ವಿ–ನೀರು–ಆಕಾಶ ಇವುಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಲಾಗುತ್ತದೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಮಕ್ಕಳ ಮನಪರಿವರ್ತಿಸುವ ಉದ್ದೇಶದಿಂದ ಆಯೋಜಿಸಿರುವ ಈ ‘ಸಾಂಸ್ಕೃತಿಕ ಜಾಂಬೂರಿ’ ನಮ್ಮ ದೇಶದಲ್ಲಿ ಮತ್ತು ವಿಶ್ವಮಟ್ಟದಲ್ಲಿ ಇದೇ ಮೊದಲ ಬಾರಿ ನಡೆಯುತ್ತಿದೆ.

ನಾವು ಈ ಕಾರ್ಯಕ್ರಮ ನಡೆಸಲು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಾತಾವರಣ–ಸೌಲಭ್ಯ ಈ ಮೂರು ಆಯಾಮಗಳಲ್ಲಿ ಹುಡುಕಾಟ ನಡೆಸಿದಾಗ ನಮ್ಮೆದುರು ಬಂದ ಹೆಸರು ಮೋಹನ ಆಳ್ವ. ಅವರನ್ನು ಕೇಳಿಕೊಂಡಾಗ ಅವರು ಒಪ್ಪಿಕೊಂಡರು. ದಕ್ಷಿಣ ಕನ್ನಡ ಜಿಲ್ಲೆಯ ಜನರು, ದಾನಿಗಳು ಬಹಳ ಉತ್ಸುಕತೆಯಿಂದ ಇದಕ್ಕೆ ನೆರವಾಗುತ್ತಿದ್ದಾರೆ. ಸ್ವಾಗತ ಸಮಿತಿಯ ಅಧ್ಯಕ್ಷರಾಗಿರುವ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾಧಿಕಾರಿಗಳು, ದ.ಕ ಜಿಪಂ ಸಿಇಒ ಹಾಗೂ ಎಲ್ಲ ಸಂಘ–ಸಂಸ್ಥೆಗಳವರು ತಮ್ಮ ಮನೆಯ ಕಾರ್ಯಕ್ರಮ ಎಂಬಂತೆ ಸಿದ್ಧತೆ–ಸಹಕಾರ ನೀಡುತ್ತಿದ್ದಾರೆ.

ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್

ಸ್ಕೌಟ್ಸ್ ಚಳವಳಿಯ ಇತಿಹಾಸ ವಿಶೇಷವಾದುದು. ಇದು ಆರಂಭವಾದದ್ದು ಬ್ರಿಟನ್‌ನಲ್ಲಿ. ಬಾಲಕರಲ್ಲಿ ನಾಗರಿಕ ಪ್ರಜ್ಞೆ ಮತ್ತು ಜೀವನ ಕೌಶಲಗಳನ್ನು ಬೆಳೆಸುವ ಉದ್ದೇಶದಿಂದ ಬ್ರಿಟನ್ ಸೇನೆಯ ಮೇಜರ್ ಜನರಲ್ ಲಾರ್ಡ್ ಬೇಡನ್ ಪೊವೆಲ್ ಅವರು 1907ರಲ್ಲಿ ಬಾಲಕರಿಗಾಗಿ ಒಂದು ಶಿಬಿರವನ್ನು ನಡೆಸಿದರು. ಸಮಾಜದ ಭಿನ್ನ ವರ್ಗ, ಸಮುದಾಯಗಳಿಗೆ ಸೇರಿದ 21 ಬಾಲಕರನ್ನು ಆ ಶಿಬಿರಕ್ಕೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ಜುಲೈ 29ರಂದು ಆರಂಭವಾದ ಶಿಬಿರವು ಆಗಸ್ಟ್ 9ಕ್ಕೆ ಮುಕ್ತಾಯವಾಗಿತ್ತು. ಈ ಶಿಬಿರಕ್ಕೆ ಸಂಬಂಧಿಸಿದಂತೆ 1908ರಲ್ಲಿ ‘ಸ್ಕೌಟಿಂಗ್ ಫಾರ್ ಬಾಯ್ಸ್’ ಎಂಬ ಪುಸ್ತಕ ಪ್ರಕಟಿಸಲಾಯಿತು.

‘ಸ್ಕೌಟಿಂಗ್ ಫಾರ್ ಬಾಯ್ಸ್’ ಪುಸ್ತಕದಿಂದಾಗಿ ಸ್ಕೌಟ್ಸ್ ಶಿಬಿರದ ಜನಪ್ರಿಯತೆ ಹೆಚ್ಚಾಯಿತು. ಅದು ಚಳವಳಿಯ ರೂಪ ಪಡೆಯಿತು. ನಂತರದ ವರ್ಷಗಳಲ್ಲಿ ಇಂಗ್ಲೆಂಡ್ ಸೇರಿ ವಿಶ್ವದ ಹಲವೆಡೆ ಹಲವು ಶಿಬಿರಗಳು ನಡೆದವು. 1909ರಲ್ಲಿ ಸ್ಕೌಟ್ಸ್ ಶಿಬಿರದ ಭಾಗವಾಗಿ ಕ್ರಿಸ್ಟಲ್ ಪ್ಯಾಲೆಸ್‌ನಲ್ಲಿ ರ್‍ಯಾಲಿ ಆಯೋಜಿಸಲಾಗಿತ್ತು. 11,000ಕ್ಕೂ ಹೆಚ್ಚು ಸ್ಕೌಟ್ಸ್‌ಗಳು ಅದರಲ್ಲಿ ಭಾಗಿಯಾಗಿದ್ದರು. ಅವರ ಮಧ್ಯೆ ಸ್ಕೌಟ್ಸ್ ಸಮವಸ್ತ್ರ ತೊಟ್ಟಿದ್ದ ಹಲವು ಬಾಲಕಿಯರೂ ಇದ್ದರು. ಹೀಗಾಗಿ ಬಾಲಕಿಯರಿಗೂ ಇಂತಹ ಶಿಬಿರ ನಡೆಸಬೇಕು ಎಂದು ಪೊವೆಲ್ ಯೋಚಿಸಿದರು. ಇದರ ಫಲವಾಗಿ 1910ರಲ್ಲಿ ‘ಗೈಡ್ಸ್’ ಅಸ್ತಿತ್ವಕ್ಕೆ ಬಂದಿತು.

ಭಾರತದಲ್ಲೂ ಸ್ಕೌಟ್ಸ್ ಮತ್ತು ಗೈಡ್ಸ್ ಆರಂಭಿಸಿದ್ದು ಬ್ರಿಟೀಷರೇ. 1909ರಲ್ಲಿ ಬೆಂಗಳೂರಿನಲ್ಲಿ ಮೊದಲ ಸ್ಕೌಟ್ಸ್ ಅನ್ನು ಕ್ಯಾಪ್ಟನ್ ಟಿ.ಎಚ್.ಬೇಕರ್ ಸ್ಥಾಪಿಸಿದರು. ಎರಡೇ ವರ್ಷದಲ್ಲಿ ಕಲ್ಕತ್ತಾ (ಕೋಲ್ಕತ್ತ), ಕಿರ್ಕಿ, ಮದ್ರಾಸ್, ಲೋನಾವಾಲ ಮತ್ತು ಜಬಲ್‌ಪುರದಲ್ಲಿ ಸ್ಕೌಟ್ಸ್ ಆರಂಭವಾಯಿತು. 1911ರಲ್ಲಿ ಜಬಲ್‌ಪುರದಲ್ಲಿ ದೇಶದ ಮೊದಲ ಗೈಡ್ಸ್ ಅನ್ನು ಆರಂಭಿಸಲಾಯಿತು. ಆದರೆ, ಇದ್ಯಾವುದೂ ಭಾರತೀಯ ಬಾಲಕ–ಬಾಲಕಿಯರಿಗೆ ಮುಕ್ತವಾಗಿರಲಿಲ್ಲ. ಬ್ರಿಟೀಷರು ಮತ್ತು ಆಂಗ್ಲೊ–ಇಂಡಿಯನ್‌ಗಳಿಗೆ ಮಾತ್ರ ಸ್ಕೌಟ್ಸ್ ಮತ್ತು ಗೈಡ್ಸ್‌ಗೆ ಪ್ರವೇಶವಿತ್ತು. ಆನಂತರದ ವರ್ಷಗಳಲ್ಲಿ ಭಾರತೀಯರಿಗೂ ಇಲ್ಲಿ ಪ್ರವೇಶ ದೊರೆಯಿತು.

ದೇಶದ ಹಲವೆಡೆ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿದ್ದರೂ, ಇವೆಲ್ಲವುಗಳನ್ನು ಒಗ್ಗೂಡಿಸುವ ಒಂದು ಸಂಸ್ಥೆ ಇರಲಿಲ್ಲ. 1921 ಮತ್ತು 1937ರಲ್ಲಿ ಬೇಡನ್ ಪೊವೆಲ್ ಅವರು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಎಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್‌ಗಳನ್ನು ಒಂದು ಸಂಸ್ಥೆಯ ಅಡಿಯಲ್ಲಿ ಒಗ್ಗೂಡಿಸುವ ಯತ್ನ ನಡೆಯಿತು. ಆದರೆ, ಬ್ರಿಟಿಷ್ ಅಧಿಕಾರಿಯ ಎದುರು ತಲೆಬಾಗಬೇಕಾಗುತ್ತದೆ ಎಂಬ ಕಾರಣದಿಂದ ಇದಕ್ಕೆ ಸಹಮತ ವ್ಯಕ್ತವಾಗಲಿಲ್ಲ. ಹೀಗಾಗಿ ಅಂತಹ ಎರಡೂ ಯತ್ನಗಳು ವಿಫಲವಾದವು. ಆದರೆ, ಸ್ವಾತಂತ್ರ್ಯಾನಂತರ ಇಂತಹ ಯತ್ನ ಮತ್ತೆ ಆರಂಭವಾಯಿತು. ಅಂದಿನ ಭಾರತ ಸರ್ಕಾರದ ಸತತ ಪ್ರಯತ್ನದ ಫಲವಾಗಿ ಎಲ್ಲಾ ಸ್ಕೌಟ್ಸ್‌ಗಳು ಒಗ್ಗೂಡುವ ಒಪ್ಪಂದಕ್ಕೆ 1950ರ ನವೆಂಬರ್ 7ರಂದು ಸಹಿ ಮಾಡಲಾಯಿತು. ಅಂತೆಯೇ ‘ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್–ಬಿಎಸ್‌ಜಿ’ ಅಸ್ತಿತ್ವಕ್ಕೆ ಬಂದಿತ್ತು. ಹೀಗಿದ್ದೂ ಭಾರತೀಯ ಗೈಡ್ಸ್‌ಗಳು ಬಿಎಸ್‌ಜಿಯನ್ನು ಸೇರಿದ್ದು 1951ರ ಆಗಸ್ಟ್ 15ರಂದು.

ಆಧಾರ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ವಿಧಾನಸಭೆ ಚುನಾವಣೆಗೆ ಇನ್ನೂ ಕೆಲವು ತಿಂಗಳು ಬಾಕಿ ಇರುವಾಗಲೇ ಜೆಡಿಎಸ್ 93 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿರುವುದು ಫಲ ಕೊಡಬಹುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



‘ವಾಗೀರ್’ ಕರ್ತವ್ಯಕ್ಕೆ ಹಾಜರ್

ಸ್ಕಾರ್ಪೀನ್ ಸರಣಿಯ 5ನೇ ಜಲಾಂತರ್ಗಾಮಿ ನೌಕೆ ‘ಐಎನ್‌ಎಸ್ ವಾಗೀರ್’ ಭಾರತೀಯ ನೌಕಾಪಡೆಗೆ ಮಂಗಳವಾರ ಸೇರ್ಪಡೆಯಾಗಿದೆ. ಕ್ಷಿಪಣಿ ನಾಶಕ ಯುದ್ಧನೌಕೆ ‘ಐಎನ್‌ಎಸ್ ಮೊರ್ಮುಗಾವ್’ ನೌಕಾಪಡೆ ಸೇರಿದ ಕೆಲವೇ ದಿನಗಳಲ್ಲಿ ವಾಗೀರ್ ಜಲಾಂತರ್ಗಾಮಿಯೂ ಸೇರ್ಪಡೆಯಾಗಿದ್ದು, ಬಲ ಹೆಚ್ಚಿಸಿದೆ. ಸದ್ಯದಲ್ಲೇ ಇದು ಕಾರ್ಯಾಚರಣೆಗೆ ಇಳಿಯಲಿದೆ. ಹಿಂದೂ ಮಹಾಸಾಗರ ವ್ಯಾಪ್ತಿಯಲ್ಲಿ ಚೀನಾದ ಚಟುವಟಿಕೆಗಳು ಬೆದರಿಕೆಯಾಗಿ ಪರಿಣಮಿಸಿವೆ. ಹೀಗಾಗಿ ಕಡಲಗಡಿಯ ಮೇಲೆ ಭಾರತ ಹೆಚ್ಚು ಗಮನ ಕೇಂದ್ರೀಕರಿಸಿದ್ದು, ಜಲಾಂತರ್ಗಾಮಿಗಳ ನಿರ್ಮಾಣಕ್ಕೆ ವೇಗ ನೀಡಿದೆ.

- 2020ರ ನ.16ರಂದು ಮೊದಲ ಬಾರಿ ಸಮುದ್ರಕ್ಕಿಳಿದಿದ್ದ ವಾಗೀರ್; 2021ರ ಫೆ.1ರಿಂದ ಪರೀಕ್ಷಾರ್ಥ ಚಾಲನೆ. 22 ತಿಂಗಳ ದೀರ್ಘಾವಧಿ ಪರೀಕ್ಷೆ ಯಶಸ್ವಿ
- ಉಳಿದ ನೌಕೆಗಳಿಗೆ ಹೋಲಿಸಿದರೆ, ಕಡಿಮೆ ಅವಧಿಯಲ್ಲಿ ಶಸ್ತ್ರಾಸ್ತ್ರ, ಸೆನ್ಸರ್ ಪರೀಕ್ಷೆಗಳು ಪೂರ್ಣ
- ನಿಗದಿಗಿಂತ ಒಂದು ತಿಂಗಳ ಮೊದಲೇ ವಾಗೀರ್ ಕರ್ತವ್ಯಕ್ಕೆ ಹಾಜರ್
- ಐಎನ್‌ಎಸ್ ವಾಗೀರ್ ಸೇರ್ಪಡೆಯಿಂದ ಭಾರತೀಯ ನೌಕಾಪಡೆಯ ಕದನ ಸಾಮರ್ಥ್ಯ ಹೆಚ್ಚಳ

ತಂತ್ರಜ್ಞಾನದ ಮೇಳ

ಜಲಾಂತರ್ಗಾಮಿಯಲ್ಲಿ ಸುಧಾರಿತ ತಂತ್ರಜ್ಞಾನ ಬಳಸಲಾಗಿದೆ. ನೀರಿನಡಿಯಲ್ಲಿ ಗಾಳಿಯ ಸಹಾಯವಿಲ್ಲದೇ ವಿದ್ಯುತ್ ಉತ್ಪಾದಿಸುವ ವ್ಯವಸ್ಥೆ (ಏರ್ ಇಂಡಿಪೆಂಡೆಂಟ್ ಪ್ರೊಪಲ್ಷನ್ ಪ್ಲಾಂಟ್) ಈ ಜಲಾಂತರ್ಗಾಮಿಯ ಗರಿಮೆ. ಸಾಗರದಲ್ಲಿ ಶಬ್ದ ನಿಗ್ರಹಿಸುವ ತಂತ್ರಜ್ಞಾನ, ವಿಕಿರಣ ಶಬ್ದ ಮಟ್ಟವನ್ನು ತಗ್ಗಿಸುವ ತಂತ್ರಜ್ಞಾನ ಬಳಸಲಾಗಿದೆ. ನೀರಿನಲ್ಲಿ ಕಾರ್ಯಾಚರಣೆ ನಡೆಸಲು ಅನುವಾಗುವ ವಿನ್ಯಾಸವಿದೆ. ನೌಕೆಯಲ್ಲಿ ಆಧುನಿಕ ಉಪಕರಣಗಳು, ಶಸ್ತ್ರಾಸ್ತ್ರ, ಸೆನ್ಸರ್, ಟಾರ್ಪೆಡೋ, ಆಧುನಿಕ ಕ್ಷಿಪಣಿಗಳಿವೆ. ಈ ಸರಣಿಯ ಜಲಾಂತರ್ಗಾಮಿಗಳು ಬೆದರಿಕೆಗಳನ್ನು ನಿಷ್ಫಲಗೊಳಿಸುವ ತಂತ್ರಗಾರಿಕೆಯಲ್ಲಿ ಮುಂದಿವೆ.

- ಸರಣಿಯ ಮೊದಲ ನಾಲ್ಕು ಜಲಾಂತರ್ಗಾಮಿಗಳು ಈಗಾಗಲೇ ಸೇವೆಯಲ್ಲಿವೆ. ಸರಣಿಯ ಕೊನೆಯ ಹಾಗೂ 6ನೇ ಜಲಾಂತರ್ಗಾಮಿ ನೌಕೆ ‘ಐಎನ್‌ಎಸ್ ವಾಗ್‌ಶೀರ್’ನ ಪ್ರಾಯೋಗಿಕ ಚಾಲನೆ ಇದೇ ಏಪ್ರಿಲ್ 20ರಂದು ಆರಂಭವಾಗಿದೆ

ಐಎನ್‌ಎಸ್ ವಾಗೀರ್

ನೌಕೆ ಸಾಮರ್ಥ್ಯಗಳು

- ಸಾಗರದಾಳದಲ್ಲಿ ಸ್ಫೋಟಕಗಳನ್ನು (ಮೈನ್‌ಗಳು) ಹಾಕುವ ಸಾಮರ್ಥ್ಯ
- ನೀರಿನಡಿಯಲ್ಲಿ ಜಲಾಂತರ್ಗಾಮಿ ನೌಕೆಗಳು ಮೇಲೆ ಮತ್ತು ನೀರಿನ ಮೇಲ್ಮೈನಲ್ಲಿ ಯುದ್ಧನೌಕೆಗಳ ಮೇಲೆ ದಾಳಿ ನಡೆಸುವ ಕ್ಷಿಪಣಿ ತಂತ್ರಜ್ಞಾನ
- ಗುಪ್ತಚರ ಮಾಹಿತಿ ಸಂಗ್ರಹಣೆ, ಸಾಗರದ ವ್ಯಾಪ್ತಿಯಲ್ಲಿ ನಿಗಾ
- ಎಲ್ಲ ವಾತಾವರಣದಲ್ಲೂ ಕಾರ್ಯಾಚರಣೆ ಸಾಮರ್ಥ್ಯ
- ದೀರ್ಘಾವಧಿಯವರೆಗೆ ನೀರಿನಾಳದಲ್ಲಿ ಕಾರ್ಯಾಚರಣೆ ಸಾಮರ್ಥ್ಯ

ಆಧಾರ: ಪಿಟಿಐ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಬಾಲಿವುಡ್ ನಟ ಶಾರುಕ್ ಖಾನ್ ಅವರು ತಮ್ಮ ಹೊಸ ಚಿತ್ರ ‘ಪಠಾಣ್’ ಪ್ರದರ್ಶನದ ಮೊದಲ ದಿನದ ಗಳಿಕೆಯನ್ನು ಪಾಕಿಸ್ತಾನದ ಸ್ವಯಂಸೇವಾ ಸಂಸ್ಥೆಯೊಂದಕ್ಕೆ ನೀಡಲಿದ್ದಾರೆ. ಶಾರುಕ್ ಅವರ ಈ ನಿಲುವನ್ನು ಸಹನಟ ಜಾನ್ ಅಬ್ರಹಾಂ ಬೆಂಬಲಿಸಿದ್ದಾರೆ. ಈ ಕಾರಣಕ್ಕೆ ಚಿತ್ರ ಪ್ರದರ್ಶನಕ್ಕೆ ನಿಷೇಧ ಹೇರಿದರೆ ತಾವು ಹೆದರುವುದಿಲ್ಲ ಎಂದು ನಟಿ ದೀಪಿಕಾ ಪಡುಕೋಣೆ ಹೇಳಿದ್ದಾರೆ’ ಎನ್ನಲಾದ ಟ್ವೀಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಬಿಬಿಸಿ ಹಿಂದಿ ವಾಹಿನಿಯ ಟ್ವಿಟರ್ ಖಾತೆಯ ಹೆಸರಿನಲ್ಲಿ ಈ ಸುದ್ದಿ ಹರಿದಾಡುತ್ತಿದೆ. ಆದರೆ ಟ್ವೀಟ್‌ನಲ್ಲಿರುವ ಅಂಶಗಳು ನಿಜವಲ್ಲ.

क्या यह सच है ??
#BoycottBollywood

BBC News Hindi
@BBCHindi

शाहरुख का बड़ा बयान:-

पाकिस्तान मेरा दूसरा घर, पठान की पहले दिन की कमाई को पाकिस्तानी NGO के लिए किया जाएगा डोनेट।

जॉन इब्राहिम ने किया सपोर्ट ,दीपिका ने कहा कि बॉयकॉट गेंग से पहले भी नही डरी अब भी नही डरूँगी

ಸಾಕಷ್ಟು ಚರ್ಚೆಗೆ ಒಳಗಾಗಿರುವ ಟ್ವೀಟ್, ಬಿಬಿಸಿ ಹಿಂದಿ ವಾಹಿನಿಯ ಅಧಿಕೃತ ಟ್ವಿಟರ್ ಖಾತೆಯಲ್ಲಿ ಇಲ್ಲ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಟ್ವೀಟ್ ‘ಒಕೆ ಸಟೈರ್’ ಎಂಬ ಹೆಸರಿನ ಫೇಸ್‌ಬುಕ್ ಖಾತೆಯಲ್ಲಿ ಪ್ರಕಟವಾಗಿದೆ. ಅದನ್ನು ಬಿಬಿಸಿ ಹಿಂದಿ ಟ್ವಿಟರ್ ಖಾತೆಯಲ್ಲಿ ಇರುವಂತೆ ತಿರುಚಲಾಗಿದೆ. ಚಿತ್ರದ ಗಳಿಕೆಯ ಹಣವನ್ನು ಪಾಕಿಸ್ತಾನದ ಎನ್‌ಜಿಒಗೆ ನೀಡುವುದಾಗಿ ಶಾರುಕ್ ಹೇಳಿರುವ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಪುಣ್ಯದ ಮಾರ್ಗಗಳು

ಅಂದಿಗಂದಿನ ಕೆಲಸ, ಸಂದನಿತರಲಿ ತೃಪ್ತಿ |
ಕುಂದದುಬ್ಬದ ಮನಸು ಬಂದುದೇನಿರಲಿ ||
ಬಂಧು ಮತಿ ಲೋಕದಲಿ, ಮುನ್‌ದೃಷ್ಟಿ ಪರಮದಲಿ
ಹೊಂದಿರಲಿವದು ಪುಣ್ಯ – ಮಂಕುತಿಮ್ಮ || 782 ||

ಪದ-ಅರ್ಥ: ಅಂದಿಗಂದಿನ = ಅಂದಿಗೆ + ಅಂದಿನ, ಸಂದನಿತರಲಿ = ಸಂದ(ದೊರೆತ) + ಅನಿತರಲಿ (ಅಷ್ಟರಲಿ), ಕುಂದದುಬ್ಬದ = ಕುಂದದ(ಕುಗ್ಗದ) + ಉಬ್ಬದ(ಹಿಗ್ಗದ), ಬಂದುದೇನಿರಲಿ = ಬಂದದು + ಏನು + ಇರಲಿ, ಮುನ್ ದೃಷ್ಟಿ = ಮುಂದಿನ ದೃಷ್ಟಿ, ಹೊಂದಿರಲಿವದು = ಹೊಂದಿ + ಇರಲಿ + ಅದು.

ವಾಚ್ಯಾರ್ಥ: ಆವತ್ತಿನ ಕೆಲಸ ಆವತ್ತಿಗೆ, ಬಂದದ್ದರಲ್ಲಿ ತೃಪ್ತಿ, ಯಾವ ಪ್ರಸಂಗದಲ್ಲೂ ಹಿಗ್ಗದ, ಕುಗ್ಗದ ಮನಸ್ಸು, ಲೋಕದ ಎಲ್ಲರನ್ನು ಬಂಧುಗಳೆಂದು ತಿಳಿಯುವ ಬುದ್ಧಿ, ಪರಮತತ್ವದಲ್ಲಿ ಮುಂದಿನ ದೃಷ್ಟಿ ಹೊಂದಿದ್ದರೆ ಅದು ಪುಣ್ಯ.

ವಿವರಣೆ: ಅವನೊಬ್ಬ ಆಗರ್ಭ ಶ್ರೀಮಂತ. ಮನೆ ಒಂದು ಅರಮನೆ. ಅಲ್ಲಿ ಸಕಲ ಸೌಭಾಗ್ಯಗಳು ಕಾಲುಮುರಿದುಕೊಂಡು ಕುಳಿತಿವೆ. ಆದರೆ ಆತನಿಗೆ ನಿದ್ರೆ ಇಲ್ಲ. ಸಂಜೆಯಾಗುತ್ತಲೇ ಆತ ಎಷ್ಟು ಹಣ ಖರ್ಚಾಯಿತು, ಎಷ್ಟು ಹಣ ಬಂತು ಎಂಬುದರ ಲೆಕ್ಕ ಹಾಕಬೇಕು. ಒಂದೊAದು ಬಾರಿ ಕಳೆದ ತಿಂಗಳಿಗಿಂತ ಹೆಚ್ಚು ಲಾಭವಾದರೆ ಸಂತೋಷವಾಗುತ್ತಿತ್ತು. ಕೆಲವೊಮ್ಮೆ ಲಾಭಕಡಿಮೆಯಾದರೆ ಆತಂಕ. ಅವನಿಗೆ ನಷ್ಟವಾಗದಿದ್ದರೂ ಲಾಭಾಂಶದಲ್ಲಿ ಕಡಿಮೆಯಾಯಿತಲ್ಲ ಎಂಬ ದು:ಖ. ಏನು ಮಾಡಿದರೆ ಲಾಭ ಹೆಚ್ಚಾದೀತು ಎಂಬ ಯೋಚನೆ ಅವನನ್ನು ಹಿಂಡುತ್ತಿತ್ತು. ಅವನ ಮನೆಯ ಬದಿಯಲ್ಲೇ ಒಬ್ಬ ರೈತನ ಮನೆ. ಅವನಿಗೆ ಸ್ವಂತದ ಜಮೀನು ಇಲ್ಲ. ಮತ್ತೊಬ್ಬರ ಹೊಲದಲ್ಲಿ ಕೆಲಸಮಾಡಿ ಬದುಕು ಸಾಗಿಸುತ್ತಿದ್ದ. ಒಂದು ದಿನ ರಾತ್ರಿ ಶ್ರೀಮಂತ ತನ್ನ ಮಾಳಿಗೆಯ ಮೇಲೆ ನಿಂತು ಸುತ್ತ ಮುತ್ತ ನೋಡುತ್ತಿದ್ದ. ಆಗ ಮನೆಯ ಹೊರಗೆ ಕಲ್ಲುಬೆಂಚಿನ ಮೇಲೆ ಮಲಗಿದ್ದ ರೈತನನ್ನು ಕಂಡ. ಹೊರಗಡೆ ಚಳಿ ಇದೆ. ಆದರೆ ರೈತ ಅಲ್ಲಿಯೇ ಮುದ್ದೆಯಾಗಿ ಮಲಗಿ ಗೊರಕೆ ಹೊಡೆಯುತ್ತಿದ್ದಾನೆ. ಶ್ರೀಮಂತನಿಗೆ ಆಶ್ಚರ್ಯ! ತನಗೆ ಅಂಥ ಪ್ರಶಾಂತ ನಿದ್ರೆ ಎಂದೂ ದೊರೆಯಲಿಲ್ಲವಲ್ಲ. ಮರುದಿನ ರೈತನನ್ನು ಕರೆದು ಮಾತನಾಡಿಸಿ ಕೇಳಿದ. ರೈತ ಹೇಳಿದ, “ನನಗೆ ಯಾವ ಚಿಂತೆಯೂ ಇಲ್ಲ ಸ್ವಾಮಿ. ಅಂದಿನ ಕೂಲಿ ಕೆಲಸವನ್ನು ಅಂದೇ ಮಾಡುತ್ತೇನೆ. ಬಂದ ಹಣ ನನ್ನ ಬದುಕಿಗೆ ಸಾಕು. ಹೆಚ್ಚಿನ ಅಪೇಕ್ಷೆ ಏನೂ ಇಲ್ಲ”. ಕಗ್ಗದ ಮೊದಲೆರಡು ಸಾಲಿನ ಮಾತೇ ರೈತನದು.

ಮೈತುಂಬ ದುಡಿತ, ಬಂದದ್ದರಲ್ಲಿ ತೃಪ್ತಿ. ಹೆಚ್ಚು ಕಡಿಮೆ ಎಂಬ ಚಿಂತೆಯಿಲ್ಲ. ಕಗ್ಗ ಇನ್ನೆರಡು ಗುಣಗಳನ್ನು ಸಾರ್ಥಕ ಜೀವನಕ್ಕೆ ಶಿಫಾರಸ್ಸು ಮಾಡುತ್ತದೆ. ಅವು ಬಂಧುಮತಿ, ಮತ್ತು ಪರಮದಲ್ಲಿ ಮುನ್ ದೃಷ್ಟಿ. ಬಂಧುಮತಿಯೆಂದರೆ ಲೋಕದಲ್ಲಿರುವವರೆಲ್ಲ ನಮ್ಮ ಬಂಧುಗಳೇ ಎಂಬ ಭಾವ. ‘ವಸುಧೈವ ಕುಟುಂಬಕಂ’ ಎನ್ನುವುದೂ ಅದೇ. ಪರಮದಲ್ಲಿ ಮುನ್ ದೃಷ್ಟಿ ಎಂದರೆ ತನ್ನ ಮುಖ್ಯ ಗುರಿ ಪರಮವಸ್ತು ಎಂಬಚಿಂತನೆ. ಲೋಕ ಜೀವನವನ್ನು ನಡೆಸುತ್ತ, ತೃಪ್ತಿಯಿಂದಿರುತ, ಪರಮವಸ್ತುವಿನಲ್ಲಿ ದೃಷ್ಟಿಯನ್ನು ನೆಟ್ಟಿರಬೇಕು. ಇವೆಲ್ಲ ಹೊಂದಿದ್ದರೆ ಬದುಕೊಂದು ಪುಣ್ಯದ ಮಾರ್ಗವಾಗುತ್ತದೆ. ಆ ದಿಶೆಗೆ ಪ್ರಯತ್ನ ಅವಶ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಬುಧವಾರ ಡಿಸೆಂಬರ್ 21, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ತ್ರಯೋದಶಿ ಗಂ. 22-17 ನಕ್ಷತ್ರ: ವಿಶಾಖಾ ಗಂ. 08-33, ಅನುರಾಧ ಗಂ. 30-33 ಯೋಗ: ಧೃತಿ ಗಂ. 21-25, ಕರಣ: ಗರಜೆ ಗಂ. 11-36, ಧನುರ್ಮಾಸದ 05 ನೇ ದಿನ.
ರಾಹುಕಾಲ : ಮಧ್ಯಾಹ್ನ 12-00 –01-30 ಸೂರ್ಯೋದಯ : 06-52 ಸೂರ್ಯಾಸ್ತ : 06-05 ಮುಸ್ಲಿಂ ದಿನಾಂಕ : 26 ಜುಮಾದುಲ್ಲಾವಲ್
ದಿನ ವಿಶೇಷ : ಪಕ್ಷ ಪ್ರದೋಷ, ಅಮೃತಸಿದ್ಧಿಯೋಗ
ಅದೃಷ್ಟ ಸಂಖ್ಯೆ : 3, 7

ಮೇಷ: ನೀವು ಆಡಿದ ಮಾತು ಉಳಿಸಿಕೊಳ್ಳುವಲ್ಲಿ ಸೋಲಬೇಕಾಗುತ್ತದೆ. ನರರೋಗ ತಜ್ಞರಿಗೆ ವೃತ್ತಿಯಲ್ಲಿ ಹೆಸರು ಸಂಪಾದಿಸಲು ಈ ದಿನ ಸಹಕಾರಿ. ಕೃಷಿ ಮಾಡುವ ಬಗ್ಗೆ ಆಸಕ್ತಿ ಮೂಡುವುದು.

ವೃಷಭ: ಗಿಡ ಮೂಲಿಕೆಯ ಔಷಧಿ ನೀಡುವವರಿಗೆ ವೈದ್ಯಕೀಯ ಲೋಕದಲ್ಲಿ ಸಾಧಿಸಿದ ಸಂತೋಷ ಸಿಗಲಿದೆ. ಬಟ್ಟೆ ವ್ಯಾಪಾರಿಗಳಿಗೆ ವ್ಯವಹಾರ ಉತ್ತಮವಾಗಿದ್ದು ಮಾರುಕಟ್ಟೆಯಲ್ಲಿ ಸಿಗಲಿದೆ.

ಮಿಥುನ: ಕುಟುಂಬದಲ್ಲಿ ಸೌಹಾರ್ದ ವಾತಾವರಣ ಇರುವುದು. ಆರ್ಥಿಕವಾಗಿ ಸಾಲ ತೀರಿದ ನೆಮ್ಮದಿ ಸಿಗಲಿದೆ. ಕೋರ್ಟುಕಚೇರಿ ವ್ಯವಹಾರದಲ್ಲಿ ಜಯ ಪಡೆಯುವ ಬಗ್ಗೆ ಅಧಿಕ ಪ್ರಯತ್ನವಿರಲಿ.

ಕರ್ಕಾಟಕ: ಶತ್ರುಗಳ ಷಡ್ಯಂತ್ರಕ್ಕೆ ಬಂಧುವಿನ ಸಹಾಯ. ವಿದ್ಯಾರ್ಥಿಗಳಿಗೆ ಗಣಿತದ ವಿಚಾರದಲ್ಲಿ ಕಠಿಣ ಸಾಧನೆ ಅಗತ್ಯವೆನಿಸುವುದು. ರಕ್ತದೊತ್ತಡ ವ್ಯತ್ಯಾಸವಾಗುವ ಸಾಧ್ಯತೆ; ಜಾಗ್ರತರಾಗಿರಿ.

ಸಿಂಹ: ಸೋದರನ ಆಗಮನದಿಂದ ಮನೆಯಲ್ಲಿ ಹೆಚ್ಚಿನ ಸಂಭ್ರಮ. ಗುತ್ತಿಗೆ ಕೆಲಸದ ಬಾಕಿ ಹಣ ಸಂದಾಯವಾಗುವುದು. ಅನವಶ್ಯಕ ಚಿಂತೆ ಮಾಡುವುದರಿಂದ ಆರೋಗ್ಯದಲ್ಲಿ ಏರುಪೇರು.

ಕನ್ಯಾ: ಗೃಹೋಪಕರಣ ವಸ್ತುಗಳ ಖರೀದಿಯಲ್ಲಿ ಹಾಗೂ ಕೆಲವು ಯೋಜನೆಗಳಲ್ಲಿ ಎಡವಿದ ಅನುಭವ. ಇನ್ನೊಬ್ಬರಿಗೆ ಹಣ ಕೊಡುವ ಅಥವಾ ಸ್ವೀಕರಿಸುವ ವಿಚಾರದಲ್ಲಿ ಜಾಗ್ರತೆ ವಹಿಸಿ.

ತುಲಾ: ಹಣ ಹೂಡಿಕೆ ವಿಚಾರದಲ್ಲಿ ಯೋಚಿಸಿ ನಿರ್ಧಾರ ಕೈಗೊಳ್ಳಿ. ಇನ್ನೊಬ್ಬರಿಗೆ ಗೌರವ ಕೊಟ್ಟು ಗೌರವ ಅಪೇಕ್ಷಿಸುವ ಮನಸ್ಥಿತಿ ಇಟ್ಟುಕೊಳ್ಳಿ. ಕೌಟುಂಬಿಕವಾದ ಸವಾಲುಗಳನ್ನು ಎದುರಿಸಬೇಕಾಗಲಿದೆ.

ವೃಶ್ಚಿಕ: ಕುಟುಂಬದಲ್ಲಿ ನಡೆಯುವ ಶುಭಸಮಾರಂಭಗಳ ಸಂಭ್ರಮವು ಹಿರಿಯರ ಮನಸ್ಸಿಗೆ ಸಂತೋಷ ತರುತ್ತದೆ. ಉದ್ಯೋಗಿಗಳಿಗೆ ವೃತ್ತಿಯು ತಾತ್ಕಾಲಿಕ ಸಮಾಧಾನ ತಂದರೂ ಬದಲಾವಣೆಗೆ ಅವಕಾಶವಿದೆ.

ಧನು: ಮರಕೆಲಸ ಮಾಡುವ ವಿಶ್ವಕರ್ಮರಿಗೆ ಉದ್ಯೋಗದಲ್ಲಿ ಕೀರ್ತಿ, ಲಾಭ ಸಂಪಾದನೆಯಾಗುವುದು. ಈ ದಿನ ಎಂದಿನಂತಲ್ಲದೆ ಮನಸ್ಸು ಉಲ್ಲಾಸದಿಂದ ಕೂಡಿರುತ್ತದೆ.

ಮಕರ: ಸ್ನೇಹಿತರಲ್ಲಿ ಸಣ್ಣಪುಟ್ಟ ಕಾರಣಗಳಿಗಾಗಿ ಅಥವಾ ವಿನಾಕಾರಣವಾಗಿ ದ್ವೇಷ ಬೆಳೆಸಿಕೊಳ್ಳಬೇಡಿ. ಇಂಜಿನಿಯರ್‌ಗಳ ಕೆಲಸದ ಸಮಯದಲ್ಲಿ ಬದಲಾವಣೆ. ಅನವಶ್ಯಕ ವಸ್ತುಗಳ ಖರೀದಿ ಕಡಿಮೆಮಾಡಿ.

ಕುಂಭ: ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಈ ಸುಸಂದರ್ಭವನ್ನು ಸೂಕ್ತವಾಗಿ ಬಳಸಿಕೊಳ್ಳಿ. ಹಿಂದೆಂದೂ ಮಾಡದ ಕೆಲಸಗಳನ್ನು ಈಗ ಮಾಡಬೇಕಾಗುವುದು. ಸುಗಂಧ ವಸ್ತುಗಳ ಮಾರಾಟದಲ್ಲಿ ಹೆಚ್ಚಳ

ಮೀನ: ಇಂದು ನಿಮ್ಮ ಶತ್ರುಗಳು ಮಾಡುವ ರಾಜಕೀಯ ಸನ್ನಿವೇಶಗಳು ನಿಮಗೆ ಅನುಕೂಲವಾಗಿಯೇ ಇರುವುದು. ಈ ದಿನ ಮನರಂಜನೆಗಿಂತ ಕೆಲಸಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುವುದು ಉತ್ತಮ. ನೀಲಿ ಬಣ್ಣ ಶುಭ ತರಲಿದೆ.

ಪದಬಂಧ 5175

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ಆವೇಶದಿಂದ ಎಲ್ಲರೂ ಸೇರುವುದು! (4)
3.ಸತ್ತವರನ್ನು ಬದುಕಿಸುವ ಒಂದು ಮೂಲಿಕೆ (4)
5.ತಿರುಗಿಸಿದರೂ ಇದು ಹೊಸತು (3)
6.ಈತ ಕಾಪಾಡುವವನು (3)
8.ತಡ ಎಂದು ಹೀಗೆ ಹೇಳಿ (3)
10.ದೀಪವನ್ನು ಹಚ್ಚಿಡುವ ಚಿಕ್ಕ ಬಟ್ಟಲು (3)
11.ನೈತಿಕವಾಗಿ ಪತನ ಹೊಂದಿದವನು (3)
13.ಕೆಟ್ಟ ರೂಪವಿದು (3)
15.ಕೊನೆಗೆ ಹಾರವನ್ನಿಟ್ಟು ಹೋಗಲಾಡಿಸುವಿಕೆ (4)
16.ತರಿ ತರಲು ಈ ಅವಸರ! (4)

ಮೇಲಿಂದ ಕೆಳಕ್ಕೆ
1.ಕೊನೆಗೆ ಗರ ಬಡಿದರೂ ಇದು ಸಂಭ್ರಮ! (4)
2.ಮಲಗುವಿಕೆಗೊಂದು ಪರ್ಯಾಯ ಪದ (3)
3.ಸಮಾಧಾನದಿಂದಲೇ ನಡೆದ ರಾಜಿ (3)
4.ಎವೆಯನ್ನು ಮುಚ್ಚುವುದು (4)
7.ಕೃಪಣನ ಬಳಿಯಿರುವ ಭೌದ್ಧ ಭಿಕ್ಷು (3)
9.ತವಕ ಹೀಗೆ ಬಂದಿದೆ (3)
10.ಕೈ ಮೊದಲಿಟ್ಟು ಮಧ್ಯ ಪ್ರವೇಶಿಸುವಿಕೆ (4)
12.ತೆಳ್ಳಗಿನ ಸೊಂಟದವಳು (4)
13. ಅಷ್ಟದಿಕ್ಪಾಲಕರಲ್ಲಿ ಅತಿ ಶ್ರೀಮಂತ (3)
14.ಅಗಲವಾದ ತಟ್ಟೆಯಿದು (3)



5174ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಒಳಸಂಚು 3.ವಿಪ್ಲವ
5.ದಳಪತಿ 7.ಪಾಷಾಣ
8.ಕರತಾಡನ 11.ಬುಗುಟು
12.ಕರಣಿಕ 14.ದಣಿವು
15.ವಾಸಸ್ಥಾನ

ಮೇಲಿಂದ ಕೆಳಕ್ಕೆ:
1.ಒಳದನಿ 2.ಸಂತಾಪ
4.ವರುಣ 6.ತಿಮಿರ
7.ಪಾವನ 8.ಕಗ್ಗಂಟು
9.ಡನ್ನಕ 10.ಸಂಕಲನ
11.ಬುದ್ಬುದ 13.ರಭಸ

ಸುಡೊಕು 5561

			4		3		6	
	9				2			5
			5		8	7	2	
		9		3				7
	3				6		5	
8		6		4		2		3
		5		2				4
3						5		
	8	2		5			7	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5560 ಸುಡೊಕು

5	7	2	9	3	4	1	8	6
4	6	9	8	5	1	7	3	2
3	1	8	7	6	2	9	5	4
7	2	3	5	8	6	4	9	1
8	4	1	3	2	9	5	6	7
6	9	5	1	4	7	3	2	8
1	8	7	6	9	5	2	4	3
2	5	6	4	1	3	8	7	9
9	3	4	2	7	8	6	1	5

ಷೇರುಪೇಟೆ ವಹಿವಾಟು 103



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	18420
ಇಂದಿನ ಅಂತ್ಯ	18385
▼	35
ದಿನದ ಕನಿಷ್ಠ	18404

ವಿನಿಮಯ ದರ

$ ಡಾಲರ್	82.70
£ ಪೌಂಡ್	100.53
€ ಯುರೊ	88.02
¥ ಯೆನ್ (100ಕ್ಕೆ)	62.46

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹540
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹540

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1560(1560)
ಸೋಯಾ (ರಿಫೈನ್ಡ್)	₹1270(1260)
ಸೂರ್ಯಕಾಂತಿ (ರಿಫೈನ್ಡ್)	₹1330(1330)
ಪಾಮೋಲಿನ್	₹945(947)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1900-2300
ಮಧ್ಯಮ	₹1000-1800
ಸಣ್ಣ	₹500-1000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹135.50
ಆರ್‌ಎಸ್‌ಎಸ್-5	₹127.50
ಗುಡ್ ಲಾಟ್	₹121

ಆರು ವರ್ಷಗಳಲ್ಲಿ ರೈಟ್‌ಆಫ್ ಆದ ಸಾಲ ₹ 11.17 ಲಕ್ಷ ಕೋಟಿ

ಉದ್ದೇಶಪೂರ್ವಕ ಸುಸ್ತಿದಾರರ ಸಂಖ್ಯೆ ಹೆಚ್ಚಳ

ನವದೆಹಲಿ (ಪಿಟಿಐ): ಬ್ಯಾಂಕ್ ಸಾಲ ತೀರಿಸದೆ, ಉದ್ದೇಶಪೂರ್ವಕವಾಗಿ ಸುಸ್ತಿದಾರ ಆಗುತ್ತಿರುವವರ ಸಂಖ್ಯೆಯು ಹೆಚ್ಚಾಗುತ್ತಿದೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ₹ 25 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಸಾಲ ಹೊಂದಿದ್ದು, ಉದ್ದೇಶಪೂರ್ವಕವಾಗಿ ಸುಸ್ತಿದಾರ ಆಗಿರುವವರ ಸಂಖ್ಯೆ 2017ರ ಜೂನ್ 30ಕ್ಕೆ 8,045 ಆಗಿತ್ತು. ಇದು ಈ ವರ್ಷದ ಜೂನ್ 30ರ ಹೊತ್ತಿಗೆ 12,439 ಆಗಿದೆ.

ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕರಾಡ್ ಅವರು ಸಂಸತ್ತಿಗೆ ನೀಡಿರುವ ಲಿಖಿತ ಉತ್ತರವೊಂದರಲ್ಲಿ ಈ ವಿವರ ಇದೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡಿರುವ ಮಾಹಿತಿ ಆಧರಿಸಿ ಅವರು ಉತ್ತರ ಒದಗಿಸಿದ್ದಾರೆ. ಖಾಸಗಿ ಬ್ಯಾಂಕ್‌ಗಳಲ್ಲಿ ಇಷ್ಟೇ ಮೊತ್ತದ ಸಾಲ ಹೊಂದಿದ್ದು, ಉದ್ದೇಶಪೂರ್ವಕವಾಗಿ ಸುಸ್ತಿದಾರ ಆಗಿರುವವರ ಸಂಖ್ಯೆಯು 2017ರ ಜೂನ್ 30ರಂದು 1,616 ಆಗಿತ್ತು. ಅದು ಈ ವರ್ಷದ ಜೂನ್ 30ಕ್ಕೆ 2,447ಕ್ಕೆ ತಲುಪಿದೆ ಎಂದು ಸಚಿವರು ಉತ್ತರಿಸಿದ್ದಾರೆ.

ಕಳೆದ ಆರು ವರ್ಷಗಳ ಅವಧಿಯಲ್ಲಿ ಬ್ಯಾಂಕ್‌ಗಳು ಒಟ್ಟು ₹ 11.17 ಲಕ್ಷ ಕೋಟಿ ಮೊತ್ತದ ವಸೂಲಾಗದ ಸಾಲವನ್ನು ರೈಟ್‌ಆಫ್ ಮಾಡಿವೆ ಎಂದು ಅವರು ಮಾಹಿತಿ ನೀಡಿದ್ದಾರೆ. ಇದು ಈ ವರ್ಷದ ಮಾರ್ಚ್ 31ರವರೆಗಿನ ವಿವರ.

ತಮ್ಮ ಲೆಕ್ಕಪತ್ರವನ್ನು ಸರಿಪಡಿಸಿಕೊಳ್ಳುವುದು, ತೆರಿಗೆ ಪ್ರಯೋಜನ ಪಡೆದುಕೊಳ್ಳುವುದು ಹಾಗೂ ಬಂಡವಾಳವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಮಾಮೂಲಿ ಪ್ರಕ್ರಿಯೆಯ ಭಾಗವಾಗಿ ಬ್ಯಾಂಕ್‌ಗಳು ಎನ್‌ಪಿಎ ಸಾಲವನ್ನು ರೈಟ್‌ಆಫ್ ಮಾಡುತ್ತವೆ ಎಂದು ಕರಾಡ್ ತಿಳಿಸಿದ್ದಾರೆ. ಆರ್‌ಬಿಐ ಮಾರ್ಗಸೂಚಿ ಹಾಗೂ ತಮ್ಮ ಆಡಳಿತ ಮಂಡಳಿಗಳು ಒಪ್ಪಿರುವ ನೀತಿಗಳಿಗೆ ಅನುಗುಣವಾಗಿ ಸಾಲ ರೈಟ್‌ಆಫ್ ಮಾಡಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಕಳೆದ ಐದು ವರ್ಷಗಳಲ್ಲಿ ರೈಟ್‌ಆಫ್ ಆಗಿರುವ ಎನ್‌ಪಿಎ ಮೊತ್ತ ₹ 10.09 ಲಕ್ಷ ಕೋಟಿ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈಚೆಗೆ ತಿಳಿಸಿದ್ದರು. ಈಗ ಕರಾಡ್ ಅವರು ಆರು ವರ್ಷಗಳ ವಿವರ ನೀಡಿದ್ದಾರೆ.

ಉದ್ದೇಶಪೂರ್ವಕ ಸುಸ್ತಿದಾರರಾಗಿರುವ ವಿಜಯ್ ಮಲ್ಯ, ನೀರವ್ ಮೋದಿ ಮತ್ತು ಮೆಹುಲ್ ಚೋಕ್ಸಿ ಅವರಿಗೆ ಸೇರಿದ ಒಟ್ಟು ₹ 19,312 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯವು 2017ರ ಮೇ ನಂತರ ಮುಟ್ಟುಗೋಲು ಹಾಕಿಕೊಂಡಿದೆ. ಈಪೈಕಿ ₹15,113 ಕೋಟಿಯನ್ನು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ಮರಳಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಅವಿನಾಶ್, ಕೋಲಾರ

- **ಪ್ರಶ್ನೆ: ನಾವು ನಮ್ಮ ಮನೆಯಲ್ಲಿ ತಂದೆ, ತಾಯಿ ಹಾಗೂ ನಮ್ಮ ಕೂಡು ಕುಟುಂಬದ ಜೊತೆ ವಾಸವಾಗಿದ್ದೇವೆ. ನನ್ನ ಪತ್ನಿಗೆ ಆಕೆಯ ಮನೆ ಕಡೆಯಿಂದ ಒಂದಷ್ಟು ಜಮೀನು ಹಾಗೂ ಅದಕ್ಕೆ ಸಂಬಂಧಿಸಿದ ಮನೆಯೊಂದನ್ನು ವರ್ಗಾಯಿಸುವ ಯೋಚನೆ ಇದೆ. ಇದಕ್ಕೆ ಪ್ರತಿಯಾಗಿ ನಾವು ಹಣ ಪಾವತಿಸುತ್ತಿಲ್ಲ. ಆಕೆಯ ತಂದೆ, ತಾಯಿಗೆ ಬೇರೆ ಮಕ್ಕಳು ಇಲ್ಲದ ಕಾರಣ ಮುಂದೆ ಅವರೊಡನೆ ನಾವು ವಾಸವಾಗಲಿದ್ದೇವೆ. ಈ ವರ್ಗಾವಣೆಗೆ ಸಂಬಂಧಿಸಿ ಆದಾಯ ತೆರಿಗೆ ಪಾವತಿಸಬೇಕಾದ ಪ್ರಮೇಯ ಇರುತ್ತದೆಯೇ?**

ಉತ್ತರ: ನಿಮ್ಮ ಪತ್ನಿಯ ಮನೆ ಕಡೆಯ ಜಮೀನು ಹಾಗೂ ಅದಕ್ಕೆ ಸಂಬಂಧಿಸಿದ ಆಸ್ತಿಯನ್ನು ನಿಮ್ಮ ಅಥವಾ ನಿಮ್ಮ ಪತ್ನಿಯ ಹೆಸರಲ್ಲಿ ವರ್ಗಾಯಿಸಿಕೊಳ್ಳುವುದಕ್ಕೆ ತೆರಿಗೆ ಅನ್ವಯಿಸುತ್ತದೆಯೇ ಎಂದು ಕೇಳಿರುತ್ತೀರಿ. ಸಾಮಾನ್ಯ ಆದಾಯ ತೆರಿಗೆ ಕಾನೂನಿನ ಪ್ರಕಾರ, ಒಬ್ಬ ವ್ಯಕ್ತಿಯು ಒಂದು ವರ್ಷದಲ್ಲಿ ಸ್ವೀಕರಿಸಿದ ಎಲ್ಲಾ ಉಡುಗೊರೆಗಳ ಮೌಲ್ಯವು ₹ 50,000 ಮೀರಿರದಿದ್ದರೆ ಸಂಪೂರ್ಣವಾಗಿ ತೆರಿಗೆ ವಿನಾಯಿತಿ ಸಿಗುತ್ತದೆ. ಒಂದು ವೇಳೆ ಅಂತಹ ಉಡುಗೊರೆಗಳ ಒಟ್ಟು ಮೌಲ್ಯವು ₹ 50,000 ಮೀರಿದರೆ, ಸ್ವೀಕರಿಸಿದ ಉಡುಗೊರೆಗಳ ಒಟ್ಟು ಮೊತ್ತವು ಯಾವುದೇ ವಿನಾಯಿತಿ ಮಿತಿ ಇಲ್ಲದೆ ತೆರಿಗೆಗೆ ಒಳಪಡುತ್ತದೆ.

ಆದರೆ, ಆದಾಯ ತೆರಿಗೆ ಕಾನೂನಿನ ಸೆಕ್ಷನ್ 56(2)ರ ಪ್ರಕಾರ ಇಬ್ಬರು ನಿಕಟ ಸಂಬಂಧಿಗಳ ನಡುವಿನ ಉಡುಗೊರೆಗಳಿಗೆ ಸಂಬಂಧಿಸಿದಂತೆ ತೆರಿಗೆ ವಿನಾಯಿತಿ ಇದೆ. ಇದರ ಪರಿಣಾಮವಾಗಿ, ಸಮೀಪದ ಸಂಬಂಧಿಗಳಿಗೆ ಮಾಡಿದ ಯಾವುದೇ ಸ್ವತ್ತಿನ (ಚರ ಅಥವಾ ಸ್ಥಿರ) ಉಡುಗೊರೆಯನ್ನು ಮೇಲಿನ ಯಾವುದೇ ಮಿತಿಯಿಲ್ಲದೆ, ಸ್ವೀಕರಿಸುವವರಿಗೆ ತೆರಿಗೆಯಿಂದ ಸಂಪೂರ್ಣವಾಗಿ ವಿನಾಯಿತಿ ಸಿಗುತ್ತದೆ. ನಿಕಟ ಸಂಬಂಧಿಗಳ ಪಟ್ಟಿಯಲ್ಲಿ ಪೋಷಕರು, ಪತಿ-ಪತ್ನಿ, ಒಡಹುಟ್ಟಿದವರು... ಹೀಗೆ ಇನ್ನೂ ಅನೇಕ ಸಂಬಂಧಗಳನ್ನು ಉಲ್ಲೇಖಿಸಲಾಗಿದೆ. ಹೀಗಾಗಿ ನಿಮ್ಮ ಪತ್ನಿ ಅವರ ತಂದೆ-ತಾಯಿಯಿಂದ ಉಡುಗೊರೆ ಪಡೆದ ಸಂದರ್ಭದಲ್ಲಿ ಯಾವುದೇ ತೆರಿಗೆ ಇರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಕಾನೂನು ಪ್ರಕಾರ ಇರುವ ದಾಖಲೆ ಇಟ್ಟುಕೊಳ್ಳಿ ಹಾಗೂ ಅಗತ್ಯ ಮುದ್ರಾಂಕ ಶುಲ್ಕ ಇತ್ಯಾದಿಗಳನ್ನು ಭರಿಸಿ.

ಮುಂದೆ ಯಾವುದೇ ಸಂದರ್ಭದಲ್ಲಿ ನೀವು ಅಂತಹ ಆಸ್ತಿಯನ್ನು ಮಾರಾಟ ಮಾಡುವುದಿದ್ದರೆ ಬಂಡವಾಳ ಲಾಭದ ಮೇಲೆ ತೆರಿಗೆ ಸಹಜವಾಗಿ ಪಾವತಿಸಬೇಕಾಗುತ್ತದೆ. ಆದಾಯ ತೆರಿಗೆಯ ಉದ್ದೇಶಕ್ಕಾಗಿ ಹಿಂದಿನ ಮಾಲೀಕರು ಆಸ್ತಿಗಾಗಿ ಪಾವತಿಸಿದ ಮೊತ್ತವನ್ನು ನಿಮ್ಮ ವೆಚ್ಚವೆಂದು ಪರಿಗಣಿಸಿ ಲಾಭ-ನಷ್ಟ ಲೆಕ್ಕ ಹಾಕಲಾಗುತ್ತದೆ. ನಿಮ್ಮ ಹಾಗೂ ಹಿಂದಿನ ಮಾಲೀಕರು ಹೊಂದಿದ ಮಾಲೀಕತ್ವದ ಅವಧಿ 24 ತಿಂಗಳುಗಳಿಗಿಂತ ಹೆಚ್ಚಿದ್ದರೆ, ದೀರ್ಘಾವಧಿ ಹಾಗೂ ಅದಕ್ಕಿಂತ ಕಡಿಮೆ ಇದ್ದರೆ ಅಲ್ಪಾವಧಿ ಲಾಭ-ನಷ್ಟವೆಂದು ವಿಂಗಡಿಸಿ ತೆರಿಗೆ ಲೆಕ್ಕ ಹಾಕಲಾಗುತ್ತದೆ. ಬಂಡವಾಳ ಲಾಭದ ಮೇಲೆ ಶೇಕಡ 20ರಷ್ಟು ತೆರಿಗೆ ಇರುತ್ತದೆ.

ದಿಲೀಪ್ ಕುಮಾರ್, ರಾಜಾಜಿನಗರ, ಬೆಂಗಳೂರು

- **ಪ್ರಶ್ನೆ: ನಾನು ಕ್ರಿಪ್ಟೊಕರೆನ್ಸಿಯಲ್ಲಿ ವ್ಯವಹರಿಸಬೇಕೆಂದಿದ್ದೇನೆ. ಕಳೆದ ವರ್ಷದ ಬಜೆಟ್ಟಿನಲ್ಲಿ ಇದಕ್ಕೆ ತೆರಿಗೆ ನಿಯಮ ತರಲಾಗಿದೆ ಎಂದು ತಿಳಿದಿದ್ದೇನೆ. ಇದರಲ್ಲಿ ವ್ಯವಹರಿಸುವುದು ಸೂಕ್ತವೇ? ಇದಕ್ಕೆ ಸಂಬಂಧಿಸಿದ ತೆರಿಗೆ ಬಗ್ಗೆ ತಿಳಿಸಿ.**

ಉತ್ತರ: ಜಾಗತಿಕ ಡಿಜಿಟಲ್ ಹಣಕಾಸು ವ್ಯವಹಾರವನ್ನು ಗಮನದಲ್ಲಿಟ್ಟುಕೊಂಡು ಕೇಂದ್ರವು ಕ್ರಿಪ್ಟೊಕರೆನ್ಸಿಗಳಿಗೆ ಸಂಬಂಧಿಸಿದಂತೆ ಅನೇಕ ತೆರಿಗೆ ನಿಯಮಗಳನ್ನು ಜಾರಿಗೊಳಿಸಿದೆ. ಜನರ ಸಾಮಾನ್ಯ ಗ್ರಹಿಕೆಯ ಪ್ರಕಾರ ಇದು ಕ್ರಿಪ್ಟೊಕರೆನ್ಸಿಗೆ ವಿಧಿಸಿರುವ ತೆರಿಗೆ ಎಂದು ಕಂಡುಬಂದರೂ ಇದನ್ನು ಆದಾಯ ತೆರಿಗೆ ಕಾನೂನಿನ ಅಡಿಯಲ್ಲಿ ಕ್ರಿಪ್ಟೊ ಎನ್ನುವ ಹೆಸರು ಉಲ್ಲೇಖಿಸದೆ 'ವರ್ಚುವಲ್ ಡಿಜಿಟಲ್ ಆಸ್ತಿ' (ವಿಡಿಎ) ಎಂಬ ಹೆಸರಿನಡಿ ತೆರಿಗೆಗೆ ಒಳಪಡಿಸಲಾಗಿದೆ. ಇದರ ಅಡಿ ಕ್ರಿಪ್ಟೊ ಮಾತ್ರವೇ ಅಲ್ಲದೆ, ನಾನ್-ಫಂಜಿಬಲ್ ಟೋಕನ್ (ಎನ್‌ಎಫ್‌ಟಿ), ಡಿಜಿಟಲ್ ಆರ್ಟ್ ಇತ್ಯಾದಿಗಳನ್ನೂ ತೆರಿಗೆ ವ್ಯಾಪ್ತಿಯಲ್ಲಿ ತರಲಾಗಿದೆ.

ಈ ವರ್ಷದ ಏಪ್ರಿಲ್ 1ರಿಂದ ವರ್ಚುವಲ್ ಡಿಜಿಟಲ್ ಆಸ್ತಿಯ ಮಾರಾಟ ಅಥವಾ ವರ್ಗಾವಣೆಯ ಮೇಲಿನ ಯಾವುದೇ ಲಾಭವು ಶೇ 30ರ ಮೂಲ ದರದಲ್ಲಿ ತೆರಿಗೆಗೆ ಒಳಪಟ್ಟಿರುತ್ತದೆ. ಕ್ರಿಪ್ಟೊಕರೆನ್ಸಿ ಇತ್ತೀಚೆಗೆ ಪ್ರವರ್ಧಮಾನಕ್ಕೆ ಬಂದಿರುವ ವ್ಯವಹಾರ ಮಾಧ್ಯಮ. ಇದನ್ನು ಡಿಜಿಟಲ್ ಆಸ್ತಿಯ ವರ್ಗದಲ್ಲಿ ತೆರಿಗೆಗೆ ಒಳಪಡಿಸಲಾಗಿದೆ. ಯಾವುದೇ ವ್ಯಕ್ತಿ ಕ್ರಿಪ್ಟೊಕರೆನ್ಸಿಯನ್ನು ಮಾರಾಟ ಮಾಡಿದರೆ, ಗಳಿಸಿದ ಲಾಭದ ಮೇಲೆ ಶೇ 30ರ ದರದಲ್ಲಿ ಆದಾಯ ತೆರಿಗೆ ಪಾವತಿಸಬೇಕಾಗುತ್ತದೆ. ಆದರೆ, ತೆರಿಗೆಗೆ ಒಳಪಡುವ ಇತರ ಆದಾಯಗಳಿಗೆ ಇರುವಂತೆ, ಕ್ರಿಪ್ಟೊಕರೆನ್ಸಿ ಆದಾಯದಿಂದ ನೀವು ಯಾವುದೇ ನಷ್ಟ ಅಥವಾ ಖರ್ಚುಗಳನ್ನು ಸರಿದೂಗಿಸಿ ಉಳಿದ ಮೊತ್ತದ ಮೇಲಷ್ಟೇ ತೆರಿಗೆ ಪಾವತಿಸುವ ಅವಕಾಶ ಇರುವುದಿಲ್ಲ. ಖರೀದಿ ಮೌಲ್ಯವನ್ನು ಹೊರತುಪಡಿಸಿ ಮಾರಾಟದ ಬೆಲೆಯಿಂದ ಇತರ ಯಾವುದೇ ವೆಚ್ಚ ಸರಿದೂಗಿಸಲು ಆಸ್ಪದವಿಲ್ಲ. ನೀವು ಯಾವುದೇ ಅಲ್ಪಾವಧಿಯ ಅಥವಾ ದೀರ್ಘಾವಧಿಯ ನಷ್ಟವನ್ನು ಅನುಭವಿಸಿದ್ದರೆ, ವಿಡಿಎ ವರ್ಗಾವಣೆಯಿಂದ ಉಂಟಾಗುವ ಆದಾಯದಿಂದ ಅದನ್ನು ಮುಂದಿನ ವರ್ಷಗಳಲ್ಲಿ ಸರಿಹೊಂದಿಸಲು ಅನುಮತಿ ನೀಡಲಾಗುವುದಿಲ್ಲ. ನೀವು ಡಿಜಿಟಲ್ ಆಸ್ತಿಗಳನ್ನು ಉಡುಗೊರೆಯಾಗಿ ನೀಡಿದರೂ ಅದನ್ನು ದಾನ ಮಾಡುವವರ ಅಥವಾ ಸ್ವೀಕರಿಸುವವರ ಕೈಯಲ್ಲಿ ತೆರಿಗೆ ವಿಧಿಸಲಾಗುತ್ತದೆ.

ಒಂದು ದೃಷ್ಟಿಯಲ್ಲಿ ಷೇರು ಮಾರುಕಟ್ಟೆಗಿಂತ ಎಷ್ಟೋ ಪಾಲು ಹೆಚ್ಚು ಲಾಭವನ್ನು ಈ ವ್ಯವಹಾರವು ನೀಡುವಂತೆ ಕಂಡರೂ ನಮ್ಮ ದೇಶದಲ್ಲಿ ಪ್ರಸ್ತುತ ಕ್ರಿಪ್ಟೊಕರೆನ್ಸಿ ವ್ಯವಹಾರಕ್ಕೆ ಸಂಬಂಧಿಸಿ ನಿರ್ದಿಷ್ಟ ಕಾನೂನು ಇಲ್ಲ. ತೆರಿಗೆ ಕಾನೂನಿನ ಅಡಿ ಮಾತ್ರ ಹಣದ ವ್ಯವಹಾರವನ್ನು ನಿಯಂತ್ರಿಸುವ ದೃಷ್ಟಿಯಿಂದ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಕ್ರಿಪ್ಟೊಕರೆನ್ಸಿಗಳಲ್ಲಿ ಹೂಡಿಕೆ ಮಾಡುವುದು, ಅವುಗಳಲ್ಲಿ ವ್ಯವಹಾರ ನಡೆಸುವುದರಲ್ಲಿ ಬಹಳಷ್ಟು ಅಪಾಯ ಇದೆ. ಇಲ್ಲಿ ಆಗಬಹುದಾದ ವಂಚನೆಗೆ ಕಾನೂನಿನ ಅಡಿಯಲ್ಲಿ ನ್ಯಾಯ ಕೇಳಲು ಅವಕಾಶ ಇಲ್ಲ. ಇಲ್ಲಿ ವ್ಯವಹರಿಸುವುದು ವೈಯಕ್ತಿಕ ನಿರ್ಧಾರಕ್ಕೆ ಬಿಟ್ಟದ್ದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. **ಇ-ಮೇಲ್:** businessdesk@prajavani.co.in

ಕೊಬ್ಬರಿ ಧಾರಣೆ

ಅರಸೀಕೆರೆ	₹11500-11600
ಕೆ.ಆರ್.ಪೇಟೆ (ಇತರ)	₹8100-8100
ತುರುವೇಕೆರೆ	₹11500-11800

ಮುಂಬೈ ಧಾರಣೆ

ಶೇಂಗಾ
20–12-2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	11550-11600
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570(1570)
ಒಂದು ವಾರದ ಡೆಲಿವರಿ	1565(1565)
ಸೋಯಾ ಕಚ್ಚಾ	1170(1162)
ಪಾಮ್ ವಾರದ ಡೆಲಿವರಿ	943(945)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200(1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
54250(53900)
ಬೆಳ್ಳಿ ಕೆ.ಜಿ 67900(66850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹ 460-700
ದ್ವಿತಳಿ (ಬಿ.ವಿ)
₹346-836

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Teachers/ Professors

ಆಯುರ್ವೇದ ಕಂಪನಿಗೆ ಉದ್ಯೋಗಿ /ನಿರುದ್ಯೋಗಿ, ಪುರುಷ /ಮಹಿಳೆ ಅಗತ್ಯವಿದೆ, 25000/- ರಿಂದ 30000/- ಪ್ರತಿ ತಿಂಗಳು ಗಳಿಸಿ, ಸಂಪರ್ಕಿಸಿ. 6283289096

ಆಜಾದ್ ಎಜುಕೇಷನ್ ಸೊಸೈಟಿ(ರಿ)
ಎಂ,ಕೆ,ಕೆ, ರಸ್ತೆ, ಶಿವಮೊಗ್ಗ–577202, ಶಿವಮೊಗ್ಗ ಜಿಲ್ಲೆ.
ಎ.ಇ.ಎಸ್ ಸಂಖ್ಯೆ:27/2022–23 ದಿನಾಂಕ: 21.12.2022
ಶಿಕ್ಷಕರು ಬೇಕಾಗಿದ್ದಾರೆ
ನಿರ್ದೇಶಕರು (ಪ್ರೌಢಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ, ನೃಪತುಂಗ ರಸ್ತೆ ಬೆಂಗಳೂರು ರವರ ಜ್ಞಾಪನಾ ಸಂಖ್ಯೆ: DPI.CPIO:ಸಿ8(2):FOV.15/ಇ.941896/ ಖಾ.ಹು.ಭ.ಅನು/75/2022 ದಿನಾಂಕ: 12.12.2022 ಮೇಲ್ಕಂಡ ಸಂಸ್ಥೆ ವತಿಯಿಂದ ನಡೆಸುತ್ತಿರುವ ಈ ಕೆಳಕಂಡ ಅನುದಾನಿತ ಪ್ರೌಢಶಾಲೆಯಲ್ಲಿ ಖಾಲಿ ಇರುವ ದೈಹಿಕ ಶಿಕ್ಷಕರ ಹುದ್ದೆಗೆ ಸರ್ಕಾರ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಕೆಳಕಂಡಂತೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಯ ವಿವರ ಕೆಳಕಂಡಂತಿದೆ.

ಕ್ರ ಸಂ	ಶಾಲೆಯ ಹೆಸರು ಮತ್ತು ವಿಳಾಸ	ಹುದ್ದೆ ಮತ್ತು ವಿಷಯ	ಖಾಲಿ ಹುದ್ದೆ ಸಂಖ್ಯೆ	ಮೀಸಲಾತಿ ಬಿಂದು & ಸಮತಲ ಮೀಸಲಾತಿ	ವಿದ್ಯಾರ್ಹತೆ
1	ಆಜಾದ್ ಬಾಲಿಕಾ ಪ್ರೌಢಶಾಲೆ ಎಂ.ಕೆ.ಕೆ.ರಸ್ತೆ ಶಿವಮೊಗ್ಗ	ದೈಹಿಕ ಶಿಕ್ಷಕರು	01	ಬಿಂದು ಅನ್ವಯಿಸುವುದಿಲ್ಲ ಪ್ರವರ್ಗ–2ಬಿ	ಬಿ.ಪಿ.ಎಡ್

(1)ಅಭ್ಯರ್ಥಿಗಳ ತಮ್ಮ ಹೆಸರು, ವಿದ್ಯಾರ್ಹತೆ, ಹುಟ್ಟಿದ ದಿನಾಂಕ, ಜಾತಿ ಮುಂತಾದ ವಿವರಗಳನ್ನೊಳಗೊಂಡ ಅರ್ಜಿಯೊಂದಿಗೆ ವಿದ್ಯಾರ್ಹತೆಗೆ ಸಂಬಂಧಿಸಿದ ದೃಢೀಕೃತ ದಾಖಲೆಗಳ ನಕಲು ಪ್ರತಿಗಳೊಂದಿಗೆ ಮೇಲ್ಕಂಡ ವಿಳಾಸಕ್ಕೆ ಮತ್ತು ಅರ್ಜಿಯ ಮತ್ತೊಂದು ಪ್ರತಿಯನ್ನು ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ. ಶಿವಮೊಗ್ಗ ಶೈಕ್ಷಣಿಕ ಜಿಲ್ಲೆ ರವರಿಗೆ ನೋಂದಣಿ ಅಂಚೆ ಮೂಲಕ ಪತ್ರಿಕೆಯಲ್ಲಿ ಪ್ರಕಟಣಗೊಂಡ 21 ದಿನಗಳೊಳಗಾಗಿ ತಲುಪುವಂತೆ ಕಳುಹಿಸುವುದು (2)ಅಭ್ಯರ್ಥಿಗಳ ವಯೋಮಿತಿ; ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಸರ್ಕಾರಿ ಆದೇಶದನ್ವಯ ಕನಿಷ್ಠ ಮತ್ತು ಗರಿಷ್ಠ ವಯೋಮಿತಿ ಹೊಂದಿರಬೇಕು. (3)ನಿಗದಿತ ಶುಲ್ಕ: ಆಜಾದ್ ಎಜುಕೇಷನ್ ಸೊಸೈಟಿ(ರಿ) ಶಿವಮೊಗ್ಗ ಇವರ ಹೆಸರಿಲ್ಲಿ ಅಭ್ಯರ್ಥಿಗಳು ರೂ 1000/– ಗಳ ಡಿಡಿ ಪಡೆದು ಅರ್ಜಿಯೊಂದಿಗೆ ಅನುಬಂಧಿಸಿ ಕಳುಹಿಸುವುದು (4)ಅಪೂರ್ಣ ಮಾಹಿತಿಗಳುಳ್ಳ ಹಾಗೂ ವಿಳಂಬವಾಗಿ ಬಂದ ಅರ್ಜಿಗಳನ್ನುಯಾವುದೇ ಹಿಂಬರಹ ನೀಡದೆ ತಿರಸ್ಕರಿಸಲಾಗುವುದು ಹಾಗೂ ಪ್ರಕ್ರಿಯಾ ಶುಲ್ಕವನ್ನು ಯಾವುದೇ ಕಾರಣದಿಂದ ಹಿಂದಿರುಗಿಸಲಾಗುವುದಿಲ್ಲ. (5)ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಮೊ: 9900278404/ 6364132094 (6)ವಿಶೇಷ ಸೂಚನೆ: ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ಅಂಚೆ ಮೂಲಕ ಪ್ರತ್ಯೇಕವಾಗಿ ತಿಳಿಸಲಾಗುವುದು. ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು.
ಸಹಿ/ಕಾರ್ಯದರ್ಶಿ
ಆಜಾದ್ ಎಜುಕೇಷನ್ ಸೊಸೈಟಿ(ರಿ) ಶಿವಮೊಗ್ಗ

Multiple Vacancy

BVL GROUP
Leading Developers Mysore has immediate opening for
Project Manager
15 years experience in layout works (civil).
Electrical Engineer and Civil Engineer
5 yrs experience in layout.
Quantity Surveyor
experience 5 years and above
Premio by BVL Developers, Sy No. 10/3, Choranahalli, Varuna Hobli, Mysore - 570010
sai@bvlgroup.net
bvldevelopers@gmail.com
For any queries please call - 9632059887

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611224833/ 9611225344

ಪ್ರವಾಸ

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್3/01/23 ಪೂರಿ, ಕೋನಾರ್ಕ್, ಭುವನೇಶ್ವರ್ 10/01/23 ರಾಮೇಶ್ವರಂ, ಕನ್ಯಾಕುಮಾರಿ 29/01/23 ಗುಜರಾತ್ ಮಧ್ಯಪ್ರದೇಶ ಪ್ಯಾಕೇಜ್. 9591017782, 9964527782

ರಾಮಕಮಲ್ ಟೂರಿಸಂ 17/1/2023 ಕಾಶಿ, ಗಯಾ, ಬುದ್ಧಗಯಾ, ಅಯೋಧ್ಯೆ, ಪ್ರಯಾಗರಾಜ್ 27.1.2023 ಮಧ್ಯಪ್ರದೇಶ, ಓಂಕಾರೇಶ್ವರ, ಮಹಾಕಾಳೇಶ್ವರ, ಮಹೇಶ್ವರ್. 9481226296, 9945476296

Travel

24.12.2022 ರಿಂದ 14 ದಿನಗಳ ಆಂಧ್ರಪ್ರವಾಸ. 23.02.2023 ರಿಂದ 11 ದಿನಗಳ ಕಾಶಿ.ಗಯಾ ನೈಮಿಶಾರಣ್ಯ.ಚಿತ್ರಕೂಟ. 23.02.2023 ರಿಂದ 15 ದಿನಗಳ ಮಲ್ಟಿ ಎಕ್ಸಲ್ ಸೆಮಿ ಸ್ಲಿಪರ್ ಕೋಚ್ ಬಸ್ಸು/ ವಿಮಾನದಲ್ಲಿ ಅಷ್ಟಜ್ಯೋತಿರ್ಲಿಂಗ ಪ್ರವಾಸ. 23.03.2023 ರಿಂದ 10/18 ದಿನಗಳ ನೇಪಾಳ ಮುಕ್ತಿನಾಥ ಕಾಶಿ,ಗಯಾ ಕೊಲ್ಕತ್ತಾ,ಪುರಿ ಕೋನಾರ್ಕ್ ಭುವನೇಶ್ವರ್. 27.04.2023 ರಿಂದ 14 ದಿನಗಳ ಚಾರ್-ಧಾಮ್ ಪ್ರವಾಸ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್, ತ್ಯಾಗರಾಜನಗರ, ಬೆಂಗಳೂರು-70. 9342287551, 8050629305

ಹೊಸವರ್ಷಕ್ಕೆ_16.01.2023 6ದಿನಗಳು A/c.Bus, ವಿಮಾನದಲ್ಲಿ ಕಾಶಿ,ಗಯಾ ಬುದ್ಧಗಯಾ,ಅಯೋಧ್ಯ, ಅಲಹಾಬಾದ್_26000/ (ಕೆಲವೇ_ಸೀಟುಗಳಿವೆ) ಪ್ರತಿ_ತಿಂಗಳು ಹಡಗು/ವಿಮಾನದಲ್ಲಿ ಅಂಡಮಾನ್, ಹವಳದ್ವೀಪ ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9845560219/ 9739847429.

23.01.2023 08.03.2023 10.04.2023 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 08.03.2023 05.04.2023 ನೇಪಾಳ 9 ದಿನಗಳು. 10.02.2023 15.03.2023 ದುಬೈ,ಅಬುಧಾಬಿ 5 ದಿನಗಳು. 15.03.2023 15.04.2023 ಭೂತಾನ್ 8 ದಿನಗಳು. 23.02.2023 16.03.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 09.02.2023 11.03.2023 ಗುಜರಾತ್ 8 ದಿನಗಳು. 05.02.2023 17.03.2023 ರಾಜಸ್ಥಾನ್ 9 ದಿನಗಳು. A/C ರೂಂ/ A/C ಬಸ್ಸು/ ವಿಮಾನದಲ್ಲಿ. ಸಂಪರ್ಕಿಸಿ: ಜೈನ್ ಟ್ರಾವಲ್ಸ್, ಬೆಂಗಳೂರು-03. 9448402248 7022547922

ಶಿವರಾತ್ರಿ ಪ್ರಯುಕ್ತ ಜನವರಿ ಫೆಬ್ರವರಿ ತಿಂಗಳಲ್ಲಿ 8 ದಿನಗಳ ಕಾಶಿ,ಗಯಾ,ಅಯೋಧ್ಯ ಮಾರ್ಚ್ ಏಪ್ರಿಲ್ ಮೇ ತಿಂಗಳಲ್ಲಿ 12 ದಿನಗಳ ಮುಕ್ತಿನಾಥ ನೇಪಾಳ ನೈಮಿಶಾರಣ್ಯ 14 ದಿನಗಳ ದೆಹಲಿ ಅಮೃತ್‌ಸರ್ ವೈಷ್ಣೋದೇವಿ ಕುಲು ಮನಾಲಿ,ಸಿಮ್ಲಾ 14/21/26 ದಿನಗಳ ಕಾಶಿ,ಗಯಾ ಪ್ರಯಾಗ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯಮುನೋತ್ರಿ ದೆಹಲಿ 16 ದಿನಗಳ ಪಂಚದ್ವಾರಕ ಮಾತೃಗಯಾ ಉಜ್ಜಯಿನಿ ಓಂಕಾರೇಶ್ವರ ಅಹಮದಾಬಾದ್ 21.01.2023 ಒಳಗಾಗಿ ಪೂರ್ಣ ಪ್ರಯಾಣ ದರವನ್ನು ಪಾವತಿಸಿದವರಿಗೆ ಬಸ್ ದರದಲ್ಲಿ 10% ರಿಯಾಯಿತಿ ಕೊಡಲಾಗುವುದು ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289 9019301300 9448119290

ಮಹಾಶಿವರಾತ್ರಿ ಪ್ರಯುಕ್ತ 09/02/2023ರಿಂದ ವಿಮಾನ ಮತ್ತು ಎ.ಸಿ ಬಸ್ಸಿನಲ್ಲಿ 16ದಿನಗಳ ಮುಕ್ತಿನಾಥ್,ಪಶುಪತಿನಾಥ್, ಪೋಕ್ರಾ,ಭಕ್ತಪುರ,ಕಾಶಿ, ನೈಮಿಷಾರಣ್ಯ ಹಾಗು 13ದಿನಗಳ ಪಂಚರಾಮಕ್ಷೇತ್ರ ಸಮೇತ ಅನ್ನಾವರಂ,ಸಿಂಹಾಚಲಂ,ವಿಶಾಖಪಟ್ಟಣ 28.1.2023ರಿಂದ 9ದಿನಗಳ ಕಾಶಿ,ಗಯಾ, ಬೈದ್ಯನಾಥೇಶ್ವರ,ಅಲಹಾಬಾದ್. ಏಷ್ಯನ್ ಟ್ರಾವೆಲ್ ಲೈನ್ಸ್, #164/3,ಆರ್.ವಿ.ರಸ್ತೆ, ಬೆಂಗಳೂರು-4. ಫೋನ್: 8105657052, 9480182865.

ಸಾರ್ವಜನಿಕ ಪ್ರಕಟಣೆ

ಗ್ರಾಮ ವಿದ್ಯಾ ಪ್ರಚಾರಕ ಸಂಘ (ರಿ), ಕನಕಪುರ
ಪತ್ರಿಕಾ ಪ್ರಕಟಣೆ
ಗ್ರಾಮ ವಿದ್ಯಾ ಪ್ರಚಾರಕ ಸಂಘ (ರಿ), ಕನಕಪುರ ಈ ಸಂಘದ 2021–24ರ ಚುನಾವಣೆ ನಡೆಸಬೇಕಾಗಿರುವುದರಿಂದ ಆಡಳಿತ ಮಂಡಳಿಯ ಸಭೆಯ ತೀರ್ಮಾನದಂತೆ ಮತದಾರರ ಪಟ್ಟಿಯಲ್ಲಿ ಇರುವ ಆಜೀವ ಸದಸ್ಯರಿಗೆ ಈಗಾಗಲೇ ದಿ: 10.10.2022ರ ಸೋಮವಾರದಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪುಟ ಸಂಖ್ಯೆ 10 ರಲ್ಲಿ ಜಾಹೀರಾತನ್ನು ನೀಡಿ ದಿ: 22.10.2022ರ ಶನಿವಾರದೊಳಗೆ ಆಜೀವ ಸದಸ್ಯರುಗಳು ಇಲ್ಲಿಯವರೆಗೆ ಗುರುತಿನ ಚೀಟಿ ಪಡೆಯದಿದ್ದವರು ನಿಮ್ಮ ಆಧಾರ್ [illegible] ದಿ: 28.12.2022ರ [illegible]
ಸಿ. ರಮೇಶ್, ಕಾರ್ಯದರ್ಶಿ
ಆಡಳಿತ ಮಂಡಳಿಯ ಪರವಾಗಿ

General

REQUIRED
ASST MANAGERS / ASSISTANTS
ಕೊಡಗು ದಕ್ಷಿಣ ಕನ್ನಡ ಗೌಡ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಪ್ರಧಾನ ಕಛೇರಿ: ನಂ.16/11, 1ನೇ 'ಸಿ' ಮುಖ್ಯರಸ್ತೆ, ಗಂಗಾನಗರ ಬಡಾವಣೆ, ಬೆಂಗಳೂರು–560032, ಬೆಂಗಳೂರಿನ ಮತ್ತು ಕುಂಶಾಲನಗರ ಶಾಖೆಗೆ ಸಹಾಯಕ ವ್ಯವಸ್ಥಾಪಕರು/ಸಹಾಯಕರು ಬೇಕಾಗಿದ್ದಾರೆ. "ಕನಿಷ್ಠ ಅರ್ಹತೆ" ಪದವಿಧರರಾಗಿದ್ದು ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು. ಕೋ–ಅಪರೇಟಿವ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಹಾಗೂ ಹಣಕಾಸು ಸಂಸ್ಥೆಗಳಲ್ಲಿ ಅನುಭವ ಹೊಂದಿದವರಿಗೆ ಆದ್ಯತೆ ನೀಡಲಾಗುವುದು. ಆಸಕ್ತಿ ಇರುವ ಅಭ್ಯರ್ಥಿಗಳು ದಿನಾಂಕ 30.12.2022 ರೊಳಗಾಗಿ ಈ ಮೇಲಿನ ವಿಳಾಸಕ್ಕೆ ದಾಖಲೆಗಳೊಂದಿಗೆ ಇ–ಮೇಲ್ ಅಥವಾ ಅಂಚೆ ಮುಖಾಂತರ ಅರ್ಜಿ ಸಲ್ಲಿಸತಕ್ಕದ್ದು.
ಮೊಬೈಲ್: 78460 53383
ಇ-ಮೇಲ್: kodagudksouharda@gmail.com

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡಿಗಿಯರು ಬೇಕಾಗಿದ್ದಾರೆ ಊಟ,ವಸತಿಯಿದೆ 10,000 -15,000, 8951315839, 9880545002

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000/-. 8792156697, 8792155097.

ಬೇಕಾಗಿದ್ದಾರೆ ಬೆಂಗಳೂರಿನಲ್ಲಿರುವ ಸೌಂಡ್ ಸಿಸ್ಟಮ್ ಕಂಪನಿಯಲ್ಲಿ ಕೆಲಸ ಮಾಡಲು ಅನುಭವವಿರುವ ಕೆಲಸಗಾರರು ತಕ್ಷಣ ಬೇಕಾಗಿದ್ದಾರೆ ಡ್ರೈವರ್ ಗಳು (ಬ್ಯಾಡ್ಜ್)15000/- ಹೆಲ್ಪರ್ಗಳು 12000/- ತಿಂಗಳ ಸಂಬಳ. 9845026220

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

DH DECCAN HERALD ಪ್ರಜಾವಾಣಿ

BOOK YOUR REAL ESTATE
AD IN DECCAN HERALD ALL KARNATAKA + PRAJAVANI BENGALURU
ON FRIDAY + SATURDAY + SUNDAY
@ 1070/-* Per Sqcm Single Column
conditions apply*
For More Details Contact:
9886213331 | 9845114560 | 9731810277 | 9901641752
080- 45557163 | 45557164
dhclassifieds@deccanherald.co.in www.dhclassifieds.com

EDUCATION CORNER
ADMISSION GUIDANCE @Karnataka
MBBS @85L-95L Pacakage
BDS @10-18L Package
BAMS @16-30L Package
BHMS @14-20L Package
Neet Score -93-117
Last Date-28.12.22 For MBBS
Call-6305953095

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

OBITUARY



NAGARAJ DEVATHA
26.05.1936 - 20.12.2022

He has bid us a final goodbye and has reached the lotus feet of the Lord. His loving heart left a beacon of light for all in the family.

He will always be remembered for his generosity, philanthropy and enthusiasm. He has showered his love on his wife, Vatsala, his family, Pradeep Devatha and Jaswanthi, and Praveen Devatha and Aparna and his grandchildren and everyone in the family and beyond.

na jayate mriyate va kadacin nayam bhutva bhavita va na bhuyah ajo nityah sasvato 'yam purano na hanyate hanyamane sarire

For the soul, there is neither birth nor death at any time. He has not come into being, does not come into being, and will not come into being. He is unborn, eternal, ever lasting and primeval. He is not slain when the body is slain.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	250-300
ನಡುಗೋಲು	450-480
ರಾಶಿ	480- 500
ರಾಶಿ ಉತ್ತಮ	550-600
ಜರಡಿ	700 - 750
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,250-1,350
ಕಾಳು ಮೆಣಸು	- 500

ಅಡಿಕೆ

ಬಂಟ್ವಾಳ	
ಕೋಕ	12,500-25,000
ಹೊಸತು	27,500-38,000
ಹಳತು	48,000-54,500
ಭದ್ರಾವತಿ	
ರಾಶಿ	40,699-43,769
ಚನ್ನಗಿರಿ	
ರಾಶಿ	41,799-45,100
ಚಿತ್ರದುರ್ಗ	
ಆಪಿ	44,101-44,511
ಬೆಟ್ಟೆ	32,429-32,899
ಕೆಂಪುಗೋಟು	28,219-28,659
ರಾಶಿ	43,639-44,069
ಕಾರ್ಕಳ	
ಹೊಸತು	30,000-37,500
ಹಳತು	40,000-54,500
ಕೊಪ್ಪ	
ಬೆಟ್ಟೆ	43,689-47,190
ಗೊರಬಲು	28,009-31,409
ರಾಶಿ	33,059-41,199
ಸರಕು	69,019-78,059
ಕುಂದಾಪುರ	
ಹಳೆಚಾಲಿ	53,000-55,000
ಹೊಸಚಾಲಿ	40,000-47,500
ಮಡಿಕೇರಿ	
ಹಸಿ	43,323-43,323
ಪುತ್ತೂರು	
ಕೋಕ	11,000-26,000
ಹೊಸತು	32,000-38,000
ಸಾಗರ	
ಬಿಳಿಗೋಟು	12,179-28,459
ಚಾಲಿ	19,109-19,109
ಕೋಕ	11,189-29,899
ಕೆಂಪುಗೋಟು	20,129-20,129
ರಾಶಿ	39,209-43,409
ಸಿಪ್ಪೆಗೋಟು	20,249-20,249
ಶಿವಮೊಗ್ಗ	
ಗೊರಬಲು	16,760-34,669
ರಾಶಿ	40,096-44,399
ಸಿದ್ದಾಪುರ	
ಬಿಳಿಗೋಟು	21,499-33,299
ಚಾಲಿ	35,689-39,499
ಕೋಕ	20,000-30,682
ಕೆಂಪುಗೋಟು	25,319-27,469
ರಾಶಿ	41,099-44,289
ತಟ್ಟಿಬೆಟ್ಟೆ	33,699-41,899
ಯಲ್ಲಾಪುರ	
ಆಪಿ	52,900-52,900
ಬಿಳಿಗೋಟು	25,499-33,299
ಚಾಲಿ	36,399-40,099
ಕೋಕ	15,301-30,999
ಕೆಂಪುಗೋಟು	25,199-33,199
ರಾಶಿ	41,012-47,000
ತಟ್ಟಿಬೆಟ್ಟೆ	36,040-40,899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,100	13200	13200	164.30 ಸೆಂಟ್ಸ್
ಎಸಿ	6,440	6600	6200	
ಆರ್‌ಪಿ	8,000	8500	8500	ಲಂಡನ್
ಆರ್‌ಸಿ	4,450	4200	4200	1945 ಡಾಲರ್ಸ್

ಏಕರೂಪಿ ತೆರಿಗೆ: ಭಾರ್ಗವ ಅಸಮಾಧಾನ

ನವದೆಹಲಿ (ಪಿಟಿಐ): ಎಲ್ಲ ಬಗೆಯ ಕಾರುಗಳಿಗೂ ಒಂದೇ ಪ್ರಮಾಣದ ತೆರಿಗೆ ವಿಧಿಸುವುದು ಆಟೊಮೊಬೈಲ್ ಉದ್ಯಮದ ಬೆಳವಣಿಗೆಗೆ ಪೂರಕವಲ್ಲ ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಅಧ್ಯಕ್ಷ ಆರ್.ಸಿ. ಭಾರ್ಗವ ಹೇಳಿದ್ದಾರೆ.

ತಯಾರಿಕಾ ವಲಯ ಇನ್ನಷ್ಟು ವೇಗವಾಗಿ ಬೆಳೆದರೆ ದೇಶದ ಒಟ್ಟು ಆರ್ಥಿಕ ಬೆಳವಣಿಗೆ ಹೆಚ್ಚಾಗಬಹುದು. ಆದರೆ, ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಒಳ್ಳೆಯ ಕ್ರಮಗಳನ್ನು ಕೈಗೊಂಡಿದ್ದರೂ ತಳಮಟ್ಟದಲ್ಲಿ ಅನುಷ್ಠಾನದಲ್ಲಿನ ಲೋಪದ ಕಾರಣದಿಂದಾಗಿ ಇದು ಸಾಧ್ಯವಾಗುತ್ತಿಲ್ಲ ಎಂದು ಅವರು ಹೇಳಿದ್ದಾರೆ.

ರಾಜಧಾನಿ ಬ್ಯೂನಸ್ ಐರಿಸ್‌ನಲ್ಲಿ ಅರ್ಜೆಂಟೀನಾ ಅಭಿಮಾನಿಗಳ ಸಂಭ್ರಮ

‘ವಿಶ್ವ’ ವಿಜೇತರಿಗೆ ಭವ್ಯ ಸ್ವಾಗತ

ಬ್ಯೂನಸ್ ಐರಿಸ್‌ನಲ್ಲಿ ಜನಸ್ತೋಮದ ಮಧ್ಯೆ ತೆರೆದ ಬಸ್ಸಿನಲ್ಲಿ ಮೆರವಣಿಗೆ ಸಾಗಿದ ಅರ್ಜೆಂಟೀನಾ ಆಟಗಾರರು ಸೆಲ್ಫಿ ಕ್ಲಿಕ್ಕಿಸಿ ಸಂಭ್ರಮಿಸಿದರು– ಎಎಫ್‌ಪಿ ಚಿತ್ರ

ಬ್ಯೂನಸ್ ಐರಿಸ್ (ಎಎಫ್‌ಪಿ/ಎಪಿ): ಮೂವತ್ತಾರು ವರ್ಷಗಳ ನಂತರ ಫಿಫಾ ವಿಶ್ವಕಪ್ ಜಯಿಸಿದ ಅರ್ಜೆಂಟೀನಾ ತಂಡದ ಆಟಗಾರರಿಗೆ ರಾಜಧಾನಿ ಬ್ಯೂನಸ್ ಐರಿಸ್‌ನಲ್ಲಿ ಅಭೂತಪೂರ್ವ ಸ್ವಾಗತ ದೊರೆಯಿತು.

ಕತಾರ್‌ನಲ್ಲಿ ಭಾನುವಾರ ನಡೆದ ಟೂರ್ನಿಯ ರೋಚಕ ಫೈನಲ್ ಪಂದ್ಯದಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ 4–2ರಿಂದ ಫ್ರಾನ್ಸ್ ತಂಡವನ್ನು ಮಣಿಸಿದ ಅರ್ಜೆಂಟೀನಾ ಪ್ರಶಸ್ತಿಗೆ ಮುತ್ತಿಕ್ಕಿತ್ತು. ತಂಡವು ಮಂಗಳವಾರ ಬೆಳಗಿನ ಜಾವ ಬ್ಯೂನಸ್ ಐರಿಸ್‌ನ ಎಜೆಜಾ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು. ಈ ವೇಳೆ ಲಯೊನೆಲ್ ಮೆಸ್ಸಿ ಪಡೆಯನ್ನು ಸ್ವಾಗತಿಸಲು ಸಾವಿರಾರು ಅಭಿಮಾನಿಗಳು ಜಮಾಯಿಸಿದ್ದರು.

ವಿಮಾನದಿಂದಿಳಿದ ಮೆಸ್ಸಿ ಹಾಗೂ ಕೋಚ್ ಲಯೊನೆಲ್ ಸ್ಕಾಲೊನಿ ಮುಂದೆ ಸಾಗಿದರು. ಉಳಿದ ಆಟಗಾರರು ಅವರನ್ನು ಹಿಂಬಾಲಿಸಿದರು. ‘ಚಾಂಪಿಯನ್‌ಗಳಿಗೆ ಧನ್ಯವಾದ’ ಎಂಬ ಬರಹದ ಬ್ಯಾನರ್‌ಗೆ ಆಟಗಾರರು ಸಹಿ ಹಾಕಿದರು. ಈ ವೇಳೆ ಹಾಡು ಮತ್ತು ನೃತ್ಯದ ಮೂಲಕ ಜನರು ಮೈಮರೆತು ಸಂಭ್ರಮಿಸುತ್ತಿದ್ದರು. ಬಳಿಕ ತೆರೆದ ಬಸ್ಸಿನಲ್ಲಿ ಆಟಗಾರರು ಮೆರವಣಿಗೆ ಮೂಲಕ ಅರ್ಜೆಂಟೀನಾ ಫುಟ್‌ಬಾಲ್ ಸಂಸ್ಥೆಯ ಮುಖ್ಯ ಕಚೇರಿಗೆ ತೆರಳಿದರು.

ದಾರಿಯುದ್ದಕ್ಕೂ ರಾಷ್ಟ್ರಧ್ವಜಗಳನ್ನು ಹಿಡಿದಿದ್ದ ಅಭಿಮಾನಿಗಳು ಆಟಗಾರರ ಗಮನ ಸೆಳೆಯಲು ಕಾತರಿಸಿದಂತಿತ್ತು. ಸುಮಾರು ಎರಡು ಲಕ್ಷದಷ್ಟಿದ್ದ ಅಭಿಮಾನಿಗಳನ್ನು ಬಸ್ಸಿನಿಂದ ದೂರವಿರಿಸಲು ಪೊಲೀಸರು ಹರಸಾಹಸ ಪಟ್ಟರು. ಟ್ರೋಫಿಯನ್ನು ಹಿಡಿದ ಮೆಸ್ಸಿ ಹಾಗೂ ಆಟಗಾರರು ಜನರತ್ತ ಕೈಬೀಸುತ್ತಾ ಸಾಗಿದರು. 11 ಕಿಲೊ ಮೀಟರ್ ದೂರವನ್ನು ಪ್ರಯಾಣಿಸಲು ಬಸ್ಸು ಸುಮಾರು ಒಂದು ತಾಸು ತೆಗೆದುಕೊಂಡಿತು. ದೃಶ್ಯವಾಹಿನಿಗಳು ಈ ದೃಶ್ಯವನ್ನು ನೇರಪ್ರಸಾರ ಮಾಡಿದವು.

1986ರ ಬಳಿಕ ತಂಡವು ವಿಶ್ವಕಪ್ ಜಯಿಸಿದ ಸಂಭ್ರಮಾಚರಣೆಗಾಗಿ ಅರ್ಜೆಂಟೀನಾ ಅಧ್ಯಕ್ಷ ಆಲ್ಬರ್ಟೊ ಫರ್ನಾಂಡೆಜ್ ಮಂಗಳವಾರ ರಾಷ್ಟ್ರೀಯ ರಜೆ ಘೋಷಿಸಿದ್ದರು.

ಫಿಫಾ ವಿಶ್ವಕಪ್ ಕತಾರ್ 2022

ಫ್ರಾನ್ಸ್ ಆಟಗಾರರಿಗೂ ಗೌರವ

ವಿಶ್ವಕಪ್ ರನ್ನರ್ಸ್ ಅಪ್ ಫ್ರಾನ್ಸ್ ಆಟಗಾರರಿಗೂ ರಾಜಧಾನಿ ಪ್ಯಾರಿಸ್‌ನಲ್ಲಿ ಅದ್ದೂರಿ ಸ್ವಾಗತ ನೀಡಲಾಯಿತು. ಆಟಗಾರರು ಕತಾರ್‌ನಿಂದ ಸೋಮವಾರ ರಾತ್ರಿ 8 ಗಂಟೆಗೆ ಚಾರ್ಲ್ಸ್ ಡಿ ಗಾಲೆ ವಿಮಾನ ನಿಲ್ದಾಣಕ್ಕೆ ಬಂದಿಳಿದರು.

‘ಈ ಸ್ವಾಗತದಿಂದ ಹೃದಯ ತುಂಬಿ ಬಂದಿದೆ’ ಎಂದು ತಂಡದ ಫಾರ್ವರ್ಡ್ ಆಟಗಾರ ಮಾರ್ಕಸ್ ತುರಮ್ ಹೇಳಿದ್ದಾರೆ.

‘ನಮ್ಮನ್ನು ಬೆಂಬಲಿಸಿದ ಅಭಿಮಾನಿಗಳಿಗೆ ಕೃತಜ್ಞತೆ ತಿಳಿಸಲು ಇದು ಸದವಕಾಶ. ಭಾನುವಾರದ (ಫೈನಲ್ ಪಂದ್ಯದ ಸೋಲು) ನೋವಿಗೆ ಸಾಂತ್ವನದ ನುಡಿಗಳನ್ನು ಅವರಿಂದ ಕೇಳಬೇಕು’ ಎಂದು ಫ್ರಾನ್ಸ್ ತಂಡದ ನಾಯಕ ಮತ್ತು ಗೋಲ್‌ಕೀಪರ್ ಹ್ಯುಗೊ ಲಾರಿಸ್ ಹೇಳಿದ್ದಾರೆ.

ಧ್ರುವ್, ಹಾರ್ದಿಕ್ ದಾಳಿ: ಕರ್ನಾಟಕ ಜಯಭೇರಿ

ಪ್ರಜಾವಾಣಿ ವಾರ್ತೆ

ಮೈಸೂರು: ಧ್ರುವ್ ಪ್ರಭಾಕರ್ (35ಕ್ಕೆ 3) ಮತ್ತು ಹಾರ್ದಿಕ್ ರಾಜ್ (54ಕ್ಕೆ 3) ಅವರ ಪ್ರಭಾವಿ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡದವರು ಸೌರಾಷ್ಟ್ರ ವಿರುದ್ಧ 40 ರನ್‌ಗಳ ಜಯ ಸಾಧಿಸಿದರು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಕೂಚ್ ಬಿಹಾರ್ ಟ್ರೋಫಿ 19 ವರ್ಷ ವಯಸ್ಸಿನೊಳಗಿನವರ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಗುಜರಾತ್ ತಂಡವನ್ನು 67.1 ಓವರ್‌ಗಳಲ್ಲಿ 199 ರನ್‌ಗಳಿಗೆ ಕೆಎಸ್‌ಸಿಎ ತಂಡವು ಕಟ್ಟಿಹಾಕಿತು. 9 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿದ್ದ ರಾಜ್ಯ ತಂಡವು 15 ರನ್ ಸೇರಿಸಿ ಸೌರಾಷ್ಟ್ರಕ್ಕೆ 239 ರನ್‌ಗಳ ಗೆಲುವಿನ ಗುರಿ ನೀಡಿತ್ತು. ಪ್ರಣಯ್ ಥಾಪ ಹಾಗೂ ಶ್ರುತ್ ವಿಕೆಟ್ ಕಳೆದುಕೊಂಡು ಆರಂಭಿಕ ಆಘಾತ ಅನುಭವಿಸಿದ್ದ ಸೌರಾಷ್ಟ್ರಕ್ಕೆ ರಕ್ಷಿತ್ ಮೆಹ್ತಾ (104) ಆಸರೆಯಾದರು.

11 ಬೌಂಡರಿ, 1 ಸಿಕ್ಸರ್ ನೆರವಿನಿಂದ ಶತಕ ಸಿಡಿಸಿದ ರಕ್ಷಿತ್, ಟಿ.ಜಡೇಜ (32) ಹಾಗೂ ಕರ್ಣವ್ ರಾಥೋಡ್ (33) ಅವರೊಂದಿಗೆ ಇನ್ನಿಂಗ್ಸ್ ಕಟ್ಟಿದ್ದರು. ಈ ವೇಳೆ ಧ್ರುವ್ ಪ್ರಭಾಕರ್ ಹಾಗೂ ಹಾರ್ದಿಕ್ , ಪ್ರಮುಖ ಬ್ಯಾಟರ್‌ಗಳ ವಿಕೆಟ್ ಗಳಿಸಿ ತಂಡವನ್ನು ಜಯದತ್ತ ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ ಮೊದಲ ಇನಿಂಗ್ಸ್: 112.1 ಓವರ್‌ಗಳಲ್ಲಿ 273. ಸೌರಾಷ್ಟ್ರ: 69.4 ಓವರ್‌ಗಳಲ್ಲಿ 211. ಎರಡನೇ ಇನಿಂಗ್ಸ್: ಕರ್ನಾಟಕ: 96.5 ಓವರ್‌ಗಳಲ್ಲಿ 162 (ಪ್ರಖರ್ ಚತುರ್ವೇದಿ 65, ಮೌರ್ಯ ಘೋಗ್ರಿ 39ಕ್ಕೆ 4). ಸೌರಾಷ್ಟ್ರ ಎರಡನೇ ಇನ್ನಿಂಗ್ಸ್ 67.1 ಓವರ್‌ಗಳಲ್ಲಿ 199 (ರಕ್ಷಿತ್ ಮೆಹ್ತಾ 104, ಧ್ರುವ್ ಪ್ರಭಾಕರ್ 35ಕ್ಕೆ 3, ಹಾರ್ದಿಕ್ ರಾಜ್ 54ಕ್ಕೆ 3) ಫಲಿತಾಂಶ: ಕರ್ನಾಟಕ ತಂಡಕ್ಕೆ 40 ರನ್‌ಗಳ ಗೆಲುವು.

ಸ್ಕೇಟಿಂಗ್: ಕಲ್ಪನಾ, ಪೂರ್ವಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಕಲ್ಪನಾ ಕುಟ್ಟಪ್ಪ ಮತ್ತು ಪೂರ್ವಿ ಮಟ್ಟೆ ಅವರು ರಾಷ್ಟ್ರೀಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಚಿನ್ನ ಗೆದ್ದರು.

ಕರ್ನಾಟಕ ರೋಲರ್ ಸ್ಕೇಟಿಂಗ್ ಸಂಸ್ಥೆ ಆಶ್ರಯದಲ್ಲಿ ತ್ಯಾಗರಾಜನಗರದಲ್ಲಿರುವ ಚೆನ್ನಮ್ಮನ ಕೆರೆ ಅಚ್ಚುಕಟ್ಟು ಸ್ಕೇಟಿಂಗ್ ರಿಂಕ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ರೋಡ್ ರೇಸ್ 3 ವಿಭಾಗದಲ್ಲಿ ಇವರಿಬ್ಬರು ಅಗ್ರಸ್ಥಾನ ಗಳಿಸಿದರು.

ಕಲ್ಪನಾ ಹಾಗೂ ಪೂರ್ವಿ ಅವರು ಕ್ರಮವಾಗಿ ಸೀನಿಯರ್ ಮತ್ತು ಜೂನಿಯರ್ ವಿಭಾಗದಲ್ಲಿ ಪದಕಗಳಿಗೆ ಕೊರಳೊಡ್ಡಿದರು.

ವಿವಿಧ ವಿಭಾಗಗಲ್ಲಿ ಸೋನಲ್ ಬೆಳ್ಳಿ ಮತ್ತು ಧೀಮಂತ್ ಕಂಚು ಗೆದ್ದರು. ರೋಲರ್ ಇನ್ಲೈನ್ ವಿಭಾಗದಲ್ಲಿ ಕರ್ನಾಟಕದ ಕೆಡೆಟ್ ಬಾಲಕಿಯರು ಬೆಳ್ಳಿ, ಜೂನಿಯರ್ ಬಾಲಕಿಯರು, ಕೆಡೆಟ್ ಮಿಕ್ಸ್ ಕ್ವಾಡ್ ಮತ್ತು ಸಬ್ ಜೂನಿಯರ್ ಮಿಕ್ಸ್ ಕ್ವಾಡ್ ತಂಡಗಳು ಕಂಚು ಜಯಿಸಿದವು.

ಗ್ರೇಸ್ ಹ್ಯಾರಿಸ್ ಮತ್ತು ಆ್ಯಷ್ಲೆ ಗಾರ್ಡನರ್–ಎಎಫ್‌ಪಿ ಚಿತ್ರ

ಕ್ರಿಕೆಟ್: ಆಸ್ಟ್ರೇಲಿಯಾಕ್ಕೆ ಜಯ

ಮುಂಬೈ: ಆ್ಯಷ್ಲೆ ಗಾರ್ಡನರ್ ಮತ್ತು ಗ್ರೇಸ್ ಹ್ಯಾರಿಸ್ ಅವರ ಅಬ್ಬರದ ಅರ್ಧಶತಕಗಳ ಬಲದಿಂದ ಆಸ್ಟ್ರೇಲಿಯಾ ತಂಡವು ಮಂಗಳವಾರ ಇಲ್ಲಿ ನಡೆದ ಟಿ20 ಮಹಿಳಾ ಕ್ರಿಕೆಟ್ ಸರಣಿಯ ಕೊನೆಯ ಪಂದ್ಯದಲ್ಲಿ ಜಯಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ತಂಡವು ಗಾರ್ಡನರ್ (ಔಟಾಗದೆ 66; 32ಎ) ಮತ್ತು ಗ್ರೇಸ್ (ಔಟಾಗದೆ 64, 35ಎ) ಬ್ಯಾಟಿಂಗ್‌ನಿಂದಾಗಿ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 195 ರನ್ ಗಳಿಸಿತು.

ಅದಕ್ಕುತ್ತರವಾಗಿ ಭಾರತ ತಂಡವು 20 ಓವರ್‌ಗಳಲ್ಲಿ 142 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಆಸ್ಟ್ರೇಲಿಯಾ ವನಿತೆಯರು 54 ರನ್‌ಗಳಿಂದ ಗೆದ್ದರು. ತಂಡವು 4–1ರಿಂದ ಸರಣಿಯಲ್ಲಿ ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 196 (ತಹಿಲಾ ಮೆಕ್‌ಗ್ರಾ 26, ಆ್ಯಷ್ಲೆ ಗಾರ್ಡನರ್ ಔಟಾಗದೆ 66, ಗ್ರೇಸ್ ಹ್ಯಾರಿಸ್ ಔಟಾಗದೆ 64, ಅಂಜಲಿ ಸರವಣಿ 30ಕ್ಕೆ1) ಭಾರತ: 20 ಓವರ್‌ಗಳಲ್ಲಿ 142 (ಹರ್ಲೀನ್ ಡಿಯೊಲ್ 24, ದೀಪ್ತಿ ಶರ್ಮಾ 53, ಆ್ಯಷ್ಲೆ ಗಾರ್ಡನರ್ 20ಕ್ಕೆ2, ಹೀಥರ್ ಗ್ರಹಾಂ 8ಕ್ಕೆ4) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 54 ರನ್ ಜಯ.

ಟೆಸ್ಟ್: ಇಂಗ್ಲೆಂಡ್ ಕ್ಲೀನ್‌ಸ್ವೀಪ್ ಸಾಧನೆ

ಕರಾಚಿ (ಎಎಫ್‌ಪಿ): ನಿರೀಕ್ಷೆಯಂತೆಯೇ ಇಂಗ್ಲೆಂಡ್ ತಂಡವು ಪಾಕಿಸ್ತಾನ ವಿರುದ್ಧದ ಕೊನೆಯ ಟೆಸ್ಟ್‌ನಲ್ಲಿ ಜಯಿಸಿತು. 3 ಪಂದ್ಯಗಳ ಸರಣಿಯಲ್ಲಿ ಕ್ಲೀನ್‌ಸ್ವೀಪ್ ಸಾಧಿಸಿತು. ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ 167 ರನ್‌ಗಳ ಗುರಿ ಬೆನ್ನಟ್ಟಿದ್ದ ಇಂಗ್ಲೆಂಡ್ 8 ವಿಕೆಟ್‌ಗಳಿಂದ ಜಯಿಸಿತು. 3–0ಯಿಂದ ಸರಣಿಯನ್ನು ತನ್ನದಾಗಿಸಿಕೊಂಡಿತು.

ಸೋಮವಾರ ದಿನದಾಟದ ಅಂತ್ಯಕ್ಕೆ 2ನೇ ಇನಿಂಗ್ಸ್ ಆರಂಭಿಸಿದ್ದ ಇಂಗ್ಲೆಂಡ್ 17 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 112 ರನ್ ಗಳಿಸಿತ್ತು. ಬಾಕಿ ಉಳಿದಿದ್ದ 55 ರನ್‌ಗಳನ್ನು ಮಂಗಳವಾರ ಪೂರೈಸಿತು.

ಬೆನ್ ಡಕೆಟ್ (82; 78ಎ, 4X12) ಮತ್ತು ಬೆನ್ ಸ್ಟೋಕ್ಸ್ (ಅಜೇಯ 35; 43ಎ, 4X3) ಇಂಗ್ಲೆಂಡ್ ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಪಾಕಿಸ್ತಾನ 304. ಇಂಗ್ಲೆಂಡ್ 354. 2ನೇ ಇನಿಂಗ್ಸ್: ಪಾಕಿಸ್ತಾನ 74.5 ಓವರ್‌ಗಳಲ್ಲಿ 216. ಇಂಗ್ಲೆಂಡ್ 28.1 ಓವರ್‌ಗಳಲ್ಲಿ 2 ವಿಕೆಟ್‌ಗೆ 170 (ಬೆನ್ ಡಕೆಟ್ ಅಜೇಯ 82, ಬೆನ್ ಸ್ಟೋಕ್ಸ್ ಅಜೇಯ 35, ಅಬ್ರಾರ್ 78ಕ್ಕೆ 2) ಫಲಿತಾಂಶ: ಇಂಗ್ಲೆಂಡ್‌ಗೆ 8 ವಿಕೆಟ್ ಜಯ.

ಸಂತೋಷ್ ಟ್ರೋಫಿ: ರಾಜ್ಯ ತಂಡಕ್ಕೆ ಕಾರ್ತಿಕ್ ಸಾರಥ್ಯ

ಪ್ರಜಾವಾಣಿ ವಾರ್ತೆ



ಕಾರ್ತಿಕ್ ಗೋವಿಂದ ಸ್ವಾಮಿ

ಬೆಂಗಳೂರು: ಇದೇ 23ರಿಂದ ದೆಹಲಿಯಲ್ಲಿ ನಡೆಯಲಿರುವ ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಗೆ ಕರ್ನಾಟಕ ತಂಡವನ್ನು ಕಾರ್ತಿಕ್ ಗೋವಿಂದ ಸ್ವಾಮಿ ಮುನ್ನಡೆಸಲಿದ್ದಾರೆ. 22 ಆಟಗಾರರ ತಂಡವನ್ನು ಮಂಗಳವಾರ ಪ್ರಕಟಿಸಲಾಗಿದೆ.

ಒಂದನೇ ಗುಂಪಿನಲ್ಲಿ ಸ್ಥಾನ ಪಡೆದಿರುವ ಕರ್ನಾಟಕ, 23ರಂದು ಮೊದಲ ಪಂದ್ಯದಲ್ಲಿ ಗುಜರಾತ್ ತಂಡವನ್ನು ಎದುರಿಸಲಿದೆ.

25ರಂದು ಉತ್ತರಾಖಂಡ, 27ರಂದು ಲಡಾಕ್, 29ರಂದು ತ್ರಿಪುರ ಮತ್ತು 31ರಂದು ದೆಹಲಿ ವಿರುದ್ಧ ಕರ್ನಾಟಕ ತಂಡ ಆಡಲಿದೆ.

ಕರ್ನಾಟಕ ತಂಡ ಇಂತಿದೆ: ಕಾರ್ತಿಕ್ ಗೋವಿಂದಸ್ವಾಮಿ (ನಾಯಕ), ಸತ್ಯಜೀತ್ ಬೊರ್ದೊಲಾಯಿ, ಶ್ರೀಜಿತ್ ಆರ್, ಕೆವಿನ್ ಕೋಶಿ, ಸುನಿಲ್ ಕುಮಾರ್ ಎಂ, ರಾಬಿನ್ ಯಾದವ್, ನಿಖಿಲ್ ಜಿ, ಮನೋಜ್ ಸ್ವಾಮಿ ಕಣ್ಣನ್, ಜಾನ್ಸನ್ ಎ, ಪ್ರಶಾಂತ್ ಕಳಿಂಗ, ಪ್ರದೀಶನ್ ಮರಿಯದಾಸನ್, ಸತೀಶ್‌ಕುಮಾರ್ ಎಂ.ಆರ್, ಎಫ್. ಲಾಲ್‌ರೆಮ್‌ತ್ಲುಂಗಾ, ಬೆಕೆ ಓರಂ, ಕಮಲೇಶ್ ಪಿ, ಶಜಾನ್ ಫ್ರಾಂಕ್ಲಿನ್, ಅಪ್ಪು, ಅಂಕಿತ್ ಪಿ, ಅಭಿಷೇಕ್ ಶಂಕರ್ ಪವಾರ್, ಶೆಲ್ಟನ್ ಪಾಲ್, ರಾಜಗಣಪತಿ ಕೆ, ಜೇಕಬ್ ಜಾನ್ ಕಟ್ಟೂಕರೆನ್.

ಮ್ಯಾನೇಜರ್: ಸರವಣನ್, ಕೋಚ್: ಆರ್. ರವಿಬಾಬು, ಸಹಾಯಕ ಕೋಚ್: ಜಾನ್ ಕೆನೆತ್ ರಾಜ್, ಫಿಸಿಯೊ: ರೋಹಿತ್ ಕುಮಾರ್ ಹಲ್ದರ್.

ರಾಜ್ಯ ಹಾಕಿ: ರಾಯಲ್ ಕ್ಲಬ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ರಾಯಲ್ ಕ್ಲಬ್ ತಂಡವು ರಾಜ್ಯ ಬಿ ಡಿವಿಷನ್ ಹಾಕಿ ಟೂರ್ನಿಯಲ್ಲಿ ಗೆಲುವು ಸಾಧಿಸಿತು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ರಾಯಲ್ 5–3ರಿಂದ ಸಂದೀಪ್ ಹಾಕಿ ಕ್ಲಬ್ ಎದುರು ಗೆದ್ದಿತು. ವಿಜೇತ ತಂಡಕ್ಕಾಗಿ ಧನುಷ್ (4ನೇ ನಿಮಿಷ), ಸುಪ್ರೀತ್ (10ನೇ ನಿ.), ವಿಷ್ಣು (19, 49ನೇ ನಿ.) ಮತ್ತು ಗಾಡ್ವಿನ್ (39ನೇ ನಿ.) ಗೋಲುಗಳನ್ನು ದಾಖಲಿಸಿದರು.

ಸಂದೀಪ್ ಕ್ಲಬ್‌ಗಾಗಿ ರೋಹನ್ (1ನೇ ನಿ.), ಶ್ರೇಯಸ್ (20ನೇ ನಿ.) ಮತ್ತು ನಾಗರಾಜ್ (30ನೇ ನಿ.) ಗೋಲು ಹೊಡೆದರು.

ಬುಧವಾರ ನಡೆಯುವ ಪಂದ್ಯದಲ್ಲಿ ಫ್ಲೈಯಿಂಗ್ ಎಚ್‌ಸಿ ತಂಡವು ಆದ್ಯಮಾನ್ ಇಂಜಿನಿಯರಿಂಗ್ ಕಾಲೇಜು ತಂಡದ ವಿರುದ್ಧ ಆಡಲಿದೆ.

‘ಕ್ರೀಡಾ ವೈದ್ಯಕೀಯ ಸೌಲಭ್ಯ ಹೆಚ್ಚಲಿ’

ಪ್ರಜಾವಾಣಿ ವಾರ್ತೆ

ಪ್ರಮೀಳಾ ಅಯ್ಯಪ್ಪ

ಬೆಂಗಳೂರು: ಕ್ರೀಡಾ ವೈದ್ಯಕೀಯ ಸೌಲಭ್ಯಗಳು ಕ್ರೀಡಾಪಟುಗಳಿಗೆ ಹೆಚ್ಚಿನ ರೀತಿಯಲ್ಲಿ ಕ್ರೀಡಾಪಟುಗಳಿಗೆ ಲಭ್ಯವಾಗಬೇಕು ಎಂದು ಒಲಿಂಪಿಯನ್ ಅಥ್ಲೀಟ್ ಪ್ರಮೀಳಾ ಅಯ್ಯಪ್ಪ ಅವರು ಹೇಳಿದರು.

ಇಲ್ಲಿಯ ಇಲೆಕ್ಟ್ರಾನಿಕ್ ಸಿಟಿಯ ಬೆಟ್ಟದಾಸನಪುರದ ಅರೆನಾ 100ರಲ್ಲಿ ನಡೆಯುತ್ತಿರುವ ಕ್ರೀಡಾ ವಿಜ್ಞಾನ ಮತ್ತು ಕ್ರೀಡಾ ವೈದ್ಯಕೀಯ ವಿಶ್ವ ಅಧಿವೇಶನದಲ್ಲಿ ಅವರು ಮಾತನಾಡಿದರು.

‘ನಾವು ಕ್ರೀಡೆಯಲ್ಲಿ ಸ್ಪರ್ಧಿಸುತ್ತಿದ್ದ ಸಮಯದಲ್ಲಿ ಹೆಚ್ಚಿನ ಸೌಲಭ್ಯಗಳು ಇರಲಿಲ್ಲ. ಈಗ ತಂತ್ರಜ್ಞಾನ, ವಿಜ್ಞಾನ ಮುಂದುವರಿದಿದ್ದು, ಸೌಲಭ್ಯಗಳು ಸಿಗುತ್ತಿವೆ. ಇವನ್ನು ಬಳಸಿಕೊಂಡು ಹೆಚ್ಚಿನ ಸಾಧನೆ ಮಾಡಬೇಕು’ ಎಂದರು.

‘ನಾನು ಕ್ರೀಡೆಯಲ್ಲಿ ಸಾಧನೆ ಮಾಡಲು ಪತಿ ಹೆಚ್ಚಿನ ಪ್ರೇರಣೆ ನೀಡಿದರು. ಮಗಳನ್ನು ಕ್ರೀಡಾಕ್ಷೇತ್ರಕ್ಕೆ ಕರೆತರಲು ಇದು ಕೂಡ ಸ್ಫೂರ್ತಿಯಾಯಿತು. ಈ ರೀತಿಯ ಉಪನ್ಯಾಸಗಳು ಇನ್ನೂ ಹೆಚ್ಚು ನಡೆಯಬೇಕು ಎಂದು ಅವರು ಆಶಿಸಿದರು.

ಅಧಿವೇಶನ 19ರಿಂದ ಆರಂಭವಾಗಿದ್ದು ಗುರುವಾರ ಮುಕ್ತಾಯವಾಗಲಿದೆ. ಭಾರತ, ಕ್ರೊವೇಷ್ಯಾ, ಟರ್ಕಿ, ದಕ್ಷಿಣ ಆಫ್ರಿಕಾ, ಸೌದಿ ಅರೇಬಿಯಾ, ರೊಮೆನಿಯಾ, ಸ್ಲೋವಾಕಿಯಾ, ಇಂಡೋನೇಷ್ಯಾ ಮತ್ತು ಬೋಸ್ನಿಯಾ ದೇಶಗಳ ಪರಿಣತರು ಭಾಗವಹಿಸಿದ್ದಾರೆ.

ಸಂಘಟನಾ ಕಾರ್ಯದರ್ಶಿ ಕೆ.ಎಲ್. ಬಿರಾದಾರ್, ಕ್ರೀಡಾ ವೈದ್ಯ ಕಿರಣ ಕುಲಕರ್ಣಿ ಮತ್ತಿತರರು ಹಾಜರಿದ್ದರು.

ಚೀನಾದ ಉತ್ತರ ಭಾಗದ ಶಾಂಕ್ಸಿ ಪ್ರಾಂತ್ಯದಲ್ಲಿ ಮಂಗಳವಾರ ಆಂಟಿಜೆನ್ ಪರೀಕ್ಷೆ ಕಿಟ್ ಖರೀದಿಗಾಗಿ ಔಷಧ ಅಂಗಡಿಯೊಂದರ ಮುಂದೆ ಸರದಿಯಲ್ಲಿ ನಿಂತಿದ್ದ ಜನರು —ಎಎಫ್‌ಪಿ ಚಿತ್ರ

ಚೀನಾದಲ್ಲಿ ಕೋವಿಡ್: ಸ್ಮಶಾನಗಳು ಭರ್ತಿ, ಔಷಧ ಕೊರತೆ ತೀವ್ರ

ಬೀಜಿಂಗ್ (ಎಎಫ್‌ಪಿ): ಕೋವಿಡ್ ತೀವ್ರಗೊಂಡಿರುವ ಚೀನಾದಲ್ಲಿ ಚಿತಾಗಾರಗಳಿಗೆ ಬರುತ್ತಿರುವ ಮೃತದೇಹಗಳ ಸಂಖ್ಯೆಯೂ ಹೆಚ್ಚಿದ್ದು, ಅಲ್ಲಿನ ಸಿಬ್ಬಂದಿ ಹೈರಾಣಾಗಿದ್ದಾರೆ.

ಚೀನಾದಲ್ಲಿ ಮೂರು ವರ್ಷಗಳಿಂದ ಜಾರಿಯಲ್ಲಿದ್ದ ಕೋವಿಡ್ ಲಾಕ್‌ಡೌನ್, ಪ್ರತ್ಯೇಕ ವಾಸ ಮತ್ತು ಸಾಮೂಹಿಕ ಪರೀಕ್ಷೆ ನಿಯಮಾವಳಿಗಳನ್ನು ಕಳೆದ ತಿಂಗಳಷ್ಟೇ ಹಿಂಪಡೆಯಲಾಗಿತ್ತು. ಆ ಬಳಿಕ, ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಿದ್ದು, ಆಸ್ಪತ್ರೆಗಳು ಕೋವಿಡ್ ರೋಗಿಗಳಿಂದ ತುಂಬಿಹೋಗಿವೆ. ಫಾರ್ಮಸಿಗಳಲ್ಲಿ ಔಷಧಿಗಳ ಕೊರತೆಯೂ ಉಂಟಾಗಿದೆ.

3 ಕೋಟಿ ಜನಸಂಖ್ಯೆ ಇರುವ ಚಾಂಗ್‌ಕಿಂಗ್ ನಗರದಲ್ಲಿ ಸಾಧಾರಣ ಕೋವಿಡ್ ರೋಗ ಲಕ್ಷಣಗಳಿರುವ ಜನರಿಗೆ ಕೆಲಸಕ್ಕೆ ಹೋಗುವಂತೆ ಅಲ್ಲಿನ ಆಡಳಿತ ಮಂಡಳಿ ಸೂಚಿಸಿದೆ. ಈ ಮಧ್ಯೆ, ಅಲ್ಲಿ ಕೋವಿಡ್ ಸಂಖ್ಯೆ ಹೆಚ್ಚಿದ್ದು, ಸಾವಿನ ಸಂಖ್ಯೆ ಸಹ ಹೆಚ್ಚಿದೆ. ಮೃತದೇಹಗಳನ್ನು ಇರಿಸಿಕೊಳ್ಳಲು ಸ್ಥಳದ ಕೊರತೆ ಉಂಟಾಗಿದೆ ಎಂದು ನಗರದ ಒಂದು ಚಿತಾಗಾರ ಹೇಳಿದೆ.

‘ಈ ಹಿಂದಿನ ಸನ್ನಿವೇಶಕ್ಕೆ ಹೋಲಿಸಿದರೆ ಇತ್ತೀಚಿನ ದಿನಗಳಲ್ಲಿ ಮೃತದೇಹಗಳ ಸಂಖ್ಯೆ ಹೆಚ್ಚಿದೆ’ ಎಂದು ಸಿಬ್ಬಂದಿಯೊಬ್ಬರು ತಿಳಿಸಿದ್ದಾರೆ.

‘ನಾವು ತುಂಬಾ ಬ್ಯುಸಿಯಾಗಿದ್ದೇವೆ. ಮೃತದೇಹಗಳನ್ನು ಇಡುವ ಕೋಲ್ಡ್ ಸ್ಟೋರೇಜ್ ತುಂಬಿದೆ’ ಎಂದರು.

ಗುವಾಂಗ್‌ಝೌ ಪ್ರದೇಶದ ಝೆಂಗ್ಚೆಂಗ್ ಜಿಲ್ಲೆಯ ಸ್ಮಶಾನವೊಂದಕ್ಕೆ ದಿನಕ್ಕೆ 30ಕ್ಕೂ ಅಧಿಕ ಮೃತದೇಹಗಳು ಬರುತ್ತಿವೆ ಎಂದು ಅಲ್ಲಿನ ಸಿಬ್ಬಂದಿ ಎಎಫ್‌ಪಿಗೆ ತಿಳಿಸಿದ್ದಾರೆ.

ಇದೇ ನಗರದ ಮತ್ತೊಂದು ಚಿತಾಗಾರಕ್ಕೆ ದಿನಕ್ಕೆ 40ಕ್ಕೂ ಹೆಚ್ಚು ಮೃತದೇಹಗಳು ಬರುತ್ತಿವೆ. ಸಾಮಾನ್ಯವಾಗಿ ಇಲ್ಲಿಗೆ ದಿನಕ್ಕೆ ಸುಮಾರು 12ರಷ್ಟು ಮೃತದೇಹಗಳು ಬರುತ್ತಿದ್ದವು ಎಂದು ಇಲ್ಲಿನ ಸಿಬ್ಬಂದಿ ಹೇಳಿದ್ದಾರೆ. ಗುವಾಂಗ್‌ಝೌದ ಬಹುತೇಕ ಕಡೆ ಇದೇ ವಾತಾವರಣ ಇದೆ ಎಂದಿದ್ದಾರೆ.

‘ವೈರಸ್‌ನಿಂದ ಉಂಟಾದ ಉಸಿರಾಟದ ಸಮಸ್ಯೆಯಿಂದ ಮೃತಪಟ್ಟವರನ್ನು ಮಾತ್ರ ಕೋವಿಡ್ ಸಾವಿನ ಅಂಕಿಅಂಶಗಳ ಅಡಿಯಲ್ಲಿ ಪರಿಗಣಿಸಲಾಗುತ್ತದೆ’ ಎಂದು ಬೀಜಿಂಗ್ ಆರೋಗ್ಯ ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ಇಂದಿನಿಂದ ರಷ್ಯಾ–ಚೀನಾ ನೌಕಾ ಸಮರಾಭ್ಯಾಸ

ಬೀಜಿಂಗ್ (ಎಪಿ): ರಷ್ಯಾ ಮತ್ತು ಚೀನಾ ನೌಕಾಪಡೆಗಳ ಜಂಟಿ ಸಮರಾಭ್ಯಾಸ ಶಾಂಘೈನ ದಕ್ಷಿಣದಲ್ಲಿರುವ ಜೆಜಿಯಾಂಗ್ ಪ್ರಾಂತ್ಯದ ಕರಾವಳಿಯಲ್ಲಿ ಆರಂಭವಾಗಲಿದ್ದು, ಎರಡೂ ದೇಶಗಳ ಹಲವು ಯುದ್ಧನೌಕೆಗಳು, ಯುದ್ಧವಿಮಾನಗಳು ಪಾಲ್ಗೊಳ್ಳಲಿವೆ.

ಉಕ್ರೇನ್ ಮೇಲೆ ರಷ್ಯಾವು ಸೇನಾ ಕಾರ್ಯಾಚರಣೆ ಆರಂಭಿಸಿದ ಬಳಿಕವೂ ತನಗೆ ಬಲಿಷ್ಠ ರಾಷ್ಟ್ರವೊಂದರ ಬೆಂಬಲ ಮುಂದುವರಿದೆ ಎಂದು ಜಗತ್ತಿಗೆ ತೋರಿಸಲು ಈ ಸಮರಾಭ್ಯಾಸ ಹಮ್ಮಿಕೊಂಡಿದೆ ಎಂದು ಹೇಳಲಾಗುತ್ತಿದೆ.

ಸಂಕ್ಷಿಪ್ತ ಸುದ್ದಿ

ಜೀವವೈವಿಧ್ಯ ನಿರ್ಣಯ: ಭಾರತಕ್ಕೆ ಅನುಕೂಲ

ಮಾಂಟ್ರಿಯಲ್, ಕೆನಡಾ (ಪಿಟಿಐ): ಜಗತ್ತಿನ ಜೀವವೈವಿಧ್ಯವನ್ನು ರಕ್ಷಿಸಲು ವಿಶ್ವಸಂಸ್ಥೆಯ ಜೀವವೈವಿಧ್ಯ ಸಮ್ಮೇಳನದಲ್ಲಿ (ಸಿಒಪಿ15) ನಡೆದ ಐತಿಹಾಸಿಕ ಒಪ್ಪಂದದ ಭಾಗವಾಗಿ ಡಿಜಿಟಲ್ ಅನುಕ್ರಮ ಮಾಹಿತಿಯನ್ನು (ಡಿಎಸ್‌ಐ) ಅಳವಡಿಸಿಕೊಳ್ಳಲಾಗಿದೆ. ಇದು ಭಾರತದಂತಹ ದೇಶಗಳಿಗೆ ಪ್ರಕೃತಿ ಸಂರಕ್ಷಣೆಗೆ ಹಣದ ಹರಿವನ್ನು ಖಾತರಿಪಡಿಸುತ್ತದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಂಪನ್ಮೂಲಗಳನ್ನು ಸಂರಕ್ಷಿಸುವ ಸ್ಥಳೀಯ ಸಮುದಾಯಗಳು ಮತ್ತು ರೈತರ ನಡುವೆ ಆನುವಂಶಿಕ ಸಂಪನ್ಮೂಲಗಳಿಂದ ಉಂಟಾಗುವ ಪ್ರಯೋಜನಗಳನ್ನು ದೊರೆಯುವಂತೆ ಮಾಡುವ ಗುರಿ ಜೈವಿಕ ವೈವಿಧ್ಯತೆಯ ಮೇಲಿನ ವಿಶ್ವಸಂಸ್ಥೆಯ ಸಮಾವೇಶದ್ದಾಗಿದೆ.

ಡಿಎಸ್‌ಐ ತಂತ್ರಜ್ಞಾನವನ್ನು ಬಳಸಿಕೊಂಡು ತಯಾರಿಸಲಾದ ಉತ್ಪನ್ನಗಳನ್ನು ಲಾಭ- ಹಂಚಿಕೆ ಕಾರ್ಯವಿಧಾನದ ಅಡಿಯಲ್ಲಿ ಒಳಗೊಳ್ಳುವುದನ್ನು ಅದು ಖಚಿತಪಡಿಸುತ್ತದೆ. ಇದು ಭಾರತ ಸೇರಿದಂತೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜೀವವೈವಿಧ್ಯ ಸಂರಕ್ಷಣೆಗೆ ಹಣಕಾಸಿನ ನೆರವು ನೀಡುತ್ತದೆ ಎಂದು ತಜ್ಞರು ಪ್ರತಿಪಾದಿಸಿದ್ದಾರೆ.

‘ಉಕ್ರೇನ್ ಯುದ್ಧ: ಶಾಂತಿ ಮಾತುಕತೆಯ ನಿರೀಕ್ಷೆಯಿಲ್ಲ’

ವಿಶ್ವಸಂಸ್ಥೆ (ಪಿಟಿಐ): ‘ಉಕ್ರೇನ್ ವಿರುದ್ಧ ರಷ್ಯಾ ನಡೆಸುತ್ತಿರುವ ಯುದ್ಧ ಮುಂದುವರಿಯುವ ಆತಂಕ ಇದ್ದು, ಯುದ್ಧ ಕುರಿತಂತೆ ಸದ್ಯ ಗಂಭೀರವಾದ ಶಾಂತಿ ಮಾತುಕತೆ ನಡೆಯುತ್ತವೆ ಎಂಬ ನಿರೀಕ್ಷೆ ನನಗಿಲ್ಲ’ ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಹೇಳಿದ್ದಾರೆ.

ನ್ಯೂಯಾರ್ಕ್‌ನಲ್ಲಿ ಸೋಮವಾರ ನಡೆದ ವರ್ಷಾಂತ್ಯದ ವಾರ್ಷಿಕ ಸಮ್ಮೇಳನದಲ್ಲಿ ಅವರು ಮಾತನಾಡಿದರು. ಯುದ್ಧ ನಿಲುಗಡೆಗೆ ಒಪ್ಪಂದವೊಂದು ಏರ್ಪಡದೆ ಹೋದರೆ ಉಕ್ರೇನ್‌ನ ಜನರು, ರಷ್ಯಾದ ಸಮಾಜ ಮತ್ತು ಜಾಗತಿಕ ಆರ್ಥಿಕತೆಯು ಭೀಕರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದರು. ಮುಂದಿನ ವರ್ಷಾಂತ್ಯದ ವೇಳೆಗೆ ಯುದ್ಧ ಕೊನೆಗೊಳ್ಳಬಹುದು ಎಂದು ಅವರು ಆಶಿಸಿದರು.

‘ಶಾಂತಿ ಮಾತುಕತೆ ಕುರಿತು ನಾನು ಆಶಾವಾದಿಯಾಗಿಲ್ಲ. ಆದರೆ, ಆ ‘ಗಂಭೀರ’ ಮಾತುಕತೆಗಳ ಸಾಧ್ಯತೆ ಏರ್ಪಡುವ ಸಮಯಕ್ಕಾಗಿ ನಾವಿನ್ನೂ ಕಾಯಬೇಕು. ಆದ್ದರಿಂದ, ಯುದ್ಧ ನಿಲುಗಡೆಗೆ ನಾವು ಬೇರೆ ಆಯಾಮಗಳ ಮೂಲಕ ನಮ್ಮ ಪ್ರಯತ್ನಗಳನ್ನು ಕೈಗೊಳ್ಳುತ್ತಿದ್ದೇವೆ’ ಎಂದರು.

ಉಕ್ರೇನ್ ಮೇಲೆ ರಷ್ಯಾ ಸೇನಾ ಕಾರ್ಯಾಚರಣೆ ಆರಂಭಿಸಿದ 10 ತಿಂಗಳಾಗುತ್ತ ಬಂದಿರುವ ಹಿನ್ನೆಲೆಯಲ್ಲಿ ಗುಟೆರಸ್ ಅವರ ಈ ಹೇಳಿಕೆಗೆ ಮಹತ್ವ ಬಂದಿದೆ.

ಕ್ಯಾಲಿಫೋರ್ನಿಯಾ: ಭೂಕಂಪನ

ಫೆರ್ನ್‌ಡೇಲ್, ಅಮೆರಿಕ (ಎಪಿ): ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಮಂಗಳವಾರ ನಸುಕಿನ ವೇಳೆ ರಿಕ್ಟರ್ ಮಾಪಕದಲ್ಲಿ 6.4 ತೀವ್ರತೆಯ ಭೂಕಂಪ ಸಂಭವಿಸಿದೆ. ಇದರಿಂದ 55 ಸಾವಿರಕ್ಕೂ ಅಧಿಕ ಮನೆಗಳ ವಿದ್ಯುತ್ ಸಂಪರ್ಕ ಸ್ಥಗಿತಗೊಂಡಿತ್ತು ಎಂದು ಅಮೆರಿಕದ ಭೂಗರ್ಭ ಇಲಾಖೆ ತಿಳಿಸಿದೆ.

ಫೆರ್ನ್‌ಡೇಲ್‌ನ ಬಳಿ ನಸುಕಿನಲ್ಲಿ ಸುಮಾರು 2.34ಕ್ಕೆ ಈ ಭೂಕಂಪನ ಸಂಭವಿಸಿದೆ. ಘಟನೆಯಲ್ಲಿ ಯಾವುದೇ ಹಾನಿಯಾದ ಬಗ್ಗೆ ವರದಿಯಾಗಿಲ್ಲ ಎಂದೂ ಹೇಳಿದೆ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಚಿತ್ರದುರ್ಗ.
ಸಂ:ಕಾ.ಸಾ.ಚಿ/ಪಿ.ಬಿ–1/ಅ.ಟೆಂಡರ್ ಅವಧಿ ವಿಸ್ತರಣೆ/2022–23/ ದಿನಾಂಕ: 19.12.2022
ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ
ಉಲ್ಲೇಖ:ಸಂ:ಕಾ.ಸಾ.ಚಿ/ಪಿ.ಬಿ–1/ಟೆಂಡರ್ ಪ್ರಕಟಣೆ–ಐ.ಎಫ್.ಟಿ–32/2022–23/ ದಿನಾಂಕ: 29.11.2022
ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ, ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 4 ನಿಬಂಧನೆಗಳಿಗೊಳಪಟ್ಟಂತೆ ಐ.ಎಫ್.ಟಿ–32 ರಲ್ಲಿ ಕರೆಯಲಾದ 07 ಕಾಮಗಾರಿಗಳ ಪೈಕಿ ಕ್ರ.ಸಂ.1 ರಿಂದ 2 ಹಾಗೂ 7 ಕಾಮಗಾರಿಗಳನ್ನು ಮಾತ್ರ ಇ–ಪೋರ್ಟಲ್‌ನಲ್ಲಿ ಪ್ರಚುರ ಪಡಿಸಲಾಗಿತ್ತು. ಆದ್ದರಿಂದ ಐ.ಎಫ್.ಟಿ–32 ರಲ್ಲಿ ರಲ್ಲಿ ಕರೆಯಲಾದ 07 ಕಾಮಗಾರಿಗಳ ಪೈಕಿ ಕ್ರ.ಸಂ.3 ರಿಂದ 4 ಹಾಗೂ 6 ಕಾಮಗಾರಿಗಳ ಪ್ರಚುರವನ್ನು ಈ ಕೆಳಗಿನಂತೆ ನಿಗಧಿಪಡಿಸಲಾಗಿರುತ್ತದೆ. ದಿನಾಂಕ: 19.12.2022ರಿಂದ ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 31.12.2022 ಸಾಯಂಕಾಲ 05:30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 02.01.2022ರ ಸಾಯಂಕಾಲ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 03.01.2022 ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 04.01.2022 ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ), ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–25501216/080–25501227 ರಿಂದ ಪಡೆಯಬಹುದು.
RO No. 783: DIPR/CTA/MCA/2022-23
ಸಹಿ/– ಕಾರ್ಯಪಾಲಕ ಇಂಜಿನಿಯರ್

ಕರ್ನಾಟಕ ಸರಕಾರ
ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಹಾವೇರಿ–581110. ರಾಷ್ಟ್ರೀಯ ಆರೋಗ್ಯ ಅಭಿಯಾನ
ಬಿ ಬ್ಲಾಕ್ ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ ಆವರಣ, ಜಿಲ್ಲಾ ಆಡಳಿತ ಭವನ, ದೇವಗಿರಿ, ಹಾವೇರಿ
Email : rchohaveri@gmail.com Ph : 08375-298927 Fax : 08375-249009
ಕ್ರಸಂ/DPMU/HVR/RCH/Cont-MBBS-APPT-2/ /2022-23 ದಿನಾಂಕ : 17-12-2022
ಪ್ರಕಟಣೆ
ಹಾವೇರಿ ಜಿಲ್ಲೆಯ ಎನ್.ಹೆಚ್.ಎಮ್ ಅಡಿಯಲ್ಲಿ 2022–23 ನೇ ಸಾಲಿನ ಆರ್.ಓ.ಪಿ ಪ್ರಕಾರ ಖಾಲಿ ಇರುವ ಎಂ.ಬಿ.ಬಿ.ಎಸ್ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ದಿನಾಂಕ : **20–12–2022** ರಿಂದ ಸದರಿ ಹುದ್ದೆಗಳು ಭರ್ತಿಯಾಗುವವರೆಗೆ ಕಛೇರಿಯ ವೇಳೆಯಲ್ಲಿ ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಆವರಣ ನಂ 19 ಬಿ ಬ್ಲಾಕ್, ಜಿಲ್ಲಾ ಆಡಳಿತ ಭವನ, ದೇವಗಿರಿ, ಹಾವೇರಿ ಇಲ್ಲಿ ಅಗತ್ಯ ಮೂಲ ದಾಖಲಾತಿಗಳೊಂದಿಗೆ 01 ಸೆಟ್ ಝರಾಕ್ಸ ಪ್ರತಿಯೊಂದಿಗೆ ಎರಡು ಭಾವ ಚಿತ್ರಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಬಹುದು.
ಖಾಲಿ ಇರುವ ಒಟ್ಟು ಎಂ.ಬಿ.ಬಿ.ಎಸ್ ವೈದ್ಯಾಧಿಕಾರಿಗಳ ಹುದ್ದೆಗಳು : 17 (ಹದಿನೇಳು)

SL.No	Designation	Prescribed Qualification	Age Limit
1	MBBS Doctor	Shoud have Passed the MBBS and most have completed the Internship and KMC Internship Certificate, Must have concerned from the University Convocation / Degree Certificate mandatory	70 Years

ಸದರಿ ನೇಮಕಾತಿ ಕುರಿತು ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ಜಿಲ್ಲಾಡಳಿತ ಭವನ ದೇವಗಿರಿ (ಆರೋಗ್ಯ ಇಲಾಖೆ) ಹಾವೇರಿಯಲ್ಲಿ ಕಛೇರಿ ಅವಧಿಯಲ್ಲಿ ಪಡೆಯಬಹುದು (ದೂರವಾಣಿ ಸಂಖ್ಯೆ : **9449843113**) ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.
ಸಹಿ/– ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಆರೋಗ್ಯ ಮತ್ತು ಕು.ಕ ಸಂಘ ಹಾಗೂ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು, ಹಾವೇರಿ.
ಸಹಿ/– ಉಪಾಧ್ಯಕ್ಷರು, ಜಿಲ್ಲಾ ಆರೋಗ್ಯ ಮತ್ತು ಕು.ಕ ಸಂಘ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳು, ಹಾವೇರಿ.
ವಾಸಾಸಂಇ/ಹಾವೇರಿ/ಎಂ.ಸಿ.ಎ/440/2022–23

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ ಬೀದರ
ಸಂ:ಕಾನಿಇಂ/ಲೋಇ/ವಿಬಿ/ಜೇಇ–3/2059/2022–23/3685 ದಿನಾಂಕಃ 12.12.2022
:: ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ ::
ಕರ್ನಾಟಕ ರಾಜ್ಯಪಾಲರ ಪರವಾಗಿ ವರ್ಕ್–ಇಂಡೆಂಟ್ KPWD/2022-23/RD/WORK_INDENT 160512 &161580 ಅಡಿ ಇರುವ ಕನಿಷ್ಠ ರೂ. 62.00 ಲಕ್ಷ ಮತ್ತು ಗರಿಷ್ಠ ರೂ. 260.00 ಲಕ್ಷ ಮೊತ್ತದ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆ ವಿಭಾಗ ಬೀದರ ಇವರಿಂದ ಟೆಂಡರ್‌ಗಳನ್ನು ಕರೆಯಲಾಗಿದೆ.
ಪಬ್ಲಿಕ್–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನ http://eproc.karnataka.gov.in ರಿಂದ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 22.12.2022 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ: 23.12.2022 ರಂದು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಅಂತರ್ಜಾಲ ತಾಣ ಅಥವಾ ಈ ಕಚೇರಿಗೆ ಸಂಪರ್ಕಿಸಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ ವಿಭಾಗ ಬೀದರ
ವಾ.ಸಾ.ಸಂ.ಇ/ಬೀದರ/379/ಎಂಸಿ&ಎ/2022–23

The Printers (Mysore) Pvt. Ltd.
Publishers of Deccan Herald, Prajavani, Sudha & Mayura, No. 7-12, Kumbalgodu Indl. Area, Mysore Road, Bangalore - 74
NEWSPRINT WASTE FOR SALE
Sealed Tenders are invited for the disposal of the following Newsprint wastes from our Press at Bangalore, Dharwad, Mangalore, Harihara, Mysore, Gulbarga and Hospet. For the period Jan-Mar 2023

Details	Location - wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH&PVPrint waste & unsolds (Voucher & Office copies)	20	9	3.5	3	4	3	3
Mixed Print & Folded waste	3	1.5	0.2	0.3	0.2	0.3	0.2
DH,PV,Sudha & Mayura White cut Peel waste	2.5	0.6	0.3	0.5	0.4	0.4	0.3
White Reel ends including core DH,PV,Sudha & Mayura	8	2.5	0.6	1	0.7	1	1
DH,PV,Sudha & Mayura Reel wrappers/ Miscellaneous sweep/ Bale pattie waste	10	2	0.9	1.2	0.4	0.9	0.9
Sudha & Mayura Print waste & unsolds - Magazine	1	0.6	0.9	0.6	0.6	0.9	0.05
Miscellaneous Tissue/Mixed White waste/Cartonboxs	2.5	0.8	0.3	0.4	0.2	0.5	0.2

For clarification, Contact the Procurement Head at 25880340/430. Sealed Tenders/mail may be addressed to Procurement Head and sent to the above address within 7 days from the date of this advertisement.

ರಣಜಿ: ಮಯಂಕ್, ಸಮರ್ಥ್ ಅರ್ಧಶತಕ; ಮೊದಲ ದಿನ 11 ವಿಕೆಟ್ ಪತನ

ವಿದ್ವತ್ ದಾಳಿಗೆ ಕುಸಿದ ಪುದುಚೇರಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಕರ್ನಾಟಕದ ಉದಯೋನ್ಮುಖ ಮಧ್ಯಮವೇಗಿ ವಿದ್ವತ್ ಕಾವೇರಪ್ಪ ದಾಳಿಗೆ ಪುದುಚೇರಿ ತಂಡವು ಕುಸಿಯಿತು.

ಮಂಗಳವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ವಿದ್ವತ್ (36ಕ್ಕೆ3) ದಾಳಿಯಿಂದಾಗಿ ಪುದುಚೇರಿ ತಂಡವು ಮೊದಲ ಇನಿಂಗ್ಸ್‌ನಲ್ಲಿ 54 ಓವರ್‌ಗಳಲ್ಲಿ 170 ರನ್ ಗಳಿಸಿ ಆಲೌಟ್ ಆಯಿತು.

ಚಹಾ ವಿರಾಮದ ನಂತರ ಬ್ಯಾಟಿಂಗ್ ಆರಂಭಿಸಿದ ಕರ್ನಾಟಕ ತಂಡಕ್ಕೆ ಶತಕದ ಜೊತೆಯಾಟವಾಡಿದ ಆರ್. ಸಮರ್ಥ್ (ಬ್ಯಾಟಿಂಗ್ 59; 97ಎ) ಮತ್ತು ನಾಯಕ ಮಯಂಕ್ ಅಗರವಾಲ್ (51; 91ಎ) ಅವರು ಅಡಿಪಾಯ ಹಾಕಿದ್ದಾರೆ. ಮೊದಲ ದಿನದಾಟದ ಮುಕ್ತಾಯಕ್ಕೆ ಕರ್ನಾಟಕ ತಂಡವು 32 ಓವರ್‌ಗಳಲ್ಲಿ 1 ವಿಕೆಟ್‌ಗೆ 111 ರನ್ ಗಳಿಸಿದೆ. ಸಮರ್ಥ್ ಜೊತೆಗೆ 'ರಾತ್ರಿ ಕಾವಲುಗಾರ' ರೋನಿತ್ ಮೋರೆ ಕ್ರೀಸ್‌ನಲ್ಲಿದ್ದಾರೆ.

ವಿದ್ವತ್ ಶಿಸ್ತಿನ ದಾಳಿ: ಹೋದ ವರ್ಷದ ರಣಜಿ ಋತುವಿನಲ್ಲಿ ಪದಾರ್ಪಣೆ ಮಾಡಿದ್ದ ವಿದ್ವತ್ ಭರವಸೆ ಮೂಡಿಸಿದ್ದರು. ಈ ಬಾರಿಯೂ ಆಯ್ಕೆಗಾರರ ವಿಶ್ವಾಸ ಉಳಿಸಿ ಕೊಂಡಿದ್ದಾರೆ. ಸರ್ವಿಸಸ್ ಎದುರಿನ ಮೊದಲ ಪಂದ್ಯದಲ್ಲಿ ಮಿಂಚಿದ್ದ ಅವರು ಪುದುಚೇರಿ ಎದುರಿನ ಹಣಾಹಣಿಯಲ್ಲಿಯೂ ತಮ್ಮ ಭುಜಬಲ ಮೆರೆದರು.

ಇನಿಂಗ್ಸ್‌ನ ಐದನೇ ಓವರ್‌ನಲ್ಲಿ ಪುದುಚೇರಿಯ ನಯನ್ ಕಾಂಗಿಯನ್ ಖಾತೆ ತೆರೆಯುವ ಮುನ್ನವೇ ವಿದ್ವತ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. 11ನೇ ಓವರ್‌ನಲ್ಲಿ ವಿದ್ವತ್ ಎಸೆತವನ್ನು ಆಡುವ ಯತ್ನದಲ್ಲಿ ಕೆ. ಅರವಿಂದ್ ಸ್ಲಿಪ್‌ನಲ್ಲಿದ್ದ ಮನೀಷ್ ಪಾಂಡೆಗೆ ಕ್ಯಾಚ್ ಆದರು. ಮೂರು ಓವರ್‌ಗಳ ನಂತರ ರೋನಿತ್ ಮೋರೆ ಎಸೆತದಲ್ಲಿ ಜಯ್ ಪಾಂಡೆ ಕೂಡ ಸ್ಲಿಪ್ ಫೀಲ್ಡರ್ ಮನೀಷ್‌ಗೆ ಕ್ಯಾಚ್ ಕೊಟ್ಟರು.

ಈ ಹಂತದಲ್ಲಿ ನಾಯಕ ದಾಮೋದರನ್ ರೋಹಿತ್ ಹಾಗೂ ಪಾರಸ್ ಡೋಗ್ರಾ ಜೊತೆಗೂಡಿ ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 36 ರನ್ ಸೇರಿಸಿದರು. ಈ ಪಾಲುದಾರಿಕೆಯ ಆಟವನ್ನೂ ವಿದ್ವತ್ ಮುರಿದರು. 23ನೇ ಓವರ್‌ನಲ್ಲಿ ವಿದ್ವತ್ ಆಫ್‌ಸ್ಟಂಪ್ ಎಸೆತವನ್ನು ಹೊಡೆಯುವ ಯತ್ನದಲ್ಲಿ ಡೋಗ್ರಾ, ವಿಕೆಟ್‌ಕೀಪರ್ ಬಿ.ಆರ್. ಶರತ್‌ಗೆ ಕ್ಯಾಚಿತ್ತರು. ವಿದ್ವತ್‌ಗೆ ಮತ್ತೊಬ್ಬ ಮಧ್ಯಮವೇಗಿ ವಿಜಯಕುಮಾರ್ ವೈಶಾಖ ಉತ್ತಮ ಬೆಂಬಲ ನೀಡಿದರು. ಅವರು ಅರುಣ್ ಕಾರ್ತಿಕ್ ಮತ್ತು ರೋಹಿತ್ (44; 51ಎ) ವಿಕೆಟ್ ಗಳಿಸಿದರು. ಇದರಿಂದಾಗಿ ಊಟದ ವೇಳೆಗೆ ಪುದುಚೇರಿ ತಂಡವು 6 ವಿಕೆಟ್‌ಗಳಿಗೆ 110 ರನ್ ಗಳಿಸಿತು.

ವಿರಾಮದ ನಂತರ ಉಳಿದ ನಾಲ್ಕು ವಿಕೆಟ್‌ಗಳನ್ನು ರೋನಿತ್, ವೈಶಾಖ, ವಿದ್ವತ್ ಮತ್ತು ಸ್ಪಿನ್ನರ್ ಶ್ರೇಯಸ್ ಗೋಪಾಲ್ ತಲಾ ಒಂದರಂತೆ ಹಂಚಿಕೊಂಡರು. ಕೆಳಕ್ರಮಾಂಕದ ಬ್ಯಾಟರ್‌ಗಳಾದ ಶ್ರೀಧರ್ ಅಶ್ವಥ್ (ಔಟಾಗದೆ 20) ಮತ್ತು ಸಾಗರ್ ಉದೇಶಿ (19 ರನ್) ಸ್ವಲ್ಪ ಪ್ರತಿರೋಧ-ವೊಡ್ಡಿದರು.

ಸಮರ್ಥ್, ಮಯಂಕ್ ಜೊತೆಯಾಟ: ಇನಿಂಗ್ಸ್ ಆರಂಭಿಸಿದ ಕರ್ನಾಟಕ ತಂಡದ ಆರಂಭಿಕ ಜೋಡಿ ಸಮರ್ಥ್ ಮತ್ತು ಮಯಂಕ್ ಅವಸರ ಮಾಡಲಿಲ್ಲ. ಪುದುಚೇರಿಯ ಶ್ರೀಧರ್ ಅಶ್ವತ್, ಅಬಿನ್ ಮ್ಯಾಥ್ಯೂ ಮತ್ತು ಸಾಗರ್ ಉದೇಶಿ ಅವರು ಶಿಸ್ತಿನ ದಾಳಿ ನಡೆಸಿದರು. ಎಚ್ಚರಿಕೆಯಿಂದ ಆಡಿದ ಕರ್ನಾಟಕದ ಜೋಡಿ ಮೊದಲ ವಿಕೆಟ್‌ಗೆ 111 ರನ್ ಸೇರಿಸಿದರು. ಸಮರ್ಥ್ 88 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಅದರಲ್ಲಿ 9 ಬೌಂಡರಿ ಇದ್ದವು. ಮೊದಲ ಪಂದ್ಯದಲ್ಲಿ ಅವರು ಶತಕ ಗಳಿಸಿದ್ದರು. ಮಯಂಕ್ 90 ಎಸೆತಗಳಲ್ಲಿ 50 ರನ್ ಪೂರೈಸಿದರು. ನಂತರದ ಎಸೆತದಲ್ಲಿಯೇ ಅರುಣ್ ಕಾರ್ತಿಕ್‌ಗೆ ಕ್ಯಾಚಿತ್ತು ನಿರ್ಗಮಿಸಿದರು.

ಕರ್ನಾಟಕದ ವಿದ್ವತ್ ಕಾವೇರಪ್ಪ ಬೌಲಿಂಗ್ –ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ಧನ್

ಸ್ಕೋರ್ ಕಾರ್ಡ್

ಪುದುಚೇರಿ ಮೊದಲ ಇನಿಂಗ್ಸ್ 170 (54 ಓವರ್)
ನಯನ್ ಎಲ್‌ಬಿಡಬ್ಲ್ಯು ವಿದ್ವತ್ 0(11ಎ), ಅರವಿಂದ್ ಸಿ ಮನೀಷ್ ಬಿ ವಿದ್ವತ್ 20 (38ಎ, 4X3), ಜಯ್ ಪಾಂಡೆ ಸಿ ಮನೀಷ್ ಬಿ ರೋನಿತ್ 11 (27ಎ, 4X2), ಪಾರಸ್ ಸಿ ಶರತ್ ಬಿ ವಿದ್ವತ್ 9(33ಎ, 4X1),ರೋಹಿತ್ ಸಿ ವಿಶಾಲ್ ಬಿ ವೈಶಾಖ 44 (75ನಿ, 51ಎ, 4X5, 6X2),ಅರುಣ್ ಸಿ ಶರತ್ ಬಿ ವೈಶಾಖ 16 (20ಎ, 4X2), ಅಂಕಿತ್ ಸಿ ಶ್ರೇಯಸ್ ಬಿ ರೋನಿತ್ 11 (2ಎ, 4X2), ವಿಘ್ನೇಶ್ ಸಿ ಶರತ್ ಬಿ ವೈಶಾಖ 8 (28ಎ, 4X1), ಅಶ್ವಥ್ ಔಟಾಗದೆ 20 (48ಎ, 4X4), ಸಾಗರ್ ಸಿ ಮಯಂಕ್ ಬಿ ವಿದ್ವತ್ 19 (36ಎ, 4X4), ಅಬಿನ್ ಎಲ್‌ಬಿಡಬ್ಲ್ಯು ಶ್ರೇಯಸ್ 2 (7ಎ)
ಇತರೆ 10 (ಲೆಗ್‌ಬೈ 10)
ವಿಕೆಟ್ ಪತನ: 1–14 (ನಯನ್; 4.5), 2–31(ಅರವಿಂದ್; 10.1), 3–36 (ಜಯ್ ಪಾಂಡೆ: 14.3), 4–73 (ಡೋಗ್ರಾ; 22.5), 5–101 (ಅರುಣ್ ಕಾರ್ತಿಕ್; 28.4), 6–110 (ರೋಹಿತ್; 30.4), 7-128 (ವಿಘ್ನೇಶ್; 38.1), 8–133 (ಅಂಕಿತ್ ಶರ್ಮಾ; 40.2), 9–163 (ಸಾಗರ್ ಉದೇಶಿ 52.2), 10–170 (ಅಬಿನ್ ಮ್ಯಾಥ್ಯೂ; 53.6)
ಬೌಲಿಂಗ್: ವಿದ್ವತ್ ಕಾವೇರಪ್ಪ 16–3–52–4, ರೋನಿತ್ ಮೋರೆ 12–1–34–2, ವಿಜಯಕುಮಾರ್ ವೈಶಾಖ 13–4–39–3, ಕೆ. ಗೌತಮ್ 11–2–30–0, ಶ್ರೇಯಸ್ ಗೋಪಾಲ್ 2–1–5–1

ಕರ್ನಾಟಕ ಮೊದಲ ಇನಿಂಗ್ಸ್ 1 ವಿಕೆಟ್‌ಗೆ 111 (32 ಓವರ್)
ಸಮರ್ಥ್ ಬ್ಯಾಟಿಂಗ್ 59 (97ಎ, 4X9),ಮಯಂಕ್ ಸಿ ಅರುಣ್ ಬಿ ಅಂಕಿತ್ 51 (91ಎ, 4X5, 6X1), ರೋನಿತ್ ಬ್ಯಾಟಿಂಗ್ 0 (5ಎ)
ಇತರೆ 1 (ನೋಬಾಲ್ 1)
ವಿಕೆಟ್ ಪತನ: 1–111 (ಮಯಂಕ್ ಅಗರವಾಲ್; 31.1)
ಬೌಲಿಂಗ್: ಎಸ್. ಅಶ್ವಥ್ 11–3–34–0, ಅಬಿನ್ ಮ್ಯಾಥ್ಯೂ 8–2–23–0, ಸಾಗರ್ ಉದೇಶಿ 8–1–25–0, ಎಂ. ವಿಘ್ನೇಶ್ 3–0–21–0, ಅಂಕಿತ್ ಶರ್ಮಾ 2–1–8–1

ಚಿನ್ನಸ್ವಾಮಿ ಅಂಗಳದಲ್ಲಿ ಕರ್ನಾಟಕ 'ಶತಕ'

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪುದುಚೇರಿ ಎದುರು ಮಂಗಳವಾರ ಆರಂಭವಾದ ರಣಜಿ ಪಂದ್ಯವು ಕರ್ನಾಟಕಕ್ಕೆ ನೂರನೇ ಪಂದ್ಯವಾಗಿದೆ.

'ಇದೊಂದು ಐತಿಹಾಸಿಕ ಪಂದ್ಯವಾಗಿದೆ. ಚಿನ್ನಸ್ವಾಮಿ ಅಂಗಳದಲ್ಲಿ ಇದುವರೆಗೆ ಒಟ್ಟು 102 ರಣಜಿ ಪಂದ್ಯಗಳಾಗಿವೆ. ಅದರಲ್ಲಿ ಇದು ಕರ್ನಾಟಕಕ್ಕೆ ನೂರನೇಯದ್ದು. ಇನ್ನೆರಡು ಪಂದ್ಯಗಳಲ್ಲಿ ಹೊರರಾಜ್ಯದ ತಂಡಗಳು ಆಡಿವೆ. 2008–09ರ ಋತುವಿನಲ್ಲಿ ಇಲ್ಲಿ ನಡೆದಿದ್ದ ಕ್ವಾರ್ಟರ್ ಫೈನಲ್‌ನಲ್ಲಿ ಬಂಗಾಳ ಮತ್ತು ತಮಿಳುನಾಡು, ಹೋದ ವರ್ಷ ನಡೆದಿದ್ದ ಫೈನಲ್‌ನಲ್ಲಿ ಮುಂಬೈ ಮತ್ತು ಮಧ್ಯಪ್ರದೇಶ ಮುಖಾಮುಖಿಯಾಗಿದ್ದವು' ಎಂದು ಕ್ರಿಕೆಟ್ ಅಂಕಿ–ಅಂಶ ಪರಿಣತ ಚನ್ನಗಿರಿ ಕೇಶವಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

ಯಶಸ್ವಿ, ಅಜಿಂಕ್ಯ ಶತಕ

ಮುಂಬೈ (ಪಿಟಿಐ): ಭಾರತ ತಂಡಕ್ಕೆ ಮರಳುವ ಛಲದಲ್ಲಿರುವ ಅಜಿಂಕ್ಯ ರಹಾನೆ ಮತ್ತು ಯುವಪ್ರತಿಭೆ ಯಶಸ್ವಿ ಜೈಸ್ವಾಲ್ ಮಂಗಳವಾರ ಇಲ್ಲಿ ಆರಂಭವಾದ ರಣಜಿ ಟ್ರೋಫಿ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ ಹೈದರಾಬಾದ್ ವಿರುದ್ಧ ಶತಕ ದಾಖಲಿಸಿದರು.

ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಯಶಸ್ವಿ (162; 195ಎ, 4X27, 6X1) ಮತ್ತು ಅಜಿಂಕ್ಯ (ಬ್ಯಾಟಿಂಗ್ 139; 190ಎ, 4X18, 6X2) ಅವರ ಶತಕಗಳ ಬಲದಿಂದ ತಂಡವು 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 457 ರನ್ ಗಳಿಸಿತು.

ಭಾರತ ತಂಡದ '360 ಡಿಗ್ರಿ' ಬ್ಯಾಟರ್ ಖ್ಯಾತಿಯ ಸೂರ್ಯಕುಮಾರ್ ಯಾದವ್ ಅವರು 80 ಎಸೆತಗಳಲ್ಲಿ 90 ರನ್ ಗಳಿಸಿದರು. ಅದರಲ್ಲಿ 15 ಬೌಂಡರಿ ಮತ್ತು 1 ಸಿಕ್ಸರ್ ಇದ್ದವು.

ಸಂಕ್ಷಿಪ್ತ ಸ್ಕೋರು: ಎ ಗುಂಪು (ವಡೋದರ): ಬರೋಡ: 90 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 370 (ಜ್ಯೋತ್ಸನಿಲ್ ಸಿಂಗ್ ಬ್ಯಾಟಿಂಗ್ 186, ಪ್ರತ್ಯೂಷ್ ಕುಮಾರ್ 110, ವಿಷ್ಣು ಸೋಳಂಕಿ ಬ್ಯಾಟಿಂಗ್ 60, ಸಂಜಯ್ ಪೆಹಲ್ 54ಕ್ಕೆ2) ಹರಿಯಾಣ ವಿರುದ್ಧ.

ಬಿ ಗುಂಪು (ಮುಂಬೈ): 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 457 (ಯಶಸ್ವಿ ಜೈಸ್ವಾಲ್ 162, ಸೂರ್ಯಕುಮಾರ್ ಯಾದವ್ 90, ಅಜಿಂಕ್ಯ ರಹಾನೆ ಬ್ಯಾಟಿಂಗ್ 139, ಸರ್ಫರಾಜ್ ಖಾನ್ ಬ್ಯಾಟಿಂಗ್ 40,ಮೆಹೊತ್ರಾ ಶಶಾಂಕ್ 87ಕ್ಕೆ2) ಹೈದರಾಬಾದ್ ತಂಡದ ವಿರುದ್ಧ.

ಅಥ್ಲೆಟಿಕ್ಸ್: ನಾಗರಾಜ್ ಅಧ್ಯಕ್ಷ

ಬೆಂಗಳೂರು: ನಗರ ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯ (ಬಿಯುಡಿಎಎ) ಅಧ್ಯಕ್ಷರಾಗಿ ನಾಗರಾಜ್ ಅಡಿಗ ಆಯ್ಕೆಯಾಗಿದ್ದಾರೆ.

ಸೋಮವಾರ ನಡೆದ ವಾರ್ಷಿಕ ಸಾಮಾನ್ಯ ಸಭೆ ಮತ್ತು ಚುನಾವಣೆಯಲ್ಲಿ ಶಂಕರ್ ಯು.ವಿ. ಅವರು ಹಿರಿಯ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ನೂತನ ಪದಾಧಿಕಾರಿಗಳು: ನಾಗರಾಜ ಅಡಿಗ (ಅಧ್ಯಕ್ಷ), ಶಂಕರ್ ಯು.ವಿ. (ಹಿರಿಯ ಉಪಾಧ್ಯಕ್ಷ), ಪೂನಂ ಬೆಳ್ಳಿಯಪ್ಪ (ಉಪಾಧ್ಯಕ್ಷೆ), ನರಸಿಂಹಮೂರ್ತಿ ಜೆ.ಪಿ. (ಉಪಾಧ್ಯಕ್ಷ), ಎಹಸಾನ್ ಎಸ್.ಡಿ. (ಕಾರ್ಯದರ್ಶಿ), ರಮೇಶ್ ಎನ್.ಆರ್. (ಜಂಟಿ ಕಾರ್ಯದರ್ಶಿ), ರೀತ್ ಅಬ್ರಹಾಂ (ಖಜಾಂಚಿ).